ಬೆಂಗಳೂರು ಶನಿವಾರ, 20 ಜೂನ್ 2026 ಸಂಪುಟ 33, ಸಂಚಿಕೆ 230, ಪುಟಗಳು 12+4 epaper.hosadigantha.com ₹5
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ RNI: 58231/94 REG No.KA/BG GPO/2532/2021-23 hosadigantha.com

# ಹೊಸ ದಿಗಂತ

ರಾಷ್ಟ್ರ ಜಾಗೃತಿಯ ದೈನಿಕ

ಲೋಕಹಿತಂ ಮಮ ಕರಣೀಯಂ

ಟ್ರಂಪ್‌ಗೆ ಮೆಲೋನಿ ಛೀಮಾರಿ

• ಪುಟ ೫



## ವಿಧಾನ ಪರಿಷತ್ ಚುನಾವಣೆಯಲ್ಲಿ ಅಡ್ಡಮತದಾನ
# ಸತ್ಯಾಸತ್ಯತೆಗೆ ತಂಡ ರಚಿಸಿದ ಬಿಜೆಪಿ

• **ಬೆಂಗಳೂರು:** ವಿಧಾನ ಪರಿಷತ್‌ನ ಐದು ಸ್ಥಾನಗಳಿಗೆ ದ್ವೈವಾರ್ಷಿಕ ಚುನಾವಣೆಯಲ್ಲಿ ಗುರುವಾರ ನಡೆದ ಮತದಾನ ಪ್ರಕ್ರಿಯೆಯಲ್ಲಿ ಬಿಜೆಪಿ ಶಾಸಕರು ಅಡ್ಡ ಮತದಾನ ನಡೆಸಿರುವ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿರುವ ರಾಜ್ಯ ಬಿಜೆಪಿ, ಅಡ್ಡ ಮತದಾನದ ಸತ್ಯಾಸತ್ಯತೆ ಮತ್ತು ವಾಸ್ತವಿಕತೆಯನ್ನು ತಿಳಿಯಲು ತಂಡ ರಚಿಸಿದೆ.

ವಿಧಾನಪರಿಷತ್ ಸದಸ್ಯ ಸಿ.ಟಿ. ರವಿ, ರಾಜ್ಯ ಉಪಾಧ್ಯಕ್ಷ ಎನ್. ಮಹೇಶ್ ಮತ್ತು ಶಾಸಕ ಮಹೇಶ್ ಟೆಂಗಿನಕಾಯಿ ಅವರನ್ನೊಳಗೊಂಡ ತಂಡ ರಚಿಸಿ, ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಆದೇಶ ಹೊರಡಿಸಿದ್ದಾರೆ. ಈ ತಂಡವು ಅಡ್ಡ ಮತದಾನಕ್ಕೆ ಸಂಬಂಧಿಸಿದಂತೆ ಸಮಗ್ರ ವರದಿಯನ್ನು ಜೂ.25ರೊಳಗೆ ನೀಡಲು ವಿಜಯೇಂದ್ರ ಸೂಚಿಸಿದ್ದಾರೆ.



ಮುಂದಿನ ವಾರ ಹೈಕಮಾಂಡ್ ಭೇಟಿ: ಆರ್.ಅಶೋಕ್

• ಪುಟ ೨



ಬಿಜೆಪಿ ಟಿಕೆಟ್‌ನಲ್ಲಿ ಗೆದ್ದು ಚುನಾವಣೆಯಲ್ಲಿ ಈ ರೀತಿ ಮತದಾನ ಮಾಡುತ್ತಾರೆ ಎಂದರೆ ಅವರಿಗೆ ಗೆರೆ ಎಳೆಯುವ ಕೆಲಸವನ್ನು ಪಕ್ಷ ಮಾಡಲಿದೆ. ಎಲ್ಲಕ್ಕೂ ಒಂದು ಮಿತಿ ಇದೆ. ಬಿಜೆಪಿಯಲ್ಲಿನ ಸಣ್ಣಪುಟ್ಟ ಗೊಂದಲದಿಂದಾಗಿ ಕಾರ್ಯಕರ್ತರು ಬೇಸತ್ತಿದ್ದಾರೆ. ಈಗ ಇಂತಹ ಬೆಳವಣಿಗೆ ನಡೆದಿದೆ. ಇದರಿಂದ ನೋವಾಗಿದೆ.

■ ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

### ಕಿರುಸುದ್ದಿ

ಫುಟ್‌ಪಾತ್‌ನಲ್ಲಿ ನಡೆ ಮೂಲಭೂತ ಹಕ್ಕು
• ಪುಟ ೫

ಇಂದು ಬಂಗಾಳಕ್ಕೆ ಪ್ರಧಾನಿ ಮೋದಿ
• ಪುಟ ೫


ಟೆಲಿಗ್ರಾಮ್ ನಿಷೇಧ ಎತ್ತಿಹಿಡಿದ ದಿಲ್ಲಿ ಹೈ
• ಪುಟ ೨

ಅಯೋಧ್ಯೆ ದೇಣಿಗೆ ನಿಧಿ: ತಪ್ಪಿತಸ್ಥರಿಗೆ ಶಿಕ್ಷೆ ಖಚಿತ
• ಪುಟ ೫

ಇಬ್ಬರು ಶಂಕಿತ ಉಗ್ರ ಸಹಚರರ ಬಂಧನ
• ಪುಟ ೫

## ಗೃಹಲಕ್ಷ್ಮಿಯರಿಗೆ ಧ್ವನಿ ಸಂದೇಶ | ಅನ್ಯರಾಜ್ಯ ಖಾತೆಗೆ ತಡೆ: ಸಿಎಂ
# ರಾಜ್ಯದವರಿಗೇ ಗ್ಯಾರಂಟಿ

• **ಬೆಂಗಳೂರು:** ಗೃಹಲಕ್ಷ್ಮಿ ಹಣ ಫಲಾನುಭವಿಗಳ ಖಾತೆಗೆ ಜಮೆಯಾದ ತಕ್ಷಣ ಅವರ ಮೊಬೈಲ್‌ಗೆ ವಾಯ್ಸ್ ಮೆಸೇಜ್ ಮೂಲಕ ಖಚಿತಪಡಿಸಬೇಕು ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅಧಿಕಾರಿಗಳಿಗೆ ಸೂಚಿಸಿದ್ದಾರೆ.



ತಮ್ಮ ಅಧ್ಯಕ್ಷತೆಯಲ್ಲಿ ವಿಧಾನಸೌಧದ ಐದುಗಿದ ಗ್ಯಾರಂಟಿ ಯೋಜನೆಗಳ ಪರಿಶೀಲನಾ ಸಭೆ ನಡೆಸಿದ ಅವರು, ಫಲಾನುಭವಿಗಳ ಬ್ಯಾಂಕ್ ಖಾತೆಗಳು ಕರ್ನಾಟಕ ರಾಜ್ಯದಲ್ಲಿ ಮಾತ್ರ ಇರಬೇಕು. ಇತರ ರಾಜ್ಯಗಳಲ್ಲಿರುವ ಖಾತೆಗಳಿಗೆ ಹಣ ಹೋಗುತ್ತಿರುವುದು ಪತ್ತೆಯಾಗಿದೆ. ಇವುಗಳಿಗೆ ತಡೆ ಹಾಕಬೇಕು. ನಮ್ಮ ರಾಜ್ಯದ ಯೋಜನೆಗಳು ನಮ್ಮ ರಾಜ್ಯದ ಫಲಾನುಭವಿಗಳಿಗೆ ಮಾತ್ರ ಸಿಗಬೇಕು. ಇತರ ರಾಜ್ಯದ ಮತದಾರರಿಗೆ ಯೋಜನೆಯ ಲಾಭ ಆಗುತ್ತಿದೆ. ಇದನ್ನು ತಡೆಯಬೇಕು ಎಂದು ಕಟ್ಟುನಿಟ್ಟಿನ ಸೂಚನೆ ನೀಡಿದರು. ಸಭೆಯಲ್ಲಿ ಸಚಿವರಾದ ಕೆ.ಎಚ್.ಮುನಿಯಪ್ಪ, ಕೆ.ಜೆ. ಜಾರ್ಜ್, ಪ್ರಿಯಾಂಕ್ ಖರ್ಗೆ, ಸರ್ಕಾರದ ಪುಟ ೨ ಕಾರ್ಯದರ್ಶಿ ಶಾಲಿನಿ ರಜನೀಶ್ ಇದ್ದರು.

### ಸಭೆಯ ಮುಖ್ಯಾಂಶ

1. ಎಸ್‌ಐಆರ್ ಸಂದರ್ಭದಲ್ಲಿ ಫಲಾನುಭವಿಗಳು ತಮ್ಮ ಹೆಸರು ಬಿಟ್ಟು ಹೋಗದಂತೆ ನೋಡಿಕೊಳ್ಳಬೇಕು.
2. ಅನ್ನಭಾಗ್ಯ ಯೋಜನೆಯಲ್ಲಿ 11561 ಕೋಟಿ ರೂ.ಗಳನ್ನು ಡಿಬಿಟಿ ಮೂಲಕ ಫಲಾನುಭವಿಗಳ ಖಾತೆಗೆ ವರ್ಗಾವಣೆ
3. ಜುಲೈ 2023ರಿಂದ ಡಿಸೆಂಬರ್ 2024ರವರೆಗೆ ಒಟ್ಟು 72,02,33,970 ಫಲಾನುಭವಿ ಗಳಿಗೆ ಒಟ್ಟು 11561.05 ಕೋಟಿ ರೂ.ಗಳನ್ನು ಡಿಬಿಟಿ ಮೂಲಕ ವರ್ಗಾವಣೆ
4. 2025ನೇ ಫೆಬ್ರವರಿಯಿಂದ ಇಲ್ಲಿಯವರೆಗೆ ಒಟ್ಟು 4,44,67,942 ಫಲಾನುಭವಿಗಳಿಗೆ ಪ್ರತಿ ತಿಂಗಳು ಅನ್ನಭಾಗ್ಯ ಯೋಜನೆಯಲ್ಲಿ ಹೆಚ್ಚುವರಿಯಾಗಿ 5 ಕೆಜಿ ಅಕ್ಕಿ ವಿತರಣೆ



**ನೈಜ ಫಲಾನುಭವಿಗಳಿಗೆ ತೊಂದರೆ ಆಗಬಾರದು**

ಮೃತಪಟ್ಟಿರುವ ಫಲಾನುಭವಿಗಳಿಗೂ ಗೃಹಲಕ್ಷ್ಮಿ ಹಣ ಹೋಗುತ್ತಿರುವುದನ್ನು ಪತ್ತೆ ಆಗಿದೆ. ಈ ರೀತಿ ದುರುಪಯೋಗ ಆಗಬಾರದು. ಹಲವು ಫಲಾನುಭವಿಗಳು ಬ್ಯಾಂಕ್ ಸಾಲ ಪಡೆದಿರುತ್ತಾರೆ. ಪುಟ ೨

## ವಿಕಸಿತ ಭಾರತ ಉದ್ಯೋಗ ಯೋಜನೆಗೆ ವೇಗ: ಮೋದಿ
# 70 ಲಕ್ಷಕ್ಕೂ ಹೆಚ್ಚು ಉದ್ಯೋಗ

• **ಹೊಸದಿಲ್ಲಿ:** ಪಿಎಂ-ವಿಕಸಿತ ಭಾರತ್ ಉದ್ಯೋಗ ಯೋಜನೆಯಲ್ಲಿ (ಪಿಎಂ-ವಿಬಿಆರ್‌ವೈ) ದೇಶಾದ್ಯಂತ ಇದುವರೆಗೆ 70 ಲಕ್ಷಕ್ಕೂ ಹೆಚ್ಚು ಜನರಿಗೆ ಉದ್ಯೋಗ ಲಭಿಸಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ತಿಳಿಸಿದರು. ಇದೇ ವೇಳೆ 15 ಲಕ್ಷ ಹೊಸ ಉದ್ಯೋಗ ಸೃಷ್ಟಿಗೆ ಉತ್ತೇಜನ ನೀಡುವ ಉದ್ದೇಶದಿಂದ ₹2,400 ಕೋಟಿ ಪ್ರೋತ್ಸಾಹ ಧನವನ್ನು ಫಲಾನುಭವಿಗಳ ಬ್ಯಾಂಕ್ ಖಾತೆಗಳಿಗೆ ನೇರ ಲಾಭ ವರ್ಗಾವಣೆ (ಡಿಬಿಟಿ) ಮೂಲಕ ಜಮಾ ಮಾಡಿದರು. ಪುಟ ೨



- ಫಲಾನುಭವಿಗಳ ಖಾತೆಗೆ 2,400 ಕೋಟಿ ರೂ. ಪ್ರೋತ್ಸಾಹಧನ ಜಮೆ
- 15 ಲಕ್ಷ ಹೊಸ ಉದ್ಯೋಗ ಸೃಷ್ಟಿಗೆ ಉತ್ತೇಜನ
- ಸಾಮಾಜಿಕ ಭದ್ರತೆಯ ವ್ಯಾಪ್ತಿ ವಿಸ್ತರಣೆ

# ಮೇಕೆದಾಟುಗೆ ತ.ನಾಡು ಅಡ್ಡಿ

**ಕರ್ನಾಟಕದ ವಿರುದ್ಧ ಅಸೆಂಬ್ಲಿಯಲ್ಲಿ ಸರ್ವಾನುಮತ ನಿರ್ಣಯ**

• **ಚೆನ್ನೈ:** ಬೆಂಗಳೂರು ನಗರದ ಕುಡಿಯುವ ನೀರಿನ ಅಗತ್ಯ ಪೂರೈಸುವ ಉದ್ದೇಶದ ಕರ್ನಾಟಕದ ಮಹತ್ವಾಕಾಂಕ್ಷಿ ಮೇಕೆದಾಟು ಸಮತೋಲನ ಜಲಾಶಯ ಯೋಜನೆಗೆ ತಮಿಳುನಾಡು ಮತ್ತೊಮ್ಮೆ ಅಡ್ಡಗಾಲು ಹಾಕಿದೆ. ಯೋಜನೆ ವಿರೋಧಿಸಿ ತಮಿಳುನಾಡು ವಿಧಾನಸಭೆ ಶುಕ್ರವಾರ ಸರ್ವಾನುಮತ ನಿರ್ಣಯ ಅಂಗೀಕರಿಸಿದೆ. ಪುಟ ೨

# ಜೂ.25 ಗ್ಲೋಬಲ್‌ಫುಡ್ ಫ್ರೊ-2027ರ ಕಾರ್ಯಕ್ರಮ

• **ಬೆಂಗಳೂರು:** ಲಘು ಉದ್ಯೋಗ ಭಾರತಿ-ಕರ್ನಾಟಕ ಮತ್ತು ಐಎಂಎಸ್ ಫೌಂಡೇಶನ್ ಸಂಸ್ಥೆಗಳು, ಗ್ಲೋಬಲ್ ನೆಟ್‌ವರ್ಕ್ ಇನ್‌ಸ್ಟಿಟ್ಯೂಟ್‌ನ ಬೆಂಬಲದೊಂದಿಗೆ, ಆಹಾರ ಸಂಸ್ಕರಣೆ ಮತ್ತು ಸಂಬಂಧಿತ ಉದ್ಯಮಗಳಲ್ಲಿನ ಎಂಎಸ್‌ಎಂಇಗಳನ್ನು ಸಬಲೀಕರಿಸಲು ಮೀಸಲಾಗಿರುವ ಪ್ರಮುಖ ಅಂತಾರಾಷ್ಟ್ರೀಯ ಪ್ರದರ್ಶನವಾದ ಗ್ಲೋಬಲ್ ಫುಡ್ ಫ್ರೊ-2027ರ ಅಧಿಕೃತ ಆರಂಭಿಕ ಕಾರ್ಯಕ್ರಮವನ್ನು ಜೂ. 25ರಂದು ಹಮ್ಮಿಕೊಂಡಿದೆ.

ಮುಂದಿನವರ್ಷದಮೇ13ರಿಂದ15ರವರೆಗೆಬೆಂಗಳೂರು ಅಂತಾರಾಷ್ಟ್ರೀಯಪ್ರದರ್ಶನ ಕೇಂದ್ರದಲ್ಲಿ ನಡೆಯಲಿರುವ ಗ್ಲೋಬಲ್ ಫುಡ್ ಫ್ರೊ 2027ಕ್ಕೆ ಬೃಹತ್ ಪ್ರದರ್ಶನ ಕಾರ್ಯಕ್ರಮಕ್ಕೆ ವೇದಿಕೆಯನ್ನು ಸಿದ್ಧಪಡಿಸಲಿದೆ ಎಂದು ಲಘು ಉದ್ಯೋಗ ಭಾರತಿ- ಕರ್ನಾಟಕ ಪ್ರಧಾನಕಾರ್ಯದರ್ಶಿ ಕೆ.ಎಸ್.ರವಿಕುಮಾರ್ ತಿಳಿಸಿದ್ದಾರೆ. ಐಎಂಎಸ್ ಫೌಂಡೇಶನ್, ಲಘು ಉದ್ಯೋಗ ಭಾರತಿ-ಕರ್ನಾಟಕ (ಎಂಎಸ್‌ಎಂಇಗಳನ್ನು ಪ್ರತಿನಿಧಿಸುವ ಸಂಸ್ಥೆ) ಜಂಟಿಯಾಗಿ ಕನೆಕ್ಟಿಂಗ್ ದಿ ಗ್ಲೋಬಲ್ ಫುಡ್ ಇಂಡಸ್ಟ್ರಿ ಎಂಬ ವಿಷಯದಲ್ಲಿ ಭವಿಷ್ಯದ ಆಹಾರ: ಸವಾಲು, ಅವಕಾಶಗಳು, ಹೊಸ ಪ್ರವೃತ್ತಿಗಳು, ನಿರೀಕ್ಷೆಗಳು ವಿಚಾರ ಸಂಕಿರಣ ಆಯೋಜಿಸಿವೆ.

ಮಾಜಿ ಕೇಂದ್ರ ವಾಣಿಜ್ಯ ಸಚಿವ ಸುರೇಶ್ ಪ್ರಭಾಕರ ಪ್ರಭು, ಸಿಎಸ್‌ಐಆರ್-ಎನ್ ಐಎಸ್‌ಟಿ ನಿರ್ದೇಶಕ ಡಾ. ಸಿ. ಆನಂದರಾಮಕೃಷ್ಣನ್, ಗ್ಲೋಬಲ್ ನೆಟ್‌ವರ್ಕ್ ಇನ್ ಸ್ಟಿಟ್ಯೂಟ್ ಮುಖ್ಯ ಮಾರ್ಗದರ್ಶಕ ಡಾ. ಜಗತ್ ಶಾ, ಅರ್ಥ್‌ಆಮ್ ಗ್ರೂಪ್ ವ್ಯವಸ್ಥಾಪಕ ನಿರ್ದೇಶಕ ಡಾ. ಬಿಜ್ಞಾ ಕೋಟಕ್ ದಾಸಾನಿ, ಸೆಕ್ಯೂರ್ ಗ್ರೂಪ್ ಆಸ್ಟ್ರೇಲಿಯಾದ ಸಂಸ್ಥಾಪಕ ನಿರ್ದೇಶಕ ಮಿಸ್ಟರ್ ರಾಬ್ ನೀಲಿ, ತಂಜಾವೂರು ನಿಫ್ಟೆಮ್ ನಿರ್ದೇಶಕ ಡಾ. ವಿ. ಪಳನಿಮುತ್ತು, ನಿವೃತ್ತ ಐಎಎಸ್ ಅಧಿಕಾರಿ ಮದನ್ ಗೋಪಾಲ್ ಹಾಗೂ ಐಎಂಎಸ್ ಫೌಂಡೇಶನ್ ಮುಖ್ಯಸ್ಥ ಎಚ್.ವಿ.ಎಸ್. ಕೃಷ್ಣ, ಲಘು ಉದ್ಯೋಗ ಭಾರತಿ - ಕರ್ನಾಟಕ ಅಧ್ಯಕ್ಷ ಕೆ. ನಾರಾಯಣ ಪ್ರಸನ್ನ ಅವರೊಂದಿಗೆ ವಲಯದ ಮುಖಂಡರು ಭಾಗವಹಿಸಲಿದ್ದಾರೆ.

ರಾಮ ಬಾಣ




# 20 ಲಕ್ಷ ರೂ. ದರೋಡೆ

**ಬೆಂಗಳೂರು:** ಸಿಐಡಿ ಇನ್ಸ್‌ಪೆಕ್ಟರ್ ನೇತೃತ್ವದಲ್ಲೇ ಐವರು ದರೋಡೆಕೋರರ ಗ್ಯಾಂಗ್, ಕೇರಳ ಮೂಲದ ಉದ್ಯಮಿಗಳಿಗೆ ಬೆದರಿಸಿ 20 ಲಕ್ಷ ರೂ.ದರೋಡೆ ಮಾಡಿರುವ ಘಟನೆ ಮಡಿವಾಳ ಖಾಸಗಿ ಹೋಟೆಲ್‌ನಲ್ಲಿ ನಡೆದಿದೆ. ವ್ಯಾಪಾರ ಉದ್ದೇಶಗಳಿಗಾಗಿ ಹಣ ಹಿಡಿದುಕೊಂಡು ಕೇರಳದ ಉದ್ಯಮಿಗಳು ಮಡಿವಾಳದ ಖಾಸಗಿ ಹೋಟೆಲ್‌ನಲ್ಲಿ ವಾಸ್ತವ್ಯ ಹೂಡಿದ್ದರು. ಈ ಬಗ್ಗೆ ನಿಖರ ಮಾಹಿತಿ ಪಡೆದಿದ್ದ ಇನ್ಸ್‌ಪೆಕ್ಟರ್ ಮಹೇಶ್ ಕನಕಗಿರಿ, ಹ್ಯಾರಿಸ್, ಕುವೇಂದ್ರ, ಶಶಿ ಮತ್ತು ಶಾನಿ ಎಂಬ ನಾಲ್ವರೊಂದಿಗೆ ಸೇರಿ ದರೋಡೆಗೆ ಪ್ಲಾನ್ ಮಾಡಿದ್ದರು. ಯೋಜನೆಯಂತೆ ಹೋಟೆಲ್ ಮುಂಭಾಗ ಅಧಿಕೃತ ಸಿಐಡಿ ಪೊಲೀಸ್ ಜೀಪ್ ನಿಲ್ಲಿಸಿ ಇನ್ಸ್‌ಪೆಕ್ಟರ್ ಒಳಗೆ ಕುಳಿತಿದ್ದರು. ಅವರ ಗ್ಯಾಂಗ್‌ನ ಇಬ್ಬರು ಹೋಟೆಲ್ ಕೋಣೆಗೆ ನುಗ್ಗಿ, ತಾವು ಪೊಲೀಸರೆಂದು ಇನ್ಸ್‌ಪೆಕ್ಟರ್ ಅವರ ಅಧಿಕೃತ ಗುರುತಿನ ಚೀಟಿ ತೋರಿಸಿ, ಅಕ್ರಮವಾಗಿ ಟ್ರೇಡಿಂಗ್ ಮಾಡಲು ಹಣ ತಂದಿದ್ದೀರಿ ಎಂದು ಉದ್ಯಮಿಗಳನ್ನು ತೀವ್ರವಾಗಿ ಬೆದರಿಸಿದ್ದಾರೆ. ಬಳಿಕ ಅವರಿಂದ 20 ಲಕ್ಷ ರೂ. ನಗದನ್ನು ಕಸಿದುಕೊಂಡು, ಹೊರಗೆ ನಿಂತಿದ್ದ ಪೊಲೀಸ್ ಜೀಪ್‌ನಲ್ಲೇ ಇಡೀ ಗ್ಯಾಂಗ್ ಪರಾರಿಯಾಗಿದೆ.

# ಟೆಲಿಗ್ರಾಮ್ ನಿಷೇಧವನ್ನು ಎತ್ತಿಹಿಡಿದ ದಿಲ್ಲಿ ಹೈ

• **ಹೊಸದಿಲ್ಲಿ:** ನೀಟ್-ಯುಜಿ ಮರುಪರೀಕ್ಷೆ ಹಿನ್ನೆಲೆಯಲ್ಲಿ ಜೂ.22ರವರೆಗೆ ಟೆಲಿಗ್ರಾಮ್ ಮೇಲೆ ಕೇಂದ್ರ ಸರ್ಕಾರ ಹೇರಿದ್ದ ತಾತ್ಕಾಲಿಕ ನಿಷೇಧವನ್ನು ದಿಲ್ಲಿ ಹೈಕೋರ್ಟ್ ಶುಕ್ರವಾರ ಎತ್ತಿಹಿಡಿದಿದೆ. ಟೆಲಿಗ್ರಾಮ್ ಸಲ್ಲಿಸಿದ್ದ ದೂರನ್ನು ದಿಲ್ಲಿ ನ್ಯಾಯಪೀಠ ತಿರಸ್ಕರಿಸಿದೆ. ಜೂ.30ರವರೆಗೆಮೆಸೇಜ್ ಎಡಿಟಿಂಗ್ ಸೌಲಭ್ಯ ನಿರ್ಬಂಧಿಸಲುಕೇಂದ್ರ ಸರ್ಕಾರಆದೇಶಿಸಿತ್ತು. ಕೇಂದ್ರ ಸರ್ಕಾರ ಮಾಹಿತಿ ತಂತ್ರಜ್ಞಾನ ಕಾಯ್ದೆಯ ಸೆಕ್ಷನ್ 69ಎ ಅನ್ವಯದಲ್ಲಿ ಟೆಲಿಗ್ರಾಮ್ ಮೇಲೆ ನಿಷೇಧ ಹೇರಿದ ಪ್ರಕ್ರಿಯೆ ನ್ಯಾಯಬದ್ಧವಾಗಿದೆ ಎಂದು ನ್ಯಾಯಮೂರ್ತಿ ತೇಜಸ್ ಕರಿಯಾ ಅವರ ನೇತೃತ್ವದ ನ್ಯಾಯಪೀಠ ಹೇಳಿದೆ.

## ಕಿಡಿ ನುಡಿ

• ವಾಸುದೇವರಾವ್ ಕಕ್ಕೆಸೇಟೆ

ಜನರು ಅವರನ್ನು ತುಂಬಾ ಒಳ್ಳೆಯ ಮನುಷ್ಯ ಎನ್ನುತ್ತಾರೆ.ಆದರೆ ಅವರು ವ್ಯವಹಾರದಲ್ಲಿ ತುಂಬಾ ಕಠಿಣ ವ್ಯಕ್ತಿ
**- ಮೋದಿಯ ಕುರಿತು ಟ್ರಂಪ್ ಮಾತು**
**- ವಿಶ್ವಾದಲ್ಲಿ ಕಠೋರವಾದ ಮೃದೂನಿ ಕುಸುಮಾದಪಿ ಎಂಬಂತೆಕಠೋರತೆ ಇಲ್ಲವಾದಲ್ಲಿ ಸ್ವಾರ್ಥಿಗಳು ಒಳ್ಳೆಯವರನ್ನು ಹೊಂಡಕ್ಕೆ ಇಳಿಸಿ ತಲೆಯೆತ್ತದಂತೆ ಮಾಡುತ್ತಾರೆ.**

## ದಿನ ಭವಿಷ್ಯ

**ಮೇಷ** ಹೆಚ್ಚು ಪರಿಶ್ರಮ ಬೇಡುವ ದಿನ. ಏಕೆಂದರೆ ಯಾವುದೂ ಸುಲಭದಲ್ಲಿ ಸಾಧ್ಯವಾಗದು. ಅಷ್ಟರು ಮುನಿಸಿಕೊಳ್ಳಬಹುದು. ಆರ್ಥಿಕ ವ್ಯಯ ಹೆಚ್ಚು.

**ವೃಷಭ** ಪ್ರವಾಸದ ಸಾಧ್ಯತೆ. ಹೊಸ ವ್ಯವಹಾರದಲ್ಲಿ ದುಡುಕಿ ಹಣ ಹೂಡದಿರಿ. ಬಾಕಿ ಇರುವ ಕಾರ್ಯ ಮುಗಿಸಿ. ಇಲ್ಲವಾದರೆ ಒತ್ತಡ ಎದುರಿಸುವಿರಿ.

**ಮಿಥುನ** ಸಮಸ್ಯೆ ಪರಿಹಾರಕ್ಕೆ ಅವಸರ ಮಾಡದಿರಿ. ಸಾವಧಾನವಾಗಿ ಯೋಚಿಸಿ ನಿರ್ಧಾರ ತಾಳಿ. ಆರ್ಥಿಕ ಒತ್ತಡ ನಿವಾರಣೆ. ಬಂಧುವಿನ ಸಹಕಾರ.

**ಕಟಕ** ಸಕಾರಾತ್ಮಕ ಬೆಳವಣಿಗೆ ಇಂದು ಕಾಣುವಿರಿ. ಭಾವುಕ ಪ್ರಸಂಗದಲ್ಲಿ ಮನಸ್ಸು ದೃಢವಾಗಿರಲಿ. ನಿಮ್ಮ ದೌರ್ಬಲ್ಯ ಪ್ರದರ್ಶಿಸದಿರಿ.

**ಸಿಂಹ** ನಿಮ್ಮ ಯಾವುದೋ ಕೆಲಸ ಅರ್ಧದಲ್ಲಿ ನಿಂತು ಬಿಟ್ಟಿದೆ. ಅದರ ವ್ಯಾಕುಲ ಕಾಡುವುದು. ಇನ್ನೂ ಕೆಲವು ದಿನ ನೀವು ಕಾಯ ಬೇಕಾಗುವುದು.

**ಕನ್ಯಾ** ವೃತ್ತಿಯಲ್ಲಿ ಉನ್ನತಿ. ಉದ್ದೇಶಿತ ಕಾರ್ಯ ಪೂರ್ಣ. ಆದರೆ ಕೌಟುಂಬಿಕ ಅಸಹನೆ. ಶಾಂತಿ, ಸೌಹಾರ್ದತೆ ದೂರ. ಧನವ್ಯಯ.

**ತುಲಾ** ನಿರಾಳ ದಿನ. ಕಾಡುತ್ತಿದ್ದ ಚಿಂತೆ ಪರಿಹಾರ. ಉತ್ಸಾಹ ತುಂಬುವ ಕಾರ್ಯದಲ್ಲಿ ತೊಡಗಿ. ಬಂಧುಮಿತ್ರರ ಭೇಟಿ ಸಂತೋಷ ತರಲಿದೆ.

**ವೃಶ್ಚಿಕ** ಬಾಕಿ ಇರುವ ಕೆಲಸ ಪೂರೈಸಿ ಸಮಾಧಾನ ಪಟ್ಟುಕೊಳ್ಳುವಿರಿ. ಹಣದ ಕೊರತೆ ನೀಗಲಿದೆ. ಬಂಧುಮಿತ್ರರ ಭೇಟಿ. ಆರೋಗ್ಯ ಚಿಂತೆ ಮಾಯ.

**ಧನು** ಒತ್ತಡ ಹೆಚ್ಚು, ಕೆಲವು ಕಿರಿಕಿರಿಗೆ ಒಳಗಾಗುವಿರಿ. ಮನೆಯಲ್ಲಿ ಸಂಗಾತಿ ಜತೆ ವಾಗ್ವಾದ ನಡೆದೀತು. ತಾಳ್ಮೆಯಿಂದ ವ್ಯವಹರಿಸಿ. ಕಾರ್ಯಸಿದ್ಧಿ ವಿಳಂಬ.

**ಮಕರ** ಹೆಚ್ಚಿನ ಒತ್ತಡವು ಎದುರಿಸುವಿರಿ. ಕೆಲಸದ ಮೇಲೆ ಪರಿಣಾಮ. ನಿಮ್ಮ ಮಿತಿಯಲ್ಲೆ ಕಾರ್ಯಾಚರಿಸಿ. ಕೈಗೆ ಎಟುಕದ ವಿಷಯ ಬಿಡಿ.

**ಕುಂಭ** ದಿನದ ಆರಂಭ ಉತ್ಸಾಹದಿಂದ. ಆದರೆ ಸಂಜೆ ವೇಳೆಗೆ ಬೇಸರದ ಬೆಳವಣಿಗೆ ನಡೆದೀತು. ಕೆಲವರನ್ನು ಅತಿಯಾಗಿ ಹಚ್ಚಿಕೊಳ್ಳದಿರಿ.

**ಮೀನ** ಮನೆಯವರ ಜತೆ ಹೆಚ್ಚು ಸೂಕ್ಷ್ಮವಾಗಿ ವರ್ತಿಸುವಿರಿ. ಅವರ ಭಾವನೆಗೆ ಸ್ಪಂದಿಸುವಿರಿ. ವಿಶೇಷ ಉತ್ಸಾಹದಲ್ಲಿ ಜೀವನಗೆ ತಾಕು ಬಿದ್ದೀತು.

**ರಾಹುಕಾಲ: 9.00-10.30**
**ಗುಳಿಕಕಾಲ: 6.00-7.30**

ಅದೃಷ್ಟ ಸಂಖ್ಯೆ: 2,8,3,6

# ದತ್ತಿ ಪ್ರಶಸ್ತಿಗೆ ಪುಸ್ತಕಗಳ ಆಹ್ವಾನ

• **ಬೆಂಗಳೂರು:** ಕನ್ನಡ ಸಾಹಿತ್ಯ ಪರಿಷತ್ತಿನಿಂದ ಪುಸ್ತಕಗಳಿಗೆ ನೀಡಲಾಗುವ ವಿವಿಧ ಪ್ರತಿಷ್ಠಿತ ದತ್ತಿ ಪ್ರಶಸ್ತಿಗಳಿಗಾಗಿ ಪುಸ್ತಕಗಳ ಆಹ್ವಾನ ಮಾಡಲಾಗಿದೆ. 2025 ಜನವರಿ 1ರಿಂದ ಡಿಸೆಂಬರ್ 31ರೊಳಗೆ ಪ್ರಕಟಗೊಂಡ ಪುಸ್ತಕಗಳನ್ನು ಲೇಖಕರು, ಪ್ರಕಾಶಕರು ಕಳಿಸಿಕೊಡಬಹುದಾಗಿದೆ. 2025ನೆ ಸಾಲಿನಲ್ಲಿ ಪ್ರಕಟಗೊಂಡಿರುವ ಒಟ್ಟು 55 ದತ್ತಿ ಪುಸ್ತಕಗಳಿಗೆ ವಿವಿಧ ದತ್ತಿ ಪುರಸ್ಕಾರಗಳನ್ನು ಕನ್ನಡ ಸಾಹಿತ್ಯ ಪರಿಷತ್ತು ನೀಡುತ್ತಿದೆ. ದತ್ತಿ ದಾನಿಗಳು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ದತ್ತಿ ನಿಧಿ ಸ್ಥಾಪಿಸಿದ್ದು, ಇದಕ್ಕಾಗಿ 59 ವಿವಿಧ ಪ್ರಕಾರಗಳ ಪುಸ್ತಕ ಆಹ್ವಾನಿಸಲಾಗಿದೆ.

# ಮುಂದಿನ ವಾರ ಹೈಕಮಾಂಡ್ ಭೇಟಿ: ಆರ್.ಅಶೋಕ್

• **ಬೆಂಗಳೂರು:** ಮುಂದಿನ ವಾರ ಬಂದು ಭೇಟಿ ಮಾಡುವಂತೆ ಕೇಂದ್ರದ ನಾಯಕರು ಸೂಚಿಸಿದ್ದಾರೆ. ಆ ಸಮಯದಲ್ಲಿ ವರದಿ ನೀಡುತ್ತೇವೆ. ಅಡ್ಡ ಮತದಾನ ಮಾಡಿದವರು ಮುಂದೆ ದಾಸಕರಾಗದಂತೆ ನೋಡಿಕೊಳ್ಳುತ್ತೇವೆ ಎಂದು ವಿಪಕ್ಷ ನಾಯಕ ಆರ್. ಅಶೋಕ್ ತಿಳಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಅಡ್ಡ ಮತದಾನ ಮಾಡಿದ್ದು ಯಾರೆಂದು ತಿಳಿಯಲು ಸ್ವಲ್ಪ ಸಮಯ ಬೇಕಾಗುತ್ತದೆ. ಕೆಲವರು ಹಣ ಪಡೆದು ಮತ ಚಲಾಯಿಸಿದ್ದಾರೆ. ಕೋಟ್ಯಂತರ ಹಣ ಹಾಗೂ ಅನುದಾನದ ವಿಚಾರ ಹೊರಬರಲಿದೆ. ಅಡ್ಡ ಮತದಾನ ಮಾಡಿರುವುದರ ಬಗ್ಗೆ ಹಲವು ಮಾಹಿತಿ ಬಂದಿದೆ. ಈ ಬಗ್ಗೆ ಸಮಿತಿ ರಚಿಸಿದ್ದು, ಸತ್ಯ ಹೊರಬರಲಿದೆ. ಹಕ್ಷಕ್ಕೆ ದ್ರೋಹ ಮಾಡಿದ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದರು. ಮತದಾನದ ಸಮಯದಲ್ಲಿ ಯಾರು ಎಲ್ಲಿದ್ದರು, ಯಾರು ಯಾರೊಂದಿಗೆ ಮಾತನಾಡಿದ್ದರು ಎಂಬ ಮಾಹಿತಿ ಸಂಗ್ರಹಿಸಲಾಗುತ್ತಿದೆ ಎಂದರು.

ಅಡ್ಡ ಮತದಾನ ಪಕ್ಷ ಗಂಭೀರವಾಗಿ ಪರಿಗಣಿಸಿದೆ: ರಾಜ್ಯಾಧ್ಯಕ್ಷ ವಿಜಯೇಂದ್ರ

# ಕ್ಷಮಿಸುವ ಪ್ರಶ್ನೆಯಿಲ್ಲ

• **ಬೆಂಗಳೂರು:** ವಿಧಾನ ಪರಿಷತ್ ಚುನಾವಣೆಯಲ್ಲಿ ಅಡ್ಡ ಮತದಾನ ಮಾಡಿದವರನ್ನು ಕ್ಷಮಿಸುವ ಪ್ರಶ್ನೆಯೇ ಇಲ್ಲ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ತಿಳಿಸಿದ್ದಾರೆ.



ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಪಕ್ಷದ ಮೀರ್ ಸಾಧಿಕರ ವಿರುದ್ಧ ಖಂಡಿತ ಶಿಸ್ತು ಕ್ರಮ ಕೈಗೊಳ್ಳಲಾಗುವುದು. ಅಡ್ಡ ಮತದಾನವನ್ನು ಪಕ್ಷ ಗಂಭೀರವಾಗಿ ಪರಿಗಣಿಸಿದೆ ಎಂದರು.

ಎಂಟತ್ತು ದಿನಗಳ ಹಿಂದೆ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ಕರೆ ಮಾಡಿ ಮೂರನೇ ಅಭ್ಯರ್ಥಿ ಕಣಕ್ಕಿಳಿಸೋಣ ಎಂದು ಹೇಳಿದ್ದರು. ನೀವಾದರೂ ಹಾಕಿ ನಾವಾದರೂ ಹಾಕುತ್ತೇವೆ. ಒಳ್ಳೆಯ ಉದ್ದೇಶ ಇಟ್ಟುಕೊಂಡು ಹೋರಾಟ ಮಾಡೋಣ ಎಂದಿದ್ದರು. ಆಗ ನೀವೇ ಅಭ್ಯರ್ಥಿ ಹಾಕಿ ಒಟ್ಟಾಗಿ ಸೆಣಸಾಟ ಮಾಡೋಣ ಎಂದು ತಿಳಿಸಿದ್ದೆ. ಎರಡೂ ಪಕ್ಷಗಳ ಉದ್ದೇಶ ಒಂದೇ ಆಗಿತ್ತು. ಆದರೆ, ಗುರುವಾರ ನಡೆದ ಮತದಾನದಲ್ಲಿ ಜೆಡಿಎಸ್ ಪಕ್ಷದಿಂದ ಆರೇಳು ಅಡ್ಡ ಮತದಾನ ಆಗಿದೆ. ಬಿಜೆಪಿಯಿಂದ ನಾಲ್ಕೈದು ಅಡ್ಡ ಮತದಾನ ಆಗಿದೆ. ಇದರಿಂದ ಎರಡೂ ಪಕ್ಷಗಳಿಗೆ ಬೇಸರವಾಗಿದೆ ಎಂದು ಹೇಳಿದರು.

ಯಾರು ಅಡ್ಡ ಮತದಾನ ಮಾಡಿ ಆಟ ಆಡಿರಬಹುದು ಎಂಬ ಮಾಹಿತಿ ಸಿಕ್ಕಿದೆ. ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರಿಗೆ ಮಾಹಿತಿ ನೀಡಲು ಭೇಟಿ ಮಾಡಲು ಅವಕಾಶಕ್ಕಾಗಿ ಮನವಿ ಮಾಡಿದ್ದೇನೆ. ಅವರು ಯಾವಾಗ ಅವಕಾಶ ಕೊಟ್ಟರೂ ಭೇಟಿ ಮಾಡಿ ವಿವರ ನೀಡಲಿದ್ದೇನೆ ಎಂದು ತಿಳಿಸಿದರು.

ಬಿಜೆಪಿ ಟಿಕೆಟ್‌ನಲ್ಲಿ ಗೆದ್ದು ಚುನಾವಣೆಯಲ್ಲಿ ಈ ರೀತಿ ಮತದಾನ ಮಾಡುತ್ತಾರೆ ಎಂದರೆ ಅವರಿಗೆ ಗೆರೆ ಎಳೆಯುವ ಕೆಲಸವನ್ನು ಪಕ್ಷ ಮಾಡಲಿದೆ. ಎಲ್ಲಕ್ಕೂ ಒಂದು ಮಿತಿ ಇದೆ. ಬಿಜೆಪಿಯಲ್ಲಿನ ಸಣ್ಣಪುಟ್ಟ ಗೊಂದಲದಿಂದಾಗಿ ಕಾರ್ಯಕರ್ತರು ಬೇಸತ್ತಿದ್ದಾರೆ. ಈಗ ಇಂತಹ ಬೆಳವಣಿಗೆ ನಡೆದಿದೆ. ಇದರಿಂದ ನೋವಾಗಿದೆ. ಅಭ್ಯರ್ಥಿಯನ್ನು ಕಣಕ್ಕಿಳಿಸುವ ಬಗ್ಗೆ ಎರಡೂ ಪಕ್ಷದ ಮುಖಂಡರು ಕುಳಿತು ತೀರ್ಮಾನ ಮಾಡಿದ್ದೆವು. ನಮ್ಮ ಪಕ್ಷದ ಇಬ್ಬರು ಗೆಲುವು ಸಾಧಿಸಿರಬಹುದು. ಆದರೆ, ಅಡ್ಡ ಮತದಾನದಿಂದ ಅವಮಾನ ಆಗಿದೆ. ಇದನ್ನೆಲ್ಲ ತಾರ್ಕಿಕ ಅಂತ್ಯಕ್ಕೆ ತೆಗೆದುಕೊಂಡು ಹೋಗುತ್ತೇವೆ ಎಂದು ವಿವರಿಸಿದರು.

**ಎಲ್ಲವನ್ನು ಅರಗಿಸಿಕೊಳ್ಳಬಲ್ಲೆ:** ಪಕ್ಷದ ರಾಜ್ಯ ಘಟಕದ ಅಧ್ಯಕ್ಷನಾಗಿ ಪಕ್ಷದ ಬೆಳವಣಿಗೆಯನ್ನು ಗಂಭೀರವಾಗಿ ಪರಿಗಣಿಸುತ್ತೇನೆ. ಅಧ್ಯಕ್ಷನಾಗುವುದಕ್ಕೂ ಮೊದಲು ನಾನು ಕಾರ್ಯಕರ್ತ. ಪಕ್ಷದ ಹೈಕಮಾಂಡ್ ಕಾಲಕಾಲಕ್ಕೆ ಏನೇನು ತೀರ್ಮಾನ ಮಾಡಬೇಕೋ ಅದನ್ನು ಮಾಡಲಿದೆ. ಇಂತಹ ಮಹತ್ವದ ಚುನಾವಣೆಯಲ್ಲಿ ಹೀಗೆ ಆಗುತ್ತದೆ ಎಂಬ ಕಲ್ಪನೆ ಇರಲಿಲ್ಲ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು. ಮುಖ್ಯಮಂತ್ರಿ ಯಾರೇ ಆದರೂ ಹೆದರುವ ಪ್ರಶ್ನೆ ಇಲ್ಲ. ಸರ್ಕಾರವನ್ನು ಬಗ್ಗಿಸಲೂ ನಮಗೆ ಗೊತ್ತಿದೆ. ಇಂತಹ ಸಣ್ಣಪುಟ್ಟ ಘಟನೆಯಿಂದ ವಿಚಲಿತನಾಗಿ ಓಡಿ ಹೋಗುವುದಿಲ್ಲ, ಎಲ್ಲವನ್ನು ಅರಗಿಸಿಕೊಳ್ಳಬಲ್ಲೆ ಎಂದು ಹೇಳಿದರು.

### ಕಾಂಗ್ರೆಸ್‌ನಿಂದ ಬೆಂಕಿ ಹಚ್ಚುವ ಕುತಂತ್ರ

ವಿಧಾನಪರಿಷತ್ ಚುನಾವಣೆಯಲ್ಲಿ ಅಡ್ಡ ಮತದಾನ ಮಾಡಿದವರು ಎಂದು ಕೆಲವರ ಹೆಸರುಗಳನ್ನು ತೇಲಿಬಿಡುವ ಮೂಲಕ ಬಿಜೆಪಿಯಲ್ಲಿ ಬೆಂಕಿ ಹಚ್ಚುವ ಕುತಂತ್ರವನ್ನು ಕಾಂಗ್ರೆಸ್‌ನವರು ಮಾಡುತ್ತಿದ್ದಾರೆ. ಕಾಂಗ್ರೆಸ್‌ನ ಕುತಂತ್ರಕ್ಕೆ ನಾವು ತಲೆಕೆಡಿಸಿಕೊಳ್ಳುವುದಿಲ್ಲ. ಅಡ್ಡ ಮತದಾನ ಮಾಡಿದವರ ಪತ್ತೆಗೆ ಸಮಿತಿ ರಚಿಸಲಾಗಿದೆ. ಯಾರು ಅಡ್ಡ ಮತದಾನ ಮಾಡಿದ್ದಾರೆ ಎಂಬುದು ಮೂರ್ನಾಲ್ಕು ದಿನದಲ್ಲಿ ತಿಳಿಯಲಿದೆ ವಿಜಯೇಂದ್ರ ಹೇಳಿದರು.

> ಬಹಳ ಜನ ಚಾಣಕ್ಯರನ್ನು ರಾಜ್ಯದ ಜನ ನೋಡಿದ್ದಾರೆ. ಕುದುರೆ ಓಡುವ ಸಮಯದಲ್ಲಿ ಓಡುತ್ತದೆ, ಬೀಳುವ ಸಮಯದಲ್ಲಿ ಬೀಳುತ್ತದೆ. ಬಿಜೆಪಿಗೆ ಎಲ್ಲವನ್ನೂ ಎದುರಿಸುವ ಶಕ್ತಿ ಇದೆ. ದೊಡ್ಡ ಸಂಘಟನೆ ಇದೆ. ಕಾರ್ಯಕರ್ತರ ಶಕ್ತಿ ಇದೆ. ಯಾರನ್ನು ಯಾವಾಗ ಹೇಗೆ ಬಗ್ಗಿಸಬೇಕು ಎಂಬುದು ತಿಳಿದಿದೆ.
> ■ **ಬಿ.ವೈ.ವಿಜಯೇಂದ್ರ,** ಬಿಜೆಪಿ ರಾಜ್ಯಾಧ್ಯಕ್ಷ

# ಹಸಿರೀಕರಣಕ್ಕಾಗಿ 15 ಲಕ್ಷ ಸಸಿ

• **ಬೆಂಗಳೂರು:** ರಾಜ್ಯ ಸರ್ಕಾರವು ಬೆಂಗಳೂರಿನಲ್ಲಿ ಇದುವರೆಗೆ ಕೈಗೊಳ್ಳಲಾದ ಅತಿದೊಡ್ಡ ನಗರ ಹಸಿರೀಕರಣ ಕಾರ್ಯಕ್ರಮಗಳಲ್ಲಿ 15 ಲಕ್ಷ ಸಸಿಗಳನ್ನು ನೆಡುವ ಕಾರ್ಯಕ್ರಮವೂ ಒಂದಾಗಿದ್ದು, ಇದು ವಿಶ್ವ ದಾಖಲೆಯಾಗಲಿದೆ, ನಗರದ ಪ್ರತಿಯೊಬ್ಬ ನಾಗರಿಕರೂ ಈ ಐತಿಹಾಸಿಕ ಅಭಿಯಾನದ ಪಾಲುದಾರರಾಗಬೇಕು ಎಂದು ಬಿಡಿಎ ಅಧ್ಯಕ್ಷ, ಶಾಸಕ ಎನ್. ಎ.ಹ್ಯಾರಿಸ್ ತಿಳಿಸಿದರು.



ಖಾಸಗಿ ಹೋಟೆಲ್‌ನಲ್ಲಿ ನಡೆದ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಇದೇ 27ರಂದು ನಾಡಪ್ರಭು ಕೆಂಪೇಗೌಡ ಜಯಂತಿಯ ಅಂಗವಾಗಿ ನಗರದಾದ್ಯಂತ 15 ಲಕ್ಷ ಸ್ಥಳೀಯ ಸಸಿಗಳನ್ನು ನೆಡುವ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಟೊಂಕಕಟ್ಟಿ ನಿಂತಿದ್ದೇವೆ. ಈ ಅಭಿಯಾನವು ಪರಿಸರ ಸುಸ್ಥಿರತೆಯತ್ತ ಬೆಂಗಳೂರಿನ ಬದ್ಧತೆಯನ್ನು ಮತ್ತಷ್ಟು ಬಲಪಡಿಸುತ್ತದೆ ಎಂದು ತಿಳಿಸಿದರು.

15 ಲಕ್ಷ ಸಸಿಗಳ ನೆಡುವ ಈ ಬೃಹತ್ ಕಾರ್ಯ ಕ್ರಮವು ಬೆಂಗಳೂರಿನ ಹಸಿರು ಹೊದಿಕೆಯನ್ನು ವಿಸ್ತರಿಸುವುದು, ನಗರ ಉಷ್ಣತೆಯ ಪರಿಣಾಮವನ್ನು ತಗ್ಗಿಸುವುದು, ಜೀವವೈವಿಧ್ಯತೆಯನ್ನು ಹೆಚ್ಚಿಸುವುದು ಹಾಗೂ ಭವಿಷ್ಯದ ಪೀಳಿಗೆಗಳಿಗಾಗಿ ದೀರ್ಘಕಾಲಿಕ ಪರಿಸರ ಆಸ್ತಿಗಳನ್ನು ನಿರ್ಮಿಸುವ ಉದ್ದೇಶ ಹೊಂದಿದೆ ಎಂದು ತಿಳಿಸಿದರು. ಈ ಅಭಿಯಾನದಲ್ಲಿ ನಗರದ 50,000ಕ್ಕೂ ಹೆಚ್ಚು ನಾಗರಿಕರು, ಸ್ವಯಂಸೇವಕರು, ವಿದ್ಯಾರ್ಥಿಗಳು, ಕಾರ್ಪೊರೇಟ್ ಸಂಸ್ಥೆಗಳು, ನಿವಾಸಿ ಸಂಘಗಳು, ಸರ್ಕಾರೇತರ ಸಂಸ್ಥೆಗಳು ಹಾಗೂ ಸರ್ಕಾರಿ ಇಲಾಖೆಗಳು ಭಾಗವಹಿಸಲಿದ್ದು, ನಮ್ಮ ಜತೆಗೆ ಕಾರ್ಮಿಕ ಇಲಾಖೆಯೂ ಕೈಜೋಡಿಸಿದೆ ಎಂದರು.



> ಬಿಡಿಎ ವತಿಯಿಂದ 15 ಲಕ್ಷ ಸ್ಥಳೀಯ ಸಸಿಗಳನ್ನು ನೆಡುವುದು ಕೇವಲ ಸಸಿ ನೆಡುವ ಕಾರ್ಯಕ್ರಮವಲ್ಲ; ಇದು ನಮ್ಮ ನಗರದ ಪರಿಸರ ಭವಿಷ್ಯವನ್ನು ಸುರಕ್ಷಿತಗೊಳಿಸುವ ಜನಾಂದೋಲನವಾಗಿದೆ. 15 ಲಕ್ಷ ಸ್ಥಳೀಯ ಸಸಿಗಳ ನೆಡುವ ಮೂಲಕ ನಾವು ಭವಿಷ್ಯದ ಪೀಳಿಗೆಗಳಿಗೆ ಶಾಶ್ವತ ಹಸಿರು ಪರಂಪರೆಯನ್ನು ನಿರ್ಮಿಸುತ್ತಿದ್ದೇವೆ.
> ■ **ಎನ್.ಎ.ಹ್ಯಾರಿಸ್,** ಬಿಡಿಎ ಅಧ್ಯಕ್ಷ, ಶಾಸಕ

**ಮೂರು ಕಡೆ ಪ್ರಮುಖ ಕಾರ್ಯಕ್ರಮ:** ಸಸಿ ನೆಡುವ ಕಾರ್ಯಕ್ರಮವು ನಾಡಪ್ರಭು ಕೆಂಪೇಗೌಡ ಬಡಾವಣೆ, ಬನಶಂಕರಿ 6ನೇ ಹಂತ, ಹಾಗೂ ಡಾ. ಶಿವರಾಮ ಕಾರಂತ ಬಡಾವಣೆ ಸೇರಿದಂತೆ ಕೆರೆಗಳ ಬಫರ್ ವಲಯಗಳು, ರಾಜಕಾಲುವೆಗಳ ಬಫರ್ ವಲಯಗಳು, ಉದ್ಯಾನವನಗಳು ಮತ್ತು ಇತರ ಸಾರ್ವಜನಿಕ ಸ್ಥಳಗಳಲ್ಲಿ ನಡೆಯಲಿದೆ, ಪ್ರತಿಯೊಬ್ಬರು 30 ಸಸಿಗಳನ್ನು ನೆಡಲಿದ್ದಾರೆ ಎಂದು ಹ್ಯಾರಿಸ್ ಮಾಹಿತಿ ನೀಡಿದರು.

# ಮೇಕೆದಾಟುಗೆ ತಮಿಳುನಾಡು ಅಡ್ಡಿ

ಪುಟ 1ರಿಂದ ಮುಖ್ಯಮಂತ್ರಿ ಸಿ. ಜೋಸೆಫ್ ವಿಜಯ್ ಮಂಡಿಸಿದ ನಿರ್ಣಯಕ್ಕೆ ವಿರೋಧ ಪಕ್ಷದ ನಾಯಕ ಉದಯನಿಧಿ ಸ್ಟಾಲಿನ್, ಎಐಎಡಿಎಂಕೆ ಮುಖ್ಯಸ್ಥ ಎಡಪ್ಪಾಡಿ ಕೆ. ಪಳನಿಸ್ವಾಮಿ ಸೇರಿದಂತೆ ಎಲ್ಲ ಪಕ್ಷಗಳ ಸದಸ್ಯರು ಬೆಂಬಲ ವ್ಯಕ್ತಪಡಿಸಿದರು. ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರ ಯೋಜನೆ ಅನುಷ್ಠಾನಕ್ಕೆ ಮುಂದಾಗಿದ್ದರೂ, ತಮಿಳುನಾಡು ಕಾಂಗ್ರೆಸ್ ಘಟಕ ನಿರ್ಣಯವನ್ನು ಬೆಂಬಲಿಸಿರುವುದು ಗಮನ ಸೆಳೆದಿದೆ. ಕಾವೇರಿ ನದಿಗೆ ಅಡ್ಡಲಾಗಿ ಮೇಕೆದಾಟುವಿನಲ್ಲಿ ಅಣೆಕಟ್ಟು ನಿರ್ಮಿಸಲು ಕರ್ನಾಟಕ ಸರ್ಕಾರ ಏಕಪಕ್ಷೀಯವಾಗಿ ಪ್ರಯತ್ನಿಸುತ್ತಿದೆ. ಇದು ಕಾವೇರಿ ಜಲ ವಿವಾದ ನ್ಯಾಯಮಂಡಳಿಯ 2007ರ ಅಂತಿಮ ತೀರ್ಪು ಹಾಗೂ ಸುಪ್ರೀಂ ಕೋರ್ಟ್‌ನ 2018ರ ತೀರ್ಪಿಗೆ ವಿರುದ್ಧವಾಗಿದೆ ಎಂದು ನಿರ್ಣಯದಲ್ಲಿ ಆರೋಪಿಸಲಾಗಿದೆ.

ಯೋಜನೆಗೆ ಸಂಬಂಧಿಸಿದಂತೆ ಕಾವೇರಿ ಕಣಿವೆಯ ಇತರ ರಾಜ್ಯಗಳ ಒಪ್ಪಿಗೆ ಪಡೆಯಲಾಗಿಲ್ಲ, ಕೇಂದ್ರ ಸರ್ಕಾರದಿಂದಲೂ ಯಾವುದೇ ಅನುಮೋದನೆ ಪಡೆದಿಲ್ಲ. ಹೀಗಾಗಿ ಮೇಕೆದಾಟು ಯೋಜನೆಗೆ ತಾಂತ್ರಿಕ, ಪರಿಸರ ಸೇರಿದಂತೆ ಯಾವುದೇ ರೀತಿಯ ಅನುಮತಿ ನೀಡಬಾರದು ಎಂದು ಕೇಂದ್ರ ಸರ್ಕಾರವನ್ನು ವಿಧಾನಸಭೆ ಒತ್ತಾಯಿಸಿದೆ. ಕರ್ನಾಟಕ ಸಲ್ಲಿಸಿರುವ ವಿಸ್ತೃತ ಯೋಜನಾ ವರದಿಯನ್ನು ಪರಿಶೀಲಿಸಬಾರದು, ಮುಂದಿನ ಪ್ರಕ್ರಿಯೆಗೆ ಒಳಪಡಿಸಬಾರದು ಹಾಗೂ ಅನುಮೋದನೆ ನೀಡಬಾರದು ಎಂದು ಕೇಂದ್ರ ಜಲ ಆಯೋಗಕ್ಕೂ ಆಗ್ರಹಿಸಲಾಗಿದೆ.

**ಹೊಸ ನ್ಯಾಯಮಂಡಳಿಗೆ ಆಗ್ರಹ:** ಮೇಕೆದಾಟು ವಿಚಾರವನ್ನು ಹೊಸ ಜಲ ವಿವಾದವೆಂದು ಪರಿಗಣಿಸಬೇಕು. ಅಂತಾರಾಜ್ಯ ನದಿ ನೀರು ವಿವಾದ ಕಾಯ್ದೆ-1956ರ ಅನ್ವಯ ಹೊಸ ನ್ಯಾಯಮಂಡಳಿ ರಚಿಸುವಂತೆ ಕೇಂದ್ರವನ್ನು ಒತ್ತಾಯಿಸಲು ನಿರ್ಣಯದಲ್ಲಿ ತಿದ್ದುಪಡಿ ತರಬೇಕು ಎಂದು ವಿರೋಧ ಪಕ್ಷದ ನಾಯಕ ಉದಯನಿಧಿ ಸ್ಟಾಲಿನ್ ಆಗ್ರಹಿಸಿದರು. ತಮಿಳುನಾಡಿನ ಎಲ್ಲ ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಒಟ್ಟಾಗಿ ದಿಲ್ಲಿಗೆ ತೆರಳಿ ಕೇಂದ್ರ ಸರ್ಕಾರದ ಪ್ರಮುಖರನ್ನು ಭೇಟಿಯಾಗಬೇಕು. ಯೋಜನೆ ವಿರೋಧಿಸುವ ವಿಚಾರದಲ್ಲಿ ರಾಜ್ಯದ ಒಗ್ಗಟ್ಟನ್ನು ಪ್ರದರ್ಶಿಸಬೇಕು ಎಂದರು.

> ಮೇಕೆದಾಟು ವಿಚಾರದ ಬಗ್ಗೆ ನ್ಯಾಯಾಲಯ ನಿರ್ದೇಶನ ನೀಡಿದೆ. ಸುಪ್ರೀಂ ಕೋರ್ಟ್ ತ್ರಿಸದಸ್ಯ ಪೀಠ ತೀರ್ಪು ಬಂದ ಬಳಿಕ ಮತ್ತೇನಿದೆ? ಕರ್ನಾಟಕ 177 ಟಿಎಂಸಿ ನೀರು ಬಿಡಬೇಕು ಎಂದು ನೀಡಿದ ನಿರ್ದೇಶನವನ್ನು ನಾವು ಒಪ್ಪಿಕೊಂಡಿಲ್ಲವೆ.
> ■ **ಡಿ.ಕೆ.ಶಿವಕುಮಾರ್,** ಮುಖ್ಯಮಂತ್ರಿ

'ಮೇಕೆದಾಟುವಿನಲ್ಲಿ ಯಾವುದೇ ಅಣೆಕಟ್ಟು ನಿರ್ಮಾಣವಾಗಬಾರದು ಎಂಬುದು ಡಿಎಂಕೆಯ ದೃಢ ನಿಲುವು. ತಮಿಳುನಾಡಿನ ಹಕ್ಕುಗಳಿಗೆ ಧಕ್ಕೆಯಾಗಲು ಅವಕಾಶ ನೀಡುವುದಿಲ್ಲ, ಯೋಜನೆ ತಡೆಯಲು ಕೈಗೊಳ್ಳುವ ಎಲ್ಲ ಕಾನೂನು ಕ್ರಮಗಳನ್ನು ಬೆಂಬಲಿಸುತ್ತೇವೆ' ಎಂದು ಉದಯನಿಧಿ ಹೇಳಿದರು.

**ಐದನೇ ನಿರ್ಣಯ:** ಮೇಕೆದಾಟು ಯೋಜನೆ ವಿರೋಧಿಸಿ ತಮಿಳುನಾಡು ವಿಧಾನಸಭೆ ಅಂಗೀಕರಿಸಿದ ಐದನೇ ನಿರ್ಣಯ ಇದಾಗಿದೆ. ಈ ಹಿಂದೆ 2014ರ ಡಿಸೆಂಬರ್‌ನಲ್ಲಿ ಜಯಲಲಿತಾ ಸರ್ಕಾರ, 2015ರ ಮಾರ್ಚ್ ನಲ್ಲಿ ಓ. ಪನ್ನೀರ್‌ಸೆಲ್ವಂ ಸರ್ಕಾರ, 2018ರ ಡಿಸೆಂಬರ್‌ನಲ್ಲಿ ಎಡಪ್ಪಾಡಿ ಪಳನಿಸ್ವಾಮಿ ಸರಕಾರ ಹಾಗೂ 2023ರ ಮಾರ್ಚ್‌ನಲ್ಲಿ ಎಂ.ಕೆ. ಸ್ಟಾಲಿನ್ ಸರ್ಕಾರ ಇದೇ ರೀತಿಯ ನಿರ್ಣಯಗಳನ್ನು ಅಂಗೀಕರಿಸಿದ್ದವು.

**ಕುಡಿಯುವ ನೀರಿಗಾಗಿ ಯೋಜನೆ:** ಮೇಕೆದಾಟು ಸಮತೋಲನ ಜಲಾಶಯ ಯೋಜನೆಯು ಬೆಂಗಳೂರು ನಗರದ ಕುಡಿಯುವ ನೀರಿನ ಅಗತ್ಯ ಪೂರೈಸುವುದರ ಜತೆಗೆ ಜಲವಿದ್ಯುತ್ ಉತ್ಪಾದನೆಯ ಉದ್ದೇಶವನ್ನು ಹೊಂದಿದೆ. ಯೋಜನೆಯಿಂದ ತಮಿಳುನಾಡಿಗೆ ಹರಿಯಬೇಕಾದ ಕಾವೇರಿ ನೀರಿನ ಪಾಲಿಗೆ ಯಾವುದೇ ಧಕ್ಕೆಯಾಗುವುದಿಲ್ಲ ಎಂಬುದು ಕರ್ನಾಟಕದ ನಿಲುವಾಗಿದೆ. ಆದರೆ, ಯೋಜನೆಯಿಂದ ತಮ್ಮ ರಾಜ್ಯದ ರೈತರ ಹಿತಾಸಕ್ತಿಗೆ ತೊಂದರೆಯಾಗಲಿದೆ ಎಂದು ತಮಿಳುನಾಡು ನಿರಂತರವಾಗಿ ವಿರೋಧಿಸುತ್ತಿದೆ.

# ರಾಜ್ಯದವರಿಗೇ ಗ್ಯಾರಂಟಿ

ಪುಟ 1ರಿಂದ **ಎಜಿ ವರದಿ ಬಗ್ಗೆ ಚರ್ಚೆ:** ಒಂದೇ ಖಾತೆಯಲ್ಲಿ ಹಲವು ಫಲಾನುಭವಿಗಳು ಗೃಹಲಕ್ಷ್ಮಿ ಹಣ ಪಡೆಯುತ್ತಿದ್ದಾರೆ. ಮೂರು ಲಕ್ಷ ಕಂತುಗಳಲ್ಲಿ ಒಟ್ಟು 60 ಕೋಟಿ ರೂ. ಹೋಗಿದೆ ಎನ್ನುವ ಬಗ್ಗೆ ಎಜಿ ಅವರ ವರದಿ ಬಂದಿದೆ. ಒಬ್ಬರೇ ಹಲವು ಖಾತೆಗಳನ್ನು ನೋಂದಾಯಿಸಿರುವುದನ್ನು ಎಜಿ ವರದಿಯಲ್ಲಿ ಉಲ್ಲೇಖವಾಗಿದೆ. ಹಿಂದೆ ಪಡೆದ ಅರ್ಜಿಗಳಲ್ಲಿ ಉಲ್ಲೇಖವಾಗಿರುವ ಅಂಶಗಳ ನೈಜತೆ ಬಗ್ಗೆ ಪರಿಶೀಲನೆ ನಡೆಸದಿರುವ ಬಗ್ಗೆ ಪ್ರಸ್ತಾಪಿಸಲಾಯಿತು. ಶಕ್ತಿ ಯೋಜನೆಯು ಮೇ ಅಂತ್ಯದವರೆಗೆ 763 ಕೋಟಿ ಟ್ರಿಪ್ ಯೋಜನೆಯ ಫಲಾನುಭವಿಗಳಾಗಿದ್ದು, ಅವರಿಗೆ ವಿನಿಯೋಗಿಸಲಾದ ಟಿಕೆಟ್ ಮೌಲ್ಯ 20047.69 ಕೋಟಿ ರೂ.ಗಳು. ಅಲ್ಲದೇ, 2026-27ನೇ ಸಾಲಿಗೆ ಸಾಮಾನ್ಯ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಎಲ್ಲರನ್ನೂ ಸೇರಿಸಿ 10 ಲಕ್ಷ ಉಚಿತ ಬಸ್ ಪಾಸ್ ಗಳನ್ನು ವಿದ್ಯಾರ್ಥಿಗಳಿಗೆ ವಿತರಿಸಲು ಅಂದಾಜಿಸಲಾಗಿದೆ. ಗೃಹಜ್ಯೋತಿ ಯೋಜನೆಯಲ್ಲಿ ಮೇ ಅಂತ್ಯದವರೆಗೆ 1.65 ಕೋಟಿ ಫಲಾನುಭವಿಗಳು ಯೋಜನೆಯ ಲಾಭ ಪಡೆದಿರುತ್ತಾರೆ. ಹೊರ ರಾಜ್ಯದಿಂದ ಇಲ್ಲಿಗೆ ಬಂದು ನೆಲೆಸಿ ಗೃಹಜ್ಯೋತಿ ಲಾಭ ಪಡೆಯುವವರ ಮಾಹಿತಿ ಸಂಗ್ರಹಿಸಲು ಸೂಚನೆ. ಮತಪಟ್ಟಿಯಲ್ಲಿ ಹೆಸರಿರುವ ಮತದಾರರು ಮಾತ್ರ ಸರ್ಕಾರದ ಯೋಜನೆಗಳ ಫಲಾನುಭವಿಗಳಾಗಿರುತ್ತಾರೆ.

### ನೈಜ ಫಲಾನುಭವಿಗಳಿಗೆ ತೊಂದರೆ ಆಗಬಾರದು

ಪುಟ 1ರಿಂದ ಸಾಲದ ಖಾತೆಗೆ ಗೃಹಲಕ್ಷ್ಮಿ ಹಣ ಹೋದ ತಕ್ಷಣ ಆ ಹಣ ಸಾಲದ ಮೊತ್ತಕ್ಕೆ ಜಮೆ ಆಗಿಬಿಡುತ್ತದೆ. ಆದ್ದರಿಂದ ಅಂತಹ ಫಲಾನುಭವಿಗಳು ಖಾತೆ ಬದಲಾಯಿಸುತ್ತಾರೆ. ಇಂತಹ ಫಲಾನುಭವಿಗಳಿಗೆ ತೊಂದರೆ ಆಗಬಾರದು ಎಂದು ಸಿಎಂ ಸೂಚಿಸಿದರು. ಗೃಹಜ್ಯೋತಿ ಗ್ಯಾರಂಟಿ ಯೋಜನೆ ಜಾರಿ ಆಗುವಾಗ ಹೆಚ್ಚಿನ ದುರುಪಯೋಗ ಆಗದ ಹಾಗೆ ಎಚ್ಚರಿಕೆ ವಹಿಸಿದ್ದರು. ಇದೇ ಎಚ್ಚರಿಕೆ ಇತರೆ ಯೋಜನೆಗಳಲ್ಲೂ ಅನುಸರಿಸಿದ್ದರೆ, ದುರುಪಯೋಗದ ಪ್ರಮಾಣ ಕಡಿಮೆ ಆಗುತ್ತಿತ್ತು ಎಂದು ಡಿಕೆಶಿ ಅಭಿಪ್ರಾಯಪಟ್ಟರು. ಏಐ ಟೆಲ್ ಆಫ್ ಬ್ಯಾಂಕ್‌ನಲ್ಲಿಯೂ ಸಿಮ ಖಾತೆಗಳನ್ನು ತೆರೆದು ದುರುಪಯೋಗಪಡಿಸಿಕೊಳ್ಳುತ್ತಿರುವ ಪ್ರಕರಣಗಳು ಪತ್ತೆಯಾಗಿದೆ ಎನ್ನುವ ಬಗ್ಗೆ ಅಧಿಕಾರಿಗಳು ಸಭೆಯ ಗಮನಕ್ಕೆ ತಂದರು. ಗೃಹಲಕ್ಷ್ಮಿ ಯೋಜನೆ ಜಾರಿಯಲ್ಲಿ ಬರುತ್ತಿರುವ ಎರಡು ಪ್ರಮುಖ ತಾಂತ್ರಿಕ ಸಮಸ್ಯೆಗಳ ಬಗ್ಗೆ ಕೂಲಂಕಷ ಚರ್ಚೆ ನಡೆಸಲಾಯಿತು. ಮರಣ ಹೊಂದಿದ ಫಲಾನುಭವಿಗಳ ಸಂಖ್ಯೆ ಸಕಾಲದಲ್ಲಿ ದೊರೆಯದಿರುವ ಬಗ್ಗೆ ಇ-ಕೆವೈಸಿ ಹಾಗೂ ಬ್ಯಾಂಕ್ ಖಾತೆ/ಎನ್‌ಪಿಸಿಐ ನಿಷ್ಕ್ರಿಯವಾಗಿರುವ ಫಲಾನುಭವಿಗಳ ಕುರಿತಂತೆ ಚರ್ಚೆ ನಡೆಸಲಾಯಿತು.

> ಅನುಕೂಲಸ್ಥರು ಯಾರಾದರೂ ಗ್ಯಾರಂಟಿ ಯೋಜನೆಗಳನ್ನು ಸ್ವಯಂಪ್ರೇರಿತವಾಗಿ ಬಿಟ್ಟುಕೊಡುವ ಮೂಲಕ ಇತರೆ ಅರ್ಹ ಫಲಾನುಭವಿಗಳಿಗೆ ನೆರವಾಗಲು ಮುಂದಾದರೆ ಅಂತಹವರನ್ನು ಪ್ರೋತ್ಸಾಹಿಸಬೇಕು.
> ■ **ಡಿ.ಕೆ.ಶಿವಕುಮಾರ್,** ಮುಖ್ಯಮಂತ್ರಿ

ಮುಖ್ಯಮಂತ್ರಿ ವಿ.ಡಿ. ಸತೀಶನ್‌ರಿಂದ ಚೊಚ್ಚಲ ಬಜೆಟ್ ಮಂಡನೆ

# ನವಕೇರಳಕ್ಕಾಗಿ ಇರುವ ಬಜೆಟ್

• **ತಿರುವನಂತಪುರಂ:** ಹಣಕಾಸು ಖಾತೆ ಯನ್ನೂ ಹೊಂದಿರುವ ಕೇರಳ ಸಿಎಂ ವಿ.ಡಿ. ಸತೀಶನ್ ಅವರು 2026-27ನೇ ಸಾಲಿಗಾಗಿ 2,39,907.13 ಕೋ. ರೂ. ಗಾತ್ರದ 1,84,438 ಕೋ. ರೂ. ಆದಾಯ, 34,586.66 ಕೋ.ರೂ.ಗಳ ಆದಾಯ ಕೊರತೆ ಮತ್ತು 55,419.5ಕೋ. ರೂ.ಗಳ ಹಣಕಾಸು ಕೊರತೆಯ ಬಜೆಟನ್ನು ಮಂಡಿಸಿದ್ದಾರೆ.

ಇದು ಅವರ ಚೊಚ್ಚಲ ಬಜೆಟ್. ರಾಜ್ಯದಲ್ಲಿ ನ್ಯಾಯಯುತ ನೆಲೆಯಲ್ಲಿ ಭೂ ಮೌಲ್ಯಮಾಪನ ಮತ್ತು ಮಾಡುವ ನಿಟ್ಟಿನಲ್ಲಿ ಪುನರ್ ಪರಿಶೀಲನೆ ನಡೆಸಲಾಗುವುದು .ರಾಜ್ಯಾದ್ಯಂತ ನ್ಯಾಯ ಯುತ ಮೌಲ್ಯಗಳಲ್ಲಿ ಅಸಮಾನತೆ ಇರುವುದನ್ನು ಸರಿಪಡಿಸುವಲ್ಲಿ ತಾಂತ್ರಿಕ ಮತ್ತು ಮಾರುಕಟ್ಟೆ ಮೌಲ್ಯ ದತ್ತಾಂಶಗಳ ಮೌಲ್ಯ ಮಾಪನವನ್ನು ಕೈಗೊಳ್ಳಲಾಗುವುದು ಎಂದಿದ್ದಾರೆ. ಬೆಳವಣಿಗೆ ಮತ್ತು ಅಭಿವೃದ್ಧಿಯ ನವಕೇರಳಕ್ಕಾಗಿ ಇರುವ ಬಜೆಟ್ ಎಂದು ಅವರು ಘೋಷಿಸಿದ್ದಾರೆ.

ಕೇರಳ ಸ್ಟ್ಯಾಂಪ್ ಕಾಯ್ದೆಯಲ್ಲಿ ಬಾಕಿ ಇರುವ ಎಲ್ಲ ಅರ್ಜಿಗಳನ್ನು 2026ರ ಅಕ್ಟೋಬರ್‌ಗೆ ಮುನ್ನ ಇತ್ಯರ್ಥಪಡಿಸಲಾಗುವುದು. ಇ-ಸ್ಟ್ಯಾಂಪಿಂಗ್ ಸೌಲಭ್ಯವನ್ನು ಖಾಸಗಿ ವಿಮಾ ಕಂಪನಿಗಳು ಮತ್ತು ಬ್ಯಾಂಕಿಂಗೇತರ ಹಣಕಾಸು ಸಂಸ್ಥೆಗಳಿಗೂ ವಿಸ್ತರಿಸಲಾಗುವುದು. ಅತಿ ಮಹಾನಗರಗಳಲ್ಲಿ ಕಡಿಮೆ ಮೌಲ್ಯಮಾಪನ ಮಾಡಲಾದ ಎಲ್ಲಾ ದಾಖಲೆಗಳನ್ನು 'ಅನ್ಯಾಯ ಮೇಲಿನ ಶುಲ್ಕ' ಎಂದು ದಾಖಲಿಸಲಾಗುತ್ತದೆ. ಇದು ಭೂಮಿಗೆ ಸಂಬಂಧಿಸಿದ ಹೂಡಿಕೆಗಳ ಬಗ್ಗೆ ಸಂಭಾವ್ಯ ಖರೀದಿದಾರರಲ್ಲಿ ಜಾಗೃತಿ ಮೂಡಿಸುತ್ತದೆ ಎಂದು ಅವರು ತಿಳಿಸಿದ್ದಾರೆ.

### ವೈದ್ಯಕೀಯ ತಪಾಸಣೆ

40ವರ್ಷ ಮೇಲ್ಪಟ್ಟವರಿಗೆ ವಾರ್ಷಿಕ ವೈದ್ಯಕೀಯ ತಪಾಸಣೆಗೆ ಹಣಕಾಸು ನೆರವು ಒದಗಿಸುವ ಯೋಜನೆಯೊಂದನ್ನು ಸತೀಶನ್ ಪ್ರಕಟಿಸಿದ್ದು, ಪರಪ್ಪನಾಡ್‌ನಲ್ಲಿ ಹೊಸ ವೈದ್ಯಕೀಯ ಕಾಲೇಜೊಂದನ್ನು ಸ್ಥಾಪಿಸುವುದಾಗಿ ಘೋಷಿಸಿದ್ದಾರೆ.

**ಮಾನವ-ಪ್ರಾಣಿ ಸಂಘರ್ಷ ತಡೆಗೆ 192ಕೋ.ರೂ.:** 2050ರ ವೇಳೆಗೆ ಕೇರಳವನ್ನು ಇಂಗಾಲ-ತಟಸ್ಥ ರಾಜ್ಯವೆಂದು ಘೋಷಿಸುವ ಕ್ರಮಗಳನ್ನು ಪ್ರಕಟಿಸಿದ ಅವರು, ಕೃಷಿ ಪದ್ಧತಿಯಲ್ಲಿ ಮಣ್ಣಿನ ಇಂಗಾಲದ ಪ್ರತ್ಯೇಕತಾ ಕ್ರಮಗಳನ್ನು ಸೇರಿಸಲಾಗುವುದು .ಕೇರಳದಲ್ಲಿ ಮಾನವ-ಪ್ರಾಣಿ ಸಂಘರ್ಷವನ್ನು ತಗ್ಗಿಸಲು ವೈಜ್ಞಾನಿಕ ಕ್ರಮಗಳನ್ನು ಬಳಸಲು 192 ಕೋ.ರೂ.ಗಳ ಬಜೆಟ್ ಹಂಚಿಕೆ ಮಾಡಲಾಗಿದೆ.

ಕೇರಳದಲ್ಲಿ ಹೂಡಿಕೆಗಳನ್ನು ಉತ್ತೇಜಿಸುವ ಪ್ರಯತ್ನದಲ್ಲಿ, ಮುಖ್ಯಮಂತ್ರಿ ವಿ ಡಿ ಸತೀಶನ್ 2026-27 ರ ಪರಿಷ್ಕೃತ ಬಜೆಟ್‌ನಲ್ಲಿ ಡೇಟಾ ಆಧಾರಿತ 'ಇನ್ವೆಸ್ಟ್ ಕೇರಳ ಕೋಶ' ರಚನೆಯನ್ನು ಘೋಷಿಸಿದ್ದಾರೆ. ಇದು ಯೋಜನೆಗಳು ಪ್ರಗತಿ ಯಲ್ಲಿರುವ, ಅನುಷ್ಠಾನಕ್ಕೆ ಸಿದ್ಧವಾಗುವುದನ್ನು ಖಚಿತಪಡಿಸುತ್ತದೆ. ಭೂ ಸ್ವಾಧೀನ ಕ್ರಮಗಳನ್ನು ಸಹ ತ್ವರಿತಗೊಳಿಸುತ್ತದೆ ಎಂದರು.

# 70 ಲಕ್ಷಕ್ಕೂ ಹೆಚ್ಚು ಉದ್ಯೋಗ

ಪುಟ 1ರಿಂದ ಕಳೆದ ವರ್ಷದ ಆಗಸ್ಟ್‌ನಲ್ಲಿ ಆರಂಭವಾದ ಈ ಯೋಜನೆ ಮೊದಲ ಬಾರಿಗೆ ಉದ್ಯೋಗ ಪಡೆಯುವ ಯುವಕರಿಗೆ ನೆರವು ನೀಡುವುದರ ಜತೆಗೆ ವಿವಿಧ ಕ್ಷೇತ್ರಗಳಲ್ಲಿ ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ವಿಸ್ತರಿಸುವ ಗುರಿ ಹೊಂದಿದೆ.

ಯೋಜನೆಯ ಸಾಧನೆಗಳನ್ನು ಉಲ್ಲೇಖಿಸಿದ ಪ್ರಧಾನಿ ಮೋದಿ, ಸುಮಾರು 70 ಲಕ್ಷ ಹೊಸ ಉದ್ಯೋಗಗಳು ಸೃಷ್ಟಿಯಾಗಿದ್ದು, ಅಷ್ಟೇ ಸಂಖ್ಯೆಯ ಮೊದಲ ಬಾರಿಗೆ ಉದ್ಯೋಗ ಪಡೆದವರು ಸಾಮಾಜಿಕ ಭದ್ರತಾ ವ್ಯವಸ್ಥೆಯ ವ್ಯಾಪ್ತಿಗೆ ಬಂದಿದ್ದಾರೆ ಎಂದು ಹೇಳಿದರು. ಸುಮಾರು 20 ಲಕ್ಷ ಯುವಕರು ತಮ್ಮ ಮೊದಲ ಉದ್ಯೋಗದಲ್ಲಿ ಆರು ತಿಂಗಳ ಸೇವೆ ಪೂರ್ಣಗೊಳಿಸಿದ್ದು, 10 ಲಕ್ಷಕ್ಕೂ ಹೆಚ್ಚು ಮಂದಿ ಈಗಾಗಲೇ ಪ್ರೋತ್ಸಾಹಧನವನ್ನು ಪಡೆದಿದ್ದಾರೆ ಎಂದರು. ಇದು ಕೇವಲ ಆರ್ಥಿಕ ನೆರವಲ್ಲ, ಯುವಕರ ಶ್ರಮಕ್ಕೆ ರಾಷ್ಟ್ರ ನೀಡುತ್ತಿರುವ ಗೌರವ ಮತ್ತು ಅವರ ಭವಿಷ್ಯದ ಮೇಲಿನ ವಿಶ್ವಾಸದ ಸಂಕೇತ ಎಂದು ಮೋದಿ ಹೇಳಿದರು.

**ಉದ್ಯಮ ಮತ್ತು ಯುವಕರಿಗೆ ಸಮಾನ ಬೆಂಬಲ:** ಪಿಎಂ-ವಿಬಿಆರ್‌ವೈ ಕೇವಲ ಉದ್ಯೋಗ ಯೋಜನೆಯಲ್ಲ, ಉದ್ಯಮ ಮತ್ತು ಉದ್ಯೋಗಿಗಳ ನಡುವಿನ ಬಲವಾದ ಸೇತುವೆಯಾಗಿದೆ. ಉದ್ಯೋಗ ಸೃಷ್ಟಿಸುವ ಸಂಸ್ಥೆಗಳಿಗೆ ಉತ್ತೇಜನ ನೀಡುವುದರ ಜತೆಗೆ ಉದ್ಯೋಗ ಜೀವನ ಆರಂಭಿಸುವ ಯುವಕರಿಗೂ ಸರ್ಕಾರ ಬೆಂಬಲ ನೀಡುತ್ತಿದೆ ಎಂದು ತಿಳಿಸಿದರು.

### 3.5 ಕೋಟಿ ಉದ್ಯೋಗಗಳ ಗುರಿ

99,446 ಕೋಟಿ ರೂ. ವೆಚ್ಚದ ಈ ಯೋಜನೆಯ ಮೂಲಕ ಎರಡು ವರ್ಷಗಳಲ್ಲಿ 3.5 ಕೋಟಿಗೂ ಹೆಚ್ಚು ಉದ್ಯೋಗಗಳನ್ನು ಸೃಷ್ಟಿಸುವ ಗುರಿ ಹೊಂದಲಾಗಿದೆ. ಇದರಲ್ಲಿ ಸುಮಾರು 1.92 ಕೋಟಿ ಮಂದಿ ಮೊದಲ ಬಾರಿಗೆ ಉದ್ಯೋಗ ಕ್ಷೇತ್ರಕ್ಕೆ ಪ್ರವೇಶಿಸುವ ನಿರೀಕ್ಷೆಯಿದೆ. ಆಗಸ್ಟ್ 2025ರಿಂದ ಯೋಜನೆಯಲ್ಲಿ 70 ಲಕ್ಷಕ್ಕೂ ಹೆಚ್ಚು ಯುವಕರು ಔಪಚಾರಿಕ ಉದ್ಯೋಗ ವ್ಯವಸ್ಥೆಗೆ ಸೇರ್ಪಡೆಯಾಗಿದ್ದು, ಅವರಲ್ಲಿ ಸುಮಾರು ಶೇ.30 ಮಹಿಳೆಯರಾಗಿದ್ದಾರೆ.

**ಮಹಿಳಾ ಉದ್ಯೋಗಕ್ಕೆ ಹೆಚ್ಚಿನ ಒತ್ತು:** ಮಹಿಳೆಯರ ಆರ್ಥಿಕ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸಲು ರಾತ್ರಿ ಪಾಳಿಯ ಉದ್ಯೋಗ, ಮನೆಯಿಂದಲೇ ಕೆಲಸ ಮಾಡುವ ಅವಕಾಶಗಳು ಹಾಗೂ ಕಾರ್ಯಸ್ಥಳದ ಸುರಕ್ಷತಾ ವ್ಯವಸ್ಥೆಗಳನ್ನು ಬಲಪಡಿಸುವ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ಮೋದಿ ಹೇಳಿದರು.

## ಲಂಚ: ಭೂಮಾಪಕ ಬಲೆಗೆ

• **ಬಳ್ಳಾರಿ:** ಖಾಸಗಿ ಲೇಔಟ್‌ವೊಂದರ ಪ್ಲಾನ್ ಡೆವಲಪ್‌ಮೆಂಟ್ ಅನುಮೋದನೆಗಾಗಿ 3.5 ಲಕ್ಷ ರೂ.ಲಂಚದ ಬೇಡಿಕೆ ಇಟ್ಟಿದ್ದ ಇಲ್ಲಿನ ನಗರಾಭಿವೃದ್ಧಿ ಪ್ರಾಧಿಕಾರದ ಭೂಮಾಪಕ ಶಾಂತಮೂರ್ತಿ ಅವರು ಶುಕ್ರವಾರ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ.





ವೀರೇಶ್ ಎನ್ನುವವರು ನೀಡಿದ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಂಡ ಲೋಕಾಯುಕ್ತ ಪೊಲೀಸ್ ಅಧಿಕಾರಿಗಳು, ಶಾಂತ ಮೂರ್ತಿ ಪರವಾಗಿ ಮಹಮ್ಮದ್ ಸಾಜಿದ್ ಅವರು, ವೀರೇಶ್ ಮೂಲಕ ಲಂಚದ ಹಣ ಪಡೆಯು ವಾಗ ಅಧಿಕಾರಿಗಳ ಬಲೆಗೆ ಬಿದ್ದಿದ್ದಾರೆ. ಆರೋಪಿಯನ್ನು ವಶಕ್ಕೆ ಪಡೆದ ಅಧಿಕಾರಿಗಳು ವಿಚಾರಣೆ ಮುಂದುವರಿಸಿದ್ದಾರೆ. ಜಮೀನುಗಳ ಏಕ ಹಾಗೂ ಬಹು ನಿವೇಶನ ವಿನ್ಯಾಸದ ಕಡತಗಳಿಗೆ ಅನುಮೋದನೆ ದೊರಕಿಸಲು ಕಚೇರಿಗಳಲ್ಲಿ ಕೆಲಸ ಮಾಡಿಕೊಡಲು ವೀರೇಶ್ ಎನ್ನುವವರು ಜಿಪಿಎ ಪಡೆದಿದ್ದರು. ಈ ಕಡತಗಳಿಗೆ ಅನುಮೋದನೆ ನೀಡಲು ಬುಡಾ ಕಚೇರಿಯ ಭೂಮಾಪಕರು ಶಾಂತ ಮೂರ್ತಿ 3.50 ಲಕ್ಷ ರೂ. ಲಂಚದ ಬೇಡಿಕೆ ಇಟ್ಟಿದ್ದರು. ಈ ಕುರಿತು ಲೋಕಾಯುಕ್ತ ಠಾಣೆಯಲ್ಲಿ ದೂರು ದಾಖಲಾಗಿತ್ತು.

## ಕೋಡಿ ಕನ್ಯಾಣ ಬೀಚ್: ಯುವಕ ಸಮುದ್ರ ಪಾಲು

• **ಕೋಟ:** ಕೋಡಿ ಕನ್ಯಾಣದ ಬೀಚ್ ರೆಸಾರ್ಟ್‌ನಲ್ಲಿದ್ದ ಬೆಂಗಳೂರು ಮೂಲದ ಯುವಕನೋರ್ವ ಸಮುದ್ರದಲ್ಲಿ ಈಜಲು ಹೋಗಿ ನೀರಿನ ಸೆಳೆತಕ್ಕೆ ಸಿಲುಕಿ ಮೃತಪಟ್ಟಿರುವ ದಾರುಣ ಘಟನೆ ಕೋಡಿ ಕನ್ಯಾಣ ಕಡಲತೀರದಲ್ಲಿ ಜೂ. 19ರ ಮುಂಜಾನೆ ಸಂಭವಿಸಿದೆ. ಬೆಂಗಳೂರು ರಾಜಾಜಿ ನಗರದ ನಿಖಿಲ್ ಕುಮಾರ್ (32) ಮೃತಪಟ್ಟ ದುರ್ದೈವಿ ಯುವಕ ಎಂದು ಗುರುತಿಸಲಾಗಿದೆ. ರಾಜಧಾನಿ ಬೆಂಗಳೂರಿನಿಂದ ಕರಾವಳಿ ಪ್ರವಾಸ ಕೈಗೊಂಡಿದ್ದ 9 ಮಂದಿ ಯುವಕರ ತಂಡವೊಂದು ಶುಕ್ರವಾರ ಬೆಳಗ್ಗೆ ಕೋಡಿ ಕನ್ಯಾಣದ ರೆಸಾರ್ಟ್‌ನಲ್ಲಿ ವಾಸ್ತವ್ಯ ಹೂಡಿ ಸಮುದ್ರ ತೀರದಲ್ಲಿ ವೀಕ್ಷಿಸುತ್ತಿದ್ದರು. ಈ ಪೈಕಿ ನಾಲ್ವರು ಯುವಕರು ಸಮುದ್ರದಲ್ಲಿ ಸ್ನಾನ ಮಾಡಲೆಂದು ನೀರಿಗೆ ಇಳಿದಿದ್ದಾರೆ. ಈ ಸಂದರ್ಭದಲ್ಲಿ ನೀರಿನ ಭಾರಿ ಸೆಳೆತಕ್ಕೆ ಸಿಲುಕಿ ನಿಖಿಲ್ ಸಮುದ್ರದಲ್ಲಿ ಕೊಚ್ಚಿ ಹೋಗಿದ್ದಾರೆ.




ತಿಮ್ಮಪ್ಪನ ದರ್ಶನ

ಮುಖ್ಯಮಂತ್ರಿ ಡಿ. ಕೆ. ಶಿವಕುಮಾರ್ ಅವರು ಪತ್ನಿ ಉಷಾ, ಪುತ್ರ ಆಕಾಶ್ ಅವರ ಜತೆಗೆ ತಿರುಪತಿ ತಿರುಮಲ ದೇಗುಲದಲ್ಲಿ ಶುಕ್ರವಾರ ವೆಂಕಟೇಶ್ವರ ಸ್ವಾಮಿ ದರ್ಶನ ಪಡೆದರು.

## ಡಿಕೆಶಿ ವಿರುದ್ಧ ಪ್ರಕರಣ ಹೈ ವಜಾ

• **ಬೆಂಗಳೂರು:** ಆಕ್ಷೇಪಾರ್ಹ ಹೇಳಿಕೆಗಳನ್ನು ಒಳಗೊಂಡ ಬಿಜೆಪಿ ನಾಯಕರ ಚಿತ್ರಗಳನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡ ಆರೋಪದ ಮೇಲೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಿರುದ್ಧ ದಾಖಲಾಗಿದ್ದ ಪ್ರಕರಣ ಹೈಕೋರ್ಟ್ ಶುಕ್ರವಾರ ವಜಾಗೊಳಿಸಿದೆ.



ನಗರದ ಹೈಗ್ರೌಂಡ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣ ರದ್ದತಿ ಕೋರಿ ಡಿ.ಕೆ. ಶಿವಕುಮಾರ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರ ಏಕಸದಸ್ಯ ಪೀಠವು ಪುರಸ್ಕರಿಸಿದೆ. ಶಿವಕುಮಾರ್ ಅವರನ್ನು ಪ್ರತಿನಿಧಿಸಿದ್ದ ವಕೀಲ ಎಸ್.ವಿ.ಪ್ರವೀಣ್ ಗೌಡ ಅವರು ಶಿವಕುಮಾರ್ ಅವರ ಸಾಮಾಜಿಕ ಜಾಲತಾಣ ಖಾತೆ ಮೂಲಕ ಆಕ್ಷೇಪಾರ್ಹ ಪೋಸ್ಟ್‌ಗಳನ್ನು ಹಾಕಲಾಗಿದೆ ಎಂಬ ಏಕೈಕ ಕಾರಣಕ್ಕೆ ಅವರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಕಾಂಗ್ರೆಸ್ ಸಾಮಾಜಿಕ ಜಾಲತಾಣ ವಿಭಾಗದ ಮುಖ್ಯಸ್ಥರು ಪೋಸ್ಟ್ ಅಪ್ಲೋಡ್ ಮಾಡಿದ್ದಾರೆ. ಶಿವಕುಮಾರ್ ಅವರು ಕೆಪಿಸಿಸಿ ಅಧ್ಯಕ್ಷರು ಎಂಬ ಕಾರಣಕ್ಕೆ ಅವರನ್ನು ಪ್ರಕರಣದಲ್ಲಿ ಸಿಲುಕಿಸಲಾಗಿದೆ ಎಂದರು.

**ಪ್ರಕರಣದ ಹಿನ್ನೆಲೆ:** 3 ದಶಕಗಳ ಹಿಂದೆ ರಾಮ ಜನ್ಮಭೂಮಿ ವಿಚಾರವಾಗಿ ಹುಬ್ಬಳ್ಳಿಯಲ್ಲಿ ನಡೆದ ಗಲಭೆ ಪ್ರಕರಣದಲ್ಲಿ ಆರೋಪಿಯಾಗಿದ್ದ ಶ್ರೀಕಾಂತ್ ಪೂಜಾರಿಯನ್ನು ಹೈಕೋರ್ಟ್ ಪೊಲೀಸರು ಬಂಧಿಸಿದ್ದರು. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರದ ನಡೆ ಖಂಡಿಸಿ ಬಿಜೆಪಿಯು ರಾಜ್ಯಾದ್ಯಂತ ಪ್ರತಿಭಟನೆ ನಡೆಸಿತ್ತು. ಆ ಸಂದರ್ಭದಲ್ಲಿ ಬಿಜೆಪಿ ನಾಯಕರು ನಾನು ಕರಸೇವಕ ನನ್ನನ್ನೂ ಬಂಧಿಸಿ ಎಂಬ ಒಕ್ಕಣೆ ಹೊಂದಿದ್ದ ಭಿತ್ತಿಪತ್ರ ಹಿಡಿದು ಅಭಿಯಾನ ನಡೆಸಿದ್ದರು. ಇದನ್ನು ಟೀಕಿಸುವ ಉದ್ದೇಶದಿಂದ ಕಾಂಗ್ರೆಸ್ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರ ಫೋಟೋ ಬಳಸಿ ನಾನು ಆರ್‌ಟಿಜಿಎಸ್ ಮೂಲಕ ಲಂಚ ಪಡೆದಿದ್ದೇನೆ. 40 ಸಾವಿರ ಕೋಟಿ ರೂ. ಅಕ್ರಮದಲ್ಲಿ ಪಾಲುದಾರ ನನ್ನನ್ನು ಬಂಧಿಸಿ, ಶಾಸಕ ವಿ.ಸುನೀಲ್ ಕುಮಾರ್ ಫೋಟೋ ಬಳಸಿ ನಾನು ಪರಶುರಾಮ ಮೂರ್ತಿ ಕಂಚನ್ನು ಕದ್ದಿದ್ದೇನೆ. ಸಿಮೆಂಟ್ ಕದ್ದಿದ್ದೇನೆ ನನ್ನನ್ನು ಬಂಧಿಸಿ ಎಂಬ ಒಕ್ಕಣೆಯ ಚಿತ್ರಗಳನ್ನು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧಿಕೃತ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಲಾಗಿತ್ತು.

### ಕಿರುಸುದ್ದಿ

## ಹುಸಿ ಬಾಂಬ್ ಬೆದರಿಕೆ: ಜಿಲ್ಲಾ ನ್ಯಾಯಾಲಯ ತಪಾಸಣೆ



• **ದಾವಣಗೆರೆ:** ಹುಸಿ ಬಾಂಬ್ ಬೆದರಿಕೆ ಇ-ಮೇಲ್ ಮತ್ತೆ ಬಂದ ಹಿನ್ನೆಲೆಯಲ್ಲಿ ಶುಕ್ರವಾರ ನಗರದ ಜಿಲ್ಲಾ ನ್ಯಾಯಾಲಯ ಸಂಕೀರ್ಣವನ್ನು ಪೊಲೀಸ್ ಇಲಾಖೆ ಹಾಗೂ ಬಾಂಬ್ ನಿಷ್ಕ್ರಿಯ ದಳದ ಅಧಿಕಾರಿ, ಸಿಬ್ಬಂದಿ ತೀವ್ರ ತಪಾಸಣೆ ನಡೆಸಿದ್ದು, ಅಂತಿಮವಾಗಿ ಇದೊಂದು ಹುಸಿ ಬಾಂಬ್ ಕರೆ ಎಂಬುದು ಸ್ಪಷ್ಟವಾಗಿದೆ. ನಗರದ ಜಿಲ್ಲಾ ನ್ಯಾಯಾಲಯಕ್ಕೆ ಬಾಂಬ್ ಇಟ್ಟಿರುವುದಾಗಿ ಜಿಲ್ಲಾ ನ್ಯಾಯಾಲಯಕ್ಕೆ ಇ-ಮೇಲ್ ಬಂದಿದ್ದು, ತಕ್ಷಣವೇ ಜಿಲ್ಲಾ ಪೊಲೀಸ್ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿ, ಬಾಂಬ್ ನಿಷ್ಕ್ರಿಯ ದಳ ಹಾಗೂ ಶ್ವಾನ ದಳದ ತಂಡಗಳು ಸ್ಥಳಕ್ಕೆ ಧಾವಿಸಿ ಇಡೀ ಜಿಲ್ಲಾ ನ್ಯಾಯಾಲಯದ ಪ್ರತಿ ಕೊಠಡಿ, ವಕೀಲರ ಭವನ, ಶೌಚಾಲಯ ಹೀಗೆ ಯಾವುದನ್ನೂ ಬಿಡದೆ, ಮೂಲೆ-ಮೂಲೆಯಲ್ಲಿ ಬಾಂಬ್‌ಗಾಗಿ ಶೋಧ ಕೈಗೊಂಡವು. ಸುಮಾರು ಗಂಟೆಗಳ ಶೋಧದ ನಂತರ ಇದೊಂದು ಹುಸಿ ಬಾಂಬ್ ಬೆದರಿಕೆ ಕರೆಯೆಂಬುದು ಸ್ಪಷ್ಟವಾದ ಹಿನ್ನೆಲೆಯಲ್ಲಿ ಎಲ್ಲರೂ ನಿಟ್ಟುಸಿರುಬಿಟ್ಟರು.

## ಯುವತಿ ಹತ್ಯೆ: ಮೂವರ ಸೆರೆ

• **ಬೆಳಗಾವಿ:** ಲಿವಿಂಗ್ ರಿಲೇಷನ್‌ಶಿಪ್‌ನಲ್ಲಿದ್ದ ಯುವತಿಯನ್ನು ಬೇರೆ ಮದುವೆಯಾಗಲು ಮುಂದಾಗಿದ್ದ ಪ್ರಿಯಕರನನ್ನು ಪ್ರಶ್ನಿಸಿದ ಹಿನ್ನೆಲೆಯಲ್ಲಿ ಯುವತಿಯನ್ನು ಹತ್ಯೆ ಮಾಡಿರುವ ಘಟನೆ ಬೆಳಕಿಗೆ ಬಂದಿದೆ. ಕೊಲೆ ಬಳಿಕ ಶವವನ್ನು ಮಹಾರಾಷ್ಟ್ರದ ದಟ್ಟ ಕಾಡಿನಲ್ಲಿ ಎಸೆದು ಪರಾರಿಯಾಗಿದ್ದ ಮೂವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ. ಬೆಳಗಾವಿ ತಾಲೂಕಿನ ವಂಟಮೂರಿ ಗ್ರಾಮದ ಗಂಗವ್ವ ಹಂಚಿನಮನಿ (25) ಹತ್ಯೆಗೀಡಾದ ಯುವತಿ. ಹುಕ್ಕೇರಿ ತಾಲೂಕಿನ ರಾಜನಕಟ್ಟಿ ಗ್ರಾಮದ ಬಸವರಾಜ್ ಕರ್ನಾವರ್ (33) ಪ್ರಮುಖ ಆರೋಪಿ ಎಂದು ಗುರುತಿಸಲಾಗಿದೆ. ಬಸವರಾಜ್ ತನ್ನ ತಂದೆ ಯಲ್ಲಪ್ಪ ಹಾಗೂ ಮಾವ ಲಗಮಪ್ಪ ಅವರೊಂದಿಗೆ ಸೇರಿ ಕೃತ್ಯ ಎಸಗಿರುವುದಾಗಿ ತನಿಖೆಯಲ್ಲಿ ತಿಳಿದುಬಂದಿದೆ. ಆರೋಪಿಗಳು ಗಂಗವ್ವಳ ಮೇಲೆ ಕಬ್ಬಿಣದ ರಾಡ್‌ನಿಂದ ಹಲ್ಲೆ ನಡೆಸಿ ಹತ್ಯೆ ಮಾಡಿದ ಬಳಿಕ, ಮಹಾರಾಷ್ಟ್ರದ ಕೊಲ್ಹಾಪುರ ಜಿಲ್ಲೆಯ ಚಂದಗಡ ತಾಲೂಕಿನ ತಿಲಾರಿ ಘಾಟ್ ಪ್ರದೇಶದ ದಟ್ಟ ಕಾಡಿನಲ್ಲಿ ಶವವನ್ನು ಎಸೆದು ಬಂದಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

## ಧಾರವಾಡ ನ್ಯಾಯಾಲಯಕ್ಕೂ ಬಾಂಬ್ ಬೆದರಿಕೆ

• **ಧಾರವಾಡ:** ನಗರದ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ಆವರಣಕ್ಕೆ ಬಾಂಬ್ ಬೆದರಿಕೆ ಇಮೇಲ್ ಬಂದ ಹಿನ್ನೆಲೆಯಲ್ಲಿ ನ್ಯಾಯಾಲಯದ ಆವರಣದಲ್ಲಿ ಕೆಲ ಹೊತ್ತು ತೀವ್ರ ಆತಂಕದ ಜತೆಗೆ ಗುಪ್ತ ಗೊಂದಲದ ವಾತಾವರಣ ಶುಕ್ರವಾರ ನಿರ್ಮಾಣವಾಗಿತ್ತು. ಕೋರ್ಟ್ ಆವರಣದಲ್ಲಿ ಬಾಂಬ್ ಇಟ್ಟಿರುವ ಬಗ್ಗೆ ಇಮೇಲ್ ವಿಳಾಸಕ್ಕೆ ಸಂದೇಶ ಬಂದಿತ್ತು. ತಕ್ಷಣ ಎಚ್ಚೆತ್ತ ಸಿಬ್ಬಂದಿ ಪೊಲೀಸರಿಗೆ ಮಾಹಿತಿ ನೀಡಿದರು. ಸ್ಥಳಕ್ಕೆ ಧಾವಿಸಿದ ಬಾಂಬ್ ಪತ್ತೆ-ನಿಷ್ಕ್ರಿಯ ಮತ್ತು ಶ್ವಾನದಳದ ಸಿಬ್ಬಂದಿ ಆವರಣ ತಪಾಸಣೆ ನಡೆಸಿದರು.

34 ಅಭಿವೃದ್ಧಿ ಪ್ರಾಧಿಕಾರಗಳ ಪ್ರಗತಿ ಪರಿಶೀಲನೆಯಲ್ಲಿ ಡಾ.ಯತೀಂದ್ರ

## ಪ್ರತಿ ತಿಂಗಳು ಸಭೆ ನಡೆಸಿ

• **ಬೆಂಗಳೂರು:** ನಗರಾಭಿವೃದ್ಧಿ ಪ್ರಾಧಿಕಾರಗಳು ಕಾಲ ಕಾಲಕ್ಕೆ ಪ್ರಾಧಿಕಾರದ ಸಭೆ ನಡೆಸದ ಹಿನ್ನೆಲೆಯಲ್ಲಿ ನಾಗರಿಕರಿಗೆ ಸರಿಯಾಗಿ ಸೌಲಭ್ಯ ಕೊಡಲು ಸಾಧ್ಯವಾಗುತ್ತಿಲ್ಲ. ಪ್ರತಿ ತಿಂಗಳು ಪ್ರಾಧಿಕಾರದ ಸಭೆ ನಡೆಸಬೇಕು ಎಂದು ನಗರಾಭಿವೃದ್ಧಿ ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ ಅವರು ಅಧಿಕಾರಿಗಳಿಗೆ ಸೂಚಿಸಿದರು.



ರಾಜ್ಯದ 34 ಅಭಿವೃದ್ಧಿ ಪ್ರಾಧಿಕಾರಗಳ ಪ್ರಗತಿ ಪರಿಶೀಲನೆ ನಡೆಸಿದ ಅವರು, ಕೆಲವು ಪ್ರಾಧಿಕಾರಗಳು ವರ್ಷಕ್ಕೆ 2 ಅಥವಾ 3 ಸಭೆಗಳನ್ನು ಮಾತ್ರ ಮಾಡಿವೆ. ಇದರಿಂದ ಪ್ರಗತಿ ಸಾಧ್ಯವಿಲ್ಲ. ಸಭೆ ನಡೆಸದಿರುವುದನ್ನು ನಾನು ಗಂಭೀರವಾಗಿ ಪರಿಗಣಿಸಿದ್ದೇನೆ. ವರ್ಷಕ್ಕೆ ಕನಿಷ್ಠ 8 ಸಭೆಗಳನ್ನಾದರೂ ಮಾಡಬೇಕು ಎಂದು ಸೂಚಿಸಿದರು.

**ಜನಸಂಖ್ಯೆ ಬೆಳೆಯುತ್ತಿದೆ:** ಅದಕ್ಕೆ ಅನುಗುಣವಾಗಿ ಸೌಲಭ್ಯಗಳನ್ನು ಪ್ರಾಧಿಕಾರಗಳು ಕೊಡಬೇಕು. ಲಭ್ಯವಿರುವ ಜಾಗಗಳನ್ನು ತೆಗೆದುಕೊಂಡು ಅಭಿವೃದ್ಧಿಪಡಿಸಬೇಕು. ವಸತಿ ಇಲಾಖೆಯಿಂದ ಬೇಡಿಕೆಗೆ ತಕ್ಕಷ್ಟು ಮನೆಗಳನ್ನು ನೀಡಲಾಗುತ್ತಿಲ್ಲ, ವಸತಿಗಳಿಗೆ ಬೇಡಿಕೆ ಇದೆ. ನಮ್ಮ ಪ್ರಾಧಿಕಾರಗಳಿಂದ ಖಾಸಗಿ ಅಪಾರ್ಟ್‌ಮೆಂಟ್‌ಗಳ ರೀತಿಯಲ್ಲಿ ಅಪಾರ್ಟ್‌ಮೆಂಟ್ ನಿರ್ಮಿಸಿ ಮನೆಗಳನ್ನು ಹಂಚುವ ಬಗ್ಗೆ ಪರಿಶೀಲಿಸಲು ಸಚಿವರು ತಿಳಿಸಿದರು.

**ಮಾಸ್ಟರ್ ಪ್ಲಾನ್:** ಹಳೆಯ ಮಾಸ್ಟರ್ ಪ್ಲಾನ್ ಅನ್ನು ಪರಿಷ್ಕರಿಸಿ, ಎಲ್ಲಾ ಪ್ರಾಧಿಕಾರಗಳು ಜಿಐಎಸ್ ಆಧರಿಸಿ ಮಾಸ್ಟರ್ ಪ್ಲಾನ್ ತಯಾರಿಸಬೇಕು. ಮೈಸೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಮಾಸ್ಟರ್‌ಪ್ಲಾನ್ ಮಾಡಲಾಗಿದೆ. 2024ರಿಂದ ಚಾಮುಂಡಿಬೆಟ್ಟ ಅಭಿವೃದ್ಧಿ ಪ್ರಾಧಿಕಾರ ಬಂದಿದೆ. ಈ ಪ್ರಾಧಿಕಾರದ ವ್ಯಾಪ್ತಿಯನ್ನು ಬಿಟ್ಟು ಮಾಸ್ಟರ್‌ಪ್ಲಾನ್ ಮಾಡಬೇಕಿದೆ ಎಂದರು.

**ಬ್ಯಾಂಕ್ ಖಾತೆಗಳ ನಿರ್ವಹಣೆ:** ಎಲ್ಲಾ ಪ್ರಾಧಿಕಾರಗಳು ಪಾರದರ್ಶಕವಾಗಿ ಬ್ಯಾಂಕ್ ಖಾತೆಗಳನ್ನು ನಿರ್ವಹಿಸಬೇಕು. ಬ್ಯಾಂಕ್ ಖಾತೆಗಳಿಗೆ ಸಂಬಂಧಿಸಿದಂತೆ ಆರ್ಥಿಕ ಇಲಾಖೆ ನೀಡುವ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಬೇಕು ಎಂದು ಯತೀಂದ್ರ ತಿಳಿಸಿದರು.

**ಕಟ್ಟಡ ಪರವಾನಿಗೆ:** ಕಟ್ಟಡ ನಿರ್ಮಾಣ ಪರವಾನಿಗೆ ವಿಳಂಬವಾಗಬಾರದು. ವಿಳಂಬದಿಂದ ಜನರಿಗೆ ನಿರ್ಮಾಣ ವೆಚ್ಚ ಹೆಚ್ಚಾಗುತ್ತದೆ. ವಿನಾಕಾರಣ ವಿಳಂಬ ಮಾಡಿದರೆ ಕ್ರಮಗೊಳ್ಳಲಾಗುವುದು ಎಂದರು.

### ಕೆರೆಗಳ ಅಭಿವೃದ್ಧಿ

ಪ್ರಾಧಿಕಾರಗಳು ಕೆರೆಗಳ ಬ್ಯೂಟಿಫಿಕೇಷನ್ ಬಗ್ಗೆ ಒತ್ತು ನೀಡುತ್ತಿವೆ. ನೀರು ಸಂಗ್ರಹದ ಬಗ್ಗೆ ಗಮನ ಹರಿಸುತ್ತಿಲ್ಲ. ನೀರಿಲ್ಲದಿದ್ದರೆ ಕೆರೆಗಳು ಉಪಯೋಗವಿಲ್ಲ. ಕೋಡಿ ನೀರು ಹರಿಯದಂತೆ ಕ್ರಮವಹಿಸಬೇಕು. ಡಿ-ಸಿಲ್ಟಿಂಗ್, ಕುಡಿಯುವ ನೀರಿಗೆ ಕೆರೆ ಅಭಿವೃದ್ಧಿಪಡಿಸಲಾಗುತ್ತಿದೆ. ಕೆರೆಗಳ ಸರ್ವತೋಮುಖ ಅಭಿವೃದ್ಧಿಗೆ ಅಗತ್ಯವಿರುವ ಮಾರ್ಗಸೂಚಿಗಳನ್ನು ಬದಲಾವಣೆ ಮಾಡಿಕೊಳ್ಳಬೇಕು ಎಂದು ಡಾ.ಯತೀಂದ್ರ ಸಿದ್ದರಾಮಯ್ಯ ತಿಳಿಸಿದರು.

### ಕಾಮಗಾರಿ ವಿಳಂಬವಾದರೆ ಕ್ರಮ

ನಗರ ಪ್ರದೇಶಗಳ ಕುಡಿಯುವ ನೀರಿನ ಕಾಮಗಾರಿಗಳು ನಿಗದಿತ ಸಮಯಕ್ಕೆ ಪೂರ್ಣಗೊಳಿಸದಿದ್ದರೆ ಕ್ರಮ ಕೈಗೊಳ್ಳಲಾಗುವುದು. ಬೆಳಗಾವಿ, ಕಲಬುರಗಿ ಹಾಗೂ ಹುಬ್ಬಳ್ಳಿ-ಧಾರವಾಡದಲ್ಲಿ ಕೆಯುಐಡಿಎಫ್‌ಸಿ ಮೂಲಕ ವಿಶ್ವಬ್ಯಾಂಕ್ ಪ್ರಾಯೋಜಿತ ಕುಡಿಯುವ ನೀರಿನ ಬೃಹತ್ ಕಾಮಗಾರಿಗಳನ್ನು ಎಲ್ ಆ್ಯಂಡ್ ಟಿ ಅನುಷ್ಠಾನಗೊಳಿಸುತ್ತಿದ್ದು, ಕಾಮಗಾರಿಗಳು ನಿಧಾನವಾಗಿರುವ ಹಿನ್ನೆಲೆಯಲ್ಲಿ ಎಲ್ ಆ್ಯಂಡ್ ಟಿ ಅಧಿಕಾರಿಗಳಿಗೆ ನಿಗದಿತ ಕಾಲಮಿತಿಯಲ್ಲಿ ಕಾಮಗಾರಿ ಪೂರ್ಣಗೊಳಿಸುವಂತೆ ಡಾ.ಯತೀಂದ್ರ ಸಿದ್ದರಾಮಯ್ಯ ತಾಕೀತು ಮಾಡಿದರು.

## ವಂಚನೆ ತಡೆಗೆ ಅತ್ಯಾಧುನಿಕ ತಂತ್ರಜ್ಞಾನ: ಸಚಿವ ಖರ್ಗೆ



• **ಬೆಂಗಳೂರು:** ದೇಶಾದ್ಯಂತ ಸೈಬರ್ ಅಪರಾಧಗಳು ಮತ್ತು ಆನ್‌ಲೈನ್ ವಂಚನೆ ಪ್ರಕರಣಗಳು ತೀವ್ರವಾಗಿ ಹೆಚ್ಚಾಗುತ್ತಿರುವ ಬೆನ್ನಲ್ಲೇ, ರಾಜ್ಯ ಸರ್ಕಾರ ಮತ್ತು ಪೊಲೀಸ್ ಇಲಾಖೆ ವಂಚಕರಿಗೆ ಬಿಸಿ ಮುಟ್ಟಿಸಲು ಅತ್ಯಾಧುನಿಕ ತಂತ್ರಜ್ಞಾನ ಹಾಗೂ ಬಿಗಿ ಕ್ರಮಗಳನ್ನು ಕೈಗೊಂಡಿದೆ ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.


ಎಂ.ಜಿ.ರಸ್ತೆಯಲ್ಲಿರುವ ಪೊಲೀಸ್ ವೈರ್‌ಲೆಸ್ ಕೇಂದ್ರ ಕಚೇರಿಗೆ ಭೇಟಿ ನೀಡಿದ ಸಚಿವರು, ಅಲ್ಲಿನ ವ್ಯವಸ್ಥೆಗಳನ್ನು ಪರಿಶೀಲಿಸಿ, ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿದರು. ಬಳಿಕ ಮಾತನಾಡಿ, ವಂಚನೆಗೊಳಗಾದ ಸಾರ್ವಜನಿಕರ ಹಣವನ್ನು ಬ್ಯಾಂಕ್‌ಗಳಲ್ಲೇ ತಡೆಹಿಡಿಯುವಲ್ಲಿ ಕರ್ನಾಟಕ ಪೊಲೀಸರು ಗಮನಾರ್ಹ ಯಶಸ್ಸು ಸಾಧಿಸಿದ್ದಾರೆ. ಮಹಾರಾಷ್ಟ್ರ ರಾಜ್ಯದಲ್ಲಿ ವರದಿಯಾದ 3,203 ಕೋಟಿ ರೂ.ಗಳಲ್ಲಿ 548 ಕೋಟಿ ರೂ. (ಶೇ.17) ಹಣವನ್ನು ಬ್ಲಾಕ್ ಮಾಡಿದ್ದರೆ, ಕರ್ನಾಟಕದಲ್ಲಿ ವರದಿಯಾದ 2,640 ಕೋಟಿ ರೂ.ಗಳಲ್ಲಿ 436 ಕೋಟಿ ರೂ. (ಶೇ.17) ಹಣವನ್ನು ಯಶಸ್ವಿಯಾಗಿ ತಡೆಹಿಡಿಯುವ ಮೂಲಕ ಸಾರ್ವಜನಿಕರ ಹಣವನ್ನು ರಕ್ಷಿಸಿದೆ ಎಂದರು.

### ಸ್ವಯಂಚಾಲಿತ ಬಾಟ್ ಲಿಂಕ್

ಸಾರ್ವಜನಿಕರು ಕರೆ ಮಾಡಿದಾಗ ಕಟ್ ಆದ ಕರೆಗಳಿಗೆ ದೂರುಗಳನ್ನು ಅಪ್ಲೋಡ್ ಮಾಡಲು ಸ್ವಯಂಚಾಲಿತ ಬಾಟ್ ಲಿಂಕ್ ಕಳುಹಿಸಲಾಗುತ್ತಿದೆ. ಬಿಳಿ ಪ್ಲಾಟ್‌ಫಾರ್ಮ್‌ಗಳಲ್ಲಿ ಬ್ಯಾಂಕ್ ವಹಿವಾಟುಗಳನ್ನು ವೇಗವಾಗಿ ನಿರ್ಬಂಧಿಸಲು 51 ಪಿಎಸ್‌ಐ ಮತ್ತು ಹೆಡ್ ಕಾನ್ಸ್‌ಟೆಬಲ್‌ಗಳನ್ನು ನಿಯೋಜಿಸಲಾಗಿದೆ.

**ತಂತ್ರಜ್ಞಾನ ಆಧಾರಿತ ಆಧುನಿಕ ಸುಧಾರಣೆಗಳು:** ಇಲಾಖೆಯು ಇತ್ತೀಚೆಗೆ ಹಲವು ತಾಂತ್ರಿಕ ಸುಧಾರಣೆಗಳನ್ನು ತಂದಿದೆ. 2025ರಲ್ಲಿ ವೆಬ್-ಆಧಾರಿತ ಕಂಪ್ಲೇಂಟ್ ಬಾಟ್, 2026ರಲ್ಲಿ ವಾಟ್ಸ್‌ಆ್ಯಪ್ ಕಂಪ್ಲೇಂಟ್ ಬಾಟ್ ಪರಿಚಯಿಸಲಾಗಿದೆ. ದೂರುಗಳ ಆದ್ಯತೆ ಮೇರೆಗೆ ಕರೆಗಳನ್ನು ವಿಂಗಡಿಸಲು, ಸ್ವಯಂಚಾಲಿತವಾಗಿ ನಿರ್ವಹಿಸಲು ಐವಿಆರ್‌ಎಸ್ ತಂತ್ರಜ್ಞಾನ ಬಳಸಲಾಗುತ್ತಿದೆ.

## 55 ಕೈಗಾರಿಕಾ ಯೋಜನೆಗೆ ಅಸ್ತು



• **ಬೆಂಗಳೂರು:** ರಾಜ್ಯದಲ್ಲಿ ಒಟ್ಟು 7,506 ಕೋಟಿ ರೂ. ಬಂಡವಾಳ ಹೂಡಿಕೆ ಹಾಗೂ 28 ಸಾವಿರಕ್ಕೂ ಅಧಿಕ ಉದ್ಯೋಗಾವಕಾಶಗಳನ್ನು ಸೃಷ್ಟಿಸಲಿರುವ 55 ಕೈಗಾರಿಕಾ ಯೋಜನೆಗಳಿಗೆ ಏಕಗವಾಕ್ಷಿ ಅನುಮೋದನಾ ಸಮಿತಿ ಸಭೆಯಲ್ಲಿ ಅನುಮೋದನೆ ನೀಡಲಾಗಿದೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ತಿಳಿಸಿದರು.

ಶುಕ್ರವಾರ ನಡೆದ ಏಕಗವಾಕ್ಷಿ ಅನುಮೋದನಾ ಸಮಿತಿ ಸಭೆಯಲ್ಲಿ ಮಾತನಾಡಿ, ಈ ಯೋಜನೆಗಳಲ್ಲಿ 41 ಯೋಜನೆಗಳು ಬೆಂ.ನಗರ ಮತ್ತು ಗ್ರಾಮಾಂತರ ಜಿಲ್ಲೆಗಳನ್ನು ಹೊರತುಪಡಿಸಿ ರಾಜ್ಯದ ಇತರ ಭಾಗಗಳಲ್ಲಿ ಸ್ಥಾಪನೆಯಾಗಲಿದ್ದು, ಕೈಗಾರಿಕಾ ವಿಕೇಂದ್ರೀಕರಣಕ್ಕೆ ಉತ್ತೇಜನ ನೀಡಲಿವೆ ಎಂದು ಹೇಳಿದರು.

ತೈವಾನ್, ದಕ್ಷಿಣ ಕೊರಿಯಾ, ಜರ್ಮನಿ ಹಾಗೂ ಜಪಾನ್ ಮೂಲದ ನಾಲ್ಕು ವಿದೇಶಿ ನೇರ ಹೂಡಿಕೆ (ಎಫ್‌ಡಿಐ) ಯೋಜನೆಗಳ ಮೂಲಕ 314.46 ಕೋಟಿ ರೂ. ಹೂಡಿಕೆ ಆಗಲಿದ್ದು, 503 ಮಂದಿಗೆ ಉದ್ಯೋಗ ದೊರೆಯಲಿದೆ. ಟೀಮಿಂಗ್ ಆಟೋಮೇಷನ್, ವೈ.ಜೆ. ಲಿಂಕ್, ಲೇಷುಂ ಮತ್ತು ಶಿಂಕೋ ಕಂಪನಿಗಳು ಈ ಹೂಡಿಕೆಗಳನ್ನು ಮಾಡಲಿವೆ ಎಂದು ತಿಳಿಸಿದರು.

ಒಟ್ಟು 35 ಯೋಜನೆಗಳು 50 ಕೋಟಿ ರೂ.ಗಿಂತ ಅಧಿಕ ಬಂಡವಾಳ ಹೂಡಿಕೆ ಮಾಡಲಿದ್ದು, 5 ಕಂಪನಿಗಳು ಹೆಚ್ಚುವರಿ 223.61 ಕೋಟಿ ರೂ. ಹೂಡಿಕೆ ಮಾಡಲು ಮುಂದಾಗಿವೆ. ಏರೋಸ್ಪೇಸ್, ಇಎಸ್‌ಡಿಎಂ, ಜನರಲ್ ಇಂಜಿನಿಯರಿಂಗ್ ಕ್ಷೇತ್ರಗಳಿಗೆ ಸಂಬಂಧಿಸಿದ ಯೋಜನೆಗಳೇ ಹೆಚ್ಚಾಗಿವೆ ಎಂದರು. ಬೆಂ.ನಗರದಲ್ಲಿ ಕೇನ್ಸ್ ಎಲೆಕ್ಟ್ರಾನಿಕ್ 495 ಕೋಟಿ ರೂ., ದೊಡ್ಡಬಳ್ಳಾಪುರದಲ್ಲಿ ಎಸ್‌ಎಫ್‌ಒ ಟೆಕ್ನಾಲಜೀಸ್ 490 ಕೋಟಿ ರೂ., ಕೋಲಾರದಲ್ಲಿ ಆರ್‌ಬಿಟ್ ಇಂಡಸ್ಟ್ರಿಯಲ್ ಪಾರ್ಕ್ 454 ಕೋಟಿ ರೂ., ವಿಜಯಪುರದಲ್ಲಿ ಟೆರ್ರಾ ಸರ್ಕ್ಯೂಟ್ 441 ಕೋಟಿ ರೂ. ಹಾಗೂ ಬೆಂ.ಗ್ರಾಮಾಂತರ ಜಿಲ್ಲೆಯಲ್ಲಿ ಬೆಲಾಟ್ರಿಕ್ಸ್ ಏರೋಸ್ಪೇಸ್ 404 ಕೋಟಿ ರೂ. ಹೂಡಿಕೆ ಮಾಡಲಿವೆ ಎಂದು ಸಚಿವರು ತಿಳಿಸಿದರು.

## 1.53 ಲಕ್ಷ ಪಿಂಚಣಿ ಸ್ಥಗಿತ: ಜಿಲ್ಲಾಧಿಕಾರಿ

• **ಬೆಳಗಾವಿ:** ರಾಜ್ಯ ಸರ್ಕಾರದ ವಿವಿಧ ಪಿಂಚಣಿ ಯೋಜನೆಗಳನ್ನು ಅನರ್ಹರು ದುರುಪಯೋಗಪಡಿಸಿಕೊಳ್ಳುತ್ತಿದ್ದ ದೊಡ್ಡ ಜಾಲವೊಂದು ಬೆಳಕಿಗೆ ಬಂದಿದ್ದು, ರಾಜ್ಯದಲ್ಲಿಯೇ ಅತಿ ಹೆಚ್ಚು ಅನರ್ಹ ಪಿಂಚಣಿದಾರರು ಬೆಳಗಾವಿ ಜಿಲ್ಲೆಯಲ್ಲಿ ಪತ್ತೆಯಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಜಿಲ್ಲಾಡಳಿತ ಬರೋಬ್ಬರಿ 1.53 ಲಕ್ಷ ಪಿಂಚಣಿಗಳನ್ನು ತಕ್ಷಣದಿಂದಲೇ ಸ್ಥಗಿತಗೊಳಿಸಿದೆ ಎಂದು ಡಿಸಿ ಮಹಮ್ಮದ್ ರೋಷನ್ ಹೇಳಿದರು.

ಈ ಕುರಿತು ಮಾಧ್ಯಮಗಳೊಂದಿಗೆ ಮಾತನಾಡಿ, ಸರ್ಕಾರದ ನಿರ್ದೇಶನದಂತೆ ಜಿಲ್ಲಾದ್ಯಂತ ಜಂಟಿ ಸರ್ವೆ ನಡೆಸಲಾಗಿದ್ದು, ಒಟ್ಟು 1.82 ಲಕ್ಷ ಅನರ್ಹ ಪಿಂಚಣಿದಾರರ ಮಾಹಿತಿ ಸಂಗ್ರಹಿಸಲಾಗಿದೆ ಎಂದು ತಿಳಿಸಿದರು.

ಪರಿಶೀಲನೆ ವೇಳೆ 65 ವರ್ಷಕ್ಕಿಂತ ಕಡಿಮೆ ವಯಸ್ಸಿನವರಾಗಿದ್ದರೂ ವೃದ್ಧಾಪ್ಯ ಪಿಂಚಣಿ ಪಡೆಯುತ್ತಿದ್ದವರು, ವಾರ್ಷಿಕ 35 ಸಾವಿರ ರೂಪಾಯಿಗಳಿಗಿಂತ ಹೆಚ್ಚು ಆದಾಯ ಹೊಂದಿದ್ದವರು ಹಾಗೂ ಬೆಳಗಾವಿ ಜಿಲ್ಲೆಯಿಂದ ಬೇರೆ ಜಿಲ್ಲೆಗಳಿಗೆ ವಲಸೆ ಹೋಗಿದ್ದರೂ ಪಿಂಚಣಿ ಪಡೆಯುತ್ತಿದ್ದವರನ್ನು ಗುರುತಿಸಲಾಗಿದೆ. ಈ ಪೈಕಿ ನಿಯಮ ಉಲ್ಲಂಘಿಸಿ ಸೌಲಭ್ಯ ಪಡೆಯುತ್ತಿದ್ದ 1.53 ಲಕ್ಷ ಜನರ ಪಿಂಚಣಿಯನ್ನು ಅಧಿಕೃತವಾಗಿ ಸ್ಥಗಿತಗೊಳಿಸಲಾಗಿದೆ ಎಂದು ಹೇಳಿದರು.

## ಮುಂಬೈನಲ್ಲಿ ಇಂದು ಸಿಎಂ ಶಿವಕುಮಾರ ಸಭೆ

• **ಬೆಳಗಾವಿ:** ಕೃಷ್ಣಾ ನದಿಗೆ 2 ಟಿಎಂಸಿ ನೀರು ಬಿಡುಗಡೆ ಮಾಡುವ ಕುರಿತು ಜೂ.20ರಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಅವರು ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಅವರೊಂದಿಗೆ ಮುಂಬೈನಲ್ಲಿ ಮಹತ್ವದ ಸಭೆ ನಡೆಸಲಿದ್ದು, ಈ ಬಾರಿ ನೀರು ಬಿಡುಗಡೆ ಆಗುವ ವಿಶ್ವಾಸವಿದೆ ಎಂದು ಜಿಲ್ಲಾಧಿಕಾರಿ ಮಹಮ್ಮದ್ ರೋಷನ್ ತಿಳಿಸಿದರು.




ಜಿಲ್ಲಾಧಿಕಾರಿ ಕಚೇರಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಈ ಹಿಂದೆ ಬೇಸಿಗೆ ಅವಧಿಯಲ್ಲಿ ಮಹಾರಾಷ್ಟ್ರದಿಂದ ನಿಯಮಿತವಾಗಿ 2 ಟಿಎಂಸಿ ನೀರು ಬಿಡುಗಡೆ ಮಾಡಲಾಗುತ್ತಿತ್ತು. ಆದರೆ, ಕಳೆದ ಐದಾರು ವರ್ಷಗಳಿಂದ ನೀರು ಹರಿಸಲಾಗುತ್ತಿಲ್ಲ. ಈ ಹಿನ್ನೆಲೆಯಲ್ಲಿ ಹಿಂದಿನಂತೆ ನೀರು ಬಿಡುಗಡೆ ಮಾಡುವಂತೆ ಕರ್ನಾಟಕ ಸರ್ಕಾರ ಮನವಿ ಸಲ್ಲಿಸಲಿದ್ದು, ಮುಂದಿನ ಹತ್ತು ದಿನಗಳಲ್ಲಿ ನೀರು ದೊರೆಯುವ ನಿರೀಕ್ಷೆಯಿದೆ ಎಂದರು.

ಹಿಪ್ಪರಗಿ ಬ್ಯಾರೇಜ್‌ನ ಗೇಟ್ ಮುರಿದ ಪರಿಣಾಮ ಸುಮಾರು ಒಂದೂವರೆ ಟಿಎಂಸಿ ನೀರು ನಷ್ಟವಾಗಿದೆ. ಪ್ರಸ್ತುತ ಅಲ್ಲಿ ಕೇವಲ 0.08 ಟಿಎಂಸಿ ನೀರು ಮಾತ್ರ ಸಂಗ್ರಹವಿದೆ. ಈ ಕುರಿತು ಸಿಎಂ ಗಮನಕ್ಕೆ ತರಲಾಗಿದ್ದು, ಮಹಾರಾಷ್ಟ್ರ ಸರ್ಕಾರದೊಂದಿಗೆ ನೇರವಾಗಿ ಚರ್ಚಿಸಿ ನೀರು ಬಿಡುಗಡೆಗೆ ಮನವರಿಕೆ ಮಾಡುವ ಪ್ರಯತ್ನ ನಡೆಯಲಿದೆ ಎಂದು ತಿಳಿಸಿದರು.

ಸಚಿವ ಸಂಪುಟ ವಿಸ್ತರಣೆ ವಿಚಾರ ಕಾಂಗ್ರೆಸ್ ಹೈಕಮಾಂಡ್ ನಿರ್ಧಾರ

## ಸಿದ್ದು ಜತೆ ವೈಮನಸ್ಸಿಲ್ಲ: ಮಹದೇವಪ್ಪ

• **ಮೈಸೂರು:** ಮಾಜಿ ಸಿಎಂ ಸಿದ್ದರಾಮಯ್ಯ ಹಾಗೂ ನನ್ನ ನಡುವೆ ಯಾವ ವೈಮನಸ್ಸು ಇಲ್ಲ, ಅವರು ಸದಾ ನನ್ನೊಂದಿಗೆ ಇರುತ್ತಾರೆ, ಮುಂದೆಯೂ ಇರುತ್ತಾರೆ ಎಂದು ಮಾಜಿ ಸಚಿವ ಡಾ.ಎಚ್.ಸಿ. ಮಹದೇವಪ್ಪ ಹೇಳಿದರು.



ಶುಕ್ರವಾರ ನಗರದ ಜಲದರ್ಶಿನಿ ಅತಿಥಿ ಗೃಹದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಸಿದ್ದರಾಮಯ್ಯ ನಮ್ಮ ಪರವಾಗಿಲ್ಲ ಎಂದು ಹೇಳಬಾರದು. ನನ್ನ ಪರವಾಗಿ ಬಲವಾಗಿ ವಾದ ಮಾಡಿಲ್ಲ ಎನ್ನುವುದು ಸುಳ್ಳು. ಡಾ.ಯತೀಂದ್ರ ಕೂಡ ನಮ್ಮ ಮಗನಿದ್ದಂತೆ. ನಾನು-ಸಿದ್ದರಾಮಯ್ಯ 40 ವರ್ಷಗಳ ಕಾಲ ಜತೆಯಾಗಿದ್ದಂತೆ ಡಾ.ಯತೀಂದ್ರ ಹಾಗೂ ಸುನೀಲ್ ಬೋಸ್ ಜತೆಯಾಗಿದ್ದಾರೆ. ನನ್ನ ಸಿದ್ಧಾಂತ, ಹೋರಾಟಗಳನ್ನು ಮುಂದು ವರಿಸಿಕೊಂಡು ಹೋಗುವ ವಿಶ್ವಾಸ ಇದೆ ಎಂದರು.

ಸಚಿವ ಸಂಪುಟ ವಿಸ್ತರಣೆ ವಿಚಾರದಲ್ಲಿ ಕಾಂಗ್ರೆಸ್ ಹೈಕಮಾಂಡ್ ನಿರ್ಧಾರ ಮಾಡಲಿದೆ. ಸಂಪುಟಕ್ಕೆ ಸೇರುವ ಬಗ್ಗೆ ಯಾರ ಬಳಿಗೂ ಹೋಗಿಲ್ಲ. ಮಂತ್ರಿಗಿರಿ, ಅಧಿಕಾರಕ್ಕಾಗಿ ಎಂದಿಗೂ ಯಾರನ್ನು ಕೇಳಿಕೊಂಡಿಲ್ಲ. ಅತ್ತು-ಕರೆದು ಅಧಿಕಾರ ಪಡೆದಿಲ್ಲ.

ಸಿಎಂ ಡಿ.ಕೆ ಶಿವಕುಮಾರ್ ಅವರ ಸಚಿವ ಸಂಪುಟದಲ್ಲಿ ಅವಕಾಶ ಸಿಗದಿದ್ದಕ್ಕೆ ನಿರಾಶೆಯಾಗುವ ಪ್ರಶ್ನೆಯೇ ಇಲ್ಲ. ಮೂರ್ನಾ ಪ್ರಮಾಣದಲ್ಲಿ ಸಚಿವ ಸಂಪುಟ ವಿಸ್ತರಣೆಯಾಗುವಾಗ ಸಿಗುವ ನಿರೀಕ್ಷೆ ಇದೆ. ಸಿಗುತ್ತದೆ ಎನ್ನುವ ವಿಶ್ವಾಸವನ್ನು ಇಟ್ಟುಕೊಂಡಿದ್ದೇವೆ ಎಂದರು.

ಮುಂದಿನ ದಿನಗಳಲ್ಲಿ ಜೆನ್ ಝಿ ತಲೆಮಾರಿನ ಯುವಜನರಿಗೆ ಹೆಚ್ಚಿನ ಅವಕಾಶ: ಕೇಂದ್ರ ಸಚಿವ ಹೇಳಿಕೆ

## ಅಡ್ಡ ಮತದಾನಕ್ಕೆ ನಾನು ವಿಚಲಿತನಾಗಿಲ್ಲ: ಕುಮಾರಸ್ವಾಮಿ

• **ಬೆಂಗಳೂರು:** ವಿಧಾನಪರಿಷತ್ ಚುನಾವಣೆಯಲ್ಲಿ ಅಡ್ಡ ಮತದಾನ ನಡೆಯುತ್ತದೆ ಎಂಬುದು ನನಗೆ ಮೊದಲೇ ತಿಳಿದಿತ್ತು. ಆದರೆ, ಈ ನಾನು ವಿಚಲಿತನಾಗಿಲ್ಲ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಹೇಳಿದರು.



ನಗರದಲ್ಲಿ ಶುಕ್ರವಾರ ಮಾಧ್ಯಮಗಳ ಜತೆ ಮಾತನಾಡಿದ ಅವರು, ಅತಿಯಾದ ನಂಬಿಕೆ, ವಿಶ್ವಾಸವೇ ಈ ಸೋಲಿನ ಕಾರಣ. ಇಂತಹ ವಂಚನೆ, ಮೋಸಗಳು ನನಗೆ ಮತ್ತು ನಮ್ಮ ಪಕ್ಷಕ್ಕೆ ಹೊಸದಲ್ಲ. ಎಷ್ಟೋ ಸಲ ಎದುರಿಸಿ ಅದರಿಂದ ಆಚೆ ಬಂದಿದ್ದೇವೆ. ಮುಂದಿನ ದಿನಗಳಲ್ಲಿ ಜೆನ್ ಝಿ ತಲೆಮಾರಿನ ಯುವಜನರಿಗೆ ಹೆಚ್ಚಿನ ಅವಕಾಶ ನೀಡುತ್ತೇವೆ. ಹೊಸ ನಾಯಕತ್ವವನ್ನು ಬೆಳೆಸುವುದು ನಮಗೆ ಗೊತ್ತಿದೆ. ಹೊಸ ಮುಖಗಳಿಗೆ ಹೆಚ್ಚಿನ ಆದ್ಯತೆ ನೀಡುವ ನಿರ್ಧಾರ ಮಾಡಿರುವುದಾಗಿ ಕುಮಾರಸ್ವಾಮಿ ತಿಳಿಸಿದರು.

ಶಾಸಕ ಜಿ.ಟಿ. ದೇವೇಗೌಡ ಅವರ ಹೆಸರು ಪ್ರಸ್ತಾಪಿಸುತ್ತಿದ್ದಂತೆಯೇ ತೀವ್ರ ಆಕ್ರೋಶ ವ್ಯಕ್ತಪಡಿಸಿದ ಕೇಂದ್ರ ಸಚಿವರು ನನ್ನ ಮುಂದೆ ಅವರ ಹೆಸರು ಎತ್ತಬೇಡಿ ಎಂದು ನೇರವಾಗಿಯೇ ಹೇಳಿದರು. ಕಳೆದ ಒಂದೂವರೆ ವರ್ಷದಿಂದಲೂ ಅವರ ಬಗ್ಗೆ ನಾನು ಚಕಾರ ಎತ್ತಿಲ್ಲ. ಚಾಮುಂಡೇಶ್ವರಿ ವಿಧಾನಸಭೆ ಕ್ಷೇತ್ರದಲ್ಲಿ ಇತ್ತೀಚೆಗೆ ನಡೆದ ಸಭೆಯಲ್ಲಿ ಕೂಡ ಅವರ ಹೆಸರನ್ನು ನಾನು ಎಲ್ಲಿಯೂ ಪ್ರಸ್ತಾಪಿಸಿಲ್ಲ ಎಂದ ಹರಿಹಾಯ್ದರು.

ಯಾರು ಎಷ್ಟೇ ಒತ್ತಡ ಹಾಕಿದರೂ ನಾನು ನನ್ನ ನಿರ್ಧಾರವನ್ನು ಕಠಿಣವಾಗಿ ಕೈಗೊಳ್ಳುತ್ತೇನೆ. ಇಲ್ಲಿ ನನ್ನ ವೈಯಕ್ತಿಕ ವಿಚಾರ ಮುಖ್ಯವಲ್ಲ, ಪಕ್ಷವನ್ನು ಉಳಿಸಲು ಕೆಲ ಕಠಿಣ ನಿರ್ಧಾರಗಳನ್ನು ಮಾಡಲೇಬೇಕಿದೆ ಎಂದು ತಿಳಿಸಿದರು.

ಕಾರ್ಯಕರ್ತರು ಹಗಲಿರುಳು ಕಷ್ಟಪಟ್ಟು ಇವರನ್ನು ಗೆಲ್ಲಿಸಿ ಶಾಸಕರನ್ನಾಗಿ ಮಾಡಿದ್ದಾರೆ. ಇವರು ನೋಡಿದರೆ ತಮ್ಮ ಸ್ವಾರ್ಥ ನೋಡಿಕೊಂಡಿದ್ದಾರೆ. ದೇವೇಗೌಡರು ಕಳೆದ ಅರವತ್ತು ವರ್ಷಗಳಿಂದ ರಾಜಕೀಯ ಮಾಡಿಕೊಂಡು ಬಂದಿದ್ದಾರೆ. ಕಷ್ಟಪಟ್ಟು ಈ ಪಕ್ಷವನ್ನು ಕಟ್ಟಿದ್ದಾರೆ. ಕೆಲವನ್ನು ಅತಿಯಾಗಿ ನಂಬಿ ಈ ಪರಿಸ್ಥಿತಿಗೆ ಬಂದಿದ್ದಾರೆ. ಅವರು ಅಧಿಕಾರದಲ್ಲಿ ಇದ್ದಿದ್ದು ಅತ್ಯಲ್ಪ ಅವಧಿ. ಅವರ ಬಳುವಳಿ ನನಗೂ ಬಂದಿದೆ ಎಂದು ಸಚಿವ ಕುಮಾರಸ್ವಾಮಿ ಹೇಳಿದರು.

**ಜಿಟಿಡಿ ಎರಡೂ ಕಾಲು ಹೊರಗಿಟ್ಟಿದ್ದಾರೆ:** ಅಡ್ಡ ಮತದಾನ ಮಾಡಿರುವ ಈ ಜಿಲ್ಲೆಯ ವ್ಯಕ್ತಿಯದು ಮುಗಿದು ಹೋದ ಕಥೆ. ಅವರು ಒಂದು ಕಾಲಲ್ಲ, ಎರಡು ಕಾಲುಗಳನ್ನು ಹೊರಗಡೆ ಇಟ್ಟಿದ್ದಾರೆ. ಈ ಬಾರಿ ಅಸೆಂಬ್ಲಿ ಟಿಕೆಟ್‌ಗಳನ್ನು ಅಂತಿಮ ನಿರ್ಣಯ ಮಾಡುವುದು ನಾನೇ. ಇದರ ಬಗ್ಗೆ ಯಾವ ಗೊಂದಲವೂ ಬೇಡ. ದೇವೇಗೌಡರಿಗೆ ಅವರ ಮೇಲೆ ಪ್ರೀತಿ ವ್ಯಾಮೋಹ ಇರುವುದು ಸತ್ಯ. ಆ ವ್ಯಾಮೋಹವನ್ನೇ ಆ ವ್ಯಕ್ತಿ ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ. ಮುಂದೆ ಇದಕ್ಕೆ ನಾನು ಅವಕಾಶ ಕೊಡುವುದಿಲ್ಲ ಎಂದರು.

**ಕೇಂದ್ರದಲ್ಲಿ ಇರುವುದು ತಾತ್ಕಾಲಿಕ:** ರಾಜ್ಯ ರಾಜಕಾರಣಕ್ಕೆ ಯಾವಾಗ ವಾಪಸ್ಸು ಬರುತ್ತೀರಿ ಎಂಬ ಪ್ರಶ್ನೆಗೆ ಮಾರ್ಮಿಕವಾಗಿ ಉತ್ತರಿಸಿದ ಕುಮಾರಸ್ವಾಮಿ ಅವರು; ಕೇಂದ್ರದಲ್ಲಿ ಇರುವುದು ಟೆಂಪರರಿ, ನನಗೆ ರಾಜ್ಯವೇ ಪರ್ಮನೆಂಟ್ ಎಂದರು. ರಾಜ್ಯ ರಾಜಕಾರಣಕ್ಕೆ ಹೊಸದಾಗಿ ನಾನು ಬರಬೇಕಾಗಿಲ್ಲ. ನಮ್ಮ ಪಕ್ಷಕ್ಕೆ ನಾನೇ ಅಧ್ಯಕ್ಷ ಅಲ್ಲವೇ ಎಂದು ಕುಮಾರಸ್ವಾಮಿ ಅವರು ಹೇಳಿದರು.

**ನಾನು ರೆಡ್ ಜೋನ್ ತೆಗೆಯದಿದ್ದಕ್ಕೆ ಬಿಡದಿಯಲ್ಲಿ ಇಷ್ಟೊಂದು ಭೂಮಿ ಉಳಿದಿದೆ:** ಬಿಡದಿ ಟೌನ್‌ಶಿಪ್ ಕುಮಾರಸ್ವಾಮಿ ಕೂಸು ಅಂತಾರೆ. ಸ್ವೈಸ್ ರಕ್ತ ದೇವೇಗೌಡರ ಕೂಸು ಎನ್ನುತ್ತಿದ್ದರು. ಬಿಡದಿಯಲ್ಲಿ ನಾನು ರೆಡ್ ಜೋನ್ ತೆಗೆದು ಹಾಕಲಿಲ್ಲ ಅಂತಾರೆ. ಒಂದು ವೇಳೆ ನಾನು ರೆಡ್ ಜೋನ್ ತೆಗೆದಿದ್ದರೆ ಇವತ್ತು ಒಂದು ಚೂರು ಭೂಮಿಯೂ ರೈತರ ಕೈಯಲ್ಲಿ ಇರುತ್ತಿರಲಿಲ್ಲ. ನಾನೇನಾದರೂ ರಿಯಲ್ ಎಸ್ಟೇಟ್ ಮಾಫಿಯಾ ಪರ ಇದ್ದಿದ್ದರೆ ಇಷ್ಟೊತ್ತಿಗೆ ಭೂಮಿ ರೈತರಿಂದ ಹೋಗಿಬಿಡುತ್ತಿತ್ತು ಎಂದು ಸಚಿವ ಕುಮಾರಸ್ವಾಮಿ ಅವರು ಹೇಳಿದರು.

### ಅಂತಿಮ ನಿರ್ಧಾರ ನನ್ನದೇ

ನಮ್ಮ ಪಕ್ಷದಲ್ಲಿ ಕೆಲವರು ಆ ವ್ಯಕ್ತಿಯನ್ನು ಸರಿಪಡಿಸುವ ಬಗ್ಗೆ ಪ್ರಯತ್ನ ಮಾಡುತ್ತಿದ್ದರು. ಅದು ಅವರ ವೈಯಕ್ತಿಕ ವಿಚಾರ. ಆದರೆ, ಪಕ್ಷಕ್ಕೆ ಸಂಬಂಧಿಸಿ ಅಂತಿಮ ನಿರ್ಧಾರ ಕೈಗೊಳ್ಳುವುದು ನಾನೇ. ಈ ಬಗ್ಗೆ ನಾನೇ ಅಂತಿಮ ನಿರ್ಧಾರ ಕೈಗೊಳ್ಳುತ್ತೇನೆ. ಈ ವ್ಯಕ್ತಿ ಏನೆಲ್ಲಾ ಮಾಡಿದ್ದಾರೆ ಎಂದು ನನಗೆ ಗೊತ್ತು. ಮೂರು ಬಾರಿ ನನಗೆ ಇವರಿಂದ ಕಹಿ ಅನುಭವ ಆಗಿದೆ.

## ಅಡ್ಡ ಮತದಾನ ಮಾಡಿದವರ ಪತ್ತೆಗೆ ಸಮಿತಿ ರಚನೆ: ಛಲವಾದಿ

• **ಬೆಂಗಳೂರು:** ವಿಧಾನ ಪರಿಷತ್‌ಗೆ ನಡೆದ ಚುನಾವಣೆಯಲ್ಲಿ ಅಡ್ಡ ಮತದಾನ ಮಾಡಿದವರು ಇಂಥವರು ಎಂದು ಮಾಧ್ಯಮಗಳಲ್ಲಿ ಕೆಲವರ ಹೆಸರು ಹರಿಬಿಡಲಾಗುತ್ತಿದೆ. ಇದನ್ನು ದಯವಿಟ್ಟು ಯಾವುದೇ ಮಾಧ್ಯಮಗಳು ಮಾಡಬಾರದು ಎಂದು ವಿಧಾನಪರಿಷತ್ತಿನ ಪ್ರತಿಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಮನವಿ ಮಾಡಿದ್ದಾರೆ.



ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದರು. ಅಡ್ಡ ಮತದಾನ ಮಾಡಿದವರ ಪತ್ತೆಗಾಗಿ ಸಮಿತಿ ರಚಿಸಲಾಗಿದೆ. ಈ ಸಮಿತಿ ವರದಿ ನೀಡಲಿದೆ. ಆಗ ಅಡ್ಡ ಮತದಾನ ಮಾಡಿದವರು ಪತ್ತೆಯಾದ ನಂತರ ಅವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ವಿವರಿಸಿದರು.

ನಮ್ಮ ಪಕ್ಷದ ಪರವಾಗಿ ಲಿಂಗರಾಜ ಪಾಟೀಲ್ ಅವರಿಗೆ 30 ಮತಗಳು ಹಾಗೂ ರಘು ಕೌಟಿಲ್ಯ ಅವರಿಗೆ 30 ಮತಗಳನ್ನು ನೀಡಿದ್ದೆವು. ಮತ್ತೆ ಉಳಿದ ಮೂರು ಮತಗಳನ್ನು ಎನ್‌ಡಿಎ ಅಭ್ಯರ್ಥಿಗೆ ಹಾಕಲು ಸೂಚಿಸಲಾಗಿತ್ತು. ಬಸನಗೌಡ ಪಾಟೀಲ್ ಯತ್ನಾಳ್ ಅವರು ಬಿಜೆಪಿಗೆ ಮತ ಹಾಕುವುದಾಗಿ ಹೇಳಿದರು. ನಾಲ್ವರನ್ನು ಆರ್. ಅಶೋಕ ತಮ್ಮೊಂದಿಗೆ ಕರೆದೊಯ್ದು ಮತ ಹಾಕಿಸಿದರು. ಹಂಚಿಕೆಯಾದ 30 ಮತಗಳಲ್ಲಿ ರಘು ಕೌಟಿಲ್ಯ ಅವರಿಗೆ ಬಂದ ಮತದಲ್ಲಿ ಒಂದು ಅಸಿಂಧುವಾಗಿದೆ. ಲಿಂಗರಾಜ ಪಾಟೀಲ್ ಅವರಿಗೆ ಮೂರು ಮತಗಳು ಬಂದಿಲ್ಲ ಎಂದರು. ಅಡ್ಡ ಮತದಾನ ಮಾಡಿದವರು ಎಂದು ತಮ್ಮ ಹೆಸರನ್ನು ಮಾಧ್ಯಮಗಳಲ್ಲಿ ಬಿತ್ತರಿಸಲಾಗುತ್ತಿದ್ದು, ಮುಜುಗರಕ್ಕೆ ಒಳಗಾಗಿದ್ದೇನೆ ಎಂದು ಶಾಸಕ ಡಾ. ಚಂದ್ರು ಲಮಾಣಿ ಹೇಳಿದ್ದಾರೆ.

**IN THE COURT OF THE ASSISTANT COMMISSIONER, TUMAKURU SUB DIVISION, TUMAKURU.**
**R.A.(TUM) 551/2024**
**Appellant: Srinivas**
V/s.
Respondents: The Tahasildar, Tumakuru Taluk, Tumakuru and others

**DRAFT PAPER PUBLICATION.**

Notice to respondents No.2, 3, 5 to 12 in the above appeal:
R-2: Srinivas S/o Late Rangaswamaiah, Aged about 45 years, R-3: Krishna S/o Late Rangaswamaiah, Aged about 43 years, R-5: Rangaswamaiah S/o Late Doddamahimaiah, Aged about 60 years, R-6: Anjinappa S/o Late Doddamahimaiah, Aged about 55 years, R-7: Garudaiah S/o Late Doddamahimaiah, Aged about 50 years, R-8: Lakshmidevamma W/o Late Mariyanna, Aged about 68 years, R-9: Jamuna D/o Late Anjinappa, Aged about 35 years, R-10: Mamatha D/o Late Anjinappa, Aged about 32 years, R-11: Channegowda S/o Late Channanjaiah, Aged about 75 years, R-12: Nagarathnamma W/o Late Mahimaiah, Aged about 45 years, All are R/at Mahimanapalya Village, Nagavalli Post, Hebburu Hobli, Tumakuru Taluk, Tumakuru District.

WHEREAS, the above appellant has preferred the above appeal against the respondents for challenging the MR and such other relief.

Take notice that, you have been made as a respondents No.2, 3, 5 to 12 in the above case and the same is posted for your appearance on at 3.00 P.M 24.06.2026 before the Hon'ble Assistant Commissioner Court at Tumakuru, therefore, you are hereby informed to appear on the said date, failing which, the case shall be heard and determined as ex-parte and case will be continue in your absence.

Given under my hand and seal of this court, this day of 19/06/2026

**By Order of the Court: The Tahasildar,**
Tumakuru Taluk, Tumakuru and others
Advocate for Appellant: Lakshminarayana, B.A.LL.B., Advocate, SRS Building, Near Civil Bus Stand, Tumakuru. Mobile No.9448581909

---

**IN THE COURT OF THE PRINCIPAL CIVIL JUDGE (JR.DN.) AND J.M.F.C. AT ANEKAL**
**C. Mis. No. 745/2025**

**BETWEEN: RAJASHEKAR**, S/o Krishnappa, Aged about 41 years, Residing at Maranayakanahalli village, Attibele hobli, Anekal Taluk, Bangalore Urban District. ... **PETITIONER**
**AND: THE CHIEF OFFICER/REGISTRAR OF BIRTH AND DEATH**, Town Municipal Counsel, Anekal Town-562106, Bangalore Urban District. ... **RESPONDENT**

**PUBLIC NOTICE**

Whereas the Petitioner has filed above petition directing the respondent to make necessary entry to regarding the death of Petitioner's Uncle namely CHINNAPPA S/o Late Hanumanthappa was died on 29-08-1989 at Anekal Town, Bangalore Urban District. The Petitioner has filed C.Mis. No. 745/2025 before the Principal Civil Judge (Jr.Dn.) and J.M.F.C. AT Anekal if any body having any objection be pleased to appear before the Hon'ble Court in person by an Advocate, duly instructed on **20-07-2026** at 11.00 A.M. take a note that default of appearance on the day above mentioned the matter will be heard and decided in your absence as per law.

Given under my hand and seal of the Court on 18-06-2026.

By order of the court, Sheristedar, Civil Judge Jr.Dvn and JMFC Court at Anekal

**R. CHANDRASHEKAR**, Advocate
1st Floor, Vijay building, Mirza road, Infront of Apollo Pharmacy, Anekal Town 562 106

---

## CHANGE OF NAME

I, **SHARADAMMA S**, W/o Siddaraju .B, age 31 years, presently R/at Byrasandra Village, Udukunte Post, Solur Hobli, Nelamangala Taluk, Bengaluru Rural-562 127 do hereby declare that I have changed my name from **SHARADHA S** (old name) to **SHARADAMMA .S** (new name), henceforth I shall be known and called as **SHARADAMMA .S** for all purposes, vide affidavit dated 18th June 2026, sworn before Advocate and Notary **Smt. VATSALA** at Bangalore.

---

## CHANGE OF NAME

I, **RUBINA SYNTHIA DAS**, aged about 40 years, residing at Rhema No. 69, 1st Main, 4th Cross, Rajeshwari Layout, T C Palya Main Road, Ramamurthy Nagar, Bangalore North, Po : Krishnarajapuram Dist., Bangalore, Karnataka-560036, do hereby declare that I have changed my daughter name from **AATHIRAI RACHEL SUDHANDRA** to **AATHIRAI RACHEL DAS**, vide affidavit dated 18.06.2026, sworn to before Uday Kumar .K, Advocate & Notary Public, Govt. of India, Bengaluru.

---

## CHANGE OF NAME

We, **Sri. Manu K.M.**, S/o Mallikarjun, aged about 26 years, and **Smt. Amruthavarshini M.**, W/o Sri. Manu K.M., aged about 23 years, both residing at Kala Basavanahundi Village, Talakadu Hobli, T. Narasipura Taluk, Mysuru District - 571122, today at Bangalore, have changed our minor son's name from **MALLIKARJUN.M** to **HETHVIK.M**, vide affidavit dated 18/6/2026 sworn to before K V Bachi Reddy Advocate and Notary Bangalore.

---

## ಸಾರ್ವಜನಿಕ ಪ್ರಕಟಣೆ

ಆರ್.ಕೆ. ನಾಗರಾಜು ಬಿನ್ ಲೇಟ್ ಕಂದಪ್ಪ ವಾಸ: ರಾಮಚಂದ್ರಪ್ಪನ ಗ್ರಾಮ, ಕಸಬಾ ಹೋಬಳಿ, ತಿಪಟೂರು ತಾಲ್ಲೂಕು, ... ದಿನಾಂಕ: 04-11-2025 ... ದಾವೆ ಸಂಖ್ಯೆ: 242/2015 ...

**ಷೆಡ್ಯೂಲ್ ಸ್ವತ್ತಿನ ವಿವರ**

ತಿಪಟೂರು ಟೌನ್, ವಾರ್ಡ್ ನಂ.20/17, ... ನಂ: 5802/237/52/1, ಪಿ.ಐ.ಡಿ.ನಂ.25-7-489 ...

---

**IN THE COURT OF THE HONBLE 3RD ADDL DISTRICT JUDGE AT KGF**
**R.A NO 36/2025**

**APPELLANT** : **Sri.Muniyappa** S/o late Venkataswamy, Aged 63 years, R/a Kadaripura Village, Kyasamballi Hobli, K.G.F. TALUK, KGF
**RESPONDENTS** : **Sri. Meenakshi & others**

**Court Notice to Respondent No: 9**

**Sri S.Ananda** S/o late Srinivasa @ Srinivasa Naidu, Aged 34 years, Respondent No. 9 Residing at: Kadaripura Village, Kyasamballi Hobli, KGF Taluk

**COURT NOTICE TO RESPONDENT NO.9**

Please take notice to the Respondent No:9 named in the above case that the Appellant has preferred above appeal for partition and other reliefs against the Judgement and Decree Passed in OS No. 8/2014 which came to be dismissed on 01.03.2025. The Notice was sent to you by court and Regd post Ack due. But which has returned unserved. Hence through paper publication Notice is issued to you calling upon you to appear in person or through advocate on 23-07-2026 at 11.00 A.M. Failing which the court will be proceed exparte.

Dated this day the 19-06-2026 at KGF.

**BY ORDER OF THE COURT**
**SHERISTEDAR**
3rd Addl District Judge at KGF

---

## CHANGE OF NAME

**I, Priti Patel,** formerly known as Priti Chaudhari, Aadhar No.3304 5860 6433, PAN No. EDVPP8661L aged about 40 years, residing at Flat No. A-106, Aakruti Aura Springs, Narayanappa Garden, Whitefield, Bengaluru - 560066, have changed my name from **Priti Chaudhari** to **Priti Patel,** vide affidavit dated 17/6/2026 sworn to before Yankoba Advocate and Notary Bangalore.

---

## CHANGE OF NAME

I, **DINESH KUMAR**, S/o Sampangi, age 35 years, R/at No. 210, 3rd Cross, Sanjay Nagar, NTY Layout, Mysore Road, Bengaluru South, Bengaluru-560 026 do hereby declare that both the names i.e **DINESH KUMAR** and **DINESH S** are one and the same and refers to me only, henceforth I shall be known and called as **DINESH KUMAR** for all purposes, vide affidavit dated 11th June 2026, sworn before Advocate and Notary **Smt. VATSALA** at Bangalore.

---

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತದೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

---

**IN THE COURT OF THE SR CIVIL JUDGE AND JMFC AT HOSKOTE BANGALORE RURAL**
**OS NO. 830/2023**

**BETWEEN** : Smt. Gowramma and another ...**Plaintiffs**
**AND** : Sri. Narayanaswami and others ...**Defendants**

**BY WAY OF PAPER PUBLICATION**
**TO, DEFENDANT NO. 5 to 7 & 9**

**5. Sri.Lakshman** S/o late Ramachandrappa Aged about 57 years, **6. Smt. M. Ambuja** W/o Lakshman Aged about 57 years **7. Sri. Pavan Kumar** S/o Lakshman Aged about 34 years Defendant No.5 to 7 R/at, H.R Munnegowda layout, Near Nandhan Kalyan Mantapa, Chokkanahalli Road, Sir.M.Vishweshwarayya Badavane, Hosakote, Bangalore-562114
**9. Smt. Vasundala L** D/o Lakshaman Aged about 30 years R/at, Kunteena Agrahar Village, Bidarahalli Hobli, Bangalore East Taluk

WHEREAS, the petitioners above named have filed the above case against the defendants for Declaration. The Defendant No.5 to 7 & 9 above named is hereby directed to appear before this Hon'ble Court, either in person or through the pleader on the **17/08/2026 at 11 A.M.** to defend in the above case, filing which the matter will be heard ex-parte.

**SCHEDULE**

All that piece and parcel of Agricultural Property bearing Old Sy No. 14/p34 New Sy No.45 an extent of 2 Acre 16 Gunta situated at Yelachenahalli Village, Jadiganahalli Hobli, Hosakote Taluk, Bangalore Rural District bounded on: **East by** : Malleshappa and Munibirappa land, **West by** : Road, **North by** : Plantiff and Road, **South by** : Narayanaswami land

Given under my hand and the seal of the court this the 18th day of June 2026.

By Order of the Court
Sd/- Sheristedar
Senior Civil Judge & JMFC, Hosakote

**ADVOCATE FOR PLAINTIFFS**
**SRI. NAGESH. P. Advocate**
No.118, Janthagondanahalli, Sarjapur Hobli, Anekal Taluk, Bangalore-560087.

---

**IN THE COURT OF THE SENIOR CIVIL JUDGE AND J.M.F.C. AT PAVAGADA**
**F.D.P. No. 10/2025**
**PETITIONER: Sridevi**
Vs
**RESPONDENTS: Venkatasubbaiah** and others

To,
**R-3. Kanthamma** W/o late Venkataswamy, aged about 55 years, **R-4. Venugopala** S/o late Venkataswamy aged about 49 years, **R-5. Swapna** D/o late Venkataswamy, aged about 35 years, Respondents No.3 to 5 are R/o Sapthagiri lay-out, Thindlu, Bengaluru North Taluk,

**PAPER PUBLICATION**

WHEREAS, the petitioner has filed the above petition for final decree as per the terms of the preliminary decree passed in O.S.No.53/2020. You the respondent No.3 to 5 stated above are herein called upon to appear before this Hon'ble court at 11-00 A.M on 02.07.2026 either in person or through your counsel or agents. If you fails to appear this court, the matter will be heard and decided as exparte with respect to subject matter of the suit in your absence and such orders or decree will be binding upon you.

Given under the hand and seal of the court this day of 19/6/2026

**By order: Sheristedar, Sharistidan P.r.I. Civil Judge and Civil Court, Pavagada**
Advocate for petitioner: **A.S Raghunandan** Advocate, Pavagada

---

**IN THE COURT OF MOTOR ACCIDENTS CLAIMS TRIBUNAL AT BANGALORE (SCCH-11)**
**M.V.C. No. 7448/2025**

**BETWEEN: MR. SUJOY CHANDRA ...PETITIONER**
**AND: MR. ASHITH SURYA RAO** & ANOTHER ...**RESPONDENTS**

**SUMMONS/NOTICE TO THE RESPONDENT NO-1**

**MR. ASHITH SURYA RAO**, S/o Late B.S. Nagaraja Rao, R/at Bhavani Nilaya, 2nd Cross, Chayadevi Nagar, Behind BSNL Quarters, Maralur, Tumkur 572 105. (RC owner of Motor Cycle bearing Reg. No. KA-51-JF-8799)

Take Notice that the petitioner has filed the claim petition against you claiming compensation of Rs.50,00,000/- due to severe injuries sustained by the petitioner in a road traffic accident, which occurred on 20.07.2025 at about 6.15 PM Near MRF Steel Waters Farm House, Chikkadunu, Tavarekere Hobli, Bangalore, involving your Motor Cycle bearing Reg.No.KA-51-JF-8799.

Hence you are hereby directed to present before this Hon'ble Court on **23/07/2026 at 11.00 AM** personally or through a pleader duly instructed by you, failing which the matter will be heard in your absence, Placing you Exparte.

Given under my hand and the seal of the Court, on this 17/06/2026

By order of the Court, Assistant Registrar, Court of Small Causes, Bangalore

Advocate for Petitioner: **AJAYKUMAR**
No.85/A, 1st Floor, Anjananagara, Muddinapalya Road, Magadi Main Road, Bangalore-560 091.

---

**IN THE COURT OF MOTOR ACCIDENT CLAIMS TRIBUNAL AT BANGALORE**
**MVC No. 4406/2025**

**BETWEEN:**
Om Bhadur Khatka & Others ...**Petitioners**
**AND:**
N.I.A Com., Ltd and on other ...**Respondents**

**Notice to Proposed Respondent No.3**

**1. Mr. Nanda Kumar Bishwakram,**
Aged About 50 years, R/at: 18, 1st Main Road, Mattadahalli, GM Temple, Bangalore North, R.T Nagar, Bangalore-560 032.

Take notice that the above petitioner had filed the above claim petition against the Respondents for the compensation of Rs.70,00,000/- for the death of 1st petitioner Son in a RTA, dated 04-06-2025 at about 08.30 a.m., at BB Road, Sanjeevini Nagara Cross, On Fly Over Hebbal, Bangalore, by offending Motor Cycle bearing no. KA-51-JD-5662. The Proposed Respondent No.3 above named is hereby directed to appear before this Hon'ble Court either in person or through the pleader on the **27th day July 2026** before SCCH-15 **at 11.00 a.m.**, to defend the above case, failing which the matter will be determined as Ex-parte.

Given under my hand & seal of the court on this 15th day of June 2026.

By order of the Court
Sd/- Assistant Registrar
Court of Small Causes, Bengaluru

**Advocate for petitioner:**
**H.V. KUMARASWAMY, Advocate**
No.39/2, ASVINI Bhavan, 5th floor, K.G.Road, Bangalore-09.

---

**BEFORE THE MOTOR ACCIDENT CLAIMS TRIBUNAL AT BENGALURU**
**M.V.C. No. 541 OF 2026**

**PETITIONER: Sri Syed Imtiyaz** -V/s-
**RESPONDENTS: Sri Pranesh G** & another

**SUMMONS TO THE RESPONDENT No.1**

To, 1. **Sri Pranesh. G**, S/o. late Gururaj Rao H.P. No. 1772, 1st Rest, 3rd Stage, 4th Cross, Prakash nagar, Bengaluru 560 021. Owner of motor cycle bearing Regn.No.KA-02/HS-4190

Whereas the Petitioner has filed the above claim petition before this Hon'ble Court under Section 166 of the Motor Vehicles Act, 1989 against the Respondents claiming compensation of Rs 15,00,000/- on account of injuries sustained in the motor vehicles accident occurred on 31-12-2025 at 3:50 .PM near Vajarahalli Metro Station, Kanakapura Main Road, Bengaluru, involving the motor cycle bearing Regn. No.KA-02/HS-4190; the Respondent No.1 who is none other than the owner of the aforesaid motor cycle.

Whereas you are hereby summoned to appear in this court in person or by a pleader duly instructed and also able to answer all material questions realting to the above petition on **23-07-2026** at 11:00 A.M on the forenoon to answer the claim.

Take notice that in default of your appearance on the day before mentioned, the above petition will be heard and determined ex-parte in your absence.

Given under my hand and the seal of the court on 17-06-2026.

By order of the court, Assistant Registrar, Court of Small Causes, Bangalore

**M. LAKSHMANA**, Advocate
No.57, 4th Main, 8th Cross, S.R. Nagar, Bengaluru 560 027.

---

**BEFORE THE MOTOR ACCIDENT CLAIMS TRIBUNAL AT BENGALURU (SCCH-1)**
**MVC. No. 715/2026**

**KEMPARAJU C ... PETITIONER** -V/s-
**M/S. BAJAJ ALLIANZ GENERAL INSURANCE CO LTD** AND ANOTHER ... **RESPONDENTS**

**SUMMONS TO RESPONDENT No.2**

Sri. **BASAVARAJ K**, S/O KACHAPPA, AGED ABOUT 39 YEARS, H-NO.1-5-88, PATHAK GALLI, BIDAR ...
WHEREAS, the Petitioner has instituted the above Petition against you and other Respondent by seeking compensation of Rs.25,00,000/-(Rupees Twenty Five Lakhs) for the injuries caused by the accident caused by the two wheeler bearing Reg.No.KA-52-W-0205 on 13-11-2025 at about 07.10 p.m (Evening) infront of Gangamma chicken Centre road, near Thotagere turning, Hesaraghatta Main Road. You are evading service of the summons issued by the Hon'ble Court (SCCH-01). In the circumstances through this public notice, you are hereby summoned to appear before the Small Causes Court (SCCH 1), City Civil Court Complex, Bangalore-560 009 in person or by pleader on **21-07-2026** at 11.00 A.M, to answer the same, failing which, the petition will be disposed off ex parte.

Given under my hand and seal of the court on 18-06-2026.

By order of the court, Assistant Registrar, Court of Small Causes, Bangalore.

**RAGHAVENDRA .M.H**, Advocate
No.07, Raghavendra layout, Thotadaguddadahalli, Nagasandra post, Bengaluru 560 073.

---

**IN THE COURT OF THE PRINCIPAL CIVIL JUDGE (JR.DN.) AND J.M.F.C. AT ANEKAL**
**C. Mis. No. 629/2026**

**BETWEEN: SRI. SURESH .C**, S/o Late Chinnappa, aged about 36 years, Residing at Telagarahalli village, Vanakanahalli post, Kasaba hobli, Anekal Taluk, Bangalore Urban District ... **PETITIONER**
**AND: THE THASILDAR,** Anekal Taluk, Anekal Town -562 106 Bangalore Urban District. ... **RESPONDENT**

**PUBLIC NOTICE**

Whereas the Petitioner has filed above petition directing the respondent to make necessary entry to regarding the death of Petitioner's father namely CHINNAPPA S/o Late Muniswamy, was died on 27-01-2022 at Telagarahalli village, Kasaba hobli, Anekal Taluk, Bangalore Urban District. The Petitioner has filed C.Mis. No. 629/2026 before the Principal Civil Judge (Jr.Dn.) and J.M.F.C. at Anekal if any body having any objection be pleased to appear before the Hon'ble Court in person by an Advocate, duly instructed on dated **20-07-2026** at **11.00 A.M.** take a note that default of appearance on the day above mentioned the matter will be heard and decided in your absence as per law.

Given under my hand and seal of the Court on this 18/06/2026

By order of the Court, Sheristedar, Civil Judge Jr.Dvn and J.M.F.C Court, Anekal

**R. CHANDRASHEKAR**, Advocate
1st Floor, Vijay building, Mirza road, Infront of Apollo Pharmacy, Anekal Town 562 106

---

ಜಾಹೀರಾತಿಗಾಗಿ ಸಂಪರ್ಕಿಸಿ:
**9845438807, 9611755391**

---

## ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಛೇರಿ,
ಆಡಳಿತ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು
(ಆರೋಗ್ಯ ಸೌಧ, 1ನೇ ಮಹಡಿ, ಮಾಗಡಿ ರಸ್ತೆ, ಬೆಂಗಳೂರು-560 023) ದೂರವಾಣಿ ಸಂಖ್ಯೆ: 080-29552542, ಇ-ಮೇಲ್: eekhsdrp@gmail.com

ಸಂಖ್ಯೆ: ಆಕಇ/ಆ.ಇಂ.ವಿ/ಬೆಂ/ಟೆಂ-1&4/ಟೆಂಡರ್/2026-27/07 ದಿನಾಂಕ: 19.06.2026

### ಅಲ್ಪಾವಧಿ ಟೆಂಡರ್ ಪ್ರಕಟಣೆ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ವ್ಯಾಪ್ತಿಯ ... ದರ್ಜೆಯ 02 ಸಂಖ್ಯೆ ಕಾಮಗಾರಿಗಳನ್ನು ... www.kppp.karnataka.gov.in ... ದಿನಾಂಕ: 29.06.2026 ರಂದು ಸಂಜೆ 4.00 ರವರೆಗೆ. ...

ಸಹಿ/- ಕಾರ್ಯನಿರ್ವಾಹಕ ಇಂಜಿನಿಯರ್
ಆಡಳಿತ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು.

---

## ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

ಆಸ್ತಿ ಅಧಿಕಾರಿಗಳ ಕಛೇರಿ, ಗಾಂಧಿ ಕೃಷಿ ವಿಜ್ಞಾನ ಕೇಂದ್ರ, ಬೆಂಗಳೂರು-560065

ಸಂಖ್ಯೆ : ಆಅ/ಟೆ.ಎಸ್/8/2026-27 ದಿನಾಂಕ : 16-06-2026

### ಟೆಂಡರ್ ಪ್ರಕಟಣೆ
(ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯಕ್ಕೆ ... ವಿವರಗಳನ್ನು ವೆಬ್‌ಸೈಟ್ https://www.kppp.karnataka.gov.in ... ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ... www.kppp.karnataka.gov.in ... ದಿನಾಂಕ: 02-07-2026 ರಂದು 10.30ಕ್ಕೆ ... ದಿನಾಂಕ: 04-07-2026 ರಂದು ಸಾಯಂಕಾಲ 4.00 ... ದಿನಾಂಕ: 07-07-2026 ... 10-07-2026 ... 080-23332765 ... support@ eproc helpdesk.com ... 8046010000 ಮತ್ತು 8068948777.

ಸಹಿ/-
ಆಸ್ತಿ ಅಧಿಕಾರಿಗಳು

DIPR/CP/1254/HK/2026-27

---

ಕರ್ನಾಟಕ ಸರ್ಕಾರ GOVERNMENT OF KARNATAKA
## ಬಳ್ಳಾರಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನ ಕೇಂದ್ರ ಬಳ್ಳಾರಿ.

Reg.No:205/1995-96-Recognized by Medical Council of India, New Delhi vide No:MCI-57(3)/79-Med/1912, Dtd.16-04-1979 & Endst. No.MCI-37(1)(Recog.-18)(UG)/2017-Med./109629,Dt: 06/05/2019
DIRECTOR: 8147796529 PRINCIPAL :8147796527
CAO:8147796526PA : 8147796539.
e-mail-ids:directorbmcrballari@gmail.com, website : https://bmcrcballari.karnataka.gov.in principalbmcrcballari@gmail.com

No. BMCRC/SUP/TEND/INJ/12/2026-27/Call-2/99 DATE: 16.06.2026

### ಮರು ಇ-ಟೆಂಡರ್ ಅಧಿಸೂಚನೆ

ಬಿಎಂಸಿಆರ್‌ಸಿ ಸಂಸ್ಥೆಯ ... Injection ... https:// kppp.karnataka.gov.in ... ದಿನಾಂಕ: 30.06.2026 ... 5,000 ... 135.27 ... www.bmcrcballari.karnataka.gov.in ...

ಸಹಿ/- ನಿರ್ದೇಶಕರು, ಬಿಎಂಸಿ ಆರ್ ಸಿ, ಬಳ್ಳಾರಿ.

ವಾ.ಸಾ.ಸಂ:ಬ/ಬಳ್ಳಾರಿ/2026-27/ಟಿಎಸ್‌ಐ/ಆರ್.ಓ.ಸಂ/260

---

## ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ
### ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ)

ಪತ್ರ ಸಂಖ್ಯೆ ನಂ. ಎಚ್‌ಡಿಎಂಸಿ/61/12/2026-27 ದಿನಾಂಕ: 19-06-2026

**ಅಲ್ಪಾವಧಿ/ಇ-ಟೆಂಡರ ಸೂಚನೆ** ಉಲ್ಲೇಖ : ಜಾಹಿರಾತು ನಂ:- 106 ದಿನಾಂಕ:- 30-04-2026

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ 2025-26 ಹಾಗೂ 2026-27ನೇ ... 1999-2000ರ ... 2000 ... PWD ...

ಪರಿಶಿಷ್ಟ ಜಾತಿ (SC) ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ - 1) ಇಂಡೆಂಟ್ ನಂ- 59213 ರೂ.3.10ಲಕ್ಷ, 2) ಇಂಡೆಂಟ್ ನಂ- 59055 ರೂ.8.70ಲಕ್ಷ, 3) ಇಂಡೆಂಟ್ ನಂ- 59215 ರೂ.36.20ಲಕ್ಷ, 4) ಇಂಡೆಂಟ್ ನಂ- 59692 ರೂ.21.50ಲಕ್ಷ, 5) ಇಂಡೆಂಟ್ ನಂ- 59784 ರೂ.8.69ಲಕ್ಷ. ಪರಿಶಿಷ್ಟ ಪಂಗಡದ (ST) ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ - 6) ಇಂಡೆಂಟ್ ನಂ- 58898 ರೂ.9.98ಲಕ್ಷ, 7) ಇಂಡೆಂಟ್ ನಂ- 59961 ರೂ.15.00ಲಕ್ಷ, (CAT-1) ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ - 8) ಇಂಡೆಂಟ್ ನಂ- 59617 ರೂ.49.60ಲಕ್ಷ, (CAT-2A) ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ - 9) ಇಂಡೆಂಟ್ ನಂ- 59082 ರೂ.21.50ಲಕ್ಷ, 10) ಇಂಡೆಂಟ್ ನಂ- 60072 ರೂ.34.95ಲಕ್ಷ, 11) ಇಂಡೆಂಟ್ ನಂ- 60075 ರೂ.8.40ಲಕ್ಷ, 12) ಇಂಡೆಂಟ್ ನಂ- 59588 ರೂ.5.50ಲಕ್ಷ, 13) ಇಂಡೆಂಟ್ ನಂ- 59783 ರೂ.21.44ಲಕ್ಷ, ಸಾಮಾನ್ಯ ವರ್ಗದ ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ - 14) ಇಂಡೆಂಟ್ ನಂ- 59719 ರೂ.10.00ಲಕ್ಷ, 15) ಇಂಡೆಂಟ್ ನಂ- 59648 ರೂ.45.20ಲಕ್ಷ, 16) ಇಂಡೆಂಟ್ ನಂ- 59812 ರೂ.21.50ಲಕ್ಷ, 17) ಇಂಡೆಂಟ್ ನಂ- 58942 ರೂ.3.40ಲಕ್ಷ, 18) ಇಂಡೆಂಟ್ ನಂ- 59053 ರೂ.12.48ಲಕ್ಷ, 19) ಇಂಡೆಂಟ್ ನಂ- 59216 ರೂ.2.25ಲಕ್ಷ, 20) ಇಂಡೆಂಟ್ ನಂ- 59219 ರೂ.15.52ಲಕ್ಷ, 21) ಇಂಡೆಂಟ್ ನಂ- 59137 ರೂ.49.95ಲಕ್ಷ, 22) ಇಂಡೆಂಟ್ ನಂ- 58903 ರೂ.23.00ಲಕ್ಷ, 23) ಇಂಡೆಂಟ್ ನಂ- 59926 ರೂ.9.45ಲಕ್ಷ, 24) ಇಂಡೆಂಟ್ ನಂ- 59931 ರೂ.21.50ಲಕ್ಷ, 25) ಇಂಡೆಂಟ್ ನಂ- 60074 ರೂ.3.15ಲಕ್ಷ, 26) ಇಂಡೆಂಟ್ ನಂ- 60076 ರೂ.28.50ಲಕ್ಷ, 27) ಇಂಡೆಂಟ್ ನಂ- 59782 ರೂ.0.00ಲಕ್ಷ, 28) ಇಂಡೆಂಟ್ ನಂ- 60077 ರೂ.50.00ಲಕ್ಷ, 29) ಇಂಡೆಂಟ್ ನಂ- 59898 ರೂ.20.00ಲಕ್ಷ, ಮರು ಕರೆ ಕಾಮಗಾರಿ - ಪರಿಶಿಷ್ಟ ಜಾತಿ (SC) ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ - 30) ಇಂಡೆಂಟ್ ನಂ- 58954 ರೂ.10.90ಲಕ್ಷ (2ನೇ ಕರೆ), ಪರಿಶಿಷ್ಟ ಪಂಗಡದ (ST) ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ - 31) ಇಂಡೆಂಟ್ ನಂ- 58863 ರೂ.29.00ಲಕ್ಷ (2ನೇ ಕರೆ), 32) ಇಂಡೆಂಟ್ ನಂ- 57015 ರೂ.32.00ಲಕ್ಷ (2ನೇ ಕರೆ) 33) ಇಂಡೆಂಟ್ ನಂ- 57852 ರೂ.18.90ಲಕ್ಷ (2ನೇ ಕರೆ), ಸಾಮಾನ್ಯ ವರ್ಗದ ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ - 34) ಇಂಡೆಂಟ್ ನಂ- 57005 ರೂ.19.04ಲಕ್ಷ (2ನೇ ಕರೆ), 35) ಇಂಡೆಂಟ್ ನಂ- 57543 ರೂ.10.00ಲಕ್ಷ (2ನೇ ಕರೆ), 36) ಇಂಡೆಂಟ್ ನಂ- 57771 ರೂ.35.00ಲಕ್ಷ (2ನೇ ಕರೆ), 37) ಇಂಡೆಂಟ್ ನಂ- 57006 ರೂ.9.22ಲಕ್ಷ (3ನೇ ಕರೆ), 38) ಇಂಡೆಂಟ್ ನಂ- 52389 ರೂ.6.00ಲಕ್ಷ (4ನೇ ಕರೆ), 39) ಇಂಡೆಂಟ್ ನಂ- 57117 ರೂ.5.00ಲಕ್ಷ (3ನೇ ಕರೆ), 40) ಇಂಡೆಂಟ್ ನಂ- 57150 ರೂ.7.00ಲಕ್ಷ (3ನೇ ಕರೆ), 41) ಇಂಡೆಂಟ್ ನಂ- 57147 ರೂ.15.00ಲಕ್ಷ (3ನೇ ಕರೆ), 42) ಇಂಡೆಂಟ್ ನಂ- 55682 ರೂ.35.64ಲಕ್ಷ (3ನೇ ಕರೆ), 43) ಇಂಡೆಂಟ್ ನಂ- 57151 ರೂ.3.93ಲಕ್ಷ (3ನೇ ಕರೆ), 44) ಇಂಡೆಂಟ್ ನಂ- 53224 ರೂ.10.00ಲಕ್ಷ (6ನೇ ಕರೆ), 45) ಇಂಡೆಂಟ್ ನಂ- 41491 ರೂ.5.40ಲಕ್ಷ (8ನೇ ಕರೆ), 46) ಇಂಡೆಂಟ್ ನಂ- 44538 ರೂ.6.45ಲಕ್ಷ (10ನೇ ಕರೆ).

... kppp.karnataka.gov.in ... 23.06.2026 ... ಕ್ರ. ನಂ 30 ರಿಂದ 31ರ ಟೆಂಡರ ಸಲ್ಲಿಸಲು ಕೊನೆಯ ದಿನಾಂಕ: 02.07.2026 ರಂದು ಸಾಯಂಕಾಲ 4.00 ಘಂಟೆಯವರೆಗೆ. ಕ್ರ. ನಂ 30 ರಿಂದ 31ರ ಟೆಂಡರ ತೆರೆಯುವ ದಿನಾಂಕ: 03.07.2026 ಸಾಯಂಕಾಲ 4.30 ಘಂಟೆಯ ನಂತರ ತೆರೆಯಲಾಗುವುದು. ಕ್ರ. ನಂ 01 ರಿಂದ 29 ಹಾಗೂ 32 ರಿಂದ 46ರ ಟೆಂಡರ ಸಲ್ಲಿಸಲು ಕೊನೆಯ ದಿನಾಂಕ: 08.07.2026 ರಂದು ಸಾಯಂಕಾಲ 4.00 ಘಂಟೆಯವರೆಗೆ. ಕ್ರ. ನಂ 01 ರಿಂದ 29 ಹಾಗೂ 32 ರಿಂದ 46ರ ಟೆಂಡರ ತೆರೆಯುವ ದಿನಾಂಕ: 09.07.2026 ಸಾಯಂಕಾಲ 4.30 ಘಂಟೆಯ ನಂತರ ತೆರೆಯಲಾಗುವುದು.

ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ),
ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ, ಹುಬ್ಬಳ್ಳಿ.

ವಾಸಾಸಂ/ಬಿ/ಧಾ/ಎಸಿಎ/332/2026-27

ಯೋಗದಿನದಲ್ಲಿ ಭಾಗಿ | ಯೋಜನೆಗೆ ಚಾಲನೆ

## ಇಂದು ಪ.ಬಂಗಾಳಕ್ಕೆ ಪ್ರಧಾನಿ ಮೋದಿ ಭೇಟಿ

• **ಕೋಲ್ಕತ್ತಾ:** ಪ್ರಧಾನಿ ನರೇಂದ್ರ ಮೋದಿಯವರು ಎರಡು ದಿನಗಳ ಪಶ್ಚಿಮ ಬಂಗಾಳ ಪ್ರವಾಸದಲ್ಲಿದ್ದು, ಶನಿವಾರ ಕೃಷಿ ಕಲ್ಯಾಣ ಹಾಗೂ ರಕ್ಷಣಾ ಯೋಜನೆಗಳ ಸಹಿತ ಹಲವು ಅಭಿವೃದ್ಧಿ ಯೋಜನೆಗಳ ಲೋಕಾರ್ಪಣೆ ಮಾಡಲಿದ್ದಾರೆ. ಭಾನುವಾರ ಸಾರ್ವಜನಿಕರ ಜತೆ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ.

ವಿಧಾನಸಭಾ ಚುನಾವಣೆಯ ಬಳಿಕ ಪಶ್ಚಿಮ ಬಂಗಾಳಕ್ಕೆ ಮೋದಿಯವರ ಮೊದಲ ಭೇಟಿ ಇದಾಗಿದೆ.

ಅಭಿವೃದ್ಧಿ, ಕೃಷಿ, ರಾಷ್ಟ್ರೀಯ ಭದ್ರತೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಒಳಗೊಂಡಿರುವ ವ್ಯಾಪಕ ಯೋಜನೆಗಳಿಗಾಗಿ ಪಶ್ಚಿಮ ಬಂಗಾಳವನ್ನು ಆಯ್ಕೆ ಮಾಡುವ ಮೂಲಕ, ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ರಾಜ್ಯದ ಮೇಲಿನ ತನ್ನ ಬದ್ಧತೆಯನ್ನು ಒತ್ತಿಹೇಳಲು ಹಾಗೂ ರೈತರು, ಯುವಜನತೆ ಮತ್ತು ಮಧ್ಯಮ ವರ್ಗ ಸೇರಿದಂತೆ ಪ್ರಮುಖ ಮತದಾರ ವರ್ಗಗಳೊಂದಿಗೆ ತನ್ನ ಸಂಪರ್ಕ ಬಲಪಡಿಸಲು ಪ್ರಯತ್ನಿಸುತ್ತಿದೆ ಎಂದು ರಾಜ್ಯ ಬಿಜೆಪಿ ನಾಯಕ ಹೇಳಿದ್ದಾರೆ.

**ಮೀನುಗಾರಿಕಾ ಬಂದರು ಉದ್ಘಾಟನೆ:** ಮೀನುಗಾರರು ಮತ್ತು ವ್ಯಾಪಾರಿಗಳಿಗೆ ಸುಧಾರಿತ ಮಾರುಕಟ್ಟೆ ಸೌಲಭ್ಯಕ್ಕಾಗಿ ಮೀನುಗಾರಿಕಾ ಮೂಲಸೌಕರ್ಯವನ್ನು ಕೇಂದ್ರ ಸರ್ಕಾರ ಉತ್ತೇಜಿಸಲಿದೆ. ಸೌತ್ 24 ಪರಗಣಾಸ್‌ನಲ್ಲಿ ಮೀನುಗಾರಿಕೆ ವಿಸ್ತರಿಸಲಾಗುವುದು. ಬರ್ಧಮಾನ್ ಸ್ಟೇಷನ್‌ನಲ್ಲಿ ನೂತನ ಮೀನು ಮಾರುಕಟ್ಟೆ ನಿರ್ಮಿಸಲಾಗಿದೆ.

**ಈ ಬಾರಿ ಕೋಲ್ಕತ್ತಾದಲ್ಲಿ ಯೋಗ:** ಪ್ರತಿ ವರ್ಷವೂ ಮೋದಿ ವಿಭಿನ್ನ ನಗರಗಳಲ್ಲಿ ಅಂತಾರಾಷ್ಟ್ರೀಯ ಯೋಗ ದಿನವನ್ನು ಸಾರ್ವಜನಿಕರ ಜತೆ ಆಚರಿಸುತ್ತಾರೆ. ಈ ಬಾರಿ ಕೋಲ್ಕತ್ತಾದಲ್ಲಿ ಪ್ರಧಾನಿ ನೇತೃತ್ವದಲ್ಲಿ ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ ಎಂಬ ಥೀಮ್‌ನಲ್ಲಿ 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಆಯೋಜಿಸಲಾಗುವುದು. ಇದೇ ಮೊದಲ ಬಾರಿಗೆ ರಾಜ್ಯದಲ್ಲಿ ಮೋದಿ ನೇತೃತ್ವದ ಪ್ರಮುಖ ಯೋಗ ದಿನಾಚರಣೆ ಕಾರ್ಯಕ್ರಮ ನಡೆಯಲಿದೆ.

**3 ಯುದ್ಧನೌಕೆಗಳ ನಿಯೋಜನೆ ನಾಳೆ:** ಭಾನುವಾರ ಪ್ರಧಾನಿ ಮೋದಿ ಮೂರು ಯುದ್ಧನೌಕೆಗಳನ್ನು ನೌಕಾಸೇನೆಯಲ್ಲಿ ನಿಯೋಜಿಸಲಿದ್ದಾರೆ. ಇವುಗಳು ಸಾಗರೋತ್ತರ ಯುದ್ಧ, ಹೈಡ್ರೋಗ್ರಾಫಿಕ್ ಸರ್ವೆ ಹಾಗೂ ಜಲಾಂತರ್ಗಾಮಿ ವಿರೋಧಿ ಸಾಮರ್ಥ್ಯ ಹೊಂದಿವೆ.

## ಫುಟ್‌ಪಾತ್‌ನಲ್ಲಿ ನಡೆ ಮೂಲಭೂತ ಹಕ್ಕು

• **ಹೊಸದಿಲ್ಲಿ:** ಸುರಕ್ಷಿತವಾಗಿ ಹಾಗೂ ನಿರಾತಂಕವಾಗಿ ಫುಟ್‌ಪಾತ್‌ನಲ್ಲಿ ನಡೆಯುವುದು ಪ್ರತಿಯೊಬ್ಬ ನಾಗರಿಕನ ಮೂಲಭೂತ ಹಕ್ಕು ಎಂದು ಸುಪ್ರೀಂ ಕೋರ್ಟ್ ಮಹತ್ವದ ತೀರ್ಪು ನೀಡಿದೆ. ವಾಹನಗಳ ಸಂಚಾರದ ಸೌಲಭ್ಯಕ್ಕಿಂತ ಪಾದಚಾರಿಗಳು ಫುಟ್‌ಪಾತ್‌ನಲ್ಲಿ ನಡೆಯುವ ಹಕ್ಕಿಗೇ ಮೊದಲ ಆದ್ಯತೆ ನೀಡಬೇಕು ಎಂದು ನ್ಯಾಯಾಲಯ ಸ್ಪಷ್ಟಪಡಿಸಿದೆ.

ನ್ಯಾಯಮೂರ್ತಿಗಳಾದ ಪಿ.ಎಸ್. ನರಸಿಂಹ ಮತ್ತು ಅತುಲ್ ಎಸ್. ಚಾಂದುರ್ಕರ್ ಅವರ ನ್ಯಾಯಪೀಠ ಈ ತೀರ್ಪು ನೀಡಿದ್ದು, ನಡೆಯುವ ಹಕ್ಕು ಸಂವಿಧಾನದ 19(1)(ಡಿ) ವಿಧಿಯಲ್ಲಿ ಖಾತರಿಪಡಿಸಿರುವ ಮುಕ್ತ ಸಂಚಾರದ ಹಕ್ಕಿನ ಅವಿಭಾಜ್ಯ ಅಂಗವಾಗಿದೆ. ಜತೆಗೆ ಸಂವಿಧಾನದ 19 ಮತ್ತು 21ನೇ ವಿಧಿಗಳ ಅಡಿಯಲ್ಲಿ ಇದು ರಕ್ಷಣೆ ಪಡೆದಿದೆ ಎಂದು ಹೇಳಿದೆ.

ರಸ್ತೆಯೊಂದು ಅಸ್ತಿತ್ವದಲ್ಲಿದ್ದರೆ, ಅದರ ಪಕ್ಕದಲ್ಲಿ ಪಾದಚಾರಿಗಳಿಗಾಗಿ ಪ್ರತ್ಯೇಕವಾಗಿ ಗುರುತಿಸಲಾದ ಮತ್ತು ಸುಸ್ಥಿತಿಯಲ್ಲಿ ನಿರ್ವಹಿಸಲಾದ ಫುಟ್‌ಪಾತ್ ಇರಲೇಬೇಕು. ಇದನ್ನು ಒದಗಿಸುವುದು ಆಡಳಿತ ವ್ಯವಸ್ಥೆಯ ಜಾರಿಗೊಳಿಸಬಹುದಾದ ಕರ್ತವ್ಯವಾಗಿದೆ. ಫುಟ್‌ಪಾತ್‌ನಲ್ಲಿ ನಡೆಯುವ ನಾಗರಿಕನ ಮೂಲಭೂತ ಹಕ್ಕು, ಯಾಂತ್ರಿಕ ವಾಹನಗಳ ಸಂಚಾರದ ಸೌಲಭ್ಯಕ್ಕಿಂತ ಮಿಗಿಲಾದುದು ಎಂದು ನ್ಯಾಯಪೀಠ ಹೇಳಿದೆ.

**ಚಕ್ರಗಳು ಮನುಷ್ಯನಿಗಿಂತ್ಲೇ ಬದಿಗೆ ತಳ್ಳಿವೆ:** ನಗರಗಳು ಮತ್ತು ಪಟ್ಟಣಗಳ ಯೋಜನೆಯಲ್ಲಿ ದೀರ್ಘಕಾಲದಿಂದ ವಾಹನಗಳಿಗೆ ಹೆಚ್ಚಿನ ಮಹತ್ವ ನೀಡಲಾಗಿದ್ದು, ಪಾದಚಾರಿಗಳನ್ನು ಕಡೆಗಣಿಸಲಾಗಿದೆ ಎಂದು ನ್ಯಾಯಾಲಯ ಅಸಮಾಧಾನ ವ್ಯಕ್ತಪಡಿಸಿದೆ.

ಚಕ್ರಗಳ ಮೇಲಿನ ಸಂಚಾರವೇ ನಮ್ಮ ಕಲ್ಪನೆಯನ್ನು ಆವರಿಸಿಕೊಂಡ ಪರಿಣಾಮವಾಗಿ, ನಗರಾಡಳಿತಗಳು ವಾಹನಗಳಿಗೆ ಅನುಕೂಲಕರವಾದ ರಸ್ತೆಗಳ ನಿರ್ಮಾಣದಲ್ಲೇ ತೊಡಗಿಕೊಂಡಿವೆ. ಫುಟ್‌ಪಾತ್‌ಗಳು ವಾಹನಗಳ ಅತಿಕ್ರಮಣಕ್ಕೆ ಒಳಗಾಗಿದ್ದು, ಪಾದಚಾರಿಗಳನ್ನೇ ವಾಹನ ಚಾಲಕರಿಗೆ ತೊಂದರೆ ಉಂಟುಮಾಡುವವರಂತೆ ಕಾಣಲಾಗುತ್ತಿದೆ. ಈ ಮನೋಭಾವ ಇನ್ನು ಮುಂದೆ ನಿಲ್ಲಬೇಕು ಎಂದು ನ್ಯಾಯಪೀಠ ಖಡಕ್ ಸಂದೇಶ ನೀಡಿದೆ.

**ಯಾರ ಹೊಣೆ?:** ಫುಟ್‌ಪಾತ್‌ಗಳನ್ನು ಗುರುತಿಸುವುದು, ನಿರ್ಮಿಸುವುದು, ನಿರ್ವಹಿಸುವುದು ಮತ್ತು ಅತಿಕ್ರಮಣದಿಂದ ರಕ್ಷಿಸುವ ಹೊಣೆ ನಗರಾಭಿವೃದ್ಧಿ ಪ್ರಾಧಿಕಾರಗಳು, ಮಹಾನಗರ ಪಾಲಿಕೆಗಳು, ನಗರಸಭೆಗಳು, ಪುರಸಭೆಗಳು ಹಾಗೂ ಗ್ರಾಮ ಪಂಚಾಯತಿಗಳ ಮೇಲಿದೆ ಎಂದು ನ್ಯಾಯಾಲಯ ಹೇಳಿದೆ.

# ನೀಟ್ ಮರುಪರೀಕ್ಷೆ, ಸಂಪೂರ್ಣ ಸುರಕ್ಷತೆ

ನಾಳೆ ನೀಟ್(ಯುಜಿ) ಮರುಪರೀಕ್ಷೆ

**22.79** ಲಕ್ಷ ವಿದ್ಯಾರ್ಥಿಗಳ ನೋಂದಣಿ

» ಎನ್‌ಟಿಎ, ಕೇಂದ್ರ ಸರ್ಕಾರದಿಂದ ಹಲವು ಮುನ್ನೆಚ್ಚರಿಕಾ ಕ್ರಮ

» 551 ದೇಶೀಯ, 14 ವಿದೇಶಿ ನಗರಗಳಲ್ಲಿ ಮರುಪರೀಕ್ಷೆ



**22.79** ಲಕ್ಷ-ನೀಟ್ ಪರೀಕ್ಷಾರ್ಥಿಗಳು

**14** ವಿದೇಶಿ ಪರೀಕ್ಷಾ ನಗರಗಳು

**551** ಭಾರತದ ಪರೀಕ್ಷಾ ನಗರಗಳು

### ಜೂ.22ರವರೆಗೆ ಟೆಲಿಗ್ರಾಮ್ ನಿಷೇಧ

ಪ್ರಶ್ನೆಪತ್ರಿಕೆ ಸೋರಿಕೆಯಿಲ್ಲದೆ ಜೂ.21ರಂದು ನೀಟ್ ಮರುಪರೀಕ್ಷೆಯನ್ನು ನಡೆಸಬೇಕೆಂಬ ಉದ್ದೇಶದಿಂದ ಕೇಂದ್ರ ಸರ್ಕಾರ ಜೂ.22ರವರೆಗೆ ಟೆಲಿಗ್ರಾಮ್ ಮೆಸೆಂಜರ್ ಆ್ಯಪ್ ಮೇಲೆ ತಾತ್ಕಾಲಿಕ ನಿಷೇಧವನ್ನು ಹೇರಿದೆ. ಎನ್‌ಟಿಎ ಪ್ರಕಾರ, ಟೆಲಿಗ್ರಾಮ್ ಅನ್ನು ದುರುಪಯೋಗ ಮಾಡಿಕೊಂಡು ಅಪರಾಧಿಗಳು ನಕಲಿ ಪ್ರಶ್ನೆಪತ್ರಿಕೆ ಮೂಲಕ ಅಭ್ಯರ್ಥಿಗಳ ದಾರಿ ತಪ್ಪಿಸುವ ಹಲವು ಚಾನೆಲ್‌ಗಳಿದ್ದವು. 200ಕ್ಕೂ ಅಧಿಕ ಚಾನೆಲ್‌ಗಳನ್ನು ಕೇಂದ್ರ ಸರ್ಕಾರ ಆ್ಯಪ್‌ನಿಂದ ತೆರವುಗೊಳಿಸಿದೆ. ಪೇಪರ್ ಲೀಕ್ಸ್ ನೀಟ್, ಒ-ನೀಟ್ 2026 ಮತ್ತು ಪ್ರೈವೇಟ್ ಮಾಫಿಯಾ ಹೆಸರಿನ ಚಾನೆಲ್‌ಗಳು, ಬಾಟ್ ಪ್ರೊಫೈಲ್‌ಗಳು ನಕಲಿ ಪ್ರಶ್ನೆಪತ್ರಿಕೆ ಮಾರಾಟ ಮಾಡುತ್ತಿದ್ದವು ಎಂದು ತಿಳಿದುಬಂದಿದೆ.

ನೀಟ್(ಯುಜಿ) 2026 ಮರುಪರೀಕ್ಷೆಯನ್ನು 2026ರ ಜೂ.21ರಂದು ನಿಗದಿಯಂತೆ ನಡೆಸಲಾಗುತ್ತದೆ. ಇಲ್ಲಿಯವರೆಗೆ ತೆಗೆದುಕೊಳ್ಳಲಾದ ಕ್ರಮಗಳಿಂದ ಪರೀಕ್ಷಾ ಭದ್ರತೆಗೆ ಯಾವುದೇ ಧಕ್ಕೆಯಾಗಿಲ್ಲ, 22.79 ಲಕ್ಷ ಪರೀಕ್ಷಾರ್ಥಿಗಳು ನೀಟ್ ಮರುಪರೀಕ್ಷೆ ಬರೆಯಲಿದ್ದಾರೆ. ನ್ಯಾಯಸಮ್ಮತ, ಸುರಕ್ಷಿತ ಮತ್ತು ವಿಶ್ವಾಸಾರ್ಹ ಪರೀಕ್ಷೆ ನಡೆಸುವ ತನ್ನ ಬದ್ಧತೆಯನ್ನು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ(ಎನ್‌ಟಿಎ) ಪುನರುಚ್ಚರಿಸುತ್ತದೆ. ಈ ಬಾರಿ ಯಾವುದೇ ಸೋರಿಕೆ ಅಥವಾ ತಪ್ಪುಗಳು ಆಗದಂತೆ ನೋಡಿಕೊಳ್ಳಲು ಎನ್‌ಟಿಎ ಮತ್ತು ಕೇಂದ್ರ ಸರ್ಕಾರ ಹಲವು ಸುರಕ್ಷತಾ ಕ್ರಮಗಳನ್ನು ತೆಗೆದುಕೊಂಡಿವೆ. ಟೆಲಿಗ್ರಾಮ್ ಮೇಲೆ ತಾತ್ಕಾಲಿಕ ನಿಷೇಧ, ಐಎಎಫ್ ಹೆಲಿಕಾಪ್ಟರ್‌ಗಳ ಮೂಲಕ ಪ್ರಶ್ನೆಪತ್ರಿಕೆಗಳ ಸಾಗಣೆ, ಪೇಪರ್ ಸೆಟ್ಟರ್ಸ್ ಲಾಕ್‌ಡೌನ್, ಕೇಂದ್ರ ಸಶಸ್ತ್ರ ಪೊಲೀಸ್ ಪಡೆ ಸಿಬ್ಬಂದಿ ನಿಯೋಜನೆ ಇತ್ಯಾದಿ ಕ್ರಮಗಳನ್ನು ತೆಗೆದುಕೊಂಡಿದ್ದು, ಪರೀಕ್ಷಾ ಕೇಂದ್ರಗಳಲ್ಲಿ ಭದ್ರತಾ ಸಿಬ್ಬಂದಿ ಕಣ್ಗಾವಲು ನಡೆಸುತ್ತಾರೆ. ಕೇಂದ್ರ ಸರ್ಕಾರ ಮತ್ತು ಎನ್‌ಟಿಎ ತೆಗೆದುಕೊಂಡ ಸುರಕ್ಷತಾ ಕ್ರಮಗಳು ಹಾಗೂ ಪರೀಕ್ಷಾರ್ಥಿಗಳಿಗೆ ನೀಡಿದ ಮಾರ್ಗಸೂಚಿಗಳೇನು? ಇಲ್ಲಿದೆ ಸಂಕ್ಷಿಪ್ತ ಮಾಹಿತಿ.

### ಪ್ರಶ್ನೆಪತ್ರಿಕೆ ಸಾಗಣೆಗೆ ಸಿ-17 ಗ್ಲೋಬ್‌ಮಾಸ್ಟರ್!

ರಹಸ್ಯ ಪ್ರಶ್ನೆಪತ್ರಿಕೆಗಳನ್ನು ಭಾರತೀಯ ವಾಯುಪಡೆಯ ಸಿ-17 ಗ್ಲೋಬ್‌ಮಾಸ್ಟರ್ ಸರಕು ವಿಮಾನಗಳ ಮೂಲಕ ದೇಶದ ಸುಮಾರು 18ರಿಂದ 20 ಪ್ರಾದೇಶಿಕ ಕೇಂದ್ರಗಳಿಗೆ ಸಾಗಿಸಲು ವ್ಯವಸ್ಥೆ ಮಾಡಲಾಗಿದೆ. ರಸ್ತೆ ಸಂಪರ್ಕ ಕಡಿಮೆ ಇರುವ ಹಾಗೂ ದುರ್ಗಮ ಪ್ರದೇಶಗಳಿಗೆ ಎಂಐ-17 ಹೆಲಿಕಾಪ್ಟರ್‌ಗಳನ್ನು ಬಳಸಲಾಗುತ್ತಿದೆ. 674 ನಗರ ಸಂಯೋಜಕರು ಹಾಗೂ 6,669 ಸ್ವತಂತ್ರ ವೀಕ್ಷಕರು ಪರೀಕ್ಷಾ ಪ್ರಕ್ರಿಯೆಯ ಮೇಲ್ವಿಚಾರಣೆ ನಡೆಸಲಿದ್ದಾರೆ ಎಂದು ಎನ್‌ಟಿಎ ತಿಳಿಸಿದೆ. ಕೆಲವೆಡೆಗಳಲ್ಲಿ ಪ್ರಶ್ನೆಪತ್ರಿಕೆಗಳನ್ನು ಐಎಎಫ್ ಹೆಲಿಕಾಪ್ಟರ್‌ಗಳನ್ನು ಬಳಸಿ ಏರ್‌ಲಿಫ್ಟ್ ಮಾಡಲಾಗಿದ್ದು, ಯಾವುದೇ ಸೋರಿಕೆ ಆಗದಿರಲು ಕೇಂದ್ರ ಸರ್ಕಾರ ಈ ಸುರಕ್ಷತಾ ಕ್ರಮ ತೆಗೆದುಕೊಂಡಿದೆ ಎಂದು ವರದಿ ಹೇಳಿದೆ.

### ನೀಟ್ ಪೇಪರ್ ಸೆಟ್ಟರ್‌ಗಳ ಲಾಕ್‌ಡೌನ್

ಯಾವುದೇ ಪ್ರಶ್ನೆಪತ್ರಿಕೆಗಳ ಸೋರಿಕೆಯನ್ನು ತಡೆಗಟ್ಟಲು ನೀಟ್ ಪೇಪರ್ ಸೆಟ್ಟರ್‌ಗಳನ್ನು ಕಟ್ಟುನಿಟ್ಟಾದ ಲಾಕ್‌ಡೌನ್‌ಗೆ ಒಳಪಡಿಸಲಾಗಿದೆ. ಅವರಿಗೆ ಮೊಬೈಲ್ ಫೋನ್ ಅಥವಾ ಇಂಟರ್‌ನೆಟ್ ಸೌಲಭ್ಯವನ್ನು ಒದಗಿಸಿಲ್ಲ.

### ಕೇಂದ್ರ ಸಶಸ್ತ್ರ ಪೊಲೀಸ್ ಪಡೆಗಳ ನಿಯೋಜನೆ

ಪರೀಕ್ಷಾ ಕೇಂದ್ರಗಳ ಸುರಕ್ಷತೆಗಾಗಿ ಕೇಂದ್ರ ಸಶಸ್ತ್ರ ಪೊಲೀಸ್ ಪಡೆಗಳ (ಸಿಎಪಿಎಫ್) ಸಿಬ್ಬಂದಿಯನ್ನು ನಿಯೋಜನೆ ಮಾಡಲಾಗಿದೆ. ಸಿಆರ್‌ಪಿಎಫ್ ಮತ್ತು ಸಿಐಎಸ್‌ಎಫ್ ಎರಡೂ ಸಿಎಪಿಎಫ್ ಪಡೆಗಳಿಗೆ ಪ್ರಶ್ನೆಪತ್ರಿಕೆ ಸಾಗಣೆ ಜವಾಬ್ದಾರಿ ವಹಿಸಲಾಗಿದೆ.


### ವಿಶೇಷ ಸೌಲಭ್ಯಗಳು




ಪರೀಕ್ಷಾರ್ಥಿಗಳ ಆರೋಗ್ಯದ ಹಿತದೃಷ್ಟಿಯಿಂದ ಕುಡಿಯುವ ನೀರು, ಸ್ಯಾನಿಟೇಷನ್, ಮೆಡಿಕಲ್ ವ್ಯವಸ್ಥೆ ಹಾಗೂ ವೇಗವಾಗಿ ವೆರಿಫಿಕೇಷನ್ ನಡೆಸಲು ಹೆಚ್ಚುವರಿ ಸಿಬ್ಬಂದಿಯನ್ನು ನಿಯೋಜನೆ ಮಾಡಲಾಗಿದೆ. ಒಂದು ವೇಳೆ ವಿದ್ಯುತ್ ಸಮಸ್ಯೆ ಎದುರಾದರೆ ಎಂಬ ಕಾರಣಕ್ಕೆ ಪವರ್ ಬ್ಯಾಕ್ ಅಪ್ ಇರಲಿದೆ.

### ಇಂದು ರಾಷ್ಟ್ರವ್ಯಾಪಿ ಮಾಕ್‌ಡ್ರಿಲ್

ದೇಶಾದ್ಯಂತ ನಿಗದಿಯಾಗಿರುವ ನೀಟ್ ಯುಜಿ 2026ರ ಮರುಪರೀಕ್ಷೆಗೂ ಮುನ್ನ ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ಶನಿವಾರ ರಾಷ್ಟ್ರವ್ಯಾಪಿ ಮಾಕ್‌ಡ್ರಿಲ್(ಅಣಕು ಪರೀಕ್ಷೆ) ನಡೆಸಲಿದೆ. ಮರುಪರೀಕ್ಷೆಯ ಸುಗಮ ನಿರ್ವಹಣೆಯನ್ನು ಖಚಿತಪಡಿಸಿಕೊಳ್ಳಲು ಮಾಕ್‌ಡ್ರಿಲ್ ಆಯೋಜಿಸಲಾಗುತ್ತಿದೆ. ಪೂರ್ಣ ಪ್ರಮಾಣದ ಪೂರ್ವಾಭ್ಯಾಸವು ಬೆಳಗ್ಗೆ 9 ಗಂಟೆಯಿಂದ ರಾತ್ರಿ 8 ಗಂಟೆಯವರೆಗೆ ನಡೆಯುತ್ತದೆ. ಪ್ರಶ್ನೆ ಪತ್ರಿಕೆಗಳ ವಿತರಣೆಯಿಂದ ಹಿಡಿದು ಉತ್ತರ ಪತ್ರಿಕೆಗಳ ಸಂಗ್ರಹಣೆ ಮತ್ತು ಸಾಗಣೆಯವರೆಗೆ ಪರೀಕ್ಷಾ ಪ್ರಕ್ರಿಯೆಯ ಪ್ರತಿಯೊಂದು ಹಂತವನ್ನು ಇದರಲ್ಲಿ ನಡೆಸಲಾಗುತ್ತದೆ.






### ಪರೀಕ್ಷಾ ದಿನದ ಮಾರ್ಗಸೂಚಿ

ಪರೀಕ್ಷಾ ದಿನದ ಶಿಷ್ಟಾಚಾರವನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಪರೀಕ್ಷಾರ್ಥಿಗಳಿಗೆ ಎನ್‌ಟಿಎ ಸಲಹೆ ನೀಡಿದೆ. ಪರೀಕ್ಷಾ ಪ್ರವೇಶಾತಿ ಕಾರ್ಡ್, ಗುರುತಿನ ಚೀಟಿ, ಫೋಟೋ ಮತ್ತು ಮಳೆ ಕಾರಣದಿಂದ ಅಗತ್ಯವಿದ್ದರೆ ಪಾರದರ್ಶಕ ಪ್ಲಾಸ್ಟಿಕ್ ಬಳಸಬಹುದು. ಎಲ್ಲಾ ಪರೀಕ್ಷಾರ್ಥಿಗಳು ಪರೀಕ್ಷಾ ಕೇಂದ್ರ ಪ್ರವೇಶಿಸುವ ಮುನ್ನ ಭದ್ರತಾ ಪರಿಶೀಲನೆಗೆ ಒಳಗಾಗಲೇಬೇಕು. ತಿಳಿ ಬಣ್ಣದ ಮತ್ತು ಅರ್ಧ ತೋಳಿನ ಬಟ್ಟೆಗಳನ್ನು ಧರಿಸಬೇಕು. ಹೈ-ಹೀಲ್ ಪಾದರಕ್ಷೆ ಮತ್ತು ಶೂಗಳನ್ನು ಧರಿಸದಿರಲು, ಸ್ಲಿಪ್ಪರ್ಸ್ ಅಥವಾ ಸಾಮಾನ್ಯ ಪಾದರಕ್ಷೆಗಳನ್ನು ಧರಿಸಲು ಹಾಗೂ ಪಾರದರ್ಶಕ ನೀರಿನ ಬಾಟಲಿ ಬಳಸಲು ಶಿಫಾರಸು ಮಾಡಲಾಗಿದೆ. ರಿಪೋರ್ಟಿಂಗ್ ಸಮಯಕ್ಕೂ ಮುಂಚಿತವಾಗಿ ನೀಟ್ ಅಭ್ಯರ್ಥಿಗಳು ಪರೀಕ್ಷಾ ಕೇಂದ್ರವನ್ನು ತಲುಪುವಂತೆ ಸಲಹೆ ನೀಡಲಾಗಿದೆ. ಪರೀಕ್ಷೆಯಲ್ಲಿ ಒಎಂಆರ್ ಶೀಟ್ ತುಂಬಿಸಲು ಪೆನ್ ತರುವಂತೆ ಸೂಚಿಸಲಾಗಿದೆ. ಎಲೆಕ್ಟ್ರಾನಿಕ್ ಗ್ಯಾಜೆಟ್ಸ್, ಮೊಬೈಲ್ ಫೋನ್ಸ್, ಸ್ಮಾರ್ಟ್ ವಾಚ್, ಬ್ಲೂಟೂತ್ ಡಿವೈಸ್, ಇಯರ್‌ಫೋನ್ಸ್ ಮತ್ತು ಸಂವಹನಕ್ಕೆ ಬಳಸುವ ಯಾವುದೇ ಉಪಕರಣಗಳನ್ನು ನಿಷೇಧಿಸಲಾಗಿದೆ. ಲೋಹ, ದೊಡ್ಡ ಬೆಲ್ಟ್ ಬಕಲ್‌ಗಳು, ದೊಡ್ಡ ಬಟನ್‌ಗಳು, ದೊಡ್ಡ ಆಭರಣ ಇತ್ಯಾದಿ ಪರೀಕ್ಷಾ ಕೇಂದ್ರಕ್ಕೆ ತರುವುದನ್ನು ನಿಷೇಧಿಸಲಾಗಿದೆ. ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲಿ ಸಿಸಿಟಿವಿ ಕಣ್ಗಾವಲು. ಪರೀಕ್ಷಾ ಕೇಂದ್ರಗಳ ಎಲ್ಲಾ ಗೇಟ್‌ಗಳಲ್ಲಿ ಸುರಕ್ಷತೆ, ಪರಿಶೀಲನೆ ಹೆಚ್ಚಿಸಲಾಗಿದೆ.

## ಕಿರುಸುದ್ದಿ

### ಜಪಾನ್‌ನಲ್ಲಿ 5 ದಿನಗಳ ಭಗವದ್ಗೀತಾ ಮಹೋತ್ಸವ

• **ಟೋಕಿಯೊ:** ಜಪಾನ್ ರಾಜಧಾನಿ ಟೋಕಿಯೊದಲ್ಲಿ ಶುಕ್ರವಾರದಿಂದ ಐದು ದಿನಗಳ ಅಂತಾರಾಷ್ಟ್ರೀಯ ಗೀತಾ ಮಹೋತ್ಸವ ನಡೆಯಲಿದೆ. ಭಾರತದ ಶಾಶ್ವತ ಸಾಂಸ್ಕೃತಿಕ ಪರಂಪರೆ ಮತ್ತು ಭಗವದ್ಗೀತೆಯ ಸಾರ್ವತ್ರಿಕ ಸಂದೇಶವನ್ನು ಜಾಗತಿಕ ವೇದಿಕೆಯಲ್ಲಿ ಉತ್ತೇಜಿಸುವಲ್ಲಿ ಈ ಕಾರ್ಯಕ್ರಮವು ಮಹತ್ವದ ಮೈಲಿಗಲ್ಲಾಗಿ ಹೊರಹೊಮ್ಮಲಿದೆ. ಜಪಾನ್‌ನಲ್ಲಿ ಅಂತಾರಾಷ್ಟ್ರೀಯ ಗೀತಾ ಮಹೋತ್ಸವ (ಐಜಿಎಂ)-2026 ಅನ್ನು ಶುಕ್ರವಾರದಿಂದ ಜೂ.23 ವರೆಗೆ ನಡೆಸಲಾಗುತ್ತಿದೆ.

### ಇಬ್ಬರು ಶಂಕಿತ ಉಗ್ರ ಸಹಚರರ ಬಂಧನ

• **ಶ್ರೀನಗರ:** ಜಮ್ಮು-ಕಾಶ್ಮೀರ ಪೊಲೀಸರು ಕಿಶ್ತ್ವಾರ್ ಜಿಲ್ಲೆಯಲ್ಲಿ ಇಬ್ಬರು ಶಂಕಿತ ಭಯೋತ್ಪಾದಕ ಸಹಚರರನ್ನು ಪೊಲೀಸರು ಬಂಧಿಸಿದ್ದಾರೆ. ಭಯೋತ್ಪಾದಕರ ಜತೆ ನಂಟು ಹೊಂದಿರುವ ರಾಷ್ಟ್ರವಿರೋಧಿ ಶಕ್ತಿಗಳು ಮತ್ತು ಬೆಂಬಲ ಜಾಲಗಳ ಮೇಲೆ ಪತ್ತೆ ಹಚ್ಚುವ ತನಿಖೆಯ ಭಾಗವಾಗಿ ಈ ಬಂಧನ ನಡೆದಿದೆ. ಈ ಮೂಲಕ ಈ ಪ್ರಕರಣದಲ್ಲಿ ಒಟ್ಟು ಬಂಧಿತರ ಸಂಖ್ಯೆ ನಾಲ್ಕಕ್ಕೆ ತಲುಪಿದೆ. ಕಿಶ್ತ್ವಾರ್ ಪೊಲೀಸ್ ಠಾಣೆಯಲ್ಲಿ ದಾಖಲಾದ ಪ್ರಕರಣಕ್ಕೆ ಸಂಬಂಧಿಸಿದಂತೆ ಈ ಬಂಧನಗಳನ್ನು ಮಾಡಲಾಗಿದೆ. ಕಿಶ್ತ್ವಾರ್‌ನ ಹಿರಿಯ ಪೊಲೀಸ್ ವರಿಷ್ಠಾಧಿಕಾರಿ (ಎಸ್‌ಎಸ್‌ಪಿ) ನರೇಶ್ ಸಿಂಗ್, ವಿವರವಾದ ತನಿಖೆಯ ನಂತರ, ಪೊಲೀಸರು ಅರಣ್ಯ ಇಲಾಖೆಯ ಸರ್ಕಾರಿ ಉದ್ಯೋಗಿ ತಾರಿಕ್ ಅಹ್ಮದ್ ಗಿನೂ ಮತ್ತು ದಾಚನ್‌ನ ಠಾಂಡರ್ ನಿವಾಸಿಗಳಾದ ಮೊಹಮ್ಮದ್ ಇಕ್ಬಾಲ್‌ನನ್ನು ಭಯೋತ್ಪಾದಕ ಚಟುವಟಿಕೆಗಳಲ್ಲಿ ಭಾಗಿಯಾದ ಆರೋಪದ ಮೇಲೆ ಬಂಧಿಸಿದ್ದಾರೆ ಎಂದು ಹೇಳಿದರು.

### ನಿಯಾಮೆ ಸೇನಾ ನೆಲೆಗೆ ದಾಳಿ: 13 ಮಂದಿ ಸಾವು

• **ನಿಯಾಮೆ:** ನೈಜರ್ ರಾಜಧಾನಿ ನಿಯಾಮೆ ನಗರದಲ್ಲಿನ ವಿಮಾನ ನಿಲ್ದಾಣ ಮತ್ತು ಸೇನಾ ನೆಲೆಯ ಮೇಲೆ ಅಲ್ ಖೈದಾ ಉಗ್ರ ಸಂಘಟನೆಯ ಪಶ್ಚಿಮ ಆಫ್ರಿಕಾ ಘಟಕ ನಡೆಸಿದ ಬಾಂಬ್ ದಾಳಿಯಲ್ಲಿ 11 ಭದ್ರತಾ ಸಿಬ್ಬಂದಿ ಹಾಗೂ ಇಬ್ಬರು ನಾಗರಿಕರು ಮೃತಪಟ್ಟಿದ್ದಾರೆ. ಈ ದಾಳಿಯ ಹೊಣೆಯನ್ನು ಅಲ್-ಖೈದಾ ಉಗ್ರ ಸಂಘಟನೆಯ ಪಶ್ಚಿಮ ಆಫ್ರಿಕಾ ಘಟಕವಾದ ಇಸ್ಲಾಮಿಕ್ ಸ್ಟೇಟ್ ಸಹೇಲ್ ಪ್ರಾವಿನ್ಸ್ ವಹಿಸಿಕೊಂಡಿದೆ. ಭದ್ರತಾ ಪಡೆಗಳು ದಾಳಿಕೋರರನ್ನು ಯಶಸ್ವಿಯಾಗಿ ಹಿಮ್ಮೆಟ್ಟಿಸಿದ್ದು, ಹಲವರನ್ನು ಬಂಧಿಸಿ, ಶಸ್ತ್ರಾಸ್ತ್ರಗಳನ್ನು ವಶಪಡಿಸಿವೆ. ಈ ಘಟನೆ ಆಫ್ರಿಕಾದಲ್ಲಿ ಮುಂದುವರಿದ ಭದ್ರತಾ ಬಿಕ್ಕಟ್ಟು ಹಾಗೂ ವಿವಿಧ ಜಿಹಾದಿ ಉಗ್ರ ಸಂಘಟನೆಗಳ ನಡುವಿನ ಸ್ಪರ್ಧೆಯನ್ನು ಸ್ಪಷ್ಟಗೊಳಿಸಿದೆ.

## ಸಮರತಂತ್ರ ಸಾಧನಗಳ ಅರ್ಹತೆಯಲ್ಲಿ ರಾಜಿಯಿಲ್ಲ

• **ಹೊಸದಿಲ್ಲಿ:** 2014ರಲ್ಲಿ ಬರೀ 46ಸಾವಿರ ಕೋಟಿ ರೂಗಳಿಗೆ ಸೀಮಿತವಾಗಿದ್ದ ಭಾರತದ ರಕ್ಷಣಾ ಉತ್ಪಾದನೆ 2025-26ರಲ್ಲಿ 1,78,000 ಕೋಟಿ ರೂ.ಮೀರಿದೆ ಎಂದು ಹೆಮ್ಮೆ ವ್ಯಕ್ತಪಡಿಸಿರುವ ರಕ್ಷಣಾ ಸಚಿವ ರಾಜನಾಥ ಸಿಂಗ್, ಸಾಂಪ್ರದಾಯಿಕ ಸಮರತಂತ್ರಗಳು 1947ರಲ್ಲಿ ಹೊಂದಿದ್ದ ವಿಶ್ವಾಸಾರ್ಹತೆ ಮತ್ತು ಪ್ರಸ್ತುತತೆಯನ್ನು ಇಂದಿಗೂ ಉಳಿಸಿಕೊಂಡಿವೆ ಎಂದು ಹೇಳಿದ್ದಾರೆ. ತನ್ನ ಅವಶ್ಯಕತೆಗಳನ್ನು ಸ್ವಂತ ಸಾಮರ್ಥ್ಯದಿಂದ ಈಡೇರಿಸಿಕೊಳ್ಳಬಲ್ಲ ರಾಷ್ಟ್ರವು ಖಂಡಿತವಾಗಿ ಆತ್ಮವಿಶ್ವಾಸದಿಂದ ಮುಂದೆ ಸಾಗಬಲ್ಲುದು ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಮಹಾರಾಷ್ಟ್ರದ ನಾಗ್ಪುರದ ಅಂಬಾಝರಿಯಲ್ಲಿ, ಯಂತ್ರ ಇಂಡಿಯಾ ಲಿಮಿಟೆಡ್ ಶಸ್ತ್ರಾಸ್ತ್ರ ಕಾರ್ಖಾನೆಯಲ್ಲಿ, 10ಸಾವಿರ ಟನ್ ಸಾಮರ್ಥ್ಯದ ಅಲ್ಯೂಮಿನಿಯಂ ಬಿಡಿಭಾಗಗಳಿಗೆ ಸಂಬಂಧಪಟ್ಟ ಅತ್ಯಾಧುನಿಕ ಘಟಕಕ್ಕೆ ಭೂಮಿಪೂಜೆ ನೆರವೇರಿಸಿ ಸಚಿವರು ಮಾತನಾಡಿದರು. ದುರ್ಲಭ ಅಲ್ಯೂಮಿನಿಯಂ ಬಿಡಿಭಾಗಗಳ ಆಮದು ಮೇಲಿನ ಅವಲಂಬನೆಯನ್ನು ಹೊಸ ಸೌಕರ್ಯವು ಕುಗ್ಗಿಸಲಿದೆ. ಸಮರಗಳ ಸಂದರ್ಭ ಪೂರೈಕೆ ವ್ಯವಸ್ಥೆ ಸಹಜವಾಗೇ ಅಸ್ತವ್ಯಸ್ತಗೊಳ್ಳುತ್ತದೆ. ಅಂತಹ ಸನ್ನಿವೇಶಗಳಲ್ಲಿ ಅವಶ್ಯ ವಸ್ತುಗಳನ್ನು ದೇಶೀಯವಾಗಿ ಉತ್ಪಾದಿಸಲು ಪ್ರತಿಯೊಂದು ದೇಶವೂ ಬಯಸುವುದು ಸಹಜವೆಂದು ಸಚಿವ ಸಿಂಗ್ ನುಡಿದರು.

ಸಾಂಪ್ರದಾಯಿಕ ಸಮರತಂತ್ರಗಳು ಸ್ವಾತಂತ್ರ್ಯ ಸಂದರ್ಭ ಹೊಂದಿದ್ದ ವಿಶ್ವಾಸಾರ್ಹತೆಯನ್ನು ಇಂದಿಗೂ ಕಾಯ್ದುಕೊಂಡಿವೆ ಮತ್ತು 2047ರ ವೇಳೆಯೂ ತಮ್ಮ ನಿರ್ಣಾಯಕತೆಯನ್ನು ಎತ್ತಿಹಿಡಿಯಲಿವೆ ಎಂದರು.

## ಅಯೋಧ್ಯೆ ದೇಣಿಗೆ ನಿಧಿ: ತಪ್ಪಿತಸ್ಥರಿಗೆ ಶಿಕ್ಷೆ ಖಚಿತ

• **ಲಖನೌ:** ಅಯೋಧ್ಯೆಯ ರಾಮ ಮಂದಿರದ ದೇಣಿಗೆ ಪ್ರಕರಣದಲ್ಲಿ ತಪ್ಪಿತಸ್ಥರು ಎಷ್ಟೇ ಪ್ರಭಾವಿಗಳಾಗಿದ್ದರೂ, ಅವರನ್ನು ಯಾವುದೇ ಕಾರಣಕ್ಕೂ ಬಿಡುವುದಿಲ್ಲ ಎಂದು ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಹೇಳಿದ್ದಾರೆ.

ರಾಮ ಮಂದಿರದ ದೇಣಿಗೆ ನಿಧಿಯನ್ನು ದುರುಪಯೋಗಪಡಿಸಿಕೊಂಡ ಆರೋಪದ ಕುರಿತು ತನಿಖೆಗೆ ಎಸ್‌ಐಟಿ ರಚಿಸಿದ ಬೆನ್ನಲ್ಲೇ ಆದಿತ್ಯನಾಥ್ ಅವರು ಅಯೋಧ್ಯೆಗೆ ಭೇಟಿ ನೀಡಿದ್ದಾರೆ.

ದೇವಾಲಯದ ಪಟ್ಟಣದಲ್ಲಿ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡಿದ ಯೋಗಿ, ಭಗವಾನ್ ರಾಮನ ಭಕ್ತರ ಭಾವನೆಗಳಿಗೆ ನೋವುಂಟುಮಾಡುವಂತಹ ಹೇಳಿಕೆಗಳನ್ನು ನೀಡದಂತೆ ಜನರನ್ನು ಒತ್ತಾಯಿಸಿದರು. ಟ್ರಸ್ಟ್‌ನ ಕೋರಿಕೆ ಮೇರೆಗೆ ನಾವು ಎಸ್‌ಐಟಿ ತನಿಖೆಗೆ ಆದೇಶಿಸಿದ್ದೇವೆ. ಎಸ್‌ಐಟಿ ತನಿಖೆಯು 15 ದಿನಗಳಲ್ಲಿ ಎಲ್ಲವನ್ನೂ ಸ್ಪಷ್ಟಪಡಿಸುತ್ತದೆ ಎಂದರು. ನಾನು ಒಂದು ವಾರದೊಳಗೆ ಪ್ರಾಥಮಿಕ ವರದಿಯನ್ನು ಪಡೆಯುತ್ತೇನೆ. ತಪ್ಪಿತಸ್ಥರು ಯಾರೇ ಆಗಿರಲಿ, ಅವರನ್ನು ಬಿಡಲಾಗುವುದಿಲ್ಲ ಎಂದು ಹೇಳಿದರು. ಭಗವಾನ್ ರಾಮನ ಜನ್ಮಸ್ಥಳದಲ್ಲಿ ದೇವಾಲಯಕ್ಕಾಗಿ 500 ವರ್ಷಗಳ ಹೋರಾಟವನ್ನು ನೆನಪಿಸಿಕೊಂಡ ಯೋಗಿ, ಅಯೋಧ್ಯೆಯಲ್ಲಿ ಭವ್ಯವಾದ ದೇವಾಲಯದ ಕನಸನ್ನು ನನಸಾಗಿಸಲು ಭಗವಾನ್ ರಾಮನು ಕಲಿಸಿದ ತಾಳ್ಮೆ ಮತ್ತು ಘನತೆಯನ್ನು ಭಕ್ತರು ಪ್ರದರ್ಶಿಸಿದ್ದಾರೆ ಎಂದು ಹೇಳಿದರು. ಈಗ ಇದು ಕೇವಲ 15 ದಿನಗಳ ವಿಷಯವಾಗಿದೆ. ಸತ್ಯ ಹೊರಬರಲು ಅದೇ ತಾಳ್ಮೆ ಮತ್ತು ಘನತೆಯನ್ನು ಕಾಪಾಡಿಕೊಳ್ಳಿ ಎಂದು ಅವರು ಹೇಳಿದರು.

## ಕದನವಿರಾಮ ನವೀಕರಣ ಇಸ್ರೇಲ್-ಲೆಬನಾನ್ ಅಸ್ತು

• **ಹೊಸದಿಲ್ಲಿ:** ಅಮೆರಿಕ-ಇರಾನ್ ನಡುವಿನ ಸ್ವಿಟ್ಜರ್‌ಲೆಂಡ್ ಮಾತುಕತೆ ರದ್ದಾದ ಬಳಿಕ ಇಸ್ರೇಲ್-ಲೆಬನಾನ್ ಕದನ ವಿರಾಮ ಒಪ್ಪಂದವನ್ನು ನವೀಕರಿಸಲು ಒಪ್ಪಿಕೊಂಡಿವೆ. ಅಮೆರಿಕ-ಇರಾನ್ ಮಧ್ಯಂತರ ಒಪ್ಪಂದಕ್ಕೆ ಸಹಿ ಹಾಕಿದ ನಂತರವೂ ಲೆಬನಾನ್ ಮೇಲೆ ಇಸ್ರೇಲ್ ದಾಳಿ ನಡೆಸಿತ್ತು.

ಲೆಬನಾನ್‌ನಲ್ಲಿ ಹಿಜ್ಬೊಲ್ಲಾ ಅಡಗುದಾಣಗಳ ಮೇಲೆ ದಾಳಿ ನಡೆಸುವುದಾಗಿ ಇಸ್ರೇಲ್ ಸಮರ್ಥಿಸಿಕೊಂಡಿದೆ. ಶುಕ್ರವಾರ ಎರಡೂ ಪಕ್ಷಗಳು ಕದನ ವಿರಾಮ ಒಪ್ಪಂದ ನವೀಕರಿಸಲು ಒಪ್ಪಿವೆ. ದಕ್ಷಿಣ ಲೆಬನಾನ್ ಮೇಲೆ ಇಸ್ರೇಲ್ ದಾಳಿ ಮುಂದುವರಿದಿದೆ. ಶುಕ್ರವಾರ ಸಂಜೆ 4 ಗಂಟೆಗೆ ಕದನ ವಿರಾಮ ನವೀಕರಿಸಲು ಉಭಯ ರಾಷ್ಟ್ರಗಳು ಒಪ್ಪಿಕೊಂಡಿದ್ದವು. ಆದರೆ ಇಸ್ರೇಲ್ ಇನ್ನಷ್ಟು ವೈಮಾನಿಕ ದಾಳಿ ನಡೆಸಿದ್ದು, 150ಕ್ಕೂ ಅಧಿಕ ಹಿಜ್ಬೊಲ್ಲಾ ಅಡಗುದಾಣಗಳ ಮೇಲೆ ದಾಳಿ ನಡೆಸಿದೆ. ಇಸ್ರೇಲ್ ದಾಳಿಗೆ 47 ನಾಗರಿಕರು ಮೃತಪಟ್ಟಿದ್ದಾರೆ ಮತ್ತು 97 ಮಂದಿ ತೀವ್ರ ಗಾಯಗೊಂಡಿದ್ದಾರೆ ಎಂದು ಲೆಬನಾನ್ ಆರೋಗ್ಯ ಸಚಿವಾಲಯ ತಿಳಿಸಿದೆ. ನಾಲ್ವರು ಇಸ್ರೇಲಿ ಯೋಧರು ಮೃತಪಟ್ಟಿದ್ದಾರೆಂದು ವರದಿಯಾಗಿದೆ. ಲೆಬನಾನ್ ವಿಚಾರದಲ್ಲಿ ಅಮೆರಿಕ-ಇಸ್ರೇಲ್ ಭಿನ್ನಾಭಿಪ್ರಾಯವೇ ಈ ಒಮ್ಮತಕ್ಕೆ ಕಾರಣವೆನ್ನಲಾಗಿದೆ.

**ಹತಾಶೆಯಿಂದ ಒಪ್ಪಿದ ಇರಾನ್:** ಹತಾಶೆಯಿಂದ ಇರಾನ್ ಮಧ್ಯಂತರ ಒಪ್ಪಂದ ಒಪ್ಪಿಕೊಂಡಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಶುಕ್ರವಾರ ಹೇಳಿದ್ದಾರೆ. ಇದೇ ವೇಳೆ ಷರತ್ತುಗಳನ್ನು ಅಮೆರಿಕ ಉಲ್ಲಂಘಿಸಿದರೆ, ನಮ್ಮ ಕೈ ಟ್ರಿಗರ್ ಮೇಲಿಟ್ಟು ಸಿದ್ಧವಾಗಿದ್ದೇವೆ ಎಂದು ಇರಾನ್ ಸೇನೆ ಹೇಳಿದೆ.

## ಟ್ರಂಪ್ ಹೇಳಿಕೆಗೆ ಮೆಲೋನಿ ಛೀಮಾರಿ

• **ವಾಷಿಂಗ್ಟನ್:** ಇಟಲಿ ಪ್ರಧಾನಿ ಜಾರ್ಜಿಯಾ ಮೆಲೋನಿ ಅವರು ಜಿ7 ಶೃಂಗಸಭೆಯಲ್ಲಿ ತಮ್ಮೊಂದಿಗೆ ಒಂದು ಫೋಟೋ ತೆಗೆಸಿಕೊಳ್ಳಲು ಬೇಡಿಕೊಂಡಿದ್ದರು ಎಂಬ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಹೇಳಿಕೆಗೆ, ಮೆಲೋನಿ ಖಾರವಾಗಿ ತಿರುಗೇಟು ನೀಡಿದ್ದಾರೆ. ಈ ಹೇಳಿಕೆ ಸಂಪೂರ್ಣ ಸುಳ್ಳು ಮತ್ತು ಕಟ್ಟುಕಥೆ ಎಂದು ಹೇಳಿದ್ದಾರೆ. ಇಟಲಿ ಟಿವಿ ವಾಹಿನಿಗೆ ನೀಡಿದ ಸಂದರ್ಶನದಲ್ಲಿ ಟ್ರಂಪ್, ನಾನು ಮೆಲೋನಿ ಜತೆ ಮಾತನಾಡಬೇಕಾದ ಅಗತ್ಯವಿರಲಿಲ್ಲ. ಅವರು ನನ್ನೊಂದಿಗೆ ಫೋಟೋ ತೆಗೆಸಿಕೊಳ್ಳಲು ತುಂಬಾ ಕೇಳಿಕೊಂಡಿದ್ದರು ಎಂದಿದ್ದಾರೆ. ಟ್ರಂಪ್ ಅವರ ಈ ಹೇಳಿಕೆ ಇಟಲಿಯಲ್ಲಿ ತೀವ್ರ ಚರ್ಚೆಗೆ ಕಾರಣವಾಗಿದೆ. ನಾನು ಅಥವಾ ಇಟಲಿ ಎಂದಿಗೂ ಬೇಡಿಕೊಳ್ಳುವುದಿಲ್ಲ ಎಂದು ಮೆಲೋನಿ ವೀಡಿಯೊ ಸಂದೇಶದಲ್ಲಿ ಹೇಳಿಕೊಂಡಿದ್ದಾರೆ.

ಮ್ಯಾಕ್ರಾನ್‌ಗೆ ಕಲಂಕಾರಿ ಮಹಾಭಾರತ ಚಿತ್ರಕಲೆ | ಫಿಕೊಗೆ ಕಾಶ್ಮೀರಿ ಗಾಲಿಚೆ

## ಭಾರತೀಯ ಸಂಸ್ಕೃತಿಯ ಉಡುಗೊರೆ

• **ಹೊಸದಿಲ್ಲಿ:** ಪ್ರಧಾನಿ ನರೇಂದ್ರ ಮೋದಿ ಅವರು ಫ್ರಾನ್ಸ್ ಮತ್ತು ಸ್ಲೊವಾಕಿಯಾ ಪ್ರವಾಸದ ವೇಳೆ ಅಲ್ಲಿನ ನಾಯಕರಿಗೆ ಭಾರತದ ಶ್ರೀಮಂತ ಕಲೆ, ಸಂಸ್ಕೃತಿ, ವೈದ್ಯಕೀಯ ಪರಂಪರೆ ಹಾಗೂ ಪ್ರಾದೇಶಿಕ ಆಹಾರ ವೈವಿಧ್ಯವನ್ನು ಪ್ರತಿಬಿಂಬಿಸುವ ವಿಶಿಷ್ಟ ಉಡುಗೊರೆಗಳನ್ನು ನೀಡಿದ್ದಾರೆ.

ಫ್ರಾನ್ಸ್ ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರಾನ್ ಅವರಿಗೆ ಆಂಧ್ರಪ್ರದೇಶದ ಕಲಂಕಾರಿ ಶೈಲಿಯಲ್ಲಿ ರಚಿಸಲಾದ ಮಹಾಭಾರತದ ಚಿತ್ರಕಲೆಯನ್ನು ಮೋದಿ ಉಡುಗೊರೆಯಾಗಿ ನೀಡಿದ್ದಾರೆ. ಸ್ಲೊವಾಕಿಯಾ ಪ್ರಧಾನಿ ರಾಬರ್ಟ್ ಫಿಕೊ ಅವರಿಗೆ ಕಾಶ್ಮೀರಿ ರೇಷ್ಮೆ ಗಾಲಿಚೆ ಹಾಗೂ ಅಲ್ಲಿನ ಸಂಸತ್ ಸ್ಪೀಕರ್ ರಿಚರ್ಡ್ ರಾಸಿ ಅವರಿಗೆ ಬಿಹಾರದ ಸಾಂಪ್ರದಾಯಿಕ ಸಿಹಿ ತಿಂಡಿ ಠೇಕುವಾ ನೀಡಲಾಗಿದೆ.

**ಆರು ತಿಂಗಳ ಪರಿಶ್ರಮದ ಕಲಾಕೃತಿ:** ಮ್ಯಾಕ್ರಾನ್ ಅವರಿಗೆ ನೀಡಲಾದ ಮಹಾಭಾರತದ ಕಲಂಕಾರಿ ಚಿತ್ರವನ್ನು ಸಾಂಪ್ರದಾಯಿಕ ಲೇಖನಿ ಚಿತ್ರಣ ವಿಧಾನ ಬಳಸಿ ಕೈಯಿಂದ ರಚಿಸಲಾಗಿದೆ. ಇದನ್ನು ಪೂರ್ಣಗೊಳಿಸಲು ಸುಮಾರು ಆರು ತಿಂಗಳು ಬೇಕಾಗಿದೆ. ಮಹಾಭಾರತದ



ಕರ್ತವ್ಯ, ನ್ಯಾಯ, ಧೈರ್ಯ ಮತ್ತು ನೈತಿಕ ಆಯ್ಕೆಯ ಸಂದೇಶಗಳನ್ನು ಚಿತ್ರದಲ್ಲಿ ಬಿಂಬಿಸಲಾಗಿದೆ. ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ಅರ್ಜುನನಿಗೆ ನೀಡಿದ ಕರ್ತವ್ಯಪ್ರಜ್ಞೆ, ಆತ್ಮಸಂಯಮ ಮತ್ತು ಆಂತರಿಕ ಶಕ್ತಿಯ ಬೋಧನೆಯನ್ನೂ ಕಲಾಕೃತಿಯಲ್ಲಿ ಪ್ರಮುಖವಾಗಿ ಚಿತ್ರಿಸಲಾಗಿದೆ.

ಸ್ಲೊವಾಕಿಯಾ ಪ್ರಧಾನಿ ರಾಬರ್ಟ್ ಫಿಕೊ ಅವರಿಗೆ ಕಾಶ್ಮೀರದ ಕಣಿವೆಯ, ವಿಶೇಷವಾಗಿ ಶ್ರೀನಗರ ಪ್ರದೇಶದ ಪ್ರಸಿದ್ಧ ಕೈಗಂಟಿನ ರೇಷ್ಮೆ ಗಾಲಿಚೆಯನ್ನು ನೀಡಲಾಗಿದೆ. ನೈಸರ್ಗಿಕ ರೇಷ್ಮೆಯಿಂದ ತಯಾರಿಸಲಾದ ಈ ಗಾಲಿಚೆಯಲ್ಲಿ ಹೂವು, ಬಳ್ಳಿ, ಮಾವಿನಕಾಯಿ ಹಾಗೂ ಪದಕಾಕಾರದ ಸೂಕ್ಷ್ಮ ವಿನ್ಯಾಸಗಳಿವೆ. ಅಂದ, ಬಾಳಿಕೆ ಮತ್ತು ಕಲಾತ್ಮಕತೆಯ ಸಂಗಮವಾಗಿರುವ ಕಾಶ್ಮೀರಿ ರೇಷ್ಮೆ ಗಾಲಿಚೆಗಳು ಜಗತ್ತಿನಾದ್ಯಂತ ಐಷಾರಾಮಿ ಗೃಹಾಲಂಕಾರ ವಸ್ತುಗಳಾಗಿಯೂ, ಕಲಾಕೃತಿಗಳಾಗಿಯೂ ಪ್ರಸಿದ್ಧಿ ಪಡೆದಿವೆ.

**ಸ್ಲೊವಾಕ್ ಅಧ್ಯಕ್ಷರಿಗೆ ಡೋಕ್ರಾ ಜಿಂಕೆ:** ಸ್ಲೊವಾಕಿಯಾ ಅಧ್ಯಕ್ಷ ಪೀಟರ್ ಪೆಲ್ಲೆಗ್ರಿನಿ ಅವರಿಗೆ ಹಿತ್ತಾಳೆಯಿಂದ ತಯಾರಿಸಲಾದ ಡೋಕ್ರಾ ಜಿಂಕೆಗಳ ಜೋಡಿಯನ್ನು ಉಡುಗೊರೆಯಾಗಿ ನೀಡಲಾಗಿದೆ. ಛತ್ತೀಸ್‌ಗಢ, ಒಡಿಶಾ, ಜಾರ್ಖಂಡ್ ಮತ್ತು ಪಶ್ಚಿಮ ಬಂಗಾಳದ ಬುಡಕಟ್ಟು ಕುಶಲಕರ್ಮಿಗಳು ಶತಮಾನಗಳಿಂದ ಅನುಸರಿಸಿಕೊಂಡು ಬಂದಿರುವ ಪುರಾತನ ಲೋಹ ಎರಕದ ಕಲೆಯನ್ನು ಇದು ಪ್ರತಿನಿಧಿಸುತ್ತದೆ. ಪೆಲ್ಲೆಗ್ರಿನಿ ಅವರಿಗೆ ಛತ್ರಪತಿ ಸಂಭಾಜಿನಗರದ ಹಿಮ್ರೂ ರೇಷ್ಮೆ ಟೈ ಮತ್ತು ಜೇಬು ವಸ್ತ್ರದ ಜೋಡಿಯನ್ನೂ ನೀಡಲಾಗಿದೆ. ರಾಜಸ್ಥಾನದ ಪ್ರತಾಪಗಢ ಜಿಲ್ಲೆಯ ಸಾಂಪ್ರದಾಯಿಕ ಥೇವಾ ಕಲೆಯ ವಿನ್ಯಾಸ ಹೊಂದಿರುವ ಕೈಕೊಂಡಿಗಳನ್ನೂ ಸ್ಲೊವಾಕ್ ಅಧ್ಯಕ್ಷರಿಗೆ ನೀಡಲಾಗಿದೆ.

ಭಾರತೀಯರನ್ನುದ್ದೇಶಿಸಿ ಮೋದಿ ಮಾತು

## ವಿಶ್ವಾಸಾರ್ಹ ಪಾಲುದಾರ

• **ಪ್ಯಾರಿಸ್:** ಜಗತ್ತಿನ ಅತ್ಯಂತ ವಿಶ್ವಾಸಾರ್ಹ ಪಾಲುದಾರನಾಗಿ ಭಾರತ ಹೊರಹೊಮ್ಮುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ತುಂಬು ಹೆಮ್ಮೆ-ಹರ್ಷ ವ್ಯಕ್ತಪಡಿಸಿದ್ದಾರೆ. ಭಾವೀ ಪೀಳಿಗೆಗೆ ಅವಕಾಶಗಳ ತೆರೆದಿಡಬಲ್ಲ, ಆವಿಷ್ಕಾರ ಮತ್ತು ಅಭಿವೃದ್ಧಿಗೆ ಪ್ರೇರಣಾದಾಯಿ ರಂಗಗಳಲ್ಲಿ ರಾಷ್ಟ್ರವು ಧಾರಾಳ ಹೂಡಿಕೆ ಹೂಡುತ್ತಿದೆ ಎಂದು ಪ್ರಧಾನಿ ಮೋದಿ ಹೇಳಿದ್ದಾರೆ. ರಾಷ್ಟ್ರದ ಮತ್ತು ರಾಷ್ಟ್ರವಾಸಿ ಜನರ ಆಶೋತ್ತರಗಳು ನನಸಾಗುವನ್ನು ಸ್ಪರ್ಶಿಸುತ್ತಿರುವ ಹಾಗೂ ಭಾರತವು ತನ್ನ ಭವ್ಯ ಭವಿಷ್ಯವನ್ನು ರೂಪಿಸುತ್ತಿರುವಂತಹ ರಾಷ್ಟ್ರದ ಯಾನದಲ್ಲಿದೊಂದು ವರ್ಣನಾಯೋಗ್ಯ ಅಥವಾ ವ್ಯಾಖ್ಯಾನಾರ್ಹ ಕಾಲಘಟ್ಟವಾಗಿದೆ ಎಂದು ಪ್ಯಾರಿಸ್‌ನಲ್ಲಿ ಭಾರತೀಯ ಸಮುದಾಯವನ್ನು ಉದ್ದೇಶಿಸಿ




ಪ್ರಧಾನಿ ಮೋದಿ ಸಂತಸ ವ್ಯಕ್ತಪಡಿಸಿದ್ದಾರೆ. ವ್ಯಾಪಾರವೊಂದೇ ರಾಷ್ಟ್ರಗಳ ನಡುವಿನ ಬಾಂಧವ್ಯವನ್ನು ನಿರ್ಧರಿಸುವ ಕಾಲವಿತ್ತು. ಆದರೆ ಇಂದು ವ್ಯಾಪಾರದ ಜತೆ ವಿಶ್ವಾಸಾರ್ಹತೆ ಕೂಡ ನಿರ್ಣಾಯಕ ಪಾತ್ರ ವಹಿಸುತ್ತಿದೆ. ಪ್ರತಿಯೊಂದು ರಾಷ್ಟ್ರವೂ ವಿಶ್ವಾಸಾರ್ಹ ಪೂರೈಕೆ ವ್ಯವಸ್ಥೆಯನ್ನು ಬಯಸುತ್ತಿದೆ. ಪ್ರತೀ ರಾಷ್ಟ್ರವೂ ಸ್ಥಿರ ಪಾಲುದಾರಿಕೆ ಬಯಸುತ್ತಿದೆ.

## ಸಂಪಾದಕೀಯ

### ಕೋವಿಡ್‌ನಲ್ಲಿ ಅಮೆರಿಕದ ಪಾತ್ರ

ಅಮೆರಿಕದ ಗುಪ್ತಚರ ಸಂಸ್ಥೆ ಸಿಐಎ ನಿರ್ದೇಶಕಿ ತುಳಸಿ ಗಬ್ಬಾರ್ಡ್ ತಮ್ಮ ಹುದ್ದೆ ತ್ಯಜಿಸುವ ಮುನ್ನ ದೊಡ್ಡ ಬಾಂಬೊಂದನ್ನು ಸಿಡಿಸಿದ್ದಾರೆ. ನಿರ್ದೇಶಕ ಸ್ಥಾನವನ್ನು ತೆರವುಗೊಳಿಸುವ ಮುನ್ನ 'ಈವರೆಗೆ ಯಾರೂ ಕಂಡಿರದ' ಕೆಲವು ದಾಖಲೆಗಳನ್ನು ಬಹಿರಂಗ ಮಾಡಿರುವ ಅವರು, 2019ರಲ್ಲಿ ಇಡೀ ಜಗತ್ತನ್ನು ಕಾಡಿದ ಕೊರೋನಾವೈರಸ್ ಸಂಶೋಧನೆಯಲ್ಲಿ ಅಮೆರಿಕದ ಪಾಲೂ ಇದೆ ಹಾಗೂ ವೈರಸ್‌ನ ಉತ್ಪತ್ತಿಯನ್ನು ಮುಚ್ಚಿ ಹಾಕುವಲ್ಲಿ ಅಮೆರಿಕದ ಗುಪ್ತಚರ ಸಂಸ್ಥೆಯೂ ಸೇರಿದಂತೆ ಹಲವರು ಕಾರ್ಯನಿರ್ವಹಿಸಿದ್ದಾರೆ ಎಂಬಂತಹ ಸ್ಫೋಟಕ ಮಾಹಿತಿ ಬಿಚ್ಚಿಟ್ಟಿದ್ದಾರೆ. ತುಳಸಿ ಗಬ್ಬಾರ್ಡ್ ಈಗ ಬಹಿರಂಗಗೊಳಿಸಿರುವ ಮಾಹಿತಿಯ ಪ್ರಕಾರ ಅಮೆರಿಕದ ಅಲರ್ಜಿ ಮತ್ತು ಸೋಂಕು ರೋಗಗಳ ರಾಷ್ಟ್ರೀಯ ಸಂಸ್ಥೆಯ ಮುಖ್ಯಸ್ಥರಾಗಿದ್ದ ಡಾ. ಆಂಟನಿ ಫೌಸಿಯವರು ವೈರಸ್‌ಗಳ ಕುರಿತಂತೆ ಸಂಶೋಧನೆ ನಡೆಸಲು ಚೀನಾದ ವುಹಾನ್‌ನ ಪ್ರಯೋಗಾಲಯಕ್ಕೆ ದೊಡ್ಡ ಮೊತ್ತದ ಆರ್ಥಿಕ ನೆರವು ನೀಡಿದ್ದರು. ಇದೇ ಆಂಟನಿ ಫೌಸಿ ಮಾಜಿ ಅಧ್ಯಕ್ಷ ಜೋ ಬೈಡೆನ್ ಅವರ ವೈದ್ಯಕೀಯ ಸಲಹೆಗಾರರೂ ಆಗಿದ್ದರು ಎಂಬುದು ಗಮನಾರ್ಹ. ವುಹಾನ್‌ನ ಪ್ರಯೋಗಾಲಯದಿಂದಲೇ ಕೊರೋನಾ ವೈರಸ್‌ಗಳು ಸೋರಿಹೋಗಿ ಬಳಿಕ ಜಗತ್ತಿನಾದ್ಯಂತ ಹರಡುವಂತಾಗಿತ್ತು ಎಂಬ ಅನುಮಾನಗಳು ಜಗತ್ತನ್ನು ಕಾಡುತ್ತಿದ್ದು, ಅದನ್ನೀಗ ಗಬ್ಬಾರ್ಡ್ ಬಹಿರಂಗ ಮಾಡಿರುವ ಮಾಹಿತಿಗಳು ದೃಢಪಡಿಸಿವೆ.



ಆದರೆ ಕೊರೋನಾ ವೈರಸ್ ಪ್ರಯೋಗಾಲಯದಿಂದ ಸೋರಿಕೆ ಆದುದಲ್ಲ, ಬದಲಾಗಿ ನೈಸರ್ಗಿಕವಾಗಿ ಉತ್ಪತ್ತಿಯಾದುದು ಎಂಬ ಸುದ್ದಿಯನ್ನು ಹರಡುವಲ್ಲಿ ಆಂಟನಿ ಫೌಸಿ ಪ್ರಮುಖ ಪಾತ್ರ ವಹಿಸಿದ್ದರು. ಅವರ ಈ ಕಾರ್ಯಕ್ಕೆ ಸಿಐಎ ಕೂಡಾ ಸಾಥ್ ನೀಡಿತ್ತು. ಅಮೆರಿಕದ ಗುಪ್ತಚರ ಸಂಸ್ಥೆಯಲ್ಲಿನ ಕೆಲವರಿಗೆ ಈ ಮಾಹಿತಿ ತಿಳಿದಿದ್ದರೂ ಅವರು ಅದನ್ನು ಬಯಲುಗೊಳಿಸದಂತೆ ಅವರ ಮೇಲೆ ಒತ್ತಡ ಹಾಗೂ ಬೆದರಿಕೆ ಹಾಕಲಾಗಿತ್ತು ಎಂಬುದೂ ಈಗ ಬಯಲಾಗಿದೆ.

ಮಾರಣಾಂತಿಕ ವೈರಸ್‌ಗಳನ್ನು ಪ್ರಯೋಗಾಲಯದಲ್ಲಿ ಅಭಿವೃದ್ಧಿ ಪಡಿಸುವಂತಹ ಸಂಶೋಧನೆಗಳು ನಡೆಯುತ್ತಿವೆ ಎಂಬುದು ಇದೀಗ ದೃಢಪಟ್ಟಿದೆ. ಈ ಕಾರ್ಯದಲ್ಲಿ ಚೀನಾದೊಂದಿಗೆ ಅಮೆರಿಕದ ಪಾತ್ರವೂ ಇರುವುದು ಆಶ್ಚರ್ಯಾಘಾತ ಉಂಟು ಮಾಡಿದೆ. ವೈರಸ್ ಜಗತ್ತಿನಾದ್ಯಂತ ಹರಡಿ ಸಾಕಷ್ಟು ಅಧ್ವಾನಗಳನ್ನು ಸೃಷ್ಟಿಸಿದ ಬಳಿಕವೂ ಅಮೆರಿಕ ಅದರ ಸತ್ಯಾಂಶವನ್ನು ಮುಚ್ಚಿಟ್ಟಿದ್ದು ಆಘಾತಕಾರಿ. ಇದೀಗ ಕೋವಿಡ್‌ನಿಂದ ಉಂಟಾದ ಪ್ರಾಣಹಾನಿ ಹಾಗೂ ಇನ್ನಿತರ ವಿನಾಶಗಳಿಗೆ ಚೀನಾದಷ್ಟೇ ಅಮೆರಿಕವೂ ಹೊಣೆಗಾರ ಎಂಬಂತಾಯಿತು. ಹಾಗಾಗಿ ಸಂಬಂಧಿತ ತಪ್ಪಿತಸ್ಥರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುವುದು ಅಗತ್ಯ.

# ಸಂಸ್ಕಾರ ಬಯಸುವ ವಿಶುದ್ಧ

ನಿಮ್ಮ ಸಂವಹನ ಕಲೆ ಮತ್ತು ಇನ್ನಿತರರ ಮೇಲೆ ಪ್ರಭಾವ ಬೀರುವ ಶಕ್ತಿಯನ್ನು ಹೆಚ್ಚಿಸಿಕೊಳ್ಳಲು ವಿಶುದ್ಧ ಚಕ್ರವನ್ನು ಬಲಪಡಿಸುವುದು ತುಂಬಾ ಮುಖ್ಯ.

ಪೂರ್ಣ ಪರಿಪೂರ್ಣ
• ಪೂರ್ಣಪ್ರಜ್ಞ ಬೇಳೂರು
poornaprajnabelur@gmail.com



ವಿಶುದ್ಧ ಚಕ್ರದ ಸಮತೋಲನವು ಸಂಸ್ಕಾರವಿದ್ದರೆ ಮಾತ್ರ ಸಾಧ್ಯ. ಕಾರಣ ಮಾತೇ ಇವರ ಮುಖ್ಯ ಆಯುಧ. ಮಾತೇ ಇವರ ಬಂಡವಾಳ. ಮಾತೇ ಇವರ ಯಶಸ್ಸಿನ ಮಾರ್ಗ. ಮಾತೇ ಇವರ ಗುರಿ ತಲುಪಿಸುವ ಸ್ನೇಹಿತ. ಮಾತೇ ಇವರ ಮಾತೆ, ಪಿತಾ ಮತ್ತು ಗುರು. ಹೀಗಿರುವಾಗ ಮಾತಿನ ಮೇಲೆ ಹಿಡಿತ ಸಾಧಿಸುವುದು ಮತ್ತು ಅದನ್ನು ಸಿಹಿಯಾಗಿಸುವುದು ಸುಲಭದ ಮಾತಲ್ಲ. ಈ ಹಿಂದೆ ಹೇಳಿದ್ದೆ; ಮಾತು ಪದಗಳನ್ನು, ಅಕ್ಷರವನ್ನು, ಧ್ವನಿಯನ್ನು, ಹಾವಭಾವಗಳನ್ನು, ವರ್ತನೆಯನ್ನು, ವ್ಯಕ್ತಿತ್ವವನ್ನು ಅವಲಂಬಿಸಿದೆ. ಅಂದರೆ ಪ್ರತಿಯೊಂದಕ್ಕೂ ಅಪಾರವಾದ ಶಕ್ತಿಯಿದೆ. ಅದನ್ನು ಸರಿಯಾಗಿ ನಿರ್ವಹಿಸಲು ನಿಮಗೆ ಸಂಸ್ಕಾರ ಬೇಕು. ಸ್ವಯಂಶೀಲತೆ ಬೇಕು. ವಿನಯ, ವಿಧೇಯತೆ ಬೇಕು. ಬುದ್ಧಿವಂತಿಕೆ, ಓದಿನ ಜ್ಞಾನ, ಅನುಭವದ ಹಿನ್ನೆಲೆ ಮತ್ತು ಸೂಕ್ತವಾದ ಸಂವಹನ ಬೇಕು. ಆಗ ನೀವು ಎಲ್ಲರನ್ನೂ ಸಂಮೋಹನ ಗೊಳಿಸಲು ಸಾಧ್ಯ.

ನಿಮ್ಮ ಈ ಎಲ್ಲಾ ಶಕ್ತಿಯನ್ನು ಬಳಸಿ ಇನ್ನೊಬ್ಬರ ನಡವಳಿಕೆ, ಆಲೋಚನೆ, ಚಿಂತನೆಗಳನ್ನು ಬದಲಾಯಿಸುವುದೇ ಸಂಮೋಹನ. ನಿಮಗೆ ಗೊತ್ತಿರುವಂತೆ ನೀವು ಉಪನ್ಯಾಸ ಕೊಡುವಾಗ ನಿಮ್ಮ ಧ್ವನಿ ಕೆಟ್ಟಿತು ಎಂದಾದರೆ; ನಿಮ್ಮ ಕಥೆ ಮುಗಿಯಿತು. ಮಾತು ತಡವಾಯಿತು ಎಂದಾದರೆ ಅಲ್ಲಿಗೆ ನೀವು ಪೂರ್ಣ ಬದ್ಧಿರಿ. ಧ್ವನಿಯ ಲಯ ಮತ್ತು ಸರಿಯಾದ ಅಕ್ಷರಗಳ ಜೋಡಣೆ ಇವು ಎಂತಹವರನ್ನೂ ಸಹಾ ಮಂತ್ರಮುಗ್ಧರನ್ನಾಗಿ ಮಾಡುತ್ತದೆ. ಸಂಮೋಹನಕಾರನಿಗೆ ಅವನ ಮಾತು ಮತ್ತು ಧ್ವನಿ ಇವೇ ಬಂಡವಾಳ.

ಭಾರತೀಯ ಯೋಗಶಾಸ್ತ್ರದ ಪ್ರಕಾರ ವಿಶುದ್ಧ ಚಕ್ರದ ಸಿದ್ಧಿಯನ್ನು ಪಡೆದವರಿಗೆ ವಾಕ್‌ಸಿದ್ಧಿ ಲಭಿಸುತ್ತದೆ. ವಾಕ್ ಸಿದ್ಧಿ ಎಂದರೆ ಮಾತಿನ ಮೇಲೆ ಹಿಡಿತವನ್ನು ಸಾಧಿಸುವುದಷ್ಟೇ ಅಲ್ಲ, ಸತ್ಯ, ಪ್ರಾಮಾಣಿಕತೆ, ಆಡಿದ ಮಾತಿನಂತೆ ನಡೆದುಕೊಳ್ಳುವುದು, ಹಿತವಾದ ಮಾತುಗಳನ್ನು ಮಾತ್ರ ಮಾತನಾಡುವುದು, ಮನಃಪೂರ್ವಕವಾಗಿ ಉತ್ತರಿಸುವುದು, ಸ್ವಿತಪ್ರಜ್ಞತೆಯಿಂದ ಮಾತುಗಳನ್ನು ಸ್ವೀಕರಿಸುವುದು ಹೀಗೆ ಇವೆಲ್ಲಾ ಸೇರಿದಾಗ ವಾಕ್‌ಸಿದ್ಧಿ ಎನ್ನುತ್ತಾರೆ. ಇದನ್ನು ನೀವು ಬಾಲ್ಯದಿಂದಲೇ ಅಭ್ಯಾಸ ಮಾಡಬೇಕಾಗುತ್ತದೆ. ಅದಕ್ಕೆ ತಕ್ಕುದಾದ ವಾತಾವರಣ, ಕಲಿಕೆ, ವಿದ್ಯಾಭ್ಯಾಸ, ಕೌಶಲ್ಯ, ಅರ್ಥನೀತಿಗಳು, ಸಮಾಜದ ರೀತಿನೀತಿಗಳು, ನಿಮ್ಮ ವ್ಯಕ್ತಿತ್ವ, ವರ್ತನೆಗಳು, ಹಾಗೂ ಧ್ವನಿಯ ಮೇಲೆ ಹಿಡಿತದಿಂದ ಬರುವ ಮಾತುಗಳನ್ನು ನೀವು ಕಲಿತಿರಬೇಕು. ಸತತ ಅಭ್ಯಾಸ ಮಾಡಿದರೆ ಸಾಲದು, ಮನನ ಮಾಡಿಕೊಳ್ಳಬೇಕು. ನೀವೀಗ ನೋಡುತ್ತಿರುವ ದಯಶಂಕರ್ ಗುರೂಜಿ, ಸದ್ಗುರು ಜಗ್ಗಿ ವಾಸುದೇವ್ ಮುಂತಾದ ಧರ್ಮಗುರುಗಳನ್ನು ನೀವು ನೋಡಿರುತ್ತೀರಿ. ಇವರೆಲ್ಲಾ ತಮ್ಮ ವಾಕ್ ಶಕ್ತಿಯಿಂದಲೇ ಜಗತ್ ಪ್ರಸಿದ್ಧರಾದವರು.

ಸಿರಿ ತಾರೆ ಅಪರ್ಣಾರವರು ಇಂದು ನಮ್ಮ ನಡುವೆ ಇಲ್ಲ, ಆದರೆ ಅವರ ಸುಂದರ ಮಾತುಗಳ ಧ್ವನಿ ಮುದ್ರಿಕೆ ಆಕಾಶವಾಣಿ, ದೂರದರ್ಶನ ಮತ್ತು ಅನೇಕ ಜಾಹಿರಾತು ವಿಭಾಗಗಳಲ್ಲಿ ಇಂದಿಗೂ ಲಭ್ಯ. ಹೀಗೆ ಎಲ್ಲಾ ಕ್ಷೇತ್ರಗಳಲ್ಲೂ ಒಂದಿಬ್ಬರು ಪ್ರಖ್ಯಾತರಾದವರು ಇದ್ದೇ ಇರುತ್ತಾರೆ. ಅವರ ನಿತ್ಯ ಅನುಷ್ಠಾನ ಹೇಗಿರಬೇಕು ಎನ್ನುವುದನ್ನು ನೀವು ನೋಡಿ ಕಲಿಯಬೇಕು. ಇವರೆಲ್ಲರ ಮಾತಿನ ಕಂಪನಗಳು, ಕೇಳುಗರ ಮಿದುಳಿನ ತರಂಗಗಳನ್ನು ಶಾಂತಗೊಳಿಸುತ್ತದೆ. ಅವರನ್ನು ನಿದ್ರೆಗೆ ತಳ್ಳುತ್ತದೆ. ಕನಸಿನಲ್ಲಿ ಮುಂದಿನ ನಡೆಗಳು ಹೀಗೇ ಇರಬೇಕು ಎನ್ನುವುದನ್ನು ಸೂಕ್ಷ್ಮವಾಗಿ ತಿಳಿಸುತ್ತದೆ. ವಿಶುದ್ಧ ಚಕ್ರವು ಸುಸ್ಥಿರವಾಗಿದ್ದಾಗ, ಬಲವಾಗಿದ್ದಾಗ ಅದ್ಭುತವಾದ ಆತ್ಮವಿಶ್ವಾಸ ಮೂಡುತ್ತದೆ. ಅದೇ ನೀವು ಇನ್ನೊಬ್ಬರನ್ನು ಅವಹೇಳನ ಮಾಡುತ್ತಾ, ಅನುಕರಿಸುತ್ತಾ, ನಕಾರಾತ್ಮಕವಾದ ಭಾವವನ್ನು ವ್ಯಕ್ತಪಡಿಸುತ್ತಿದ್ದರೆ ನಿಮ್ಮಲ್ಲಿನ ವಿಶುದ್ಧ ಚಕ್ರವು ನಿಧಾನವಾಗಿ ನೆಲದಾಳಕ್ಕೆ ಇಳಿಯುತ್ತಾ ಹೋಗುತ್ತದೆ.

**ಸಂಮೋಹನ ಮತ್ತು ಮಾತು**

ಸತ್ಯವಾದ ಮಾತುಗಳು ಮತ್ತು ಆಕರ್ಷಣೀಯವಾದ ಧ್ವನಿ ಇದ್ದರೆ, ರೂಪ ಸಹಾ ಇರಬೇಕೆಂದಿಲ್ಲ, ಕೇವಲ ಮಾತಿನಿಂದ ಅಲ್ಲಿದ್ದವರನ್ನೆಲ್ಲಾ ಒಂದೇ ಕಡೆ ಜಮಾಯಿಸಬಹುದು. ವಿಶುದ್ಧ ಚಕ್ರವು ಬಲವಾಗಿದ್ದಾಗ; ಅಂತಹಾ ವ್ಯಕ್ತಿಗಳಲ್ಲಿ ಒಂದು ವಿಶೇಷ ಆತ್ಮವಿಶ್ವಾಸ ಮೂಡುತ್ತದೆ. ಆತ್ಮವಿಶ್ವಾಸವೇ ಸಂವಹನದ ಮೊದಲ ಹೆಜ್ಜೆ, ಮಾತಿನ ಬಂಡವಾಳ.

ನಿಮ್ಮ ಸಂವಹನ ಕಲೆ ಮತ್ತು ಇನ್ನಿತರರ ಮೇಲೆ ಪ್ರಭಾವ ಬೀರುವ ಶಕ್ತಿಯನ್ನು ಹೆಚ್ಚಿಸಿಕೊಳ್ಳಲು ವಿಶುದ್ಧ ಚಕ್ರವನ್ನು ಬಲಪಡಿಸುವುದು ತುಂಬಾ ಮುಖ್ಯ. ಹಂ ಬೀಜ ಮಂತ್ರ ಪಠಣ ಮತ್ತು ಸೂರ್ಯನಿಗೆ ಅರ್ಘ್ಯ ನೀಡುವುದರ ಮೂಲಕ ಧ್ವನಿಯು ಗಂಭೀರ ಮತ್ತು ಆಕರ್ಷಕವಾಗಿ ಬದಲಾಗುತ್ತದೆ. ಸೂರ್ಯ ನಮಸ್ಕಾರವನ್ನು ಪ್ರತಿದಿನ ಬೆಳಗ್ಗೆ ಮಾಡಬೇಕು. ಹಾಗೂ ಹಂ ಎನ್ನುವ ಪದವನ್ನು ಜಪಿಸಿ ಸಮಸ್ತ ಲೋಕದ ದೃಷ್ಟಿಯನ್ನು ತಮ್ಮತ್ತ ಸೆಳೆಯಬೇಕು. ಸಂಜೆಯ ಸಮಯದಲ್ಲಿ ಆಕಾಶದ ನೀಲಿ ಬಣ್ಣವನ್ನು ನೀವು ನೋಡುತ್ತಾ, ಅದು ನಿಮ್ಮ ಗಂಟಲಿಗೆ ಬಂದು ಇಳಿಯುತ್ತಿದೆ ಎನ್ನುವ ಕಲ್ಪನೆಯನ್ನು ಮಾಡಿಕೊಳ್ಳಿ, ಮತ್ತು ಹಂ ಎನ್ನುವ ಬೀಜ ಮಂತ್ರವನ್ನು ನೂರಾ ಎಂಟು ಬಾರಿ ಜಪಿಸಿ. ಪ್ರಾರಂಭದಲ್ಲಿ ಆಕಾಶ ನೋಡುತ್ತಾ, ನೀಲಿ ಬಣ್ಣವನ್ನು ಕಣ್ಣಲ್ಲಿ ತುಂಬಿಕೊಳ್ಳುತ್ತಾ ಕ್ರಮೇಣ ಕಣ್ಣು ಮುಚ್ಚಿ, ಆಗಲೂ ನೀಲಿ ಬಣ್ಣವೇ ಕಣ್ಣಲ್ಲಿ ಉಳಿದರೆ ನಿಮ್ಮ ಏಕಾಗ್ರತೆ ಸಫಲವಾದಂತೆ. ಹೀಗೆ ಹಂ ಜೊತೆ ನೀಲಿಯೂ ಕಣ್ಣ ಮೂಲಕ ಗಂಟಲಿಗೆ ಇಳಿದರೆ ನಿಮ್ಮ ಪ್ರಯತ್ನ ಸಫಲವಾದಂತೆ.

ಏಕಾಗ್ರತೆ ಸಾಧಿಸಲು ಸಾಧ್ಯವಾಗುತ್ತಿಲ್ಲ ಎಂದಾದರೆ, ತ್ರಾಟಕ ಕ್ರಿಯೆಯನ್ನು ಮಾಡಿ. ದೀಪವನ್ನು ರೆಪ್ಪೆ ಮುಚ್ಚದೇ ನೋಡುತ್ತಾ ಕುಳಿತುಕೊಳ್ಳಿ. ಅಥವಾ ಒಂದು ಬಿಳಿಯ ಕಾರ್ಡ್‌ಬೋರ್ಡ್‌ನ್ನು ಗೋಡೆಗೆ ಅಂಟಿಸಿ. ಅದರ ಮಧ್ಯದಲ್ಲಿ ಒಂದು ಕಪ್ಪು ಚುಕ್ಕೆಯನ್ನು ಇಡಿ. ಅದನ್ನೇ ರೆಪ್ಪೆ ಮುಚ್ಚದೇ ನೋಡಿ. ಹೀಗೆ ಕ್ರಮೇಣ ಏಕಾಗ್ರತೆಯನ್ನು ಸಾಧಿಸಿ.

ನೀವು ಸಂಗೀತದಲ್ಲಿ ಆಸಕ್ತಿ ಇರುವವರಾದರೆ, ಏಕಾಗ್ರತೆ ತುಂಬಾ ಸುಲಭ. ನೀವೇ ಸಂಗೀತ ಕಲಿಯಬೇಕೆಂದಿಲ್ಲ, ಒಳ್ಳೆಯ ಕೇಳುಗರಾದರೂ ಸಾಕು. ನಿಮಗೆ ಏಕಾಗ್ರತೆ ಕೈವಶವಾಗುತ್ತದೆ. ಆದರೆ ದಿನಾಲೂ ನಿಶ್ಚಿತ ಸಮಯದಲ್ಲಿ, ನಿಶ್ಚಿತ ಅವಧಿಯವರೆಗೆ ಸಂಗೀತವನ್ನು ನೀವು ಆಲಿಸಲೇ ಬೇಕು. ಹೀಗೆ ನಿಮಗೆ ರಾಗಗಳ ಪರಿಚಯವಾಗುತ್ತದೆ. ಹಾಗೆ ರಾಗಗಳನ್ನು ನೀವು ಗುರುತಿಸ ತೊಡಗಿದರೆ, ಏಕಾಗ್ರತೆ ಸಾಧನೆಯಾಗಿದೆ ಎಂದರ್ಥ.

ಕೊನೆಯ ಸಾಧ್ಯತೆ; ನೀವು ದಿನಾಲೂ ಓಂಕಾರವನ್ನು ಪಠಿಸಬೇಕು. ಮೊದಲಿಗೆ ಹದಿನಾರು ಸಾರಿ ಓಂಕಾರವನ್ನು ಪಠಿಸಿ. ಬಳಿಕ ದಿನಾಲೂ ಅದನ್ನು ನಾಲ್ಕರಂತೆ ಹೆಚ್ಚಿಸುತ್ತಾ ಹೋಗಿ. ಹೀಗೆ ನೂರಾ ಎಂಟು ಆದ ಕೂಡಲೇ ನಿಮ್ಮನ್ನೇ ನೀವು ಗಮನಿಸಿ. ಓಂಕಾರ ಉಚ್ಚರಿಸುತ್ತಾ ಇದ್ದಾಗ, ನಿಮ್ಮ ಸುತ್ತಲೂ ಏನಾದರೂ ಆಗುವ ಆಗುಹೋಗುಗಳ ಅರಿವು ನಿಮಗಾಗುತ್ತಿಲ್ಲ ಎಂದಾದರೆ, ನೀವು ಏಕಾಗ್ರತೆಯನ್ನು ಸಾಧಿಸಿದ್ದೀರಿ ಎಂದರ್ಥ.

ವಿಶುದ್ಧ ಚಕ್ರವು ನಿಮಗೆ ಸಿದ್ಧಿಯಾಗಿದ್ದು ತಕ್ಷಣದಲ್ಲಿ ಗೊತ್ತಾಗುವುದಿಲ್ಲ. ಆದರೆ ನಿಮ್ಮ ಸಂವಹನ ತುಂಬಾ ಚೆನ್ನಾಗಿ ಆಗುತ್ತಿದೆ ಎಂದಾದರೆ, ನಿಮ್ಮ ಧ್ವನಿಯಲ್ಲಿ ಆಕರ್ಷಣೆ ಉಂಟಾಗಿದೆ ಎಂದಾದರೆ, ವ್ಯಕ್ತಿತ್ವದಲ್ಲಿ ಕಾಂತಿ ಉಂಟಾಗಿದೆ ಎಂದಾದರೆ, ಕಾರಣ ವಿಶುದ್ಧ ಚಕ್ರದ ಜಾಗೃತಿ.

**ನೀವೀಗ ನಾಯಕರು**

ಸಂವಹನ ಕಲೆಯನ್ನು, ಸಂಮೋಹನ ಶಕ್ತಿಯನ್ನು ನೀವು ವಶಪಡಿಸಿಕೊಂಡರೆ ನೀವು ನಾಯಕರಾಗಲು ಯೋಗ್ಯತೆಯನ್ನು ಪಡೆದುಕೊಂಡಿರಿ. ನೀವು ಮಾಡಬೇಕಾದ್ದು ಇಷ್ಟೇ; ನಿಮ್ಮ ಆಲೋಚನೆಗಳನ್ನು ಸ್ಪಷ್ಟಗೊಳಿಸುವುದು ಮತ್ತು ಅದನ್ನು ಸೂಕ್ತವಾದ ಪದಗಳು ಹಾಗೂ ಧ್ವನಿಯನ್ನು ಬಳಸಿ ಕಾರ್ಯರೂಪಕ್ಕೆ ತರುವುದು. ಎಂತಹಾ ವ್ಯಕ್ತಿಯಾದರೂ ನಿಮ್ಮ ಧ್ವನಿಗೆ ಮತ್ತು ಆಲೋಚನೆಗಳ ರೀತಿಗೆ ತಲೆದೂಗಲೇ ಬೇಕು. ಅಂತಹಾ ಶಕ್ತಿಯನ್ನು ನೀವು ವಿಶುದ್ಧ ಚಕ್ರದಿಂದ ಪಡೆಯುತ್ತೀರಿ. ನೀವು ಕೇವಲ ಒಬ್ಬ ಅಧಿಕಾರಿಯಲ್ಲ, ನಾಯಕ. ಒಬ್ಬ ಸಾಮಾನ್ಯ ಕೃಷಿಕನಲ್ಲ, ಪ್ರಗತಿಪರ ಕೃಷಿಕ. ಒಬ್ಬ ಉಪನ್ಯಾಸಕನಲ್ಲ, ಉತ್ತಮ ವಾಗ್ಮಿ. ಓರ್ವ ಅರ್ಥಧಾರಿಯಲ್ಲ, ಸರ್ವಶ್ರೇಷ್ಠ ಸುಮಿತ್ರ. ನಾಯಕನಾದ ಮೇಲೆ ನೀವು ಸದಾ ಎಚ್ಚರಿಕೆಯಿಂದ ಇರಬೇಕಾದ್ದು ಅಗತ್ಯ. ನಿಮ್ಮ ಮಾತುಗಳಲ್ಲಿ ಸ್ಪಷ್ಟತೆ ಇರಬೇಕು. ಸರಳವಾದ ಪದಗಳನ್ನು ಬಳಸಬೇಕು. ನಿಮಗೇನು ಬೇಕು ಎನ್ನುವುದನ್ನು ನೇರವಾಗಿ ಹೇಳಬೇಕು ಮತ್ತು ಅಂತಿಮವಾಗಿ ನಿಮ್ಮ ಗುರಿ ಯಾವುದು ಎನ್ನುವುದು ಅವರಿಗೆಲ್ಲಾ ಅರ್ಥವಾಗಬೇಕು. ಸದಾ ಗಂಭೀರವಾಗಿಯೂ ಮತ್ತು ಕ್ರಮದ ಕೆಲಸ ಮಾಡುವಾಗ ಉತ್ತೇಜನಕಾರಿಯಾಗಿಯೂ, ಕಷ್ಟಗಳು, ಸಮಸ್ಯೆಗಳು ಬಂದಾಗ ಹುರಿದುಂಬಿಸುತ್ತಾ, ತಮಾಷೆ ಮಾಡುತ್ತಾ ನಿಮ್ಮ ಇರುವಿಕೆಯನ್ನು ದೃಢಗೊಳಿಸುವುದು ಮುಖ್ಯ. ನಿಮ್ಮ ಮೇಲೆ ಅವರಾಗಿಯೇ ಗೌರವ ನೀಡುವಂತೆ ವರ್ತನೆ ಇರಬೇಕು. ಸಿಟ್ಟು, ದರ್ಪ, ಅಹಂಕಾರದಿಂದ ವರ್ತಿಸಿ, ಅವರಲ್ಲಿ ಆತಂಕ, ಭಯ ಹುಟ್ಟಿಸಿ ಗೌರವ ಪಡೆಯುವಂತೆ ಆಗಬಾರದು. ಇಂತಹ ಗೌರವ ಎಂದಿಗೂ ಶಾಶ್ವತವಲ್ಲ.

ನೆನಪಿಡಿ; ವಿಶುದ್ಧ ಚಕ್ರ ಜಾಗೃತವಾದರೆ ಮಾತ್ರ ಪ್ರತಿಯೊಬ್ಬರನ್ನು ಸಹಾ ಸಂಮೋಹನಗೊಳಿಸಬಹುದು. ಹಾಗೂ ನೀವು ಮರೆಯಲಾಗದ ನಾಯಕರಾಗಿ ಉಳಿಯಬಹುದು. ನಿಮ್ಮ ನಾಯಕತ್ವದಲ್ಲಿ ಎಲ್ಲವೂ ಯಶಸ್ವೀ ಆಗುತ್ತದೆ.

## ವಾಸಕ್ಕಿಟ್ಟುಕೊಳ್ಳಬಾರದವರು

**ಆಕರ್ಮಶೀಲಂ ಚ ಮಹಾಶನಂ ಚ ಲೋಕದ್ವಿಷ್ಟಂ ಬಹುಮಾಯಂ ನೃಶಂಸಮ್।**
**ಅದೇಶಕಾಲಜ್ಞಮನಿಷ್ಟವೇಷಮ್ ಏತಾನ್ ಗೃಹೇ ನ ಪ್ರತಿವಾಸಯೇತ ॥**

**-ಹಿತೋಪದೇಶ**

ದುಷ್ಕರ್ಮಿ, ಹೊಟ್ಟೆಬಾಕ, ಮಾನವದ್ವೇಷಿ, ಮಹಾಮಾಯಾವಿ, ಕ್ರೂರಿ, ದೇಶಕಾಲಗಳ ಅರಿವಿಲ್ಲದವನು, ಇಷ್ಟವಿಲ್ಲದವನು ಇಂಥವರನ್ನು ಮನೆಯಲ್ಲಿ ವಾಸಕ್ಕಿಟ್ಟುಕೊಳ್ಳಬಾರದು - ಎಂಬುದು ಶ್ಲೋಕಾರ್ಥ.

ಸನಾತನ ಭಾರತೀಯರ ಆಚಾರವಿಚಾರ, ನಡೆ-ನುಡಿ, ಹೃದಯ ವೈಶಾಲ್ಯ ಸಾಮಾನ್ಯ ಕಲ್ಪನೆಗೆ ನಿಲುಕದ್ದು. ಜಗತ್ತಿನ ಇತರೆಡೆ ಕಾಣದ ವೈಶಿಷ್ಟ್ಯವನ್ನು ಸನಾತನ ಪರಂಪರೆಯಲ್ಲಿ ಕಾಣುತ್ತೇವೆ. ನಮಗೆ ಆಶ್ರಯ ಕೇಳಿ ಬಂದವರಿಗೆ ನಿರಾಕರಿಸಿ ಗೊತ್ತಿಲ್ಲ. ಹಸಿದವರೊಡನೆ ಹಂಚಿ ತಿನ್ನುವುದನ್ನು ಸನಾತನ ಧರ್ಮವೇ ಕಲಿಸಿದೆ. 'ಅತಿಥಿ ದೇವೋ ಭವ' ಎಂದು ನಂಬಿ ಮನೆಗೆ ಬಂದವರನ್ನು ಗೌರವಾದರಗಳಿಂದ ಸತ್ಕರಿಸುವ ಪರಂಪರೆಯ ಪಾಠ ನಮಗಿದೆ. ಅತಿಥಿ ಎಂದರೆ ಹೇಳದೇ ಕೇಳದೇ ಬರುವವನು. ಪರಿಚಯವಿಲ್ಲದಿರಲೂಬಹುದು. ಅಪರಿಚಿತರಿಗೂ ಅಶನ, ವಸನ, ವಸತಿ ಕೊಟ್ಟು ಸತ್ಕರಿಸುವುದು ನಮ್ಮ ಜಾಯಮಾನ.




ಇದು ಮಾನವತ್ವದ ಶ್ರೇಷ್ಠ ಪರಿಕಲ್ಪನೆಯೇ ಆದರೂ ಬಲ್ಲವರು ಒಂದಿಷ್ಟು ಎಚ್ಚರಿಕೆಯ ಸೂಚನೆಯನ್ನು ನೀಡಿದ್ದಾರೆ. ಮನೆಯಲ್ಲಿ ಇತರರು ನಿಲ್ಲುವುದಕ್ಕೆ ಅವಕಾಶ ಕಲ್ಪಿಸುವುದು ಮಾನವತ್ವದ ಧರ್ಮ ಮುಖ್ಯವೆನಿಸಿದರೂ, ಕೆಲವರಿಗೆ ಅವಕಾಶ ಕಲ್ಪಿಸಬಾರದು ಎಂಬ ನಿಯಮವಿದೆ. ಯಾರನ್ನೆಲ್ಲ ಮನೆಯಲ್ಲಿ ವಾಸಕ್ಕೆ ಇಟ್ಟುಕೊಳ್ಳಬಾರದು ಎಂಬುದನ್ನು ಪ್ರಸ್ತುತ ಶ್ಲೋಕದಲ್ಲಿ ನಿರೂಪಿಸಲಾಗಿದೆ. ದುಷ್ಕರ್ಮಿಗೆ ಅವಕಾಶ ಕಲ್ಪಿಸಬಾರದು. ಮೊದಲೇ ದುಷ್ಕರ್ಮಿ. ಯಾವ ಬಗೆಯ ಕೆಡುಕನ್ನೆಸಗುವುದಕ್ಕೂ ಹೇಸುವುದಿಲ್ಲ. ಇಂಥವನಿಂದ ಕೇಡು ತಪ್ಪಿದ್ದಲ್ಲ. ಮನೆಗೆ ಮಾರಿ ಹೊಕ್ಕಂತಾಗುವುದರಿಂದ ಆಶ್ರಯವನ್ನು ನೀಡಬಾರದು. ವಿದೇಶಿ ನುಸುಳುಕೋರರು ನಮ್ಮ ದೇಶದಲ್ಲಿ ಎಂತೆಂತಹ ಅನ್ಯಾಯವೆಸಗುತ್ತಿದ್ದಾರೆ ಎಂಬುದನ್ನು ಗಮನಿಸಿದಾಗ ಈ ಹೇಳಿಕೆ ಅರ್ಥವಾಗುತ್ತದೆ.

ಹೊಟ್ಟೆಬಾಕನನ್ನು ಮನೆಯೊಳಗೆ ಸೇರಿಸಬಾರದು. ಇವನಿಂದಾಗಿ ಇತರರು ಉಪವಾಸ ಬೀಳಬೇಕಾದೀತು. ಅವನು ತಿನ್ನುವ ಪರಿ ಮನೆಯನ್ನೇ ಮಸಣ ಮಾಡುವ ಸಾಧ್ಯತೆಯಿರುವುದರಿಂದ ಇಂಥವರಿಗೆ ಅವಕಾಶವೀಯಬಾರದು. ಮಾನವದ್ವೇಷಿಗೆ ಆಶ್ರಯವಿತ್ತರೆ ಅನಾಹುತ ತಪ್ಪಿದ್ದಲ್ಲ. ಆಶ್ರಯ ಕೊಟ್ಟವರು ಅಪರಾಧಿ ಸ್ಥಾನದಲ್ಲಿ ನಿಲ್ಲಬೇಕಾಗಿ ಬರಬಹುದು. ಅದ್ದರಿಂದ ಇವರನ್ನು ದೂರವಿರಿಸಬೇಕು.

ಮಹಾಮೋಸಗಾರ, ವಂಚಕ, ಕ್ರೂರಿ ಇವರಿಗಂತೂ ಆಶ್ರಯ ಕಲ್ಪಿಸಬಾರದು. ಇವರಿಂದ ಅಪಾಯವೆಂದೂ ತಪ್ಪಿದ್ದಲ್ಲ, ಇಂದಲ್ಲದಿದ್ದರೆ ನಾಳೆಯಾದರೂ ವಂಚಿಸಿ ಪರಾರಿಯಾಗುತ್ತಾರೆ. ಕೃತಜ್ಞತೆಯ ಗಂಧವಿಲ್ಲದ ಇಂಥವರಿಗೆ ಆಶ್ರಯವನ್ನು ನಿರಾಕರಿಸಬೇಕು. ದೇಶ-ಕಾಲಗಳ ಅರಿವಿಲ್ಲದವರಿಗೆ ವಾಸಕ್ಕೆ ಅವಕಾಶ ಕಲ್ಪಿಸಿದರೆ ಮನೆಯ ವ್ಯವಹಾರವೇ ಅಸ್ತವ್ಯಸ್ತವಾದೀತು. ಮನೆಯೇ ಕುರುಕ್ಷೇತ್ರವಾದೀತು.

ಕೊನೆಯದಾಗಿ ನಮಗೆ ಇಷ್ಟವಿಲ್ಲದವರಿಗೆ ಆಶ್ರಯ ನೀಡಬಾರದು. ಒಂದೊಮ್ಮೆ ಆಶ್ರಯವಿತ್ತರೆ ಮನೆಯ ನೆಮ್ಮದಿ ಹಾಳಾಗುತ್ತದೆ. ಇಷ್ಟವಿಲ್ಲದಿದ್ದರೂ ಅವನ ವ್ಯವಹಾರವನ್ನು ಒಪ್ಪಿಕೊಳ್ಳಬೇಕಾಗಿ ಬರುತ್ತದೆ. ಇದರಿಂದ ಮನೆಯ ವಾತಾವರಣವೇ ಕಲುಷಿತಗೊಳ್ಳುತ್ತದೆ. ಇಂಥವರಿಗೆ ಆಶ್ರಯವಿತ್ತು ನೆಮ್ಮದಿಯ ಬದುಕನ್ನು ಹಾಳು ಮಾಡಿಕೊಳ್ಳುವುದರ ಬದಲು ಆಶ್ರಯ ನೀಡದಿರುವುದೇ ಒಳ್ಳೆಯದು.

# ತುರ್ತುಪರಿಸ್ಥಿತಿಗೆ 51 ವರ್ಷ: ಮರೆಯಲಾಗದ ಕರಾಳ ಅಧ್ಯಾಯ

ಒಳನೋಟ
• ಕೆ.ಬಾ. ಮಲ್ಯ



ಇದೇ ಜೂನ್ ತಿಂಗಳ 25ನೇ ತಾರೀಕಿಗೆ ತುರ್ತು ಪರಿಸ್ಥಿತಿಗೆ 51 ವರ್ಷಗಳಾಗುತ್ತವೆ. ಅಂದಿನಿಂದ ಒಂದು ಪೀಳಿಗೆಯೇ ಕಳೆದುಹೋಗಿದೆ. ಇಂದಿನ ಎಳೆ ಪೀಳಿಗೆಯವರಿಗೆ ತುರ್ತು ಪರಿಸ್ಥಿತಿಯ ಘೋರ ದೌರ್ಜನ್ಯಗಳ ಬಗ್ಗೆ ಹೇಳಿದರೆ ಒಂದಷ್ಟು ಮಟ್ಟಿಗೆ ಪರಿಣಾಮವಾದೀತೇ ಹೊರತು ಹೆಚ್ಚೇನೂ ಇಲ್ಲ. ಆದರೆ ಅಂದು ಆ ಕರಾಳ ದಿನಗಳನ್ನು ಎದುರಿಸಿ, ಪ್ರತಿಭಟಿಸಿ, ಜೈಲು ಸೇರಿ, ಅಸಾಧ್ಯ ಹಿಂಸೆಗಳನ್ನು ಅನುಭವಿಸಿದ ಹಳೆ ಪೀಳಿಗೆಯವರ ಮನಸ್ಸಿನಲ್ಲಿ ಆ ಕರಾಳ ದಿನಗಳ ನೆನಪು ಇಂದಿಗೂ ಮಾಸಿಲ್ಲ. ಅವರಲ್ಲಿ ಮಾತ್ರ ಭಾವನಾತ್ಮಕ ಪರಿಣಾಮ ಆಗುತ್ತದೆ. ಪ್ರಜೆಗಳು ನಿಷ್ಕ್ರಿಯ ಪ್ರೇಕ್ಷಕರಾದರೆ ಪ್ರಜಾಪ್ರಭುತ್ವವನ್ನು ಓರ್ವ ಸರ್ವಾಧಿಕಾರಿ ಹೇಗೆ ಸರ್ವನಾಶ ಮಾಡಬಹುದು ಎಂಬುದು ತುರ್ತು ಪರಿಸ್ಥಿತಿ ಕಲಿಸುವ ಪಾಠ. ಸ್ವಂತ ಸ್ವಾರ್ಥಕ್ಕಾಗಿ, ತನ್ನ ಅಧಿಕಾರ ಉಳಿಸಿಕೊಳ್ಳುವ ದುಷ್ಟ ಉದ್ದೇಶಕ್ಕಾಗಿ ಸಂವಿಧಾನವನ್ನೇ ಹೊಸಕಿ ಹಾಕಿದ ಇಂದಿರಾಗಾಂಧಿಯವರ ನೆನಪಾಗುತ್ತದೆ. ಇಂದು ಕರ್ನಾಟಕದ ಗೃಹ ಸಚಿವರು, ಆರ್.ಎಸ್.ಎಸ್. ನೋಂದಣಿ ಮಾಡಿಸಿಕೊಂಡಿಲ್ಲ ಎನ್ನುತ್ತಾರೆ. ಇದೊಂದು ಬಾಲಿಶ ಹೇಳಿಕೆ. ಈಗಾಗಲೇ ನೆಟ್ಟಿಗರು ಈ ಬಗ್ಗೆ ಹಲವಾರು ಉತ್ತರಗಳನ್ನು ಕೊಟ್ಟಿದ್ದಾರೆ. ಗೃಹಸಚಿವರಿಗೆ ಅವರ ಕಾಂಗ್ರೆಸ್ ಅಧಿನಾಯಕಿ ಸಂವಿಧಾನ ಬುಡಮೇಲು ಮಾಡಿದ ಇತಿಹಾಸ ತಿಳಿದಿದೆಯೋ ಗೊತ್ತಿಲ್ಲ, ಹಾಗಾಗಿ ಅವರ ಹೇಳಿಕೆಯನ್ನು ಗಂಭೀರವಾಗಿ ತೆಗೆದುಕೊಳ್ಳಬೇಕಾಗಿಲ್ಲ. ಪತ್ರಕರ್ತರು, "ಸರಸಂಘಚಾಲಕರು ಈ ಬಗ್ಗೆ ಏನು ಹೇಳುತ್ತಾರೆ" ಎಂದು ಕೇಳಿದಾಗ ಅವರು ಅದಕ್ಕೆ ತಾನು ಪ್ರತಿಕ್ರಿಯಿಸುವುದಿಲ್ಲ ಎಂದು ಸರಿಯಾಗಿಯೇ ಹೇಳಿದ್ದಾರೆ. ಆದರೆ ಸಾಮಾನ್ಯ ಪ್ರಜೆಗಳಿಗೆ ಸರಿಯಾದ ತಿಳುವಳಿಕೆ ಕೊಡುವ ದೃಷ್ಟಿಯಿಂದ ಕೆಲವು ಮಾತುಗಳನ್ನು ಹೇಳಿದ್ದಾರೆ.

ಅದು ಹಾಗಿರಲಿ. ಈಗ ಇಂದಿರಾಗಾಂಧಿಯವರು 1975ರಲ್ಲಿ ತುರ್ತು ಪರಿಸ್ಥಿತಿ ಹೇರಿದ ಹಿನ್ನೆಲೆ ಬಗ್ಗೆ ಒಂದಷ್ಟು ಸ್ಮರಿಸಿಕೊಳ್ಳೋಣ. 1975 ಜೂನ್ 25ರ ಮಧ್ಯರಾತ್ರಿ ಅಂದಿನ ಪ್ರಧಾನಿ ಇಂದಿರಾಗಾಂಧಿಯವರು ದೇಶದಲ್ಲಿ ಆಂತರಿಕ ತುರ್ತು ಪರಿಸ್ಥಿತಿಯನ್ನು ಹೇರಿದರು. ಅಂದು ಭಾರತದ ಸಂವಿಧಾನದ ಕಗ್ಗೊಲೆ ನಡೆಯಿತು. ಆಕೆಯ ಮೊಮ್ಮಗ ಇಂದು ಕೆಂಪು ಹೊದಿಕೆಯ ಸಂವಿಧಾನ ಪುಸ್ತಕವೊಂದನ್ನು ಎತ್ತಿ ಹಿಡಿದು ಡ್ರಾಮಾ ಮಾಡುತ್ತಿದ್ದಾರೆ.

ಇತಿಹಾಸದಿಂದ ಪಾಠ ಕಲಿಯಬೇಕು. ಇಲ್ಲವಾದಲ್ಲಿ ಮತ್ತೆ ಅದೇ ಕರಾಳ ಕಾಲಖಂಡ ಮರುಕಳಿಸುವ ಅಪಾಯವಿದೆ. ಮಾತ್ರವಲ್ಲ ಅದನ್ನು ಆಗಾಗ ನೆನಪಿಸಿಕೊಳ್ಳಬೇಕು. Lest We forget ಎಂಬ ಮಾತೊಂದಿದೆ. ಅಂದಿನ ಕಾಂಗ್ರೆಸ್ ತನ್ನ ಜನಪ್ರಿಯತೆಯನ್ನು ಕಳೆದುಕೊಳ್ಳುತ್ತಾ ಬಂದಿತ್ತು. ಅಧಿಕಾರ ನೆಹರೂ ವಂಶದ ಕೈ ತಪ್ಪಿ ಹೋಗುವ ಪರಿಸ್ಥಿತಿ ಏರ್ಪಟ್ಟಿತ್ತು. ಲಾಲ್ ಬಹಾದ್ದೂರ್ ಶಾಸ್ತ್ರಿಯವರ ನಿಗೂಢ ಸಾವಿನ ನಂತರ ಇಂದಿರಾ ಗಾಂಧಿಯವರನ್ನು ಅಂದಿನ ಕಾಂಗ್ರೆಸ್ ನೀತಿನಿರೂಪಕ ಮಂಡಳಿ ಪ್ರಧಾನಿ ಪಟ್ಟಕ್ಕೇರಿಸಿತ್ತು. ಈ ಮಂಡಳಿಯಲ್ಲಿ ಕಾಂಗ್ರೆಸ್ ಹಳೆ ತಲೆಮಾರಿನ ದಿಗ್ಗಜರುಗಳಾಗಿದ್ದ ಕಾಮರಾಜ್ ನಾಡಾರ್, ನಿಜಲಿಂಗಪ್ಪ, ಮೊರಾರ್ಜಿ ದೇಸಾಯಿ, ಎಸ್. ಕೆ. ಪಾಟೀಲ್ ಮುಂತಾದವರಿದ್ದರು. ಇಂದಿರಾ ಗಾಂಧಿಗೆ ಅವರ ಮೂಗು ತೂರಿಸುವಿಕೆ ಸಹನೆಯಾಗದೆ ಅವರನ್ನು ಪಕ್ಷಕ್ಕೆ ಸರಿಸಿ ಕಾಂಗ್ರೆಸ್ (Congress Indira) ಪಕ್ಷ ಸ್ಥಾಪಿಸಿದರು. ಪಕ್ಷ ಇಬ್ಭಾಗವಾಯಿತು. ಹಳೆ ಕಾಂಗ್ರೆಸ್ ಕಾಂಗ್ರೆಸ್ (Congress Organisation) ಆಯಿತು. ತನ್ನ ಜನಪ್ರಿಯತೆ ಪುನಃ ಗಳಿಸಿಕೊಳ್ಳಲು ಇಂದಿರಾಗಾಂಧಿ ಬಾಂಗ್ಲಾ ವಿಮೋಚನಾ ಯುದ್ಧ ಮಾಡಿದರು. ಇದರಿಂದ ಅಪಾರ ಜನಪ್ರಿಯತೆ ಗಳಿಸಿ 1971-72ರ ಲೋಕಸಭಾ ಚುನಾವಣೆಯಲ್ಲಿ 342 ಸ್ಥಾನ ಗಳಿಸಿ ಪ್ರಧಾನಿಯಾಗಿ ಮುಂದುವರಿದರು. ಆದರೆ ಅವರ ವಿರುದ್ಧ ಸ್ಪರ್ಧಿಸಿದ್ದ ಸಮಾಜವಾದಿ ಪಕ್ಷದ ನಾಯಕ ರಾಜ್‌ನಾರಾಯಣ್ ಇಂದಿರಾಗಾಂಧಿ ವಿರುದ್ಧ ಚುನಾವಣಾ ಅಕ್ರಮದ ವಿಷಯವಾಗಿ ನ್ಯಾಯಾಲಯದಲ್ಲಿ ತಕರಾರು ಅರ್ಜಿ ಸಲ್ಲಿಸಿದರು. 1975ರ ಜೂನ್ 12ರಂದು ಅಲಹಾಬಾದ್ (ಈಗ ಪ್ರಯಾಗರಾಜ್) ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಾಗಿದ್ದ ಜಸ್ಟಿಸ್ ಜಗಮೋಹನ್ ಲಾಲ್ ಸಿನ್ಹಾ ಅವರು ಐತಿಹಾಸಿಕ ತೀರ್ಪು ನೀಡಿದರು. ತಕರಾರು ಅರ್ಜಿಯನ್ನು ಪುರಸ್ಕರಿಸಿ, ಇಂದಿರಾಗಾಂಧಿ ಚುನಾವಣೆಯಲ್ಲಿ ಅಕ್ರಮ ಎಸಗಿದ್ದಾರೆಂದೂ, ಸರಕಾರಿ ಯಂತ್ರದ ದುರುಪಯೋಗಪಡಿಸಿಕೊಂಡಿದ್ದಾರೆಂದೂ, ತೀರ್ಪು ನೀಡಿದರು. ಇಂದಿರಾಗಾಂಧಿಯ ಆಯ್ಕೆಯನ್ನು ರದ್ದುಪಡಿಸಿ; ಆರು ವರ್ಷಗಳ ಕಾಲ ಅವರು ಚುನಾವಣೆಯಲ್ಲಿ ಸ್ಪರ್ಧಿಸದಂತೆ ತೀರ್ಪು ನೀಡಿದರು. ಆಗ ಆಕೆ ಪ್ರಧಾನಿ ಪಟ್ಟಕ್ಕೆ ರಾಜೀನಾಮೆ ಕೊಡಬೇಕಾದ ಪರಿಸ್ಥಿತಿ ಏರ್ಪಟ್ಟಿತು.



342 ಸ್ಥಾನ ಗಳಿಸಿದ್ದ ಆಕೆ ಪಕ್ಷದ ಬೇರೊಬ್ಬ ಸಮರ್ಥ ನಾಯಕನನ್ನು ಪ್ರಧಾನಿಯನ್ನಾಗಿ ಮಾಡಬಹುದಾಗಿತ್ತು. ಆದರೆ ವಂಶವಾದ ಹಾಗೂ ಸರ್ವಾಧಿಕಾರಿ ಧೋರಣೆ ಆಕೆಯಲ್ಲಿ ಮಡುಗಟ್ಟಿತ್ತು. ಒಮ್ಮೆ ಗದ್ದುಗೆ ಬಿಟ್ಟು ಕೊಟ್ಟರೆ ಮತ್ತೆ ಸಿಗುವುದು ಅನುಮಾನ, ಹೇಗಾದರೂ ಮಾಡಿ ತಾನೇ ಪ್ರಧಾನಿ ಸ್ಥಾನದಲ್ಲಿ ಮುಂದುವರಿಯಬೇಕು, ಅಧಿಕಾರ ನೆಹರು ವಂಶಸ್ಥರ ಕೈಯಲ್ಲೇ ಸದಾಕಾಲಕ್ಕೂ ಇರಬೇಕು ಎಂಬ ಸರ್ವಾಧಿಕಾರಿ ಮನೋವೃತ್ತಿ ಪ್ರದರ್ಶಿಸಿದರು. ಅದಕ್ಕೆ ಅವರು ಅನುಸರಿಸಿದ ಮಾರ್ಗ, ನ್ಯಾಯಾಲಯದ ತೀರ್ಪನ್ನೇ ಧಿಕ್ಕರಿಸುವುದು, ಸಂವಿಧಾನವನ್ನೇ ತಿರುಚುವುದು. ಸರ್ವೋಚ್ಚ ನ್ಯಾಯಾಲಯದಲ್ಲಿ ಅವರ ಪಕ್ಷದ ಪ್ರಭಾವದಿಂದ ಪದೋನ್ನತಿ ಪಡೆದ ನ್ಯಾಯಾಧೀಶರನೇಕರಿದ್ದರು. ಮೂವರು ಸೀನಿಯರ್ ಜಡ್ಜ್‌ಗಳನ್ನು ಪಕ್ಕಕ್ಕೆ ಸರಿಸಿ ತನಗೆ ಅನುಕೂಲರಾದ ನ್ಯಾಯಾಧೀಶರನ್ನೇ ಮುಖ್ಯ ನ್ಯಾಯಾಧೀಶರನ್ನಾಗಿ ಪದೋನ್ನತಿ ಮಾಡಿದರು. ಈ ಅನೈತಿಕ ನಡೆಯ ವಿರುದ್ಧ ಪ್ರತಿಭಟಿಸಿ, ಜಸ್ಟಿಸ್ ಕೆ.ಎಸ್. ಹೆಗ್ಡೆ ಆದಿಯಾಗಿ ಮೂವರು ನ್ಯಾಯಾಧೀಶರು ರಾಜೀನಾಮೆ ನೀಡಿ ಹೊರನಡೆದಿದ್ದರು. ಸಂವಿಧಾನ ತಿದ್ದುಪಡಿ ಮಾಡಿ ಮೂಲಭೂತ ಹಕ್ಕುಗಳ ಹನನ ಮಾಡಲಾಯಿತು. ತಾನೇ ಪ್ರಧಾನಿ, ತಾನು ಅಧಿಕಾರ ಬಿಟ್ಟು ಕೊಡುವುದಿಲ್ಲ ಎಂದು ಘೋಷಿಸಿದರು. ಇತ್ತೀಚೆಗೆ ಪಶ್ಚಿಮ ಬಂಗಾಳದ ವಿಧಾನಸಭೆ ಚುನಾವಣೆಯಲ್ಲಿ ಮಮತಾ ಬ್ಯಾನರ್ಜಿ ಹೀನಾಯವಾಗಿ ಸೋತರೂ ತಾನು ಕುರ್ಚಿ ಬಿಟ್ಟು ಕೊಡುವುದಿಲ್ಲ ಎಂದು ಹಠ ಮಾಡಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಸರ್ವೋಚ್ಚ ನ್ಯಾಯಾಲಯ ಮಂಡಿಯೂರಿತು. ಇಂದಿರಾ ಪರವಾಗಿ ತೀರ್ಪು ಹೊರ ಬಂದಿತು. ಇಂದಿರಾಗಾಂಧಿ ಹಿಟ್ಲರ್ ನಂತೆ, ಸರ್ವಾಧಿಕಾರಿಣಿಯಂತೆ, ವರ್ತಿಸಲಾರಂಭಿಸಿದರು. ಅದಕ್ಕೆ ಮೊದಲೇ ದೇಶದಲ್ಲಿ ಜೆ.ಪಿ. ನೇತೃತ್ವದಲ್ಲಿ ಲೋಕಸಂಘರ್ಷ ಸಮಿತಿ ರಚಿತವಾಗಿ ಜನಸಂಘ, ಎಡಪಕ್ಷಗಳು, ಸಮಾಜವಾದಿಗಳು, ಕಾಂಗ್ರೆಸ್ (O), ಸ್ವತಂತ್ರ ಪಾರ್ಟಿ ಸೇರಿ ಜನತಾ ಪಕ್ಷದ ಉದಯವಾಯಿತು. ಹಿಂದಿನ ಜನಸಂಘ ಜನತಾ ಪಕ್ಷದಲ್ಲಿ ವಿಲೀನಗೊಂಡಿತು. ದೇಶಾದ್ಯಂತ ಜೆ.ಪಿ.ಯವರ ಸಮಗ್ರ ಕ್ರಾಂತಿಯ ಆಂದೋಳನ ಬಿಸಿ ತಟ್ಟಲಾರಂಭಿಸಿತ್ತು. ಆಗ ನಡೆದ ಗುಜರಾತ್ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಸೋತಿತ್ತು. ಈ ಎಲ್ಲಾ ಘಟನಾವಳಿಗಳಿಂದ ಕಂಗೆಟ್ಟ ಇಂದಿರಾಗಾಂಧಿ ಜೆ.ಪಿ. ಆಂದೋಳನದ ಮೇಲೆ ನಿಷೇಧ ಹೇರಿದರು. ರಾ.ಸ್ವ.ಸಂಘದ ಮೇಲೂ ಪ್ರತಿಬಂಧ ಹೇರಿದರು. ಎಲ್ಲ ಪಕ್ಷಗಳ ನಾಯಕರನ್ನು, ಸರಸಂಘಚಾಲಕ ಬಾಳಾಸಾಹೇಬ್ ದೇವರಸ್, ಜಯಪ್ರಕಾಶ ನಾರಾಯಣ್, ಅಟಲ್ ಬಿಹಾರಿ ವಾಜಪೇಯಿ, ಲಾಲ್ ಕೃಷ್ಣ ಅಡ್ವಾಣಿ ಮುಂತಾದವರನ್ನು ಬಂಧಿಸಿ ಜೈಲಿಗಟ್ಟಲಾಯಿತು. ಪತ್ರಿಕಾ ಮಾಧ್ಯಮದ ಮೇಲೆ ನಿಯಂತ್ರಣ ಹೇರಿದರು. MISA (Maintenance of Internal Security Act) ಹೆಸರಿನಲ್ಲಿ ಅನೇಕರನ್ನು ವಿಚಾರಣೆಯಿಲ್ಲದೇ ಜೈಲಿನಲ್ಲಿರಿಸಲಾಯಿತು. ಆರ್.ಎಸ್.ಎಸ್. ಸುಮ್ಮನೆ ಕುಳಿತುಕೊಳ್ಳಲಿಲ್ಲ, ನವೆಂಬರ್ 14ರಂದು ದೇಶಾದ್ಯಂತ ಸತ್ಯಾಗ್ರಹಕ್ಕೆ ಕರೆ ನೀಡಿತು. ಬೃಹತ್ ಪ್ರತಿಭಟನೆ ನಡೆಯಿತು. ಲಕ್ಷಾಂತರ ಸಂಘ ಸ್ವಯಂಸೇವಕರು ಸತ್ಯಾಗ್ರಹ ಮಾಡಿ ಜೈಲು ಸೇರಿದರು. ಸ್ವಯಂಸೇವಕರ ಮೇಲೆ ಹಿಂಸಾತ್ಮಕ ಪೊಲೀಸ್ ದೌರ್ಜನ್ಯ ನಡೆಸಲಾಯಿತು. ಅನೇಕ ಕಾರ್ಯಕರ್ತರು ಹುತಾತ್ಮರಾದರು. ಅದೊಂದು ವ್ಯಾಪಕ ಜನಾಂದೋಳನವೇ ಆಗಿತ್ತು. ಗಾಬರಿಗೊಂಡ ಇಂದಿರಾಗಾಂಧಿ ತುರ್ತು ಪರಿಸ್ಥಿತಿಯನ್ನು ಹಿಂತೆಗೆದುಕೊಳ್ಳಬೇಕಾಯಿತು. 1977 ಮಾರ್ಚ್‌ನಲ್ಲಿ ಚುನಾವಣೆ ನಡೆದು ಇಂದಿರಾಗಾಂಧಿಯ ಕಾಂಗ್ರೆಸ್ ಪಕ್ಷ ಸೋತು ಜನತಾ ಪಕ್ಷದ ಸರಕಾರ ಅಧಿಕಾರಕ್ಕೇರಿತು. 18 ತಿಂಗಳ ಕಾರಾವಾಸ ಅನುಭವಿಸಿದ ಸತ್ಯಾಗ್ರಹಿಗಳ ಬಿಡುಗಡೆ ಆಯಿತು.

51 ವರ್ಷಗಳ ನಂತರವೂ ಈ ಕರಾಳ ಅಧ್ಯಾಯ, ಪ್ರಜಾಪ್ರಭುತ್ವದ ಕಗ್ಗೊಲೆ, ಸಂವಿಧಾನದ ನಾಶ, ಹಿಂಸೆ, ಜೈಲು ಎಲ್ಲ ನೆನಪುಗಳೂ ಪ್ರತಿವರ್ಷ ಜೂನ್ 25ರ ಹೊತ್ತಿಗೆ ಉಮ್ಮಳಿಸಿ ಬರುತ್ತವೆ. ಪ್ರಿಯಾಂಕ್ ಖರ್ಗೆಯಂಥ ಅಪ್ರಬುದ್ಧ ಕಾಂಗ್ರೆಸ್ ನಾಯಕರಿಗೆ ಇದರ ಅರಿವಿಲ್ಲ. ಕಳೆದ ನೂರು ವರ್ಷಗಳಲ್ಲಿ ಬ್ರಿಟಿಷರು, ನೆಹರೂ-ಇಂದಿರಾ ಕಾಂಗ್ರೆಸ್ ಯಾರೂ ಸಂಘದ ನೋಂದಣಿ ಬಗ್ಗೆ ಮಾತಾಡಿಲ್ಲ, ಸಂಘ ಒಂದು ಸಂಸ್ಥೆಯಲ್ಲ, ರಾಷ್ಟ್ರೀಯತೆಯ ಜಾಗೃತಿಯ ಆಂದೋಳನ. ಅದನ್ನು ಅರಿಯದ ಅಪ್ರಬುದ್ಧರು ಸಂಘ ನೋಂದಣಿ ಬಗ್ಗೆ ಮಾತನಾಡುತ್ತಾರೆ.

# ಪ್ರಿಯಾಂಕ ಖರ್ಗೆ ಅವರಿಗೆ ಸಂವಿಧಾನದ ಒಂದು ಪಾಠ

ಡಾ. ನಿರಂಜನ ಪೂಜಾರ, ಸಹಾಯಕ ಪ್ರಾಧ್ಯಾಪಕರು,
ಕಲ್ಬುರ್ಗಿ ಕೇಂದ್ರೀಯ ವಿಶ್ವವಿದ್ಯಾಲಯ



ರಾಷ್ಟ್ರೀಯ ಸ್ವಯಂಸೇವಕ ಸಂಘ ಎಲ್ಲಿಯೂ ನೋಂದಣಿಯಾಗಿಲ್ಲ, ಹಾಗಾಗಿ ಅದೊಂದು ನಿಗೂಢ ಸಂಸ್ಥೆ ಎಂಬ ಸಚಿವ ಪ್ರಿಯಾಂಕ್ ಖರ್ಗೆ ಅವರ ಇತ್ತೀಚಿನ ಹೇಳಿಕೆಯು ಮತ್ತು ಅವರ ಪತ್ರ ಕೇವಲ ಒಂದು ರಾಜಕೀಯ ಪ್ರಲಾಪವಾಗಿ ಉಳಿದಿಲ್ಲ, ಬದಲಾಗಿ ಅದು ಭಾರತೀಯ ಸಂವಿಧಾನದ ಮೂಲಭೂತ ಹಕ್ಕುಗಳ ವ್ಯಾಖ್ಯಾನ ಮತ್ತು ಭಾರತದ ಸಾಂಸ್ಕೃತಿಕ-ಸಾಂಸ್ಥಿಕ ಪರಂಪರೆಯ ಕುರಿತಾದ ಅವರ ಬೌದ್ಧಿಕ ದಾರಿದ್ರ್ಯವನ್ನು ಬೆತ್ತಲು ಮಾಡಿದೆ. ನೂರು ವರ್ಷಗಳ ಇತಿಹಾಸವಿರುವ, ದೇಶದ ಪ್ರತಿ ಹಳ್ಳಿಯಲ್ಲೂ ಬೇರೂರಿರುವ ಒಂದು ರಾಷ್ಟ್ರೀಯ ಚಳವಳಿಯನ್ನು ಕೇವಲ 'ನೋಂದಣಿ ಪ್ರಮಾಣಪತ್ರ'ದ ಕೊರತೆಯಿಂದ ಅಳೆಯಲು ಹೊರಟಿರುವುದು, ವಸಾಹತುಶಾಹಿ ಗುಲಾಮಿ ಮನಸ್ಥಿತಿಯ ಸ್ಪಷ್ಟ ಕುರುಹಾಗಿದೆ.

**ಸಾಂವಿಧಾನಿಕ ಸಿಂಧುತ್ವ**

ಸಂವಿಧಾನದ ಪಾಠ ಮಾಡುವವರು ಸಂವಿಧಾನದ ವಿಧಿಗಳನ್ನು ಸರಿಯಾಗಿ ಓದಿಕೊಳ್ಳಬೇಕು. ಭಾರತೀಯ ಸಂವಿಧಾನದ ಅನುಚ್ಛೇದ 19(1)(ಸಿ) ಪ್ರತಿಯೊಬ್ಬ ನಾಗರಿಕನಿಗೂ 'ಸಂಘ-ಸಂಸ್ಥೆಗಳನ್ನು ರಚಿಸಿಕೊಳ್ಳುವ ಸ್ವಾತಂತ್ರ್ಯ'ವನ್ನು ಒಂದು ಪರಮೋಚ್ಚ ಮೂಲಭೂತ ಹಕ್ಕಾಗಿ ಖಾತರಿಪಡಿಸಿದೆ. ಕಾನೂನುಶಾಸ್ತ್ರದ ಪ್ರಕಾರ ಯಾವುದೇ ಒಂದು ಸಂಘಟನೆ ಅಥವಾ ಸಮೂಹ ಅಸ್ತಿತ್ವಕ್ಕೆ ಬರಲು ಸರ್ಕಾರದ ಅಧಿಕೃತ ನೋಂದಣಿ ಕಡ್ಡಾಯವಲ್ಲ. ಸೊಸೈಟೀಸ್ ಕಾಯ್ದೆ ಅಥವಾ ಟ್ರಸ್ಟ್ ಕಾಯ್ದೆಯಡಿ ನೋಂದಣಿ ಮಾಡಿಕೊಳ್ಳುವುದು ಕೇವಲ ಬ್ಯಾಂಕ್ ಖಾತೆ ತೆರೆಯಲು, ಸರ್ಕಾರದ ಅನುದಾನ ಪಡೆಯಲು, ಆಸ್ತಿ ಖರೀದಿಸಲು ಅಥವಾ ತೆರಿಗೆ ವಿನಾಯಿತಿ ಪಡೆಯಲು ರೂಪಿಸಲಾದ ಆಡಳಿತಾತ್ಮಕ ವ್ಯವಸ್ಥೆಯೇ ಹೊರತು ಸಂಘಟನೆಯ ಸಾಂವಿಧಾನಿಕ ಸಿಂಧುತ್ವವನ್ನು ನಿರ್ಧರಿಸುವ ಅಂತಿಮ ಮಾನದಂಡವಲ್ಲ. ಸಾರ್ವಜನಿಕ ಸುವ್ಯವಸ್ಥೆ ಮತ್ತು ರಾಷ್ಟ್ರದ ಸಾರ್ವಭೌಮತೆಗೆ ಧಕ್ಕೆ ತರದ ಯಾವುದೇ ಅನೋಂದಾಯಿತ ಸಮೂಹವು ಸಂಪೂರ್ಣವಾಗಿ ಸಂವಿಧಾನಬದ್ಧವಾಗಿಯೇ ಕಾರ್ಯಾಚರಿಸುತ್ತದೆ. ಈ ಕನಿಷ್ಠ ಜ್ಞಾನವಿಲ್ಲದೆ ಆರ್‌ಎಸ್‌ಎಸ್ ಅನ್ನು ನಿಗೂಢ ಸಂಘಟನೆ ಎನ್ನುವುದು ಸಂವಿಧಾನದ ಆಶಯಕ್ಕೇ ಮಾಡುವ ಘೋರ ಅಪಚಾರ.

**ತುರ್ತುಪರಿಸ್ಥಿತಿ**

ಇನ್ನು ಆರ್‌ಎಸ್‌ಎಸ್ ಅನ್ನು ಸಂವಿಧಾನ ವಿರೋಧಿ ಎಂದು ಬಿಂಬಿಸುವ ಮುನ್ನ ಇತಿಹಾಸದ ಪುಟಗಳನ್ನು ಒಮ್ಮೆ ತಿರುವಿಹಾಕಬೇಕು. 1975ರಲ್ಲಿ ಸಂವಿಧಾನದ ರಕ್ಷಣೆಗಾಗಿ ಬೀದಿಗಿಳಿದು ಹೋರಾಡಿದ ಅತಿದೊಡ್ಡ ಶಕ್ತಿ ಸಂಘ. ಅಂದು ಸಂವಿಧಾನದ ಕುತ್ತಿಗೆ ಹಿಸುಕಿದವರ ವಾರಸುದಾರರು ಇಂದು ಅದೇ ಸಂವಿಧಾನವನ್ನು ರಕ್ಷಿಸಲು ಪ್ರಾಣ ಪಣಕ್ಕಿಟ್ಟ ಸಂಘಟನೆಗೆ ಸಂವಿಧಾನದ ಪಾಠ ಮಾಡಲು ಹೊರಟಿರುವುದು ಶತಮಾನದ ಬಹುದೊಡ್ಡ ವ್ಯಂಗ್ಯ!

**ವಸಾಹತುಶಾಹಿ ಮಾನದಂಡ**

ಭಾರತೀಯ ಸಮಾಜಶಾಸ್ತ್ರದ ಹಿನ್ನೆಲೆಯಲ್ಲಿ ನೋಡಿದಾಗ ಪ್ರತಿಯೊಂದು ಸಾಮಾಜಿಕ ಗುಂಪನ್ನು 'ನೋಂದಣಿ'ಯೆಂಬ ಚೌಕಟ್ಟಿನಡಿಗೆ ಒಳಪಡಿಸುವ ಕಲ್ಪನೆಯೇ ಬ್ರಿಟಿಷ್ ಆಳ್ವಿಕೆಯಲ್ಲಿನ ವ್ಯವಸ್ಥೆಯ ಕೊಡುಗೆ. ಆದರೆ ಭಾರತೀಯ ನಾಗರಿಕತೆ ಅನಾದಿ ಕಾಲದಿಂದಲೂ ವಿಕೇಂದ್ರೀಕೃತ ಹಾಗೂ ಅನೌಪಚಾರಿಕ ಸಂಸ್ಥೆಗಳ ಮೂಲಕವೇ ಬೆಳೆದಿದೆ.

ನಮ್ಮ ಸಾವಿರಾರು ಮಠಮಾನ್ಯಗಳು, ಪ್ರಾಚೀನ ವೇದ ಪಾಠಶಾಲೆಗಳು, ಹಳ್ಳಿಗಳ ಭಜನಾ ಮಂಡಳಿಗಳು ಅಥವಾ ಕೋಟ್ಯಂತರ ರೂಪಾಯಿಗಳ ವಹಿವಾಟು ನಡೆಯುವ ಊರ ಜಾತ್ರಾ ಸಮಿತಿಗಳು ಯಾವುದೇ ಬ್ರಿಟಿಷ್ ಕಾಯ್ದೆಯಡಿ ಹುಟ್ಟಿಕೊಂಡಿಲ್ಲ, ಇವು ಸಮಾಜದ ವಿಶ್ವಾಸ, ಧರ್ಮ ಮತ್ತು ಸಾಮೂಹಿಕ ಸಹಕಾರದ ಆಧಾರದ ಮೇಲೆ ಸ್ವಯಂ ನಿಯಂತ್ರಿತವಾಗಿ ನಡೆಯುವ ಸಾವಯವ ವ್ಯವಸ್ಥೆಗಳು. ಆರ್‌ಎಸ್‌ಎಸ್ ಕೂಡ ಇದೇ ಮಣ್ಣಿನ ಗುಣವಿರುವ ಒಂದು ಬೃಹತ್ ಕೌಟುಂಬಿಕ ವ್ಯವಸ್ಥೆಯಾಗಿದ್ದು, ಅದನ್ನು ಕೇವಲ ಕಾಗದದ ರಿಜಿಸ್ಟ್ರೇಷನ್ ಸರ್ಟಿಫಿಕೇಟ್ ಮೂಲಕ ಅಳೆಯುವುದು ಭಾರತೀಯ ಪರಂಪರೆಗೆ ಮಾಡುವ ಅವಮಾನ.

**ಪಾರದರ್ಶಕತೆ ಮತ್ತು ಆರ್ಥಿಕ ಸ್ವಾಯತ್ತತೆ**

ಆರ್‌ಎಸ್‌ಎಸ್ ಕಾನೂನನ್ನು ಉಲ್ಲಂಘಿಸುತ್ತದೆ ಅಥವಾ ಗುಪ್ತವಾಗಿ ಕಾರ್ಯಾಚರಿಸುತ್ತದೆ ಎಂಬುದು ಮತ್ತೊಂದು ಬೌದ್ಧಿಕ ಸುಳ್ಳು. ಆರ್‌ಎಸ್‌ಎಸ್ ಎಂಬುದು ಒಂದು ಸೈದ್ಧಾಂತಿಕ ಪ್ರವಾಹ. ಆದರೆ ಎಲ್ಲಿ ಭೌತಿಕ ಮತ್ತು ಆರ್ಥಿಕ ವ್ಯವಹಾರಗಳ ಪ್ರಶ್ನೆ ಬರುತ್ತದೆಯೋ ಅಲ್ಲಿ ಸಂಘವು ಕಟ್ಟುನಿಟ್ಟಾಗಿ ಕಾನೂನನ್ನು ಪಾಲಿಸುತ್ತದೆ. ದೇಶಾದ್ಯಂತ ಇರುವ ಸಂಘ ಕಾರ್ಯಾಲಯಗಳು ಮತ್ತು ಜಮೀನುಗಳು ಅಧಿಕೃತವಾಗಿ ನೋಂದಾಯಿತವಾದ ಟ್ರಸ್ಟ್‌ಗಳ ಸುಪರ್ದಿಯಲ್ಲಿವೆ ಮತ್ತು ಅವು ಪ್ರತಿವರ್ಷ ಲೆಕ್ಕಪರಿಶೋಧನಾ ವರದಿಗಳನ್ನು ಸರ್ಕಾರಕ್ಕೆ ಸಲ್ಲಿಸುತ್ತವೆ. ಅಷ್ಟೇ ಅಲ್ಲದೆ ಸಂಘದ ಪ್ರೇರಣೆಯಿಂದ ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿರುವ ಅಂಗಸಂಸ್ಥೆಗಳೆಲ್ಲವೂ ಸೊಸೈಟೀಸ್ ಅಥವಾ ಟ್ರಸ್ಟ್ ಕಾಯ್ದೆಯಡಿ ನೋಂದಣಿಯಾದ ಕಾನೂನುಬದ್ಧ ಸಂಸ್ಥೆಗಳೇ ಆಗಿವೆ. ಯಾವುದೇ ಬಾಹ್ಯ ಆರ್ಥಿಕ ಸಹಾಯವಿಲ್ಲದೆ, ಕೇವಲ ತನ್ನ ಸ್ವಯಂಸೇವಕರು ಪ್ರತಿ ವರ್ಷ ಅತ್ಯಂತ ಪಾರದರ್ಶಕವಾಗಿ ನೀಡುವ ಗುರುದಕ್ಷಿಣೆಯೆಂಬ ವ್ಯವಸ್ಥೆಯಿಂದ ನಡೆಯುವ ಸಂಘಟನೆಗೆ ಸರ್ಕಾರದ ಮಾನ್ಯತೆಗಾಗಿ ಹಂಬಲಿಸುವ ದರ್ದು ಇರುವುದಿಲ್ಲ.

**ಪ್ರಬುದ್ಧ ರಾಜಕಾರಣದ ಅಗತ್ಯ**

ಸಂವಿಧಾನವನ್ನು ಕೇವಲ ಓದುವುದಕ್ಕಿಂತ, ಅದರ ತಾತ್ವಿಕ ಆಶಯವನ್ನು ಗ್ರಹಿಸುವುದೇ ಪ್ರಬುದ್ಧ ರಾಜಕಾರಣದ ಲಕ್ಷಣ. ಒಂದು ಸಂಘಟನೆಯ ಶ್ರೇಷ್ಠತೆಯು ರಿಜಿಸ್ಟ್ರಾರ್ ಕಚೇರಿಯ ಕಡತದಲ್ಲಿರುವ ಪ್ರಮಾಣಪತ್ರದಿಂದ ನಿರ್ಧಾರವಾಗುವುದಿಲ್ಲ.

ಕಾಗದದಲ್ಲಿ ರಿಜಿಸ್ಟರ್ ಆಗಿ, ವಿದೇಶಿ ಫಂಡ್ ತಂದು, ದೇಶವಿಭಜಕ ಕೃತ್ಯಗಳಲ್ಲಿ ತೊಡಗುವ ಎನ್‌ಜಿಒಗಳ ಬೆನ್ನಿಗೆ ನಿಲ್ಲುವವರಿಗೆ ಆರ್‌ಎಸ್‌ಎಸ್‌ನಂತಹ ನೈಜ ಸಾಂವಿಧಾನಿಕ ಮತ್ತು ಸಾಮಾಜಿಕ ಶಕ್ತಿಯ ಮಹತ್ವ ಅರ್ಥವಾಗುವುದು ಕಷ್ಟ. ರಾಜಕೀಯ ಭಿನ್ನಾಭಿಪ್ರಾಯಗಳು ಏನೇ ಇರಲಿ ಸಂವಿಧಾನ ಮತ್ತು ಇತಿಹಾಸದ ಕುರಿತ ಚರ್ಚೆಗಳು ಬೌದ್ಧಿಕ ಎತ್ತರದಲ್ಲಿರಬೇಕೇ ಹೊರತು ಆಧಾರರಹಿತ ಪ್ರಲಾಪಗಳಾಗಿರಬಾರದು.

## ಕಿರುಸುದ್ದಿ

### ಸಾರ್ವಜನಿಕರ ಸಹಕಾರಕ್ಕೆ ಸರ್ಕಾರ ಮನವಿ

• **ಬೆಂಗಳೂರು:** ರಾಜ್ಯದಾದ್ಯಂತ ಹೊಸ ಶೈಕ್ಷಣಿಕ ವರ್ಷ ಆರಂಭಗೊಂಡಿದ್ದು, ಯಾವುದೇ ಮಗು ಶಿಕ್ಷಣದಿಂದ ವಂಚಿತರಾಗದಂತೆ ನೋಡಿಕೊಳ್ಳಲು ರಾಜ್ಯ ಸರ್ಕಾರ, ಸಾರ್ವಜನಿಕರ ಸಹಕಾರಕ್ಕೆ ಮನವಿ ಮಾಡಿದೆ. ತಮ್ಮ ನಿವಾಸ ಪ್ರದೇಶ, ಉದ್ಯೋಗದ ಸ್ಥಳ ಅಥವಾ ಸುತ್ತಮುತ್ತಲಿನಲ್ಲಿ ಎಲ್ಲಿಯಾದರೂ ಶಾಲೆಗೆ ಹೋಗದಿರುವ ಮಕ್ಕಳನ್ನು ಗಮನಿಸಿದರೆ, ಕೂಡಲೇ ಸಮೀಪದ ಸರ್ಕಾರಿ ಶಾಲೆಗೆ ಮಾಹಿತಿ ನೀಡುವಂತೆ ಶಾಲಾ ಶಿಕ್ಷಣ ಇಲಾಖೆ ಮನವಿ ಮಾಡಿದೆ. 6 ರಿಂದ 14 ವರ್ಷದ ಎಲ್ಲ ಮಕ್ಕಳಿಗೂ ಶಿಕ್ಷಣ ಪಡೆಯುವುದು ಹಕ್ಕಾಗಿದ್ದು, ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಪುನಃ ಶಿಕ್ಷಣದ ಮುಖ್ಯವಾಹಿನಿಗೆ ತರಲು ಸರ್ಕಾರ ವಿವಿಧ ಕಾರ್ಯಕ್ರಮಗಳನ್ನು ಜಾರಿಗೊಳಿಸಿದೆ. ವಲಸೆ ಕಾರ್ಮಿಕರ ಮಕ್ಕಳು ಸೇರಿದಂತೆ ವಿವಿಧ ಕಾರಣಗಳಿಂದ ಶಾಲೆಯಿಂದ ದೂರ ಉಳಿದಿರುವ ಮಕ್ಕಳನ್ನು ಗುರುತಿಸಿ, ಅವರಿಗೆ ಶಿಕ್ಷಣದ ಅವಕಾಶ ಕಲ್ಪಿಸುವ ಕಾರ್ಯ ನಿರಂತರವಾಗಿ ನಡೆಯುತ್ತಿದ್ದು, ಈ ಕಾರ್ಯದಲ್ಲಿ ಸ್ಥಳೀಯ ಸಮುದಾಯ, ಪೋಷಕರು ಹಾಗೂ ಸಾರ್ವಜನಿಕರ ಸಹಭಾಗಿತ್ವ ಅತ್ಯಂತ ಮಹತ್ವದ್ದಾಗಿದೆ ಎಂದು ಇಲಾಖೆ ತಿಳಿಸಿದೆ.

### ನಿರ್ದೇಶಕರ ಬಂಧನ ಕಾನೂನಿಗೆ ವಿರೋಧ: ಹೈಕೋರ್ಟ್

• **ಬೆಂಗಳೂರು:** ವಂಚನೆ ಆರೋಪದಲ್ಲಿ ಹಣ ಪಡೆದ ಆರೋಪಗಳನ್ನು ಆಧರಿಸಿ ಗೇಮ್ಸ್‌ಕ್ರಾಫ್ಟ್ ಕಂಪನಿಯ ಮೂವರು ನಿರ್ದೇಶಕರನ್ನು ಬಂಧಿಸಿದ್ದ ಜಾರಿ ನಿರ್ದೇಶನಾಲಯದ (ಇಡಿ) ಕ್ರಮ ಕಾನೂನಿಗೆ ವಿರುದ್ಧವಾಗಿದೆ ಎಂದು ಹೈಕೋರ್ಟ್ ಆದೇಶಿಸಿ, ಅವರನ್ನು ಬಿಡುಗಡೆಗೊಳಿಸಲು ನಿರ್ದೇಶಿಸಿದೆ. ತಮ್ಮ ಬಂಧನ ಕಾನೂನು ಬಾಹಿರ ಎಂದು ಘೋಷಿಸಬೇಕು ಎಂದು ಕೋರಿ ಕಂಪನಿಯ ನಿರ್ದೇಶಕರಾದ ಗುರುಗ್ರಾಮದ ದೀಪಕ್ ಸಿಂಗ್, ವಿಕಾಸ್ ತನೇಜಾ ಮತ್ತು ಪೃಥ್ವಿರಾಜ್ ಸಿಂಗ್ ಸಲ್ಲಿಸಿದ್ದ ಅರ್ಜಿಗಳನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರ ಏಕಸದಸ್ಯ ಪೀಠ ಪುರಸ್ಕರಿಸಿದೆ. ಗೇಮ್ಸ್‌ಕ್ರಾಫ್ಟ್ ನಿರ್ದೇಶಕರ ಬಂಧನವು ಹಣ ಅಕ್ರಮ ವರ್ಗಾವಣೆ ತಡೆ ಕಾಯಿದೆಯ ಅಡಿಯಲ್ಲಿನ ಅಗತ್ಯತೆಗಳನ್ನು ಆಧರಿಸಿಲ್ಲ. ಒಂದು ವೇಳೆ, ಪಿಎಂಎಲ್‌ಎ ಸೆಕ್ಷನ್ 50ರ ಅಡಿಯಲ್ಲಿ ಇಡಿ ಅಧಿಕಾರಿಗಳು ಹೇಳಿಕೆ ದಾಖಲಿಸಿದ್ದರೂ ಕಾನೂನು ಕ್ರಮಕ್ಕೆ ಬಯಸಿದರೆ ಅರ್ಜಿದಾರರ ವಿರುದ್ಧ ಸಮನ್ಸ್ ಜಾರಿಗೊಳಿಸಿ ಕಾನೂನು ಪ್ರಕಾರ ಮುಂದುವರಿಯಲು ಮುಕ್ತವಾಗಿದ್ದಾರೆ ಎಂದು ಪೀಠ ಸ್ಪಷ್ಟಪಡಿಸಿದೆ. ಆನ್‌ಲೈನ್ ಕೌಶಲ್ಯಾಧಾರಿತ (ರಮ್ಮಿ, ಲೂಡೊ, ಪೋಕರ್) ಆಟಗಳ ಕಂಪನಿಯಲ್ಲಿ ಒಂದಾದ ಗೇಮ್ಸ್‌ಕ್ರಾಫ್ಟ್ ಕಂಪನಿಯು ಜನರಿಗೆ ವಂಚಿಸಿ, ಹಣ ಗಳಿಸಿ ಅದನ್ನು ಅನ್ಯ ಉದ್ದೇಶಕ್ಕೆ ದೇಶ ಬಾಹಿರಕ್ಕೆ ವರ್ಗಾಯಿಸಿದೆ. ನಕಲಿ ಬಿಲ್‌ಗಳನ್ನು ಸೃಷ್ಟಿಸಿ ಹಣ ಒಪ್ಪಾಯಿಸಲಾಗಿದೆ ಎಂದು ಇಡಿ ಆರೋಪಿಸಿತ್ತು. ಈ ಕಂಪನಿಯ ಮುಖ್ಯಸ್ಥರ ವಿರುದ್ಧ ತೆಲಂಗಾಣದ ಮೂರು ಕಡೆ ಎಫ್‌ಐಆರ್ ದಾಖಲಾಗಿದ್ದವು ಅಧರಿಸಿ ಇಡಿ ಪ್ರಕರಣ ದಾಖಲಿಸಿತ್ತು. ಗೇಮ್ಸ್‌ಕ್ರಾಫ್ಟ್ ನಿರ್ದೇಶಕರು ಮೇ 8ರಿಂದ ಇಲ್ಲಿಯವರೆಗೆ ನ್ಯಾಯಾಂಗ ಬಂಧನದಲ್ಲಿದ್ದರು. ಬಂಧನ ಅಕ್ರಮ ಎಂದು ಘೋಷಿಸುವಂತೆ ಅರ್ಜಿದಾರರು ನ್ಯಾಯಾಲಯದ ಮೆಟ್ಟಿಲೇರಿದ್ದರು.

### ಬಿಜೆಪಿ ವಿವಿಧ ಮೋರ್ಚಾಗಳಿಗೆ ಪದಾಧಿಕಾರಿಗಳ ನೇಮಕ

• **ತಿಪಟೂರು:** ನಗರದ ಬಿಜೆಪಿ ಮಂಡಲದ ವತಿಯಿಂದ ವಿವಿಧ ಮೋರ್ಚಾಗಳ ಅಧ್ಯಕ್ಷರು ಹಾಗೂ ಪ್ರಧಾನ ಕಾರ್ಯದರ್ಶಿಗಳನ್ನು ನೇಮಕ ಮಾಡಲಾಗಿದೆ ಎಂದು ನಗರ ಮಂಡಲದ ಅಧ್ಯಕ್ಷ ಎಚ್.ಆರ್. ಜಗದೀಶ್ ತಿಳಿಸಿದ್ದಾರೆ. ರೈತ ಮೋರ್ಚಾದ ಅಧ್ಯಕ್ಷರಾಗಿ ತಿಮ್ಮೇಗೌಡ ಗೊರಗೊಂಡನಹಳ್ಳಿ ಹಾಗೂ ಪ್ರಧಾನ ಕಾರ್ಯದರ್ಶಿಗಳಾಗಿ ಬಂಡಿಹಳ್ಳಿ ಜಗದೀಶ್.ಬಿ.ಎಸ್. ಮತ್ತು ಶಾರದಾನಗರದ ಕಾಂತರಾಜು.ಸಿ.ಎಮ್ ಅವರನ್ನು ನೇಮಕ ಮಾಡಲಾಗಿದ್ದು, ಮಹಿಳಾ ಮೋರ್ಚಾದ ಅಧ್ಯಕ್ಷರಾಗಿ ಜಯಲಕ್ಷ್ಮಿ ಗುರುದತ್.ಟಿ.ಎಸ್. ಹಾಗೂ ಪ್ರಧಾನ ಕಾರ್ಯದರ್ಶಿಗಳಾಗಿ ಗೊರಗೊಂಡನಹಳ್ಳಿಯ ತಿಮ್ಮೇಗೌಡ ಮತ್ತು ಗಾಂಧಿನಗರದ ಆಶಾಲೋಕೇಶ್, ಒಬಿಸಿ ಮೋರ್ಚಾದ ಅಧ್ಯಕ್ಷರಾಗಿ ಬಾಲಾಜಿ ಎಸ್.ಸ್ವಾಮಿ ಹಾಗೂ ಪ್ರಧಾನ ಕಾರ್ಯದರ್ಶಿಗಳಾಗಿ ಗಾಂಧಿನಗರದ ಶಶಿಕುಮಾರ್ ಮತ್ತು ಶಾರದಾನಗರದ ಮಾಂತೇಶ್.ಎಚ್. ಎಸ್. ನೇಮಕಗೊಂಡಿದ್ದಾರೆ. ಎಸ್.ಸಿ. ಮೋರ್ಚಾದ ಅಧ್ಯಕ್ಷರಾಗಿ ಕೆಂಚರಾಯ್ಯ ಶಂಕರಪ್ಪ ಹಾಗೂ ಪ್ರಧಾನ ಕಾರ್ಯದರ್ಶಿಗಳಾಗಿ ಗೊರಗೊಂಡನಹಳ್ಳಿ ರಾಮು ಮತ್ತು ಮಾರನಗೆರೆ ಚರಣ್.ಎಮ್. ಎಸ್.ಟಿ ಮೋರ್ಚಾದ ಅಧ್ಯಕ್ಷರಾಗಿ ನೊಣವಿನಕೆರೆ ಸುಧಾಕರ್.ಜಿ ಹಾಗೂ ಪ್ರಧಾನ ಕಾರ್ಯದರ್ಶಿಗಳಾಗಿ ಟಿ.ಎಲ್.ಪಾಳ್ಯದ ಮಹೇಶ್ ಮತ್ತು ಹಿಂಡೇನಹಳ್ಳಿ ತೇಜಕುಮಾರ್ ಅವರನ್ನು ನೇಮಕ ಮಾಡಲಾಗಿದೆ. ಯುವ ಮೋರ್ಚಾದ ಅಧ್ಯಕ್ಷರಾಗಿ ಶಾರದಾನಗರದ ಹರ್ಷ.ಎಸ್. ಹಾಗೂ ಪ್ರಧಾನ ಕಾರ್ಯದರ್ಶಿಗಳಾಗಿ ಬಿಂದುನಗರದ ನಾಗೇಶ್ ಮತ್ತು ವಿದ್ಯಾನಗರದ ಉದಯ್ ನೇಮಕ ಮಾಡಲಾಗಿದೆ.

### ಐಪಿಎಲ್ ಬೆಟ್ಟಿಂಗ್‌ಗೆ ಯುವಕ ಬಲಿ

• **ಗುಬ್ಬಿ:** ಐಪಿಎಲ್ ಆನ್‌ಲೈನ್ ಬೆಟ್ಟಿಂಗ್‌ನಿಂದ ಉಂಟಾದ ಸಾಲದ ಬಾಧೆ ತಾಳಲಾರದೆ ಯುವಕನೊಬ್ಬ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲೂಕಿನ ಅಂಕಸಂದ್ರ ಗ್ರಾಮದಲ್ಲಿ ನಡೆದಿದೆ. ಕೊಂಡಿಗ ಹೆಬ್ಬೂರು ಸ್ಟೈಲಿಂಗ್‌ನಲ್ಲಿ ಡಿಪ್ಲೊಮಾ ಓದುತ್ತಿದ್ದ ನಾರಾಯಣಸ್ವಾಮಿ (25) ಮೃತ ಯುವಕ. ಐಪಿಎಲ್ ಪಂದ್ಯಗಳ ವೇಳೆ ಬೆಟ್ಟಿಂಗ್ ನಡೆಸಿ ಭಾರಿ ಸಾಲ ಮಾಡಿಕೊಂಡಿದ್ದ ಈತ, ಮಾನಸಿಕ ಒತ್ತಡದಿಂದ ಮನೆಯ ಮುಂಭಾಗದ ಮರಕ್ಕೆ ನೇಣು ಬಿಗಿದುಕೊಂಡಿದ್ದಾನೆ. ಗುಬ್ಬಿ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಸ್ಥಳಕ್ಕೆ ಭೇಟಿ ನೀಡಿದ ಮಾಜಿ ಶಾಸಕ ಮಸಾಲೆ ಜಯರಾಂ ಮಾತನಾಡಿ, ಯುವಜನತೆ ಆನ್‌ಲೈನ್ ಜೂಜಿನ ಚಟಕ್ಕೆ ಬಲಿಯಾಗುತ್ತಿರುವುದು ಆತಂಕಕಾರಿ. ಸರ್ಕಾರ ಇಂತಹ ಅಕ್ರಮ ದಂಧೆಗಳಿಗೆ ಕೂಡಲೇ ಕಡಿವಾಣ ಹಾಕಬೇಕು ಮತ್ತು ಪೋಷಕರು ಮಕ್ಕಳ ಮೊಬೈಲ್ ಬಳಕೆಯ ಮೇಲೆ ನಿಗಾ ಇಡಬೇಕು ಎಂದು ಒತ್ತಾಯಿಸಿದರು.



---

ಪೂರ್ವಭಾವಿ ಸಿದ್ಧತಾ ಸಭೆಯಲ್ಲಿ ಸಚಿವ ಮುನಿಯಪ್ಪ ಹೇಳಿಕೆ | ಕಾರ್ಯಕ್ರಮಕ್ಕೆ ಸಿಎಂ ಡಿಕೆಶಿ ಭಾಗಿ

# ಜೂ.27ಕ್ಕೆ ಥೀಮ್ ಪಾರ್ಕ್ ಲೋಕಾರ್ಪಣೆ



• **ದೇವನಹಳ್ಳಿ:** ಜೂನ್ 27 ಕ್ಕೆ ನಾಡಪ್ರಭು ಕೆಂಪೇಗೌಡರ ಜಯಂತಿ ದಿನದಂದು ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ನಿರ್ಮಾಣಗೊಂಡಿರುವ ಕೆಂಪೇಗೌಡ ಥೀಮ್ ಪಾರ್ಕ್ ಅನ್ನು ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಅವರು ಲೋಕಾರ್ಪಣೆ ಮಾಡಲಿದ್ದಾರೆ ಎಂದು ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವ ಕೆ.ಎಚ್ ಮುನಿಯಪ್ಪ ಹೇಳಿದರು.

ಜಿಲ್ಲಾಡಳಿತ ಭವನದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ನಡೆದ ಕೆಂಪೇಗೌಡ ಜಯಂತಿ ಪೂರ್ವಭಾವಿ ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿ ದೇವನಹಳ್ಳಿಯ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ 108 ಅಡಿ ಎತ್ತರದ ಬೆಂಗಳೂರು ನಿರ್ಮಾತೃ, ಕೆಂಪೇಗೌಡರ ಭವ್ಯ ಕಂಚಿನ ಪ್ರತಿಮೆ ಬಳಿ ಅಂದಾಜು 20 ಕೋಟಿ ರೂ.ಗಳ ವೆಚ್ಚದಲ್ಲಿ ಕೆಂಪೇಗೌಡ ಥೀಮ್ ಪಾರ್ಕ್ ನಿರ್ಮಿಸಲಾಗಿದ್ದು ಜೂನ್ 27 ರಂದು ಬೆಳಗ್ಗೆ 8.30 ಕ್ಕೆ ಮುಖ್ಯಮಂತ್ರಿ ಡಿ. ಕೆ. ಶಿವಕುಮಾರ್ ಲೋಕಾರ್ಪಣೆ ಮಾಡಲಿದ್ದಾರೆ ಎಂದರು. ರಾಜ್ಯ ಮಟ್ಟದ ಕಾರ್ಯಕ್ರಮವು ಬೆಂಗಳೂರು ನಗರದ ಕೆಂಗೇರಿಯ ಕೆಂಪೇಗೌಡ ಬಡಾವಣೆಯಲ್ಲಿ ಆಚರಿಸಲು ತೀರ್ಮಾನಿಸಲಾಗಿದೆ, ಕೆಂಪೇಗೌಡರ ವಂಶಸ್ಥರು ನೆಲೆಸಿದ್ದಂತ ದೇವನಹಳ್ಳಿ ತಾಲ್ಲೂಕಿನ ಆವತಿ ಗ್ರಾಮದಿಂದ ಪ್ರತಿ ವರ್ಷದಂತೆ ಈ ವರ್ಷವೂ ಜ್ಯೋತಿ ಹೊರಡಲಿದೆ ಎಂದು ಹೇಳಿದರು.

ಜೂನ್ 27 ರಂದು ಜಿಲ್ಲೆಯಲ್ಲಿ ಜಿಲ್ಲಾಡಳಿತ ಭವನದ ಆವರಣದಲ್ಲಿರುವ ನಾಡಪ್ರಭು ಕೆಂಪೇಗೌಡರ ಪುತ್ಥಳಿಗೆ ಬೆಳಗ್ಗೆ 7.30 ಕ್ಕೆ ಮಾಲಾರ್ಪಣೆ ಮಾಡಲಾಗುವುದು, ನಂತರ ಬೆಳಗ್ಗೆ 08 ಗಂಟೆಗೆ ಆವತಿಯಲ್ಲಿ ಕೆಂಪೇಗೌಡ ಜ್ಯೋತಿಗೆ ಚಾಲನೆ ನೀಡಲಾಗುವುದು. ಬೆಳಗ್ಗೆ 8.30 ಕ್ಕೆ ಏರ್‌ಪೋರ್ಟ್ ಲಿ ಕೆಂಪೇಗೌಡ ಥೀಮ್ ಪಾರ್ಕ್ ಲೋಕಾರ್ಪಣೆ ಕಾರ್ಯಕ್ರಮ ಜರುಗಲಿದ್ದು ಅಲ್ಲಿಂದ ರಾಜ್ಯ ಮಟ್ಟದ ಕಾರ್ಯಕ್ರಮಕ್ಕೆ ಹೊರಡಲಿದ್ದೇವೆ ಎಂದರು, ರಾಜ್ಯ ಮಟ್ಟದ ಕಾರ್ಯಕ್ರಮಕ್ಕೆ ಹೊರಡಲು ಜಿಲ್ಲೆಯ ನಾನಾ ಭಾಗಗಳಿಂದ ಬೆಳಗ್ಗೆ 07 ಗಂಟೆಗೆ ಬಸ್ ವ್ಯವಸ್ಥೆ ಮಾಡಲಾಗುವುದು, ಜೊತೆಗೆ ಉಪಹಾರ ಇರಲಿದೆ. ಜಿಲ್ಲೆಯ ಎಲ್ಲಾ ಸಂಘಟನೆಗಳ ಮುಖಂಡರು, ಸಮುದಾಯ ಮುಖಂಡರು, ಸಾರ್ವಜನಿಕರು ಪಕ್ಷಾತೀತವಾಗಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಎಂದು ಸಚಿವರು ಮನವಿ ಮಾಡಿದರು.

ಜಿಲ್ಲಾಧಿಕಾರಿ ಡಾ. ಕೆ. ಎನ್. ಅನುರಾಧ ಮಾತನಾಡಿ ಜಿಲ್ಲಾ ಮಟ್ಟದ ಕೆಂಪೇಗೌಡ ಜಯಂತಿ ಕಾರ್ಯಕ್ರಮ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ನಡೆಸಲಾಗುವುದು, 27ರಂದು ಸಾಂಕೇತಿಕವಾಗಿ ಕಚೇರಿಯಲ್ಲಿ ಸರಳ ವಾಗಿ ಆಚರಿಸಿ ಅದ್ದೂರಿ ಕಾರ್ಯಕ್ರಮ 2 ದಿನಗಳ ನಂತರ ಆಚರಿಸಲಾಗುವುದು ಎಲ್ಲಾ ಗ್ರಾಮ ಪಂಚಾಯತ್ ಗಳಿಂದ ಪಲ್ಲಕ್ಕಿ ಉತ್ಸವ ಮಾಡಲಾಗುವುದು ಎಂದು ತಿಳಿಸಿದರು.

ಸಭೆಯಲ್ಲಿ ಜಿಲ್ಲಾಧಿಕಾರಿ ಡಾ. ಕೆ.ಎನ್ ಅನುರಾಧ, ಸಿ.ಇ.ಒ ಡಾ. ವಾಸಂತಿ ಅಮರ್, ಬಯಪ ಅಧ್ಯಕ್ಷ ಶಾಂತ ಕುಮಾರ್, ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರದ ಜಿಲ್ಲಾಧ್ಯಕ್ಷ ರಾಜಣ್ಣ, ದೇವನಹಳ್ಳಿ ಶಾ. ಅಧ್ಯಕ್ಷ ಸಿ. ಜಗನ್ನಾಥ್ ದೇವನಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆ. ಸಿ. ಮಂಜುನಾಥ್, ವಿಜಯಪುರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವೆಂಕಟೇಶ್, ರವಿಸಿದ್ದಪ್ಪ, ಅಕ್ಕೆಪ್ಪರ ಚಂದ್ರಶೇಖರ್, ಬೂದಿಗೆರೆ ಮುನಿರಾಜು, ರಾಜ್ಯ ಯೂತ್ ಕಾಂಗ್ರೆಸ್ ಪ್ರ. ಕಾರ್ಯದರ್ಶಿ ಕೆ. ಆರ್. ನಾಗೇಶ್, ಪ್ರಸನ್ನ ಕುಮಾರ್, ದೇವನಹಳ್ಳಿ ಮಂಡಲ ಬಿ. ಜೆ. ಪಿ ಅಧ್ಯಕ್ಷ ಅಂಬರೀಷ್ ಗೌಡ, ಚಿಕ್ಕೇಗೌಡ, ತಹಸೀಲ್ದಾರ್ ಎಂ. ಅನಿಲ್, ಇ.ಒ ಮುನಿ ರಾಜು, ಲಕ್ಷ್ಮಣಮೂರ್ತಿ, ಒಕ್ಕಲಿಗರ ಸಂಘದ ಅಧ್ಯಕ್ಷ ಬಿ. ಎಂ. ಬೈರೇಗೌಡ, ಬ್ಯಾಟೇಗೌಡ, ಮುನೇಗೌಡ, ಮಂಜುನಾಥ್ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು, ವಿವಿಧ ಸಂಘ ಸಂಸ್ಥೆಗಳ ಮುಖಂಡರು, ಸದಸ್ಯರು ಉಪಸ್ಥಿತರಿದ್ದರು.

#### ಜಿಲ್ಲಾ ಮಟ್ಟದಲ್ಲಿ ಕೆಂಪೇಗೌಡ ಜಯಂತಿ

ರಾಜ್ಯ ಮಟ್ಟದ ಕಾರ್ಯಕ್ರಮಕ್ಕೆ ಜಿಲ್ಲೆಯಿಂದ ಕನಿಷ್ಠ 5000 ಜನ ಹೊರಡಬೇಕಿದೆ. ಆವತಿಯಿಂದ ಜ್ಯೋತಿ, ಜೊತೆಗೆ ಏರ್‌ಪೋರ್ಟ್ ನಲ್ಲಿ ಸಿ.ಎಂ ಕಾರ್ಯಕ್ರಮ, ರಾಜ್ಯ ಮಟ್ಟದ ಕಾರ್ಯಕ್ರಮ ಒಂದೇ ದಿನ ಇರುವುದರಿಂದ ವಿಶಾಲವಾಗಿ ರಾಜ್ಯ ಹಾಗೂ ಜಿಲ್ಲಾ ಮಟ್ಟದ ಕಾರ್ಯಕ್ರಮದಲ್ಲಿ ಜನರು ಭಾಗಿಯಾಗಲು ಸಾಧ್ಯವಾಗುವುದಿಲ್ಲ, ಹಾಗಾಗಿ ಜಿಲ್ಲಾ ಮಟ್ಟದ ಕೆಂಪೇಗೌಡ ಜಯಂತಿ ಕಾರ್ಯಕ್ರಮವನ್ನು ವಿಜೃಂಭಣೆಯಿಂದ ಆಚರಿಸಲು ಬೇರೊಂದು ದಿನ 2 ಅಥವಾ 3 ದಿನದಲ್ಲಿ ಆಯೋಜಿಸಲು ತೀರ್ಮಾನಿಸಲಾಗಿದ್ದು ಸಮುದಾಯದ ಮುಖಂಡರ ಜೊತೆ ಚರ್ಚಿಸಿ ದಿನಾಂಕ ನಿಗದಿ ಪಡಿಸಲಾಗುವುದು ಎಂದು ಸಚಿವರು ತಿಳಿಸಿದರು.

---

# ಕಳ್ಳರ ಬಂಧಿಸಿದ ಪೊಲೀಸರು



• **ದೊಡ್ಡಬಳ್ಳಾಪುರ:** ಮನೆಯಲ್ಲಿದ್ದ ಚಿನ್ನಾಭರಣ ಬೈಕ್ ಸಮೇತ ಪರಾರಿಯಾಗಿದ್ದ ಅಂತರರಾಜ್ಯ ಕಳ್ಳರನ್ನು ಬಂಧಿಸಿದ ಘಟನೆ ದೊಡ್ಡಬಳ್ಳಾಪುರದಲ್ಲಿ ಜರುಗಿದೆ.

ಮನೆ ಕಳ್ಳತನ ಬಹಿರಂಗದಿಂದ ಬಂದಿದ್ದ ಇಬ್ಬರು ಗಾರೆ ಕೆಲಸಗಾರರು, ಮನೆ ಮಾಲೀಕರ ಮನೆಯಲ್ಲಿ ಬೀರುವಿನಲ್ಲಿಟ್ಟಿದ್ದ ಚಿನ್ನಾಭರಣ, 1 ಲಕ್ಷದ ನಗದು ಹಣ ಮತ್ತು ಬೈಕ್ ಸಮೇತ ಪರಾರಿಯಾಗಿದ್ದರು, ಇಬ್ಬರು ಕಳ್ಳರನ್ನ ಬಂಧಿಸಿ ದೊಡ್ಡಬಳ್ಳಾಪುರ ಗ್ರಾಮಾಂತರ ಪೊಲೀಸರು ಆರೋಪಿಗಳಿಂದ 11.42 ಲಕ್ಷ ಹಣ ಮತ್ತು ಬೈಕ್ ಅನ್ನು ಜಪ್ತಿ ಮಾಡಿದ್ದಾರೆ.

ತಾಲೂಕಿನ ಮೆಳೇಕೋಟೆಯಲ್ಲಿರುವ ಸರಳ ವಿಜಯ ಮನೆಯಲ್ಲಿ ಮೇ 15 ರಂದು ಕಳ್ಳತನ ಕೃತ್ಯ ನಡೆದಿದ್ದು, ಪ್ರಕರಣ ಸಂಬಂಧಿಸಿದಂತೆ ಆರೋಪಿಗಳಾದ ಗೌರವ್ ಕುಮಾರ್ (19), ವಿಶಾಲ್ ಕುಮಾರ್ (22) ಬಂಧಿಸಲಾಗಿದೆ, ಆರೋಪಿಗಳು ಬಿಹಾರ ರಾಜ್ಯದ ಖಗರಿಯಾ ಜಿಲ್ಲೆಯ ಕಾಜಿಚಕ್ ಗ್ರಾಮದವರು.

ದೂರುದಾರರಾದ ಸರಳ ತಾವು ವಾಸವಾಗಿದ್ದ ಮನೆಯ ಪಕ್ಕದಲ್ಲಿ ಮನೆಯನ್ನು ಕಟ್ಟುತ್ತಿದ್ದರು, ಮನೆ ಕಟ್ಟುವ ಕೆಲಸಕ್ಕಾಗಿ ಬಿಹಾರದಿಂದ ವಿಶಾಲ್ ಕುಮಾರ್ ಮತ್ತು ಗೌರವ್ ಕುಮಾರ್ ಬಂದಿದ್ದು, ಕಟ್ಟುತ್ತಿದ್ದ ಮನೆಯಲ್ಲಿಯೇ ವಾಸವಾಗಿದ್ದರು, ಆರೋಪಿಗಳು ಸರಳ ಮನೆಗೂ ಬಂದು ಹೋಗುತ್ತಿದ್ದರು ಈ ವೇಳೆ ಅವರು ಚಿನ್ನಾಭರಣ ಇಡುತ್ತಿದ್ದ ಜಾಗವನ್ನು ನೋಡಿಕೊಂಡಿದ್ದರು,

ಮೇ 15 ರಂದು ಸರಳ ಮತ್ತು ಆಕೆಯ ಪತಿ ಕೆಲಸ ನಿಮಿತ್ತ ದೊಡ್ಡಬಳ್ಳಾಪುರ ನಗರಕ್ಕೆ ತೆರಳಿದ್ದಾರೆ, ಮನೆಗೆ ವಾಪಸ್ ಬಂದ ಅವರು ಸಿಲಿಂಡರ್ ಡಿಲಿವರಿ ಮಾಡಿದ ಹುಡುಗನಿಗೆ ಹಣ ಕೊಡಲು ಬೀರುವನ್ನು ತೆಗೆದಾಗ ಬೀರುವಿನಲ್ಲಿದ್ದ 55 ಗ್ರಾಂ ಚಿನ್ನದ ಲಾಂಗ್ ಚೈನ್, 30 ಗ್ರಾಂ ಚಿನ್ನದ ನೆಕ್ಲೆಸ್, 1 ಲಕ್ಷ ನಗದು ಹಣ ಮತ್ತು ಬೈಕ್ ಕಳವಾಗಿತ್ತು, ಮನೆಯ ಸಿಸಿ ಟಿವಿ ಕ್ಯಾಮರಾ ಪರಿಶೀಲನೆ ಮಾಡಿದ್ದಾಗ ಗಾರೆ ಕೆಲಸಕ್ಕೆ ಬಂದಿದ್ದ ವಿಶಾಲ್ ಮತ್ತು ಗೌರವ್ ಬೈಕ್ ಸಮೇತ ಪರಾರಿಯಾಗುವ ದೃಶ್ಯ ಸೆರೆಯಾಗಿರುವುದು ಪತ್ತೆಯಾಗಿದೆ. ಮನೆಗಳ್ಳರನ್ನ ಬಂಧಿಸುವಲ್ಲಿ ದೊಡ್ಡಬಳ್ಳಾಪುರ ಗ್ರಾಮಾಂತರ ಪೊಲೀಸ್ ಠಾಣೆ ಯಶಸ್ವಿಯಾಗಿದ್ದು, ಇನ್ಸ್ ಪೆಕ್ಟರ್ ಡಾ. ನವೀನ್ ಕುಮಾರ್.ಎಂ.ಬಿ ನೇತೃತ್ವದ ಪೊಲೀಸ್ ತಂಡದ ಪಿಎಸ್ ಐ ನಾರಾಯಣಸ್ವಾಮಿ, ಸುಮಂತ್, ಹೆಡ್ ಕಾನ್ ಸ್ಟೇಬಲ್ ಗಳಾದ ರಂಗನಾಥ್, ಸುನೀಲ್ ಬಾಸಗಿ, ಹರೀಶ್, ಮಂಜುನಾಥ್, ಚಂದ್ರಶೇಖರ್, ನಟರಾಜು, ಸತೀಶ್ ಉಪ್ಪಾರ ಮತ್ತು ತಾಂತ್ರಿಕ ಸಿಬ್ಬಂದಿ ಪ್ರಮುಖ ಪಾತ್ರ ವಹಿಸಿದ್ದರು.

---

ಬಿಜೆಪಿ ಜಿಲ್ಲಾ ಕಾರ್ಯದರ್ಶಿ ಮುರಳೀಧರ್ ಕಿವಿಮಾತು

# ಭವಿಷ್ಯಕ್ಕಾಗಿ ಪರಿಸರ ಸಂರಕ್ಷಣೆ ಅಗತ್ಯ

• **ತಾವರೆಕೆರೆ:** ದೇಶದ ಭವಿಷ್ಯ ನಿರ್ಮಾಣಕ್ಕೆ ಶಿಕ್ಷಣದ ಪ್ರಗತಿ ಮತ್ತು ಪರಿಸರ ಸಂರಕ್ಷಣೆ ಎಂಬ ಎರಡು ಅಂಶಗಳು ಸಮಾನವಾಗಿ ಅಗತ್ಯವೆಂದು ಬಿಜೆಪಿ ಬೆಂಗಳೂರು ಗ್ರಾಮಾಂತರ ಜಿಲ್ಲಾ ಕಾರ್ಯದರ್ಶಿ ಎಸ್. ಮುರಳೀಧರ್ ಹೇಳಿದರು.

ತಾಲೂಕಿನ ಚೆನ್ನನಹಳ್ಳಿ ಸರ್ಕಾರಿ ಶಾಲೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಆಡಳಿತದ ಸಾಧನೆಗಳ ಅಂಗವಾಗಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಶಾಲೆಯ ಹಸಿರೀಕರಣಕ್ಕಾಗಿ ಸಸಿ ನೆಡುವ ಅಭಿಯಾನಕ್ಕೆ ಚಾಲನೆ ನೀಡಿ, ಸರ್ಕಾರಿ ಶಾಲೆಯ ವಿದ್ಯಾರ್ಥಿಗಳಿಗೆ ಪಠ್ಯ ಪರಿಕರಗಳನ್ನು ವಿತರಿಸಿ ಅವರು ಮಾತನಾಡಿದರು. ದೇಶ ಸ್ವಚ್ಛ, ಸುಂದರ ಹಾಗೂ ಅಭಿವೃದ್ಧಿಯತ್ತ ಸಾಗಬೇಕಾದರೆ ಶಿಕ್ಷಣದ ಜೊತೆಗೆ ಪರಿಸರ ಸಂರಕ್ಷಣೆಯೂ ಪ್ರಮುಖ ಪಾತ್ರ ವಹಿಸುತ್ತದೆ. ಈ ನಿಟ್ಟಿನಲ್ಲಿ ಪ್ರತಿಯೊಬ್ಬರೂ ಒಂದು ಸಸಿ ನೆಟ್ಟು ಅದರ ಪೋಷಣೆಯ ಜವಾಬ್ದಾರಿ ವಹಿಸಬೇಕು. ಜೊತೆಗೆ ಸಮಾಜಸೇವೆಯ ಮನೋಭಾವವನ್ನು ಬೆಳೆಸಿಕೊಂಡು ದೇಶದ ಅಭಿವೃದ್ಧಿಗೆ ಕೈಜೋಡಿಸಬೇಕು ಎಂದು ಕರೆ ನೀಡಿದರು. ಶಾಲೆಯ ಮುಖ್ಯೋಪಾಧ್ಯಾಯ ಸುಬ್ರಹ್ಮಣ್ಯ ಮಾತನಾಡಿ, ಖಾಸಗಿ ಶಾಲೆಗಳತ್ತ ಪೋಷಕರ ಒಲವು ಹೆಚ್ಚುತ್ತಿರುವ ಸಮಯದಲ್ಲಿ ಸರ್ಕಾರಿ ಶಾಲೆಗಳಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣ ನೀಡಲಾಗುತ್ತಿದೆ. ಸಮಾಜಸೇವಕರು ಮತ್ತು ದಾನಿಗಳ ಸಹಕಾರದಿಂದ ವಿದ್ಯಾರ್ಥಿಗಳಿಗೆ ಅಗತ್ಯ ಸೌಲಭ್ಯಗಳು ದೊರೆಯುತ್ತಿದ್ದು, ಅವುಗಳನ್ನು ಸದುಪಯೋಗಪಡಿಸಿಕೊಂಡು ಉತ್ತಮ ಶಿಕ್ಷಣ ಪಡೆದು ಸಮಾಜ ಹಾಗೂ ದೇಶದ ಸೇವೆಗೆ ಮುಂದಾಗಬೇಕು ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಎಸ್‌ಡಿಎಂಸಿ ಮಾಜಿ ಅಧ್ಯಕ್ಷ ಸುಬ್ರಮಣಿ, ಶಾಲೆಗೆ ಜಮೀನು ದಾನ ನೀಡಿದ ಮುನೇಗೌಡ, ಸಮಾಜಸೇವಕರಾದ ಮುರಳಿ, ಶ್ರೀಧರ್, ವರ್ಷಿಣಿ, ಮೋನಿಕಾ, ಶಿಕ್ಷಕ ರೂಪಾ, ಭಾಗ್ಯಮ್ಮ, ಗೋವಿಂದಪ್ಪ ಸೇರಿದಂತೆ ಪೋಷಕರು, ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



---

# ತಪ್ಪಿಸಿಕೊಳ್ಳಲು ಯತ್ನ: ಆರೋಪಿ ಕಾಲಿಗೆ ಗುಂಡು

• **ಮಳವಳ್ಳಿ:** ತಾಲ್ಲೂಕಿನ ಭೀಮನಹಳ್ಳಿ ಕೊಲೆ ಪ್ರಕರಣ ಸಂಬಂಧ ಸ್ಥಳ ಮಹಜರು ವೇಳೆ ತಪ್ಪಿಸಿಕೊಳ್ಳಲು ಯತ್ನಿಸಿದ ಆರೋಪಿ ಸಿದ್ದರಾಜು ಕಾಲಿಗೆ ಕಿರುಗಾವಲು ಪೊಲೀಸ್ ಠಾಣೆ ಪಿಎಸ್‌ಐ ರವಿಕುಮಾರ್ ಗುಂಡು ಹಾರಿಸಿರುವ ಘಟನೆ ಡಿ.ಹಲಸಹಳ್ಳಿಯ ಬಳಿ ಸಾಯಿ ಬಾಬಾ ದೇವಸ್ಥಾನ ಸಮೀಪದ ರಸ್ತೆಯಲ್ಲಿ ನಡೆದಿದೆ. ಭೀಮನಹಳ್ಳಿ ಗ್ರಾಮದ ಮಹೇಶ್ (34) ಎಂಬ ವ್ಯಕ್ತಿಯನ್ನು ನಾಲ್ವರು ಆರೋಪಿಗಳು ಚಾಕುವಿನಿಂದ ಇರಿದು ದೊಣ್ಣೆಯಿಂದ ಹೊಡೆದು ಕೊಲೆ ಮಾಡಿದ್ದರು. ರಾಮನಗರದ ಪೊಲೀಸ್ ಠಾಣಾ ವ್ಯಾಪ್ತಿಯ ರೌಡಿಶೀಟರ್ ಸಿದ್ದರಾಜು(33) ರಾಜೇಶ್ ಸೇರಿದಂತೆ ನಾಲ್ವರು ಆರೋಪಿಗಳನ್ನು ಕಿರುಗಾವಲು ಪೊಲೀಸರು ಬಂಧಿಸಿದ್ದರು. ಕೃತ್ಯಕ್ಕೆ ಬಳಸಿದ ಚಾಕುವನ್ನು ಡಿ.ಹಲಸಹಳ್ಳಿಯ ಬಳಿ ಸಾಯಿ ಬಾಬಾ ದೇವಸ್ಥಾನ ಸಮೀಪದ ರಸ್ತೆಯಲ್ಲಿ ಎಸೆದಿದ್ದ ಹಿನ್ನೆಲೆಯಲ್ಲಿ ಸ್ಥಳ ಮಹಜರು ಮಾಡಲು ಆರೋಪಿಗಳನ್ನು ಕರೆದುಕೊಂಡು ಹೋಗಿದ್ದರು. ಪೊಲೀಸರು ಚಾಕು ಪತ್ತೆಹಚ್ಚಿಕೊಳ್ಳಲು ಮುಂದಾಗುತ್ತಿದ್ದ ವೇಳೆ ಆರೋಪಿ ಸಿದ್ದರಾಜು ಪೊಲೀಸ್ ಮುಖ್ಯಪೇದೆ ಪ್ರಭುಸ್ವಾಮಿ ಅವರ ಮೇಲೆ ಚಾಕುವಿನಿಂದ ಹಲ್ಲೆ ನಡೆಸಿ, ಪರಾರಿಯಾಗಲು ಯತ್ನಿಸಿದ್ದಾನೆ. ಈ ವೇಳೆ ಸ್ವರಕ್ಷಣೆಗಾಗಿ ಪಿಎಸ್‌ಐ ಡಿ.ರವಿಕುಮಾರ್ ಆರೋಪಿ ಸಿದ್ದರಾಜು ಕಾಲಿಗೆ ಗುಂಡು ಹಾರಿಸಿ ವಶಕ್ಕೆ ಪಡೆದಿದ್ದಾರೆ. ಘಟನೆಯಲ್ಲಿ ಗಾಯಗೊಂಡಿರುವ ಮುಖ್ಯಪೇದೆ ಪ್ರಭುಸ್ವಾಮಿ ಹಾಗೂ ಆರೋಪಿ ಸಿದ್ದರಾಜುಗೆ ಮಳವಳ್ಳಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಮಂಡ್ಯದ ಮಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ.

---

# ಎಸ್‌ಐಆರ್ ವಿರುದ್ಧ ಜಾಗೃತಿ

• **ಹೊಸಕೋಟೆ:** ನಗರದಲ್ಲಿ ಇಂದು ಬುಧವಾರ ವಿಧಾನಸಭಾ ಕ್ಷೇತ್ರ ತಂಡದ ವತಿಯಿಂದ ಎಸ್‌ಐಆರ್ ವಿರೋಧಿ ಜನ ಜಾಗೃತಿ ಜಾಥಾ, ಕರಪತ್ರ ಹಂಚಿಕೆ ಮತ್ತು ಮಹಾನ್ ಸಾಧಕರಾದ ಅಂಬೇಡ್ಕರ್, ಬಸವಣ್ಣ, ಕೆಂಪೇಗೌಡ, ಗಾಂಧಿಜಿ ಪ್ರತಿಮೆಗಳಿಗೆ ಮಾಲಾರ್ಪಣೆ ಹಾಗೂ ಬಹಿರಂಗ ಸಭೆಯನ್ನು ಹಮ್ಮಿಕೊಳ್ಳಲಾಗಿತ್ತು.

ನಗರದ ಕೆಇಬಿ ಸರ್ಕಲ್ ನಿಂದ ಆರಂಭವಾದ ಎಸ್‌ಐಆರ್ ವಿರೋಧಿ ಜಾಥಾ ಹೂಮಾಂಡಿ ಸರ್ಕಲ್, ಬಸವೇಶ್ವರ ಸರ್ಕಲ್ ಮೂಲಕ ಮಾಡಿದ ಬಳಿಕ ಬಹಿರಂಗ ಸಭೆ ಬಳಿ ಅಂತ್ಯಗೊಳಿಸಲಾಯಿತು. ಬಹಿರಂಗ ಸಭೆಯನ್ನು ಉದ್ದೇಶಿಸಿ ಮಾತನಾಡಿದ ತಾಲೂಕು ಹಸಿರು ಸೇನೆ ಅಧ್ಯಕ್ಷ ಕೆಂಚೇಗೌಡ ಈ ದೇಶಕ್ಕೆ ಪರಕೀಯರಿಂದ ಮುಕ್ತಿಗಳಲು ಅದೆಷ್ಟೋ ಮಹನೀಯರು ಜಾತಿ ಮತಗಳಾತೀತವಾಗಿ ಸ್ವಾತಂತ್ರ್ಯಕ್ಕಾಗಿ ತಮ್ಮಮನವಿದನ್ನು ಅರ್ಪಿಸಿದ್ದಾರೆ. ಅಂತಹ ಹೋರಾಟಗಾರರ ಫಲವಾಗಿ ನಾವು ಇಂದು ಅನುಭವಿಸುತ್ತಿರುವ ಸ್ವಾತಂತ್ರ್ಯವು ಕೂಡ ಸರ್ವಾಧಿಕಾರಿ ಧೋರಣೆಯ ಮನಸ್ಥಿತಿಯಲ್ಲಿ ವ್ಯಕ್ತಿಗಳ ಕೈಗೆ ಅಧಿಕಾರದ ಚುಕ್ಕಾಣಿ ಕೊಟ್ಟರೆ ಮತ್ತೊಮ್ಮೆ ದೇಶ ಅಂಧಕಾರದತ್ತ ಹೆಜ್ಜೆ ಇಡುವುದರಲ್ಲಿ ಎರಡು ಮಾತಿಲ್ಲ ಎಂದರು. ಎಸ್‌ಐಆರ್ ಜನತಾಂತ್ರಿಕ ಪ್ರಗತಿಪರ ಸಂಘಟನೆಗಳ ವಿರೋಧಿ ಒಕ್ಕೂಟದ ಬೆಂಗಳೂರು ಗ್ರಾಮಾಂತರ ಜಿಲ್ಲಾ ಸಂಚಾಲಕ ಹೈದರ್ ಬೇಗ್ ಮಾತನಾಡಿ, ರಾಜ್ಯದ ವಿವಿಧೆಡೆ ಬೇರೆ ಬೇರೆ ತಂಡಗಳು ಏಕಕಾಲಕ್ಕೆ ಎಸ್‌ಐಆರ್ ವಿರೋಧಿ ಜನಜಾಗೃತಿ ಜಾಥಾಗಳನ್ನು ಹಮ್ಮಿಕೊಂಡಿವೆ. ಅದರ ಭಾಗವಾಗಿ ವಿಧಾನಸಭಾ ಕ್ಷೇತ್ರ ತಂಡವು ಹುಮಾಬಾದ, ಚಿಕ್ಕಬಳ್ಳಾಪುರ, ಕೋಲಾರ, ರಾಮನಗರ, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಜಾಥಾ ನಡೆಸುತ್ತಿದೆ. ಇದರ ಉದ್ದೇಶ ನ್ಯಾಯ ಸಮ್ಮತ ಎಸ್‌ಐಆರ್ ಪರಿಷ್ಕರಣೆಗೆ ನಮ್ಮ ಯಾವುದೇ ಅಭ್ಯಂತರವಿಲ್ಲ, ಆದರೆ ಕರ್ನಾಟಕವನ್ನು ಮತ್ತೊಮ್ಮೆ ಬಂಗಾಳ, ಬಿಹಾರಗಳಲ್ಲಿ ಮಾಡಿದಂತೆ ಮತ ಕಳವು ಮಾಡಿದರೆ ಅದಕ್ಕೆ ವಿರೋಧ ಮಾಡುತ್ತೇವೆ ಹಾಗೂ ರಾಜ್ಯದಲ್ಲಿ ಮತಕಳವು ಮಾಡುವುದನ್ನು ಮಾಡಲು ಬಿಡುವುದಿಲ್ಲ, ಈ ಕಾರಣಕ್ಕಾಗಿಯೇ ರಾಜ್ಯದ ಮೂಲೆ ಮೂಲೆಗೂ ತೆರಳಿ ಜನರಲ್ಲಿ ಎಸ್‌ಐಆರ್ ವಿರೋಧಿ ಜಾಗೃತಿ ಮೂಡಿಸುತ್ತಿದ್ದೇವೆ ಎಂದು ಹೇಳಿದರು.

ಸಿಐಟಿಯುನ ತಾಲೂಕು ಕಾರ್ಯದರ್ಶಿ ಮೋಹನ್ ಬಾಬು, ಪಿಪಾಂಚಿ ವೆಂಕಟರಾಜು, ದಲಿತ ಹಕ್ಕುಗಳ ಸಮಿತಿಯ ತಾಲೂಕು ಕಾರ್ಯದರ್ಶಿ ಮುನಿರಾಜು ಎಂ., ಜನ ಚಳವಳಿ ಎಸ್‌ಐಆರ್ ಜಾಥಾದ ಸಂಚಾಲಕರಾದ ಕುಮಾರ್ ಸಮತಲ, ಚಿಕ್ಕಬಲ್ಲೂರು ವೆಂಕಟರಾಮ್, ತಾಲೂಕು ರೈತ ಸಂಘದ ಅಧ್ಯಕ್ಷರಾದ ಅಕ್ಕಲೇಗೌಡ, ಅಮರನಾರಾಯಣ, ವರದಾಪುರ ನಾಗರಾಜ್ ಇತರರು ಇದ್ದರು.

---

# ಚಂದ್ರಶೇಖರ್ ಕೊಡುಗೆ ಅಪಾರ

• **ಕೋಲಾರ:** ದಲಿತ ಸಮುದಾಯದ ಏಳಿಗಾಗಿ ಹಿರಿಯ ದಲಿತ ಮುಖಂಡರ ಚಳುವಳಿಯ ಹೆಜ್ಜೆ ಗುರುತುಗಳನ್ನು ಇಂದಿನ ಯುವ ಸಮುದಾಯ ಯಥಾವತ್ ಮಾದರಿಯಾಗಿ ಅವರು ನಡೆದ ಬಂದ ದಾರಿ ಯಲ್ಲಿ ನಾವು ಎಲ್ಲರೂ ನಡೆಯಬೇಕಾಗಿದೆ ಎಂದು ವಿಧಾನ ಪರಿಷತ್ ಸದಸ್ಯ ಎಂ.ಎಲ್ ಅನಿಲ್ ಕುಮಾರ್ ತಿಳಿಸಿದರು.

ನಗರದ ಟಿ.ಚನ್ನಯ್ಯ ರಂಗಮಂದಿರದಲ್ಲಿ ಬುಧವಾರ ದಲಿತ ಸಂಘಟನೆಗಳ ಸಂಯುಕ್ತ ರಂಗದ ವತಿಯಿಂದ ಡಾ.ಬಿ.ಆರ್ ಅಂಬೇಡ್ಕರ್ ಪ್ರಶಸ್ತಿ ಪುರಸ್ಕೃತ ಹಾಗೂ ಹಿರಿಯ ದಲಿತ ಮುಖಂಡ ಡಾ.ಎಂ.ಚಂದ್ರಶೇಖರ್ ರವರ ಸಾರ್ಥಕ 25 ನೇ ವರ್ಷದ ಬೆಳ್ಳಿ ಸಂಭ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು ದಲಿತ ಸಮುದಾಯದ ವಿರುದ್ಧ ನಡೆದ ದೌರ್ಜನ್ಯ ದಬ್ಬಾಳಿಕೆಗಳು ಸೇರಿದಂತೆ ಹಲವಾರು ಒಳಗಾಗಿರುವ ಸಮುದಾಯವನ್ನು ಧ್ವನಿಯಾಗಿ ರಾಜ್ಯಾದ್ಯಂತ ಸುತ್ತಿ ಸಂಘಟನೆಯನ್ನು ಕಟ್ಟಿದಾಗ ಅವರ ಆಶಯಗಳನ್ನು ಯುವಕರು ಹಾಗೂ ಇವತ್ತಿನ ದಲಿತ ಸಂಘಟನೆಗಳ ನಾಯಕರು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕಾಗಿದೆ ಎಂದರು. ಜಿಲ್ಲೆಯಲ್ಲಿ ಸುಮಾರು 90ರ ದಶಕದಲ್ಲಿ ಹೊಡೆದು ಹೋಗಿದ್ದ ದಲಿತ ಸಂಘಟನೆಗಳನ್ನು ಒಂದೇ ವೇದಿಕೆಗೆ ತರುವ ನಿಟ್ಟಿನಲ್ಲಿ 1995 ರಲ್ಲಿ ದಲಿತ ಸಂಘಟನೆಗಳ ಸಂಯುಕ್ತ ರಂಗವನ್ನು ಸ್ಥಾಪಿಸಲಾಯಿತು ಅದರ ಮೂಲಕ ಹಕ್ಕುಗಳಿಗಾಗಿ ಹೋರಾಟ ರೂಪಿಸಲಾಗಿದೆ ಎಂ ಚಂದ್ರಶೇಖರ್ ಸಹ ಸಮುದ್ರದ ಆಲೆಗಳ ವಿರುದ್ಧ ದಿಕ್ಕಿನಲ್ಲಿ ಚಲಿಸುವಂತೆ ಸಮಾಜದಲ್ಲಿನ ವಿರೋಧದ ನಡುವೆಯೂ ವಿರುದ್ಧ ದಿಕ್ಕಿನಲ್ಲಿ ಸಂಘಟನೆಯನ್ನು ಕಟ್ಟಿದ್ದಾರೆ ಹೋರಾಟದ ಜೊತೆಗೆ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಿ ಅದರ ಮೂಲಕವೂ ಕಾಂತ್ರಿಯನ್ನು ಸೃಷ್ಟಿಸಿದ್ದಾರೆ ಎಂದರು. ಈ ಸಂದರ್ಭದಲ್ಲಿ ಜಿಪಂ ಮಾಜಿ ಅಧ್ಯಕ್ಷ ಸಿ.ಎಸ್ ವೆಂಕಟೇಶ್, ಮಾಜಿ ಸದಸ್ಯ ಅರುಣ್ ಪ್ರಸಾದ್, ಕಾಂಗ್ರೆಸ್ ಎಸ್ಸಿಘಟಕದ ಜಿಲ್ಲಾಧ್ಯಕ್ಷ ಕೆ.ಜಯದೇವ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ವಿಜಯಲಕ್ಷ್ಮಿ, ಗ್ರಾಮಾಂತರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮೈಲಾಂಡಹಳ್ಳಿ ಮುರಳಿ, ದಲಿತ ಸಂಘಟನೆಗಳ ಮುಖಂಡರಾದ ಪಂಡಿತ್ ಮುನಿವೆಂಕಟಪ್ಪ, ಸಾಹಿತಿ ಗೊಲ್ಲಹಳ್ಳಿ ಶಿವಪ್ರಸಾದ್, ಮಂಡಿಖಾನೆ ಮುನಿಆಂಜಿನಪ್ಪ, ಸಾಮಾಜಿಕ ಕಾರ್ಯಕರ್ತ ಶಂಕರಪ್ಪ, ಖಾದ್ರಿಪುರ ಬಾಬು, ದೆಂಕಣಿಕೋಟೆ ಮುಂತಾದ ದಲಿತ ಸಂಘಟನೆಗಳ ಮುಖಂಡರು ಭಾಗವಹಿಸಿದ್ದರು.

---

ತಾವರೆಕೆರೆ ಗ್ರಾಮದಲ್ಲಿ ಮನೆ ಮನೆಗೆ ತೆರಳಿ ಪೋಷಕರಲ್ಲಿ ಅರಿವು ಮೂಡಿಸಿದ ಶಿಕ್ಷಕರು

# ಸರ್ಕಾರಿ ಶಾಲೆ ದಾಖಲಾತಿಗೆ ಜಾಗೃತಿ ಜಾಥಾ

• **ತಾವರೆಕೆರೆ:** ಹೊಸಕೋಟೆ ತಾಲೂಕಿನ ನಂದಗುಡಿ ಹೋಬಳಿಯ ತಾವರೆಕೆರೆ ಗ್ರಾಮದ ಸರ್ಕಾರಿ ಕನ್ನಡ ಮತ್ತು ಆಂಗ್ಲ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 2026–27ನೇ ಶೈಕ್ಷಣಿಕ ಸಾಲಿನ ದಾಖಲಾತಿ ಪ್ರಕ್ರಿಯೆ ಆರಂಭಗೊಂಡ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಗ್ರಾಮದಲ್ಲಿ ಜಾಗೃತಿ ಜಾಥಾ ನಡೆಸಿದರು.

ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಂಚರಿಸಿದ ಜಾಥಾದಲ್ಲಿ ಸರ್ಕಾರಿ ಶಾಲೆಗಳಿಗೆ ಮಕ್ಕಳನ್ನು ದಾಖಲಿಸುವಂತೆ ಪೋಷಕರಿಗೆ ಮನವಿ ಮಾಡಲಾಯಿತು. ಶಿಕ್ಷಣದ ಮಹತ್ವ, ಸರ್ಕಾರಿ ಶಾಲೆಗಳಲ್ಲಿರುವ ಸೌಲಭ್ಯಗಳು ಹಾಗೂ ಗುಣಮಟ್ಟದ ಬೋಧನೆಯ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸಲಾಯಿತು. ಶಾಲೆಯ ಮುಖ್ಯ ಶಿಕ್ಷಕ ಪ್ರವೀಣ್ ಮಾತನಾಡಿ, ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಸರ್ಕಾರದಿಂದ ಉಚಿತ ಪಠ್ಯಪುಸ್ತಕಗಳು, ಸಮವಸ್ತ್ರ, ಬಿಸಿಯೂಟ, ಶೂ–ಸಾಕ್ಸ್, ವಿದ್ಯಾರ್ಥಿವೇತನ ಸೇರಿದಂತೆ ಹಲವು ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ ಎಂದು ತಿಳಿಸಿದರು. ತರಬೇತಿ ಪಡೆದ ಶಿಕ್ಷಕರು, ಸುಸಜ್ಜಿತ ತರಗತಿ ಕೊಠಡಿಗಳು ಹಾಗೂ ಆಂಗ್ಲ ಮಾಧ್ಯಮ ಶಿಕ್ಷಣದಂತಹ ವ್ಯವಸ್ಥೆಗಳು ಸರ್ಕಾರಿ ಶಾಲೆಗಳ ವಿಶೇಷತೆ ಎಂದು ಹೇಳಿದರು. ಉತ್ತಮ ಶಿಕ್ಷಣ ವ್ಯವಸ್ಥೆ ಹಾಗೂ ಸಾಕಷ್ಟು ಸೌಲಭ್ಯಗಳಿದ್ದರೂ ಅನೇಕ ಪೋಷಕರು ಖಾಸಗಿ ಶಾಲೆಗಳತ್ತ ಮುಖ ಮಾಡುತ್ತಿರುವುದು ವಿಷಾದನೀಯ ಎಂದು ಅವರು ಹೇಳಿದರು. ಸರ್ಕಾರಿ ಶಾಲೆಗಳ ಕುರಿತು ಕೀಳರಿಮೆ ಇರುವ ಅಭಿಪ್ರಾಯ ದೂರ ಮಾಡುವ ಅಗತ್ಯವಿದೆ. ಗ್ರಾಮೀಣ ಭಾಗದ ಬಡ ಮತ್ತು ಮಧ್ಯಮ ವರ್ಗಗಳಲ್ಲಿ ಸರ್ಕಾರಿ ಶಾಲೆಗಳ ಶಿಕ್ಷಣದ ಗುಣಮಟ್ಟ ಗಣನೀಯವಾಗಿ ಸುಧಾರಿಸಿದೆ ಎಂದು ತಿಳಿಸಿದರು. ಗ್ರಾಮೀಣ ಭಾಗದ ಪೋಷಕರು ಸರ್ಕಾರಿ ಶಾಲೆಗಳಲ್ಲಿರುವ ಗುಣಮಟ್ಟದ ಶಿಕ್ಷಣ ಹಾಗೂ ಸೌಲಭ್ಯಗಳನ್ನು ಅರಿತು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗಳಿಗೆ ದಾಖಲಿಸಬೇಕು. ಜಾಥಾದ ವೇಳೆ ವಿದ್ಯಾರ್ಥಿಗಳು ಸರ್ಕಾರಿ ಶಾಲೆ ಉಳಿಸಿ, ಸರ್ಕಾರಿ ಶಾಲೆ ಬೆಳೆಸಿ, ಎಲ್ಲ ಮಕ್ಕಳಿಗೂ ಶಿಕ್ಷಣ ನೀಡೋಣ ಎಂಬ ಘೋಷಣೆಗಳನ್ನು ಕೂಗಿ ಜನರಲ್ಲಿ ಜಾಗೃತಿ ಮೂಡಿಸಿದರು. ಶಿಕ್ಷಕರು ಹಾಗೂ ಶಾಲಾ ಸಿಬ್ಬಂದಿ ಮನೆ ಮನೆಗೆ ತೆರಳಿ ಪೋಷಕರೊಂದಿಗೆ ಸಂವಾದ ನಡೆಸಿ ಮಕ್ಕಳನ್ನು ಸರ್ಕಾರಿ ಶಾಲೆಗೆ ದಾಖಲಿಸುವಂತೆ ಮನವಿ ಮಾಡಿದರು. ದಾಖಲಾತಿ ಅಭಿಯಾನಕ್ಕೆ ಗ್ರಾಮಸ್ಥರಿಂದ ಉತ್ತಮ ಸ್ಪಂದನೆ ವ್ಯಕ್ತವಾಯಿತು.



#### ಸರ್ಕಾರಿ ಶಾಲೆಗಳ ಪ್ರಮುಖ ಸೌಲಭ್ಯಗಳು

- ಉಚಿತ ಪಠ್ಯಪುಸ್ತಕ ಹಾಗೂ ಸಮವಸ್ತ್ರ
- ಬಿಸಿಯೂಟ ಯೋಜನೆ
- ಶೂ ಮತ್ತು ಸಾಕ್ಸ್ ವಿತರಣೆ
- ವಿದ್ಯಾರ್ಥಿವೇತನ ಸೌಲಭ್ಯ
- ಕನ್ನಡ, ಆಂಗ್ಲ ಮಾಧ್ಯಮದಲ್ಲಿ ಶಿಕ್ಷಣ
- ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗೆ ವಿಶೇಷ ಒತ್ತು

---

ಶ್ರೀ ಕೃಷ್ಣ ತತ್ವಾಮೃತ ರಸಧಾರೆ ಕಾರ್ಯಕ್ರಮದಲ್ಲಿ ಶಂಕರ್ ಅಭಿಮತ

# ಮಹಾಭಾರತ ದೃಶ್ಯಾವಳಿ ಗೀತೆ ಅಮೋಘ

• **ದೇವನಹಳ್ಳಿ:** ಶ್ರೀ ಕೃಷ್ಣ ಸತ್ಸಂಗ ಕಾರ್ಯಕ್ರಮ ಭಾಗವಹಿಸಿರುವುದು ನನ್ನ ಸೌಭಾಗ್ಯ ಎಂದು ತಿಳಿಸುತ್ತಾ ರಾಮಾಯಣ ಮಹಾಭಾರತ ದೃಶ್ಯಾವಳಿಯ ಗೀತೆಗಳು ಅಮೋಘವಾಗಿವೆ ಎಂದು ಎ.ಎಸ್.ಎಸ್.ಎಸ್ ಸಂಘದ ಎಂ. ಶಂಕರ್ ತಿಳಿಸಿದರು.

ವಿಜಯಪುರ ಪಟ್ಟಣದಲ್ಲಿ ನಡೆದ ಕನಕಪುರದಿಂದ ಗೀತಾ ತತ್ವಾಮೃತ ರಸಧಾರೆಯ 252ನೇ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.


ಸ್ಥೂಲ ದೇಹವು ಪಂಚಮಹಾಭೂತಗಳಿಂದ ಮಾಡಲ್ಪಟ್ಟ ಭೌತಿಕ ದೇಹವಾಗಿದೆ - ಆಕಾಶ (ನಿರ್ವಾತ), ವಾಯು (ಗಾಳಿ), ಅಗ್ನಿ (ಬೆಂಕಿ), ಜಲ (ನೀರು) ಮತ್ತು ಪೃಥ್ವಿ (ಭೂಮಿ) ಮತ್ತು ಅದು ಹುಟ್ಟು ಬದಲಾವಣೆಗೆ ಒಳಪಟ್ಟಿರುತ್ತದೆ: ಜನನ, ಜೀವನಾಧಾರ, ಬೆಳವಣಿಗೆ, ಪ್ರಬುದ್ಧತೆ, ಕೊಳೆತ ಮತ್ತು ಸಾವು. ಇದು ದಟ್ಟವಾದ ಭೌತಿಕ ದೇಹ. ಭೌತಿಕ ಅವತಾರದ ಸಮಯದಲ್ಲಿ ಸ್ಥೂಲ ದೇಹವು ಎಲ್ಲಾ ಇತರ ತತ್ವಗಳ (ದೇಹಗಳ) ವಾಹನವಾಗಿದೆ. ಅನ್ನಮಯ ಮತ್ತು ಪ್ರಾಣಮಯ ಕೋಶದ ಭಾಗ (ಭೌತಿಕ ಅಭಿವ್ಯಕ್ತಿ) ಸ್ಥೂಲ (ಭೌತಿಕ) ದೇಹದಲ್ಲಿ ವಾಸಿಸುತ್ತವೆ. ಸ್ಥೂಲ ದೇಹಕ್ಕೆ ಅನ್ನಮಯ ಕೋಶ ಪ್ರಾಣಮಯ ಕೋಶದಿಂದ ಪಡೆಯುವ ಸ್ಥೂಲ ಆಹಾರ, ಪಾನೀಯ ಮತ್ತು ಗಾಳಿ ಬೇಕು. ಸಾವಿನ ನಂತರ ಭೌತಿಕ ದೇಹವು ನಾಶವಾಗುತ್ತದೆ ಮತ್ತು ಅದರ ಐದು ಘಟಕ ಅಂಶಗಳು ಕರಗುತ್ತವೆ. ಪ್ರತಿಸಿದ್ಧ ರಾಮ ರಾಮ ಭಜನೆ ಮಾಡಿದರೆ ಮುಕ್ತಿ ಸಿಗುತ್ತದೆ ಎಂದು ತಿಳಿಸಿದರು. ಈ ಸಮಾರಂಭದ ಸಾನಿಧ್ಯ ಅಧ್ಯಕ್ಷತೆಯನ್ನು ಸಂಚಾಲಕ ರಾಧ ಎ.ಎಸ್ ವೆಂಕಟೇಶ್ ಮಾತನಾಡುತ್ತಾ ಶ್ರೀಕೃಷ್ಣ ಸತ್ಸಂಗ ಕಾರ್ಯಕ್ರಮ ಸುಮಾರು 25 ವರ್ಷಗಳಿಂದ ಭಕ್ತಾದಿಗಳ ಸಹಕಾರದಿಂದ ಯಶಸ್ವಿಯಾಗಿ ಮೂಡಿ ಬರುತ್ತಿದೆ. ಈ ಸತ್ಸಂಗದಲ್ಲಿ ಅನೇಕ ಧಾರ್ಮಿಕ ಚಿಂತನ ಕಾರ್ಯಕ್ರಮಗಳು ನಡೆಯುತ್ತಿದ್ದು ಬರುತ್ತಿದೆ ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಮುಖ್ಯ ಅತಿಥಿಗಳಾಗಿ ಮೇಲೂರಿನ ಗೋಪಾಲಪ್ಪ ರಾಮಾಂಜಿನಪ್ಪ ವೆಂಕಟೇಶ್ವರ ಸಾಮಿಲ್ ಮಾಲೀಕರಾದ ನಾಗರಾಜ್ ಕಾರ್ಯದರ್ಶಿಗಳದ ಕೃಷ್ಣಪ್ಪ ವಿಜಾಪುರದ ಆರ್ ರಾಜಶೇಖರ್ ಸದಸ್ಯರಾದ ಎಸ್ ಆರ್ ಲಕ್ಷ್ಮಿ ನಾರಾಯಣ್ ಸೇರಿ ವ್ಯಾಪಾರಿಗಳಾದ ಆಂಜಿನಪ್ಪ ಆರ್ ಮುನಿರಾಜು ರತ್ನಮ್ಮ ರಾಮದಾಸ್ ಅನಿತಾ ರಾಮದಾಸ್ ಹಾಗೂ ಪದಾಧಿಕಾರಿಗಳು ಉಪಸ್ಥಿತರಿದ್ದರು.



## ಕಿರುಸುದ್ದಿ

### ಸುಳ್ಳು ಸುದ್ದಿ ಹರಡಿದವರ ವಿರುದ್ಧ ಕ್ರಮ: ಸುರೇಶ್



**ಬೇಲೂರು:** ವಿಧಾನ ಪರಿಷತ್ ಚುನಾವಣೆಯಲ್ಲಿ ವಿಪ್ ಉಲ್ಲಂಘಿಸಿ ಅಡ್ಡಮತದಾನ ಮಾಡಿದ್ದಾರೆ ಎಂಬ ಮಾಧ್ಯಮಗಳಲ್ಲಿನ ವರದಿಗಳಿಗೆ ಶಾಸಕ ಎಚ್.ಕೆ. ಸುರೇಶ್ ಸ್ಪಷ್ಟನೆ ನೀಡಿದ್ದಾರೆ. ವಿಧಾನ ಪರಿಷತ್ ಚುನಾವಣೆಯಲ್ಲಿ ಪಕ್ಷದ ನಾಯಕ ಆರ್. ಅಶೋಕ್ ಅವರ ಸೂಚನೆಯಂತೆ ಮತ ಚಲಾಯಿಸಿರುವುದಾಗಿ ತಿಳಿಸಿದ್ದಾರೆ. ಮೊದಲ ಪ್ರಾಶಸ್ತ್ಯದ ಮತವನ್ನು ಬಿಜೆಪಿಯ ಅಭ್ಯರ್ಥಿ ಲಿಂಗರಾಜು ಪಾಟೀಲ್ ಅವರಿಗೆ ಹಾಗೂ ಎರಡನೇ ಪ್ರಾಶಸ್ತ್ಯದ ಮತವನ್ನು ಜೆಡಿಎಸ್ ಅಭ್ಯರ್ಥಿ ಗೋವಿಂದರಾಜು ಅವರಿಗೆ ನೀಡಿರುವುದಾಗಿ ಅವರು ಸ್ಪಷ್ಟಪಡಿಸಿದ್ದಾರೆ. ಮತದಾನಕ್ಕೆ ತಡವಾಗಿ ಆಗಮಿಸಿದ ಕುರಿತು ಪ್ರತಿಕ್ರಿಯಿಸಿರುವ ಅವರು, ಅಂದು ರಾಘವೇಂದ್ರ ಸ್ವಾಮಿಗಳ ವಿಶೇಷ ದಿನವಾಗಿದ್ದು, ಇದೇ ವೇಳೆ ಮಗಳ ವಧುವಿನ ಕಡೆಯವರು ಮನೆಗೆ ಆಗಮಿಸಿದ್ದ ಹಿನ್ನೆಲೆಯಲ್ಲಿ ಸ್ವಲ್ಪ ವಿಳಂಬವಾಗಿದೆ. ಇದರಲ್ಲಿ ಯಾವುದೇ ಪಕ್ಷವಿರೋಧಿ ಉದ್ದೇಶ ಇರಲಿಲ್ಲ ಎಂದು ಹೇಳಿದ್ದಾರೆ. ಧರ್ಮಸ್ಥಳದ ಶ್ರೀ ಮಂಜುನಾಥ ಸ್ವಾಮಿಯ ಮೇಲೆ ಪ್ರಮಾಣ ಮಾಡಿ ತಾವು ಯಾವುದೇ ಅಡ್ಡಮತದಾನ ಮಾಡಿಲ್ಲ ಎಂದು ಸ್ಪಷ್ಟಪಡಿಸಿರುವ ಶಾಸಕ ಹೆಚ್.ಕೆ. ಸುರೇಶ್, ತಮ್ಮ ವಿರುದ್ಧ ಸುಳ್ಳು ಸುದ್ದಿ ಹರಡಿರುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ಅನುಮತಿ ನೀಡಬೇಕು ಎಂದು ಮನವಿ ಮಾಡಿದ್ದಾರೆ. ಅಲ್ಲದೆ, ಪ್ರಕರಣದ ಸತ್ಯಾಸತ್ಯತೆ ಪರಿಶೀಲಿಸಲು ಸತ್ಯಶೋಧನಾ ಸಮಿತಿ ರಚಿಸುವಂತೆಯೂ ಅವರು ಕೋರಿದ್ದಾರೆ. ತಮ್ಮ ಮೇಲಿನ ಆರೋಪಗಳಿಗೆ ಸಂಬಂಧಿಸಿದಂತೆ ಪಕ್ಷದ ಮಟ್ಟದಲ್ಲಿ ಸಮಗ್ರ ಪರಿಶೀಲನೆ ನಡೆಯಬೇಕು ಎಂದು ಪತ್ರದಲ್ಲಿ ತಿಳಿಸಿದ್ದಾರೆ.

### ಗಾಂಜಾ ಮಾರಾಟ: ಬಂಧನ



**ದೇವನಹಳ್ಳಿ:** ತಾಲೂಕಿನ ಪೋಲನಹಳ್ಳಿ ಕೆಐಎಡಿಬಿ ಕೈಗಾರಿಕಾ ಪ್ರದೇಶದ ಎಕ್ಸೈಡ್ ಕಾರ್ಖಾನೆ ಸಮೀಪ ಹೊರ ರಾಜ್ಯದ ಕಾರ್ಮಿಕರನ್ನು ಗುರಿಯಾಗಿಸಿಕೊಂಡು ಗಾಂಜಾ ಮಾರಾಟ ಮಾಡುತ್ತಿದ್ದ ಆರೋಪದ ಮೇಲೆ ಇಬ್ಬರನ್ನು ಚನ್ನರಾಯಪಟ್ಟಣ ಪೊಲೀಸರು ಬಂಧಿಸಿದ್ದಾರೆ. ಖಚಿತ ಮಾಹಿತಿಯ ಆಧಾರದ ಮೇಲೆ ದಾಳಿ ನಡೆಸಿದ ಪೊಲೀಸರು ಆರೋಪಿಗಳಿಂದ 3 ಕೆಜಿ 610 ಗ್ರಾಂ ಗಾಂಜಾ ವಶಪಡಿಸಿಕೊಂಡಿದ್ದಾರೆ. ಬಂಧಿತರನ್ನು ಸಮೀರ್ (30) ಹಾಗೂ ಪ್ರಜ್ವಲ್ (19) ಎಂದು ಗುರುತಿಸಲಾಗಿದೆ. ಆರೋಪಿಗಳ ವಿರುದ್ಧ ಎನ್‌ಡಿಪಿಎಸ್ ಕಾಯ್ದೆ ಅಡಿ ಪ್ರಕರಣ ದಾಖಲಿಸಿ, ಹೆಚ್ಚಿನ ತನಿಖೆ ಕೈಗೊಳ್ಳಲಾಗಿದೆ. ದೊಡ್ಡಬಳ್ಳಾಪುರ ಡಿವೈಎಸ್‌ಪಿ ಪಾಂಡುರಂಗ ಅವರ ಮಾರ್ಗದರ್ಶನದಲ್ಲಿ ಕಾರ್ಯಾಚರಣೆ ನಡೆಸಲಾಗಿದ್ದು, ಪೊಲೀಸ್ ಇನ್‌ಸ್ಪೆಕ್ಟರ್ ಪ್ರಕಾಶ್, ಸಹಾಯಕ ಸಬ್‌ಇನ್‌ಸ್ಪೆಕ್ಟರ್ ನಾರಾಯಣಸ್ವಾಮಿ, ಶ್ರೀಧರ್, ಸಂಜು ವಾಲೀಕರ್ ಹಾಗೂ ಶ್ರೀಧರ್ ಕುಮಾರ್ ಸೇರಿದಂತೆ ಪೊಲೀಸ್ ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

### ಗುರುವಿನಿಂದ ಕಲಿತ ಜ್ಞಾನ ಶಾಶ್ವತ

**ವಿಜಯಪುರ:** ಪ್ರಪಂಚದಲ್ಲಿ ಭೂಮಿ, ಹಣ, ಅಧಿಕಾರ ಯಾವುದೂ ಮನುಷ್ಯನಿಗೆ ಶಾಶ್ವತವಲ್ಲ, ಆದರೆ ಒಬ್ಬ ವ್ಯಕ್ತಿ ತನ್ನ ಗುರುವಿನಿಂದ ಕಲಿಯುವ ಶ್ರೇಷ್ಠ ವಿದ್ಯೆ ಹಾಗೂ ಜ್ಞಾನ ಮಾತ್ರ ಎಂದಿಗೂ ಶಾಶ್ವತವಾಗಿ ಉಳಿಯುತ್ತದೆ ಎಂದು ಬಸವಕಲ್ಯಾಣ ಮಠದ ಮಠಾಧ್ಯಕ್ಷ ಮಹದೇವಸ್ವಾಮೀಜಿ ತಿಳಿಸಿದರು. ಇಲ್ಲಿನ ನಗರೇಶ್ವರಸ್ವಾಮಿ ದೇವಾಲಯದ ಜ್ಞಾನಮಂದಿರದಲ್ಲಿ ಪ್ರಗತಿ ಆಂಗ್ಲ ಶಾಲೆಯ ವತಿಯಿಂದ ಗುರುವಾರ ನಡೆದ 'ಅಕ್ಷರಾಭ್ಯಾಸ' ಕಾರ್ಯಕ್ರಮದಲ್ಲಿ ಪುಟಾಣಿ ಮಕ್ಕಳಿಗೆ ಅಕ್ಷರ ತಿದ್ದಿಸುವ ಮೂಲಕ ಅವರು ಆಶೀರ್ವಚನ ನೀಡಿದರು. ಕಲಿಯಬೇಕೆಂಬ ನಿಷ್ಠೆ ಹಾಗೂ ಶ್ರದ್ಧೆ ಮನಸ್ಸಿನಲ್ಲಿದ್ದರೆ ಏನಾದರೂ ಸಾಧಿಸಬಹುದು. ಇದಕ್ಕೆ ಕೇವಲ ಗುರುಗಳ ಪ್ರತಿಮೆಯನ್ನು ಎದುರಿಟ್ಟುಕೊಂಡು ಶ್ರೇಷ್ಠ ಧನುರ್ಧಾರಿ ಎನಿಸಿಕೊಂಡ ಏಕಲವ್ಯನೇ ಇದಕ್ಕೆ ಸಾಕ್ಷಿ. ಶಿವಶರಣಸ್ವರೂಪಿಯಾದವರಿಗೆ ಗುರುವಿನಿಂದಲೇ ಮೊದಲು ಎನ್ನುವಂತೆ ಬದುಕಿನಲ್ಲಿ ಪ್ರತಿಯೊಂದಕ್ಕೂ ಗುರುವಿನ ಮಾರ್ಗದರ್ಶನ ಅತ್ಯಗತ್ಯ. ನಮ್ಮ ಶಾಲೆಯೇ ಒಂದು ಸ್ವರೂಪವಾಗಿದೆ ಎಂದು ಹೇಳಿದರು. ಅನೇಕ ಪೋಷಕರು ತಮ್ಮ ಮಕ್ಕಳ ಅಕ್ಷರಾಭ್ಯಾಸಕ್ಕಾಗಿ ಶೃಂಗೇರಿ, ಉಡುಪಿ, ಧರ್ಮಸ್ಥಳ ಇನ್ನಿತರ ದೂರದ ಪುಣ್ಯಕ್ಷೇತ್ರಗಳಿಗೆ ಹೋಗಿ ದೇವರ ಸನ್ನಿಧಿಯಲ್ಲಿ ಅಕ್ಷರ ತಿದ್ದಿಸುವ ವಾಡಿಕೆ ಇದೆ. ಸಂಸ್ಥೆಯ ವತಿಯಿಂದ ಸ್ಥಳೀಯವಾಗಿ ಶಾಲೆಯ ಗುರುಕುಲ ಮಾದರಿಯಲ್ಲಿ ದೇವಾಲಯದಲ್ಲಿ ಮಕ್ಕಳಿಗೆ ಅಕ್ಷರಾಭ್ಯಾಸ ಕಲಿಸಲಾಗುತ್ತಿದೆ ಎಂದು ಪ್ರಗತಿ ಪ್ರಾಥಮಿಕ ಆಂಗ್ಲ ಶಾಲೆಯ ಮುಖ್ಯಶಿಕ್ಷಕ ಪ್ರಕಾಶ್ ತಿಳಿಸಿದರು. ಹಿಂದೂ ಧರ್ಮದಲ್ಲಿ ಅಕ್ಷರಾಭ್ಯಾಸ ಒಂದು ಪ್ರಮುಖ ಸಂಸ್ಕಾರವಾಗಿದೆ. ತಾಯಿ ಶಾರದಾಂಬೆಯನ್ನು ಭಕ್ತಿಯಿಂದ ಪೂಜಿಸಿ, ಜ್ಞಾನದ ಲೋಕಕ್ಕೆ ಮೊದಲ ಹೆಜ್ಜೆ ಇಡುತ್ತಿರುವ ಮಕ್ಕಳಿಗೆ ಶ್ರೀಗಳ ಆಶೀರ್ವಾದ ದೊರೆತಿರುವುದು ಹೆಮ್ಮೆಯ ಸಂಗತಿ ಎಂದು ಪ್ರಗತಿ ಪ್ರೌಢಶಾಲೆ ಮುಖ್ಯಶಿಕ್ಷಕ ವಿ.ಬಸವರಾಜು ಹೇಳಿದರು.

## ರಾಸಾಯನಿಕ ಗೊಬ್ಬರಕ್ಕೆ ಪರ್ಯಾಯವಾಗಿ ಸಾವಯವ ಕೃಷಿಯತ್ತ ರೈತರ ಒಲವು

# ಕೊಟ್ಟಿಗೆ ಗೊಬ್ಬರಕ್ಕೆ ಎಲ್ಲೆಡೆ ಭಾರೀ ಬೇಡಿಕೆ

ವಿ. ನರಸಿಂಹಮೂರ್ತಿ, ದೇವನಹಳ್ಳಿ

ದಿಗಂತ ವಿಶೇಷ



**ದೇವನಹಳ್ಳಿ:** ಮುಂಗಾರು ಮಳೆ ಆರಂಭವಾಗುತ್ತಿದ್ದಂತೆ ರೈತರು ಬಿತ್ತನೆ ಕಾರ್ಯಕ್ಕೆ ಸಜ್ಜಾಗಿದ್ದಾರೆ. ಇದೇ ವೇಳೆ ರಾಸಾಯನಿಕ ಗೊಬ್ಬರಗಳ ಬಳಕೆಯನ್ನು ಕಡಿಮೆ ಮಾಡಿ, ಸಾವಯವ ಕೃಷಿಯತ್ತ ಹೆಚ್ಚಿನ ಆಸಕ್ತಿ ತೋರಿಸುತ್ತಿದ್ದಾರೆ. ಪರಿಣಾಮವಾಗಿ ಕೊಟ್ಟಿಗೆ ಗೊಬ್ಬರಕ್ಕೆ ಭಾರೀ ಬೇಡಿಕೆ ಉಂಟಾಗಿದ್ದು, ಅದರ ಬೆಲೆಯೂ ಗಣನೀಯವಾಗಿ ಏರಿಕೆಯಾಗಿದೆ.

ಹಿಂದೆ ಒಂದು ಟ್ರ್ಯಾಕ್ಟರ್ (ಎರಡು ಟಿಪ್ಪರ್) ಕೊಟ್ಟಿಗೆ ಗೊಬ್ಬರದ ಬೆಲೆ ₹ 6 ಸಾವಿರದಷ್ಟಿತ್ತು, ಈಗ ₹ 7 ಸಾವಿರದವರೆಗೆ ಏರಿಕೆಯಾಗಿದೆ. ಭೂಮಿಯಲ್ಲಿ ಕೊಟ್ಟಿಗೆ ಗೊಬ್ಬರ ಬಳಸುವುದರಿಂದ ಮಣ್ಣಿನ ಫಲವತ್ತತೆ ಹೆಚ್ಚುವುದರ ಜೊತೆಗೆ ತೇವಾಂಶ ಹೆಚ್ಚು ಕಾಲ ಉಳಿಯುವುದರಿಂದ ರೈತರು ಸಾವಯವ ಗೊಬ್ಬರದತ್ತ ಹೆಚ್ಚು ಒಲವು ತೋರುತ್ತಿದ್ದಾರೆ.

ಆದರೆ ಗ್ರಾಮೀಣ ಪ್ರದೇಶಗಳಲ್ಲಿ ಜಾನುವಾರುಗಳ ಸಂಖ್ಯೆ ಕಡಿಮೆಯಾಗಿರುವ ಕಾರಣ ಕೊಟ್ಟಿಗೆ ಗೊಬ್ಬರದ ಲಭ್ಯತೆ ಗಣನೀಯವಾಗಿ ಇಳಿದಿದೆ.

ಹಿಂದೆ ಪ್ರತಿಯೊಂದು ರೈತರ ಮನೆಯಲ್ಲೂ ಹಸು, ಎಮ್ಮೆ ಹಾಗೂ ಕುರಿಗಳಿದ್ದ ಕಾರಣ ಗೊಬ್ಬರ ಸುಲಭವಾಗಿ ದೊರೆಯುತ್ತಿತ್ತು. ಈಗ ಹೈನುಗಾರಿಕೆ ಕುಂಠಿತವಾಗಿರುವ ಹಿನ್ನೆಲೆಯಲ್ಲಿ ಸ್ಥಳೀಯವಾಗಿ ಗೊಬ್ಬರ ಸಿಗುವುದು ಕಷ್ಟವಾಗಿದೆ ಎಂದು ರೈತರು ಹೇಳುತ್ತಾರೆ.

**ಆಂಧ್ರ ಪ್ರದೇಶದಿಂದ ಗೊಬ್ಬರ ಪೂರೈಕೆ:** ಸ್ಥಳೀಯವಾಗಿ ಗೊಬ್ಬರ ಕೊರತೆಯಾಗಿರುವ ಕಾರಣ ದೇವನಹಳ್ಳಿ ಭಾಗದ ರೈತರು ಆಂಧ್ರ ಪ್ರದೇಶದಿಂದ ಲಾರಿಗಳ ಮೂಲಕ ಕೊಟ್ಟಿಗೆ ಗೊಬ್ಬರ ತರಿಸಿಕೊಳ್ಳುತ್ತಿದ್ದಾರೆ.

ಮೂರು ಟ್ರ್ಯಾಕ್ಟರ್ ಲೋಡ್ ಗೊಬ್ಬರ ಹೊಂದಿರುವ ಒಂದು ಲಾರಿಯ ಬೆಲೆ ಸುಮಾರು 22 ಸಾವಿರವಾಗಿರುವುದರಿಂದ ಹಲವು ರೈತರು ಸೇರಿ ಗೊಬ್ಬರ ಖರೀದಿಸುತ್ತಿದ್ದಾರೆ.

**ಕೋಳಿ ಗೊಬ್ಬರಕ್ಕೂ ಹೆಚ್ಚಿದ ಬೇಡಿಕೆ:** ಕೊಟ್ಟಿಗೆ ಗೊಬ್ಬರ ಸಿಗದ ಹಿನ್ನೆಲೆಯಲ್ಲಿ ರೈತರು ಈಗ ಕೋಳಿ ಫಾರಂಗಳಿಂದ ಕೋಳಿ ಗೊಬ್ಬರವನ್ನು ಖರೀದಿಸಿ ಹೊಲಗಳಿಗೆ ಬಳಸುತ್ತಿದ್ದಾರೆ. ಇದರಿಂದ ಕೋಳಿ ಫಾರಂ ಮಾಲೀಕರಿಗೂ ಹೆಚ್ಚುವರಿ ಆದಾಯ ದೊರೆಯುತ್ತಿದ್ದು, ಕೋಳಿ ಗೊಬ್ಬರದ ಬೇಡಿಕೆಯೂ ಹೆಚ್ಚಿದೆ.

ಕೃಷಿ ಇಲಾಖೆಯ ಅಧಿಕಾರಿಗಳ ಪ್ರಕಾರ, ಕೋಳಿ ಗೊಬ್ಬರವನ್ನು ನೇರವಾಗಿ ಹೊಲಕ್ಕೆ ಹಾಕುವ ಬದಲು ಕೆಲವು ದಿನ ನೆರಳಿನಲ್ಲಿ ಸಂಗ್ರಹಿಸಿ ನಂತರ ಬಳಸಿದರೆ ಅದರಲ್ಲಿರುವ ಜೀವಾಣುಗಳ ಕ್ರಿಯಾಶೀಲತೆ ಹೆಚ್ಚಿ, ಮಣ್ಣಿನ ಗುಣಮಟ್ಟ ಸುಧಾರಿಸುತ್ತದೆ.

ಕೋಳಿ ಗೊಬ್ಬರದಲ್ಲಿ ಸಾರಜನಕ, ರಂಜಕ, ಪೊಟ್ಯಾಷ್ ಸೇರಿದಂತೆ ಹಲವು ಸೂಕ್ಷ್ಮ ಪೋಷಕಾಂಶಗಳು ಸಮೃದ್ಧವಾಗಿದ್ದು, ಬೆಳೆಗಳ ಉತ್ತಮ ಬೆಳವಣಿಗೆಗೆ ನೆರವಾಗುತ್ತವೆ.

> ರಾಸಾಯನಿಕ ಗೊಬ್ಬರಗಳ ಬೆಲೆ ನಿರಂತರವಾಗಿ ಏರಿಕೆಯಾಗುತ್ತಿರುವ ಹಿನ್ನೆಲೆಯಲ್ಲಿ ನಾವು ಕೊಟ್ಟಿಗೆ ಗೊಬ್ಬರ ಬಳಕೆಗೆ ಹೆಚ್ಚಿನ ಆದ್ಯತೆ ನೀಡುತ್ತಿದ್ದೇವೆ. ಇದರಿಂದ ಮಣ್ಣಿನ ಫಲವತ್ತತೆಯೂ ಉತ್ತಮವಾಗುತ್ತದೆ.
> ■ ಬಸವರಾಜು, ರೈತ, ಹಾರೋಹಳ್ಳಿ

- ಕೊಟ್ಟಿಗೆ ಗೊಬ್ಬರದಿಂದ ಮಣ್ಣಿನ ಫಲವತ್ತತೆ ಹೆಚ್ಚಳ
- ಮಣ್ಣಿನಲ್ಲಿ ತೇವಾಂಶವನ್ನು ಹೆಚ್ಚು ಕಾಲ ಉಳಿಸಿಕೊಳ್ಳಲು ಸಹಕಾರಿ
- ಬೆಳೆಗಳ ಬೇರುಗಳ ಬೆಳವಣಿಗೆ ಉತ್ತಮ
- ರಾಸಾಯನಿಕ ಗೊಬ್ಬರಗಳ ಮೇಲಿನ ಅವಲಂಬನೆ ಕಡಿಮೆ
- ದೀರ್ಘಾವಧಿಯಲ್ಲಿ ಮಣ್ಣಿನ ಆರೋಗ್ಯ ಕಾಪಾಡಿ ಉತ್ತಮ ಇಳುವರಿಗೆ ಸಹಕಾರಿ .

**ಸಾವಯವ ಕೃಷಿಗೆ ಉತ್ತೇಜನ**

ಸಾವಯವ ಕೃಷಿ ಎನ್ನುವುದು ಕೇವಲ ಒಂದು ಬೇಸಾಯ ಪದ್ಧತಿಯಲ್ಲ, ಅದು ಭೂಮಿ, ಪರಿಸರ ಮತ್ತು ಮನುಷ್ಯನ ಆರೋಗ್ಯವನ್ನು ರಕ್ಷಿಸುವ ಒಂದು ಸುಸ್ಥಿರ ಜೀವನವಿಧಾನ. ಇಂದಿನ ದಿನಗಳಲ್ಲಿ ರಾಸಾಯನಿಕ ಗೊಬ್ಬರಗಳು ಮತ್ತು ಕೀಟನಾಶಕಗಳ ಅತಿಯಾದ ಬಳಕೆಯಿಂದಾಗಿ ಮಣ್ಣಿನ ಫಲವತ್ತತೆ ಕ್ಷೀಣಿಸುತ್ತಿದೆ ಹಾಗೂ ಆಹಾರ ಪದಾರ್ಥಗಳು ವಿಷಪೂರಿತವಾಗುತ್ತಿವೆ. ಈ ಹಿನ್ನೆಲೆಯಲ್ಲಿ ಸಾವಯವ ಕೃಷಿಗೆ ಉತ್ತೇಜನ ನೀಡುವುದು ಅತ್ಯಂತ ತುರ್ತು ಮತ್ತು ಅಗತ್ಯವಾಗಿದೆ.

## ಅಂತಾರಾಜ್ಯ ಕಳ್ಳರ ಬಂಧಿಸಿದ ಪೊಲೀಸರು



**ದೊಡ್ಡಬಳ್ಳಾಪುರ:** ಮನೆಯಲ್ಲಿನ ಚಿನ್ನಾಭರಣ ಬೈಕ್ ಸಮೇತ ಪರಾರಿಯಾಗಿದ್ದ ಅಂತರಾಜ್ಯ ಕಳ್ಳರನ್ನು ಬಂಧಿಸಿದ ಘಟನೆ ದೊಡ್ಡಬಳ್ಳಾಪುರದಲ್ಲಿ ಜರುಗಿದೆ.

ಮನೆ ಕಟ್ಟಲು ಬಿಹಾರದಿಂದ ಬಂದಿದ್ದ ಇಬ್ಬರು ಗಾರೆಕೆಲಸಗಾರರು, ಮನೆಮಾಲೀಕನ ಮನೆಯ ಬೀರುವಿನಲ್ಲಿದ್ದ ಚಿನ್ನಾಭರಣ, 1 ಲಕ್ಷದ ನಗದು ಹಣ ಮತ್ತು ಬೈಕ್ ಸಮೇತ ಪರಾರಿಯಾಗಿದ್ದರು, ಇಬ್ಬರು ಕಳ್ಳರನ್ನು ಬಂಧಿಸಿದ ದೊಡ್ಡಬಳ್ಳಾಪುರ ಗ್ರಾಮಾಂತರ ಪೊಲೀಸರು ಆರೋಪಿಗಳಿಂದ 11.42 ಲಕ್ಷ ಹಣ ಮತ್ತು ಬೈಕ್ ಅನ್ನು ಜಪ್ತಿ ಮಾಡಿದ್ದಾರೆ.

ತಾಲೂಕಿನ ಮೋಪರಹಳ್ಳಿಯ ಸರಳ ಎಂಬುವರ ಮನೆಯಲ್ಲಿ ಮೇ 15 ರಂದು ಕಳ್ಳತನ ಕೃತ್ಯ ನಡೆದಿದ್ದು, ಪ್ರಕರಣ ಸಂಬಂಧಿಸಿದಂತೆ ಆರೋಪಿಗಳಾದ ಗೌರವ್ ಕುಮಾರ್ (19), ವಿಶಾಲ್ ಕುಮಾರ್ (22) ಬಂಧಿಸಲಾಗಿದೆ, ಆರೋಪಿಗಳು ಬಿಹಾರ ರಾಜ್ಯದ ಪೂರ್ಣಿಯಾ ಜಿಲ್ಲೆಯ ಕಾಜಿಚಕ್ ಗ್ರಾಮದವರು.

ದೂರುದಾರರಾದ ಸರಳ ತಾವು ವಾಸವಾಗಿದ್ದ ಮನೆಯ ಪಕ್ಕದಲ್ಲಿ ಮನೆಯನ್ನ ಕಟ್ಟುತ್ತಿದ್ದರು, ಮನೆ ಕಟ್ಟುವ ಕೆಲಸಕ್ಕಾಗಿ ಬಿಹಾರದಿಂದ ವಿಶಾಲ್ ಕುಮಾರ್ ಮತ್ತು ಗೌರವ್ ಕುಮಾರ್ ಬಂದಿದ್ದು, ಕಟ್ಟುತ್ತಿದ್ದ ಮನೆಯಲ್ಲಿಯೇ ವಾಸವಾಗಿದ್ದರು, ಆರೋಪಿಗಳು ಸರಳ ಮನೆಗೂ ಬಂದು ಹೋಗುತ್ತಿದ್ದರು ಈ ವೇಳೆ ಅವರು ಚಿನ್ನಾಭರಣ ಇಡುತ್ತಿದ್ದ ಜಾಗವನ್ನು ನೋಡಿಕೊಂಡಿದ್ದರು,

ಮೇ 15 ರಂದು ಸರಳ ಮತ್ತು ಅಕೆಯ ಪತಿ ಕೆಲಸ ನಿಮಿತ್ತ ದೊಡ್ಡಬಳ್ಳಾಪುರ ನಗರಕ್ಕೆ ತೆರಳಿದ್ದಾರೆ, ಮನೆಗೆ ವಾಪಸ್ ಬಂದ ಅವರು ಸಿಲಿಂಡರ್ ಡೆಲಿವರಿ ಮಾಡಿದ ಹುಡುಗನಿಗೆ ಹಣ ಕೊಡಲು ಬೀರುವನ್ನು ತೆಗೆದಾಗ ಬೀರುವಿನಲ್ಲಿದ್ದ 55 ಗ್ರಾಂ ಚಿನ್ನದ ಲಾಂಗ್ ಚೈನ್, 30 ಗ್ರಾಂ ಚಿನ್ನದ ನೆಕ್ಲೇಸ್, 1 ಲಕ್ಷ ನಗದು ಹಣ ಮತ್ತು ಬೈಕ್ ಕಳುವಾಗಿತ್ತು, ಮನೆಯ ಸಿ.ಸಿ ಟಿವಿ ಕ್ಯಾಮರಾ ಪರಿಶೀಲನೆ ಮಾಡಿದ್ದಾಗ ಗಾರೆ ಕೆಲಸಕ್ಕೆ ಬಂದಿದ್ದ ವಿಶಾಲ್ ಮತ್ತು ಗೌರವ್ ಬೈಕ್ ಸಮೇತ ಪರಾರಿಯಾಗುವ ದೃಶ್ಯ ಸೆರೆಯಾಗಿರುವುದು ಪತ್ತೆಯಾಗಿದೆ.

ಮನೆಗಳ್ಳರನ್ನ ಬಂಧಿಸುವಲ್ಲಿ ದೊಡ್ಡಬಳ್ಳಾಪುರ ಗ್ರಾಮಾಂತರ ಪೊಲೀಸ್ ತಂಡ ಯಶಸ್ವಿಯಾಗಿದ್ದು, ಇನ್ಸ್‌ಪೆಕ್ಟರ್ ಡಾ. ನವೀನ್ ಕುಮಾರ್.ಎಂ.ಬಿ ನೇತೃತ್ವದ ಪೊಲೀಸ್ ತಂಡದ ಪಿಎಸ್ ಐ ನಾರಾಯಣಸ್ವಾಮಿ, ಸುಮಂತ್, ಹೆಡ್ ಕಾನ್ಸ್‌ಟೇಬಲ್ ಗಳಾದ ರಂಗನಾಥ್, ಸುನೀಲ್ ಬಾಸಗಿ, ಹರೀಶ್, ಮಂಜುನಾಥ್, ಚಂದ್ರಶೇಖರ್, ನಾಗರಾಜು, ಸತೀಶ್ ಉಪ್ಪಾರ ಮತ್ತು ತಾಂತ್ರಿಕ ಸಿಬ್ಬಂದಿ ಪ್ರಮುಖ ಪಾತ್ರ ವಹಿಸಿದ್ದರು.

## ವಿದ್ಯುತ್ ಕೇಬಲ್ ಕಾಮಗಾರಿ ಅವೈಜ್ಞಾನಿಕ

**ವಿಜಯಪುರ:** ಪಟ್ಟಣದಲ್ಲಿ ನಡೆಯುತ್ತಿರುವ ವಿದ್ಯುತ್ ಕೇಬಲ್ ಅಳವಡಿಕೆ ಕಾರ್ಯವು ಅವೈಜ್ಞಾನಿಕವಾಗಿ ಕೂಡಿದ್ದು, ಇದರಿಂದ ನಾನಾ ಸಮಸ್ಯೆಗಳು ಎದುರಾಗುವಂತಾಗಿದೆ ಎಂದು ಸಾರ್ವಜನಿಕರು ಆರೋಪಿಸಿದ್ದಾರೆ.

ಆತುರವಾಗಿ ಕೇಬಲ್ ಕಾಮಗಾರಿ ನಡೆಸುತ್ತಿದ್ದು, ಕಾಮಗಾರಿ ನಡೆಯುವ ವೇಳೆ ವಿದ್ಯುತ್ ಕಡಿತಗೊಂಡಿರುತ್ತದೆ. ಕಾಮಗಾರಿ ಮುಗಿದ ನಂತರ ಅನೇಕ ಮನೆಗಳಲ್ಲಿ ವಿದ್ಯುತ್ ಸಂಪರ್ಕ ಕಡಿತಗೊಳ್ಳುತ್ತಿದೆ. ಬೀದಿ ದೀಪಗಳು ಉರಿಯುತ್ತಿಲ್ಲ, ವೋಲ್ಟೇಜ್ ಹೆಚ್ಚಾಗಿ ಮನೆಗಳಲ್ಲಿ ಬಲ್ಬ್‌ಗಳು, ಟಿ.ವಿ, ಮಿಕ್ಸಿ, ಮೊಬೈಲ್ ಚಾರ್ಜ್ ಗಳು ರಿಪೇರಿಯಾಗುತ್ತಿವೆ. ನೀರಿನ ಸಂಪ್ ಮೋಟಾರ್‌ಗಳೂ ಕೆಡುತ್ತಿವೆ. ಇಂತಹ ಅನೇಕ ಸಮಸ್ಯೆಗಳು ಈಗ ಸಾರ್ವಜನಿಕರಿಗೆ ಎದುರಾಗಿವೆ ಎಂದು ಸಾರ್ವಜನಿಕರು ಆರೋಪಿಸಿದ್ದಾರೆ.



ಎಲೆಕ್ಟ್ರಾನಿಕ್ ವಸ್ತುಗಳ ರಿಪೇರಿ ಆಗುತ್ತಿರುವ ಬಗ್ಗೆ ವಿದ್ಯುತ್ ಕೇಬಲ್ ಅಳವಡಿಕೆಯ ಗುತ್ತಿಗೆದಾರರ ಗಮನಕ್ಕೆ ತಂದರೆ ಈ ಬಗ್ಗೆ ಪುರಸಭೆಯಲ್ಲಿ ವಿಚಾರಿಸಿ ಎಂದು ಉತ್ತರಿಸುತ್ತಿದ್ದಾರೆ. ಪುರಸಭೆಯಲ್ಲಿ ವಿಚಾರಿಸಿದರೆ, ಅದು ನಮಗೆ ಸಂಬಂಧಿಸಿಲ್ಲ ಎಂದು ಹೇಳುತ್ತಿದ್ದಾರೆ. ಯಾರಿಗೆ ಜನರ ಸಮಸ್ಯೆ ಹೇಳುವುದು ತಿಳಿಯುತ್ತಿಲ್ಲ ಎಂದು ಸಾರ್ವಜನಿಕರು ದೂರಿದ್ದಾರೆ.

ಭೂಗತ ಕೇಬಲ್ ಅಳವಡಿಕೆಯಲ್ಲಿ ಆಗಿರುವ ಲೋಪದೋಷಗಳಿಂದ ಮನೆಗಳಲ್ಲಿನ ಎಲೆಕ್ಟ್ರಾನಿಕ್ ವಸ್ತುಗಳ ರಿಪೇರಿಗೆ ಬರುತ್ತಿವೆ. ನಮ್ಮ ಮನೆ ಯಲ್ಲಿ ನೀರಿನ ಸಂಪಿನ ಮೋಟಾರು, ಬಲ್ಬ್, ಟಿ.ವಿ ಹಾಳಾಗಿದೆ. ಇದಕ್ಕೆ ಯಾರು ಹೊಣೆ? ಎಂದು 8 ನೇ ವಾರ್ಡಿನ ಪುರಸಭೆ ಸದಸ್ಯ ಸಿ.ಎಂ. ರಾಮು ಪ್ರಶ್ನಿಸಿದರು.

ಮನೆಗಳಿಗೆ ವಿದ್ಯುತ್ ಕಡಿತ ಗೊಂಡರೆ ಖಾಸಗಿ ವ್ಯಕ್ತಿಗಳಿಗೆ ಹಣ ಕೊಟ್ಟು ಸರಿಪಡಿಸುವಂತಾಗಿದೆ. ರಿಪೇರಿಯಾಗಿರುವ ಎಲೆಕ್ಟ್ರಾನಿಕ್ ವಸ್ತುಗಳನ್ನು ರೆಡಿ ಮಾಡಿಸಲು ಹಣ ದುಂದು ವೆಚ್ಚವಾಗುತ್ತಿದೆ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಗಮನ ಹರಿಸಿ, ವೈಜ್ಞಾನಿಕವಾಗಿ ವಿದ್ಯುತ್ ಕೇಬಲ್ ಅಳವಡಿಸಬೇಕೆಂದು ಅವರು ಆಗ್ರಹಿಸಿದರು.

ಒಂದೆಡೆ ಬೇಸಿಗೆಯಿಂದ ಅಂತರ್ಜಲ ಮಟ್ಟ ಕುಸಿದಿದೆ. ಇದೇ ಸಂದರ್ಭದಲ್ಲಿ ಪಟ್ಟಣದಲ್ಲಿ ವಿದ್ಯುತ್ ಕೇಬಲ್ ಅಳವಡಿಕೆ ಕಾಮಗಾರಿ ನಡೆಸುತ್ತಿರುವುದರಿಂದ ಬೆಳಗ್ಗೆಯಿಂದ ರಾತ್ರಿವರೆಗೂ ವಿದ್ಯುತ್ ಕಡಿತ ಮಾಡಲಾಗುತ್ತಿದೆ. ಇದರಿಂದ ಕೊಳವೆ ಬಾವಿಗಳಿಂದ ಸಾರ್ವಜನಿಕರಿಗೆ ಸಮರ್ಪಕವಾಗಿ ನೀರು ಒದಗಿಸಲು ಸಮಸ್ಯೆ ಉಂಟಾಗಿದೆ ಎಂದು 12 ನೇ ವಾರ್ಡಿನ ಪುರಸಭೆ ಸದಸ್ಯ ನಂದಕುಮಾರ್ ಆರೋಪಿಸಿದರು.

## ಪಾದಪೂಜೆ, ಶೋಭಾಯಾತ್ರೆ ಮತ್ತು ಧಾರ್ಮಿಕ ಕಾರ್ಯಕ್ರಮ

# ಶಿಡ್ಲಘಟ್ಟಕ್ಕೆ ಪೇಜಾವರ ಶ್ರೀಗಳ ಭೇಟಿ

**ಶಿಡ್ಲಘಟ್ಟ:** ಪೇಜಾವರ ಮಠದ ಶ್ರೀವಿಶ್ವಪ್ರಸನ್ನ ತೀರ್ಥ ಸ್ವಾಮೀಜಿಯವರು ನಗರದ ಶ್ರೀರಾಘವೇಂದ್ರ ಮಠ ಹಾಗೂ ವಿವಿಧ ದೇವಾಲಯಗಳಿಗೆ ಭೇಟಿ ನೀಡಿದರು. ತಾಲೂಕಿನ ಅಪ್ಪೇಗೌಡನಹಳ್ಳಿ ಗ್ರಾಮದ ಲಕ್ಷ್ಮೀನಾರಾಯಣ ರೆಡ್ಡಿ ಅವರ ಗೋಪಾಲನ ಕೇಂದ್ರಕ್ಕೆ ಭೇಟಿ ನೀಡಿದ ಶ್ರೀಗಳು, ನಂತರ ಭಕ್ತರ ಮನೆಗಳಲ್ಲಿ ಪಾದಪೂಜೆ ಸ್ವೀಕರಿಸಿ ಆಶೀರ್ವದಿಸಿದರು.

ಮುಂದುವರಿದು, ಮೇಲೂರು ಗ್ರಾಮದ ಶಾಸಕ ಬಿ.ಎನ್. ರವಿಕುಮಾರ್ ಅವರ ನಿವಾಸಕ್ಕೆ ಭೇಟಿ ನೀಡಿದ ಶ್ರೀಗಳು, ನಂತರ ಮಯೂರ ವೃತ್ತದ ಬಳಿ ಸೀಕಲ್ ರಾಮಚಂದ್ರಗೌಡ ಮತ್ತು ಸೀಕಲ್ ಆನಂದಗೌಡ ಅವರಿಂದ ಪಾದಪೂಜೆ ಸ್ವೀಕರಿಸಿದರು. ಬಳಿಕ ಶ್ರೀವೀರಾಂಜನೇಯ ಸ್ವಾಮಿ, ರಾಘವೇಂದ್ರ ಸ್ವಾಮಿ ಮಠ ಹಾಗೂ ಕೃಷ್ಣಸ್ವಾಮಿ ದೇವಾಲಯಗಳಲ್ಲಿ ಪೂಜೆ ಸಲ್ಲಿಸಿ, ಲೋಕ ಕಲ್ಯಾಣಕ್ಕಾಗಿ ನಾವೆಲ್ಲರೂ ಶ್ರಮಿಸಬೇಕು ಎಂದು ಹಿತವಚನ ನೀಡಿದರು.

ಪ್ರಾರಂಭದಲ್ಲಿ ಶೋಭಾಯಾತ್ರೆ ಭಕ್ತಿಭಾವದಿಂದ ಜರುಗಿತು. ಪುರೋಹಿತರ ಸಂಘದ ವತಿಯಿಂದ ವೇದಘೋಷ, ಪೂರ್ಣಕುಂಭಸ್ವಾಗತ, ನಾದಸ್ವರತಂಡ, ವಿವಿಧ ಭಜನೆತಂಡಗಳು ಸೇರಿದಂತೆ ಹಲವು ತಂಡಗಳು ಕಾರ್ಯಕ್ರಮಕ್ಕೆ ಸಾಥ್ ನೀಡಿದವು. ಈ ಸಂದರ್ಭದಲ್ಲಿ ತಾಲ್ಲೂಕು ಬ್ರಾಹ್ಮಣ ಯುವಕ ಸಂಘದ ಅಧ್ಯಕ್ಷ ವೈಶ್ಯ, ಕಾರ್ಯದರ್ಶಿ ಕೆ. ಮಂಜುನಾಥ್, ವಿಜಾಪುರ ಹರೀಶ್, ರಾಘವೇಂದ್ರ ಸ್ವಾಮಿ ಸೇವಾ ಟ್ರಸ್ಟ್ ಸದಸ್ಯ ವಾಸುದೇವ್, ವಿಪ್ರ ಪ್ರತಿಭಾ ಪುರಸ್ಕಾರ ಸೇವಾ ಟ್ರಸ್ಟ್ ಅಧ್ಯಕ್ಷ ಬಿ.ಆರ್. ಅನಂತಕೃಷ್ಣ, ಮಾಜಿ ಶಾಸಕ ಎಂ. ರಾಜಣ್ಣ ಸೇರಿದಂತೆ ಅನೇಕ ಗಣ್ಯರು ಹಾಗೂ ಭಕ್ತರು ಸ್ವಾಮೀಜಿಯವರ ಆಶೀರ್ವಾದ ಪಡೆದರು.

ಈ ಸಂದರ್ಭದಲ್ಲಿ ಪುರೋಹಿತರಾದ ಕೃಷ್ಣಮೂರ್ತಿ, ಸತ್ಯಮೂರ್ತಿ, ಧಿಮುಗಣಪತಿದೇವಾಲಯದಕೃಷ್ಣಮೂರ್ತಿ, ರಾಮಮೋಹನಶಾಸ್ತ್ರಿಗಳು ಹಾಗೂ ತಾಲೂಕಿನ ವಿವಿಧ ಪಂಡಿತರು ಮತ್ತು ಅಪಾರ ಸಂಖ್ಯೆಯ ಭಕ್ತರು ಭಾಗವಹಿಸಿದ್ದರು. ಈ ದಿನ ಬೆಳಗ್ಗೆಯಿಂದಲೇ ನಗರದ ವಿವಿಧ ರಸ್ತೆಗಳಲ್ಲಿ ಮಹಿಳೆಯರು ಸ್ವಚ್ಛತೆ ಮಾಡಿ, ಸಂಪ್ರದಾಯಬದ್ಧ ಉಡುಪುಗಳನ್ನು ಧರಿಸಿ, ಸ್ವಾಮೀಜಿಯವರ ಆಗಮನಕ್ಕೂ ಮುನ್ನ ರಸ್ತೆಗಳಿಗೆ ನೀರು ಹಾಕಿ ರಂಗುರಂಗಿನ ರಂಗೋಲಿಗಳನ್ನು ಬಿಡಿಸಿ, ಹೂಗಳಿಂದ ಅಲಂಕರಿಸಿದ್ದರು. ಇದರಿಂದ ನಗರದಲ್ಲಿ ಹಬ್ಬದ ವಾತಾವರಣ ನಿರ್ಮಾಣವಾಗಿತ್ತು.



## ಮಾವು ಬೆಳೆಗಾರರ ಸಂಕಷ್ಟಕ್ಕೆ ಧಾವಿಸಿ

**ಕೋಲಾರ:** ಬೆಲೆ ಕುಸಿತದಿಂದ ಕಂಗೆಟ್ಟಿರುವ ಮಾವಿನ ರಾಜಧಾನಿ ಶ್ರೀನಿವಾಸಪುರ ಸೇರಿದಂತೆ ರಾಜ್ಯದ ಮಾವು ಬೆಳೆಗಾರರ ನೆರವಿಗೆ ಧಾವಿಸುವಂತೆ ಕೇಂದ್ರ ಸಚಿವ ಶಿವರಾಜ್‌ಸಿಂಗ್ ಚೌಹಾಣ್‌ಗೆ ಎಚ್.ಡಿ. ಕುಮಾರಸ್ವಾಮಿ ಪತ್ರ ಬರೆಯುವ ಮೂಲಕ ಮನವಿ ಮಾಡಿದ್ದಾರೆ.

ಈ ಬಗ್ಗೆ ಕೃಷಿ ಸಚಿವರಿಗೆ ಪತ್ರ ಬರೆದು, ರೈತರ ಸಂಕಷ್ಟದ ಬಗ್ಗೆ ಚರ್ಚೆ ನಡೆಸಿದ ಸಚಿವ ಕುಮಾರಸ್ವಾಮಿ ಅವರು, 2026–27ರ ಋತುವಿನಲ್ಲಿ ರೈತರು ಎದುರಿಸುತ್ತಿರುವ ಬೆಲೆ ಕುಸಿತ ಸಂಕಷ್ಟವನ್ನು ತಗ್ಗಿಸಲು ಮಾರುಕಟ್ಟೆ ಮಧ್ಯಸ್ಥಿಕೆ ಯೋಜನೆ (ಎಂಐಎಸ್) ಮೂಲಕ ನೆರವಾಗಬೇಕು ಹಾಗೂ ಬೆಲೆ ಕೊರತೆ ಪಾವತಿ ಯೋಜನೆ (ಪಿಡಿಪಿಎಸ್) ಅಡಿಯಲ್ಲಿ ಬೆಂಬಲ ಬೆಲೆ ನೀಡಬೇಕು ಎಂದು ಕೇಂದ್ರ ಕೃಷಿ ಸಚಿವರನ್ನು ವಿನಂತಿಸಿದ್ದಾರೆ.

ಮಾರುಕಟ್ಟೆ ಬೆಲೆ ಕುಸಿತ ಮತ್ತು ಹೆಚ್ಚುತ್ತಿರುವ ಕೃಷಿ ವೆಚ್ಚಗಳಿಂದಾಗಿ ಮಾವು ಬೆಳೆಗಾರರು ಎದುರಿಸುತ್ತಿರುವ ಸವಾಲುಗಳನ್ನು ತಮ್ಮ ಪತ್ರದಲ್ಲಿ ಕೃಷಿ ಸಚಿವರ ಗಮನಕ್ಕೆ ತಂದಿರುವ ಸಚಿವ ಕುಮಾರಸ್ವಾಮಿ ಅವರು; ರೈತರು ಮತ್ತು ತೋಟಗಾರಿಕೆ ವಲಯದ ಹಿತಾಸಕ್ತಿಯ ದೃಷ್ಟಿಯಿಂದ ಈ ವಿಷಯವನ್ನು ಸಹಾನುಭೂತಿಯಿಂದ ಪರಿಗಣಿಸುವಂತೆ ಕೋರಿದ್ದಾರೆ.

## ದೇವಸ್ಥಾನ ಸಮಿತಿ ಸಭೆಯಲ್ಲಿ ಪ್ರಭಾರ ಅರ್ಚಕ ರಾಮಾನುಜರ ಆಯ್ಕೆ

# ಅರ್ಚಕರ ಅಮಾನತಿಗೆ ತೀರ್ಮಾನ

**ಮೇಲುಕೋಟೆ:** ಇಲ್ಲಿನ ಪ್ರಖ್ಯಾತ ಯೋಗನರಸಿಂಹಸ್ವಾಮಿ ಬೆಟ್ಟದ ಅರ್ಚಕ ಎನ್ ನಾರಾಯಣಭಟ್ಟ ಸೇರಿದಂತೆ ಎಫ್.ಐ.ಆರ್ ದಾಖಲಾಗಿದ್ದ 6 ಮಂದಿಯನ್ನು ಅಮಾನತ್ತು ಮಾಡಲು ವ್ಯವಸ್ಥಾಪನಾ ಸಮಿತಿ ತೀರ್ಮಾನ ಮಾಡಿದ ಹಿನ್ನೆಲೆಯಲ್ಲಿ ಮಂಡ್ಯ ಜಿಲ್ಲಾಧಿಕಾರಿಗಳ ಅನುಮತಿ ಪಡೆದು ಅಮಾನತು ಆದೇಶವನ್ನು ಗುರುವಾರ ಸಂಜೆಯೇ ಜಾರಿ ಮಾಡಲಾಗಿದೆ.

ನಾರಾಯಣಭಟ್ಟರನ್ನು ಕರ್ತವ್ಯದಿಂದ ಬಿಡುಗಡೆ ಮಾಡಿದ್ದು ಪ್ರಭಾರ ಅರ್ಚಕರಾಗಿ ರಾಮಾನುಜರ ಸನ್ನಿಧಿಯ ಅರ್ಚಕ ವಿದ್ವಾನ್ ಬಿ.ವಿ. ಆನಂದಾಳ್ವಾರ್ ಅಧಿಕಾರ ವಹಿಸಿಕೊಂಡು ರಾತ್ರಿಯ ಪೂಜೆ ಆರಂಭಿಸಿದ್ದಾರೆ ಇವರೊಟ್ಟಿಗೆ ಬದಲಿಯಾಗಿ ನಿಯೋಜಿಸಿದ ಇತರ ನೌಕರರೂ ಕರ್ತವ್ಯಕ್ಕೆ ಹಾಜರಾಗಿದ್ದಾರೆ.

ಇಓ ದೂರಿನ ಸಂಬಂಧ ದೇವಾಲಯದ ವ್ಯವಸ್ಥಾಪನಾ ಸಮಿತಿ ಜೂನ್ 16ರಂದು ತುರ್ತು ಸಭೆ ಸೇರಿ ದಾಖಲೆಗಳನ್ನು ಪರಿಶೀಲಿಸಿ ಕರ್ತವ್ಯ ಲೋಪ ಸಾಬೀತಾದ ಕಾರಣ ಅರ್ಚಕ ನಾರಾಯಣಭಟ್ಟ ಪಾರುಪತ್ತೇಗಾರ್ ಶ್ರೀಧರ, ಪರಿಚಾರಕ ತಿರುವೆಂಗಡಾಚಾರ್, ಕಾವಲುಗಾರ ಎಂ.ಬಿ.ಗಂಗಾಧರ, ಬಸವರಾಜು, ಮಣೇಗಾರ್ ಕಸ್ತೂರಿ ಶ್ರೀನಿವಾಸನ್‌ರನ್ನು ಧಾರ್ಮಿಕ ದತ್ತಿ ಕಾಯ್ದೆಯ ನಿಯಮಾವಳಿಗಳಂತೆ ಅಮಾನತುಗೊಳಿಸಿ ತೆರವಾದ ಹುದ್ದೆಗಳಿಗೆ ಬದಲಿ ವ್ಯವಸ್ಥೆ ಮಾಡಿ ಇಲಾಖೆ ತನಿಖೆ ನಡೆಸುವುದೆಂದು ಸರ್ವಾನುಮತದಿಂದ ತೀರ್ಮಾನಿಸಿತ್ತು.



**ಇಲಾಖಾ ವಿಚಾರಣೆ ಆರಂಭ:** ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿ ಶೀಲಾ ಕ್ರಮದಿಂದ ಪ್ರಕರಣ ಬೆಳಕಿಗೆ ಬಂದಿದ್ದು ಯೋಗನರಸಿಂಹಸ್ವಾಮಿ ದೇವಾಲಯದಲ್ಲಿ ತುಂಬಾ ಹಿಂದಿನಿಂದಲೂ ಹುಂಡಿಯಲ್ಲಿ ಭಕ್ತರು ಹಾಕಿದ ಚಿನ್ನ, ಬೆಳ್ಳಿ ಸೇರಿದಂತೆ ನಗದು ಕಳ್ಳತನವಾಗುತ್ತಿರುವ ಬಗ್ಗೆ ಶಂಕೆ ವ್ಯಕ್ತವಾಗಿದ್ದು, ಇದನ್ನು ಕಂಡು ಹಿಡಿಯಲು ಗರ್ಭಗೃಹ ಹಾಗೂ ಇತರ ಕಡೆಗಳಲ್ಲಿ ರಹಸ್ಯ ಕ್ಯಾಮರಾ ಅಳವಡಿಸಲಾಗಿತ್ತು. 2026ರ ಜನವರಿಯಲ್ಲಿ ಕ್ಯಾಮರಾಗಳನ್ನು ನಾಶಮಾಡಿ ಡಿವಿಆರ್ ಸುಟ್ಟುಹಾಕಿದ್ದ ಆರೋಪದ ಮೇಲೆ ದೂರು ನೀಡಿದ್ದರು.

ಯೋಗನರಸಿಂಹಸ್ವಾಮಿ ಬೆಟ್ಟದ ದೇವಾಲಯದಲ್ಲಿ ನಿರಂತರವಾಗಿ ಹುಂಡಿಯಲ್ಲಿರುವ ಲಕ್ಷಾಂತರ ರೂ. ಕಾಣಿಕೆಯನ್ನು ಕದ್ದಿರುವ ಶಂಕೆ ಬಲವಾಗಿ ಮೂಡಿದ್ದು ಭಕ್ತರು ನೀಡಿರುವ ಒಡವೆ ವಸ್ತುಗಳನ್ನು ದಾಖಲೆಗೆ ತೋರಿಸದೆ ಕದ್ದಿರುವ ಶಂಕೆಯೂ ಇದೆ.

ದೇವಾಲಯದಲ್ಲಿ ನಡೆಯುತ್ತಿರುವ ಎಲ್ಲ ರೀತಿಯ ಲೋಪಗಳಿಗೆ ಸಿ.ಸಿ ಕ್ಯಾಮರಾ ಇಲ್ಲದಂತೆ ಮಾಡಿರುವುದು ಪ್ರಮುಖ ಸಾಕ್ಷಿಯಾಗಿ ಪುಷ್ಟೀಕರಿಸುತ್ತದೆ ಎಂದು ಇಓ ಶೀಲಾ ಪೊಲೀಸ್ ದೂರು ನೀಡಿದ್ದು ಭಾರಿ ಸಂಚಲನ ಮೂಡಿಸಿತ್ತು.

## ನ್ಯಾಯಾಂಗ ಬಂಧನಕ್ಕೆ ಆದೇಶ

# 254 ಕೆಜಿ ಗಂಧದ ತುಂಡು ವಶ



**ದೊಡ್ಡಬಳ್ಳಾಪುರ:** ಗಂಧದ ಮರ ಕಳ್ಳತನ ಪ್ರಕರಣವನ್ನು ಭೇದಿಸಿರುವ ದೊಡ್ಡಬಳ್ಳಾಪುರ ನಗರ ಪೊಲೀಸರು ಇಬ್ಬರು ಆರೋಪಿಗಳನ್ನು ಬಂಧಿಸಿ, 30 ಲಕ್ಷಕ್ಕೂ ರೂ. ಅಧಿಕ ಮೌಲ್ಯದ 254ಕೆ.ಜಿ. ಗಂಧದ ಮರದ ತುಂಡುಗಳನ್ನು ವಶಪಡಿಸಿಕೊಂಡಿದ್ದಾರೆ.

ಬಂಧಿತರನ್ನು ಮೈಸೂರು ಮೂಲದ ವೆಂಕಟೇಶ್ (26) ಹಾಗೂ ತುಮಕೂರು ಮೂಲದ ಆನಂದ್ (34) ಎಂದು ಗುರುತಿಸಲಾಗಿದೆ. ಇಬ್ಬರೂ ದೊಡ್ಡಬಳ್ಳಾಪುರ ತಾಲೂಕಿನ ಕುರುಬರಹಳ್ಳಿ ಗ್ರಾಮದಲ್ಲಿ ಬಾಡಿಗೆ ಮನೆಯಲ್ಲಿ ವಾಸವಾಗಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

**ಕಳ್ಳತನದ ಹಿನ್ನೆಲೆ:** ಆರೋಪಿಗಳು ಸರ್ಕಾರಿ ಶಾಲೆ ಹಾಗೂ ಸ್ಮಶಾನ ಆವರಣ ದಲ್ಲಿದ್ದ ಗಂಧದ ಮರಗಳನ್ನು ರಾತ್ರಿ ವೇಳೆ ಕಡಿದು ಕಳವು ಮಾಡುತ್ತಿದ್ದರು. ಜೂನ್ 13ರ ಮಧ್ಯರಾತ್ರಿ ನಡೆದಿದ್ದ ಕಳ್ಳತನ ಪ್ರಕರಣದ ತನಿಖೆ ಕೈಗೊಂಡ ಪೊಲೀಸರು, ಸಿಸಿಟಿವಿ ದೃಶ್ಯಾವಳಿಗಳ ಆಧಾರದ ಮೇಲೆ ಆರೋಪಿಗಳ ಸುಳಿವು ಪತ್ತೆಹಚ್ಚಿದ್ದಾರೆ.

ಕಾರ್ಯಾಚರಣೆ ಮತ್ತು ಜಪ್ತಿ: ತನಿಖೆ ವೇಳೆ ಆರೋಪಿಗಳು ಕಳವು ಮಾಡಿದ ಗಂಧದ ಮರದ ತುಂಡುಗಳನ್ನು ಸ್ಯಾಂಟ್ರೋ ಕಾರಿನಲ್ಲಿ ಸಾಗಿಸಿ ವಿವಿಧ ಸ್ಥಳಗಳಲ್ಲಿ ಅಡಗಿಸಿಟ್ಟಿರುವುದು ಬೆಳಕಿಗೆ ಬಂದಿದೆ. ಕಾರ್ಯಾಚರಣೆ ನಡೆಸಿದ ಪೊಲೀಸರು 254 ಕೆ.ಜಿ. ಗಂಧದ ಮರದ ತುಂಡುಗಳನ್ನು ಜಪ್ತಿ ಮಾಡಿದ್ದಾರೆ. ಕೃತ್ಯಕ್ಕೆ ಬಳಸಲಾಗಿದ್ದ ಪೆಟ್ರೋಲ್ ಚಾಲಿತ ಗರಗಸ ಹಾಗೂ ಸ್ಯಾಂಟ್ರೋ ಕಾರನ್ನು ವಶಕ್ಕೆ ಪಡೆಯಲಾಗಿದೆ.

**ನ್ಯಾಯಾಂಗ ಬಂಧನ:** ತಾಂತ್ರಿಕ ಸಾಕ್ಷ್ಯಗಳು, ಸಿಸಿಟಿವಿ ದೃಶ್ಯಾವಳಿಗಳ ನೆರವಿನಿಂದ ಯಶಸ್ವಿ ಕಾರ್ಯಾಚರಣೆ ನಡೆಸಿದ ನಗರ ಪೊಲೀಸರು ಆರೋಪಿಗಳನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

## CHANGE OF NAME

I, **EDIGA ANJALI B**, aged about 19 years, D/o Ediga Pedda Bheemanna, Residing at No. 806, Kidwai Layout, 3rd Cross, Anjanapura, Bangalore-560108. Hereby declare that, I have changed my name from '**EDIGA VEERANJINAMMA**' to '**EDIGA ANJALI B**', vide Affidavit dated 18.06.2026, Sworn before Advocate and Notary Mamatha N.K. Bangalore.

**EX.No.7/2025**

[illegible]

## IN THE COURT OF THE IV ADDITIONAL SESSIONS JUDGE AT DODDABALLAPURA

**R.A. No. 10040/2023**

**BETWEEN : 1. Smt. Sharadhamma**, D/o Late Doddamallaiah @ Gadde Mallaiah, W/o Mallaiah, Aged about 68 years, R/at: Nagasandra Village, Kasaba Hobli, Doddaballapura Taluk, Bengaluru Rural District.

**2. Smt. Muniyamma**, D/o Late Doddamallaiah @ Gadde Mallaiah, W/o Rajanna, Aged about 63 years, R/at: Bayapanahalli Village, Kasaba Hobli, Doddaballapura Taluk, Bengaluru Rural District.

...**Appellants**

**AND : Sri Shivanna** & others ...**Respondents**

**To,**

**PROPOSED RESPONDENT No. 6 :**

**6. Sri N. Ashok Kumar**, S/o Late Nanjundareddy, Major, R/at: Kurubarahalli Village, Kasaba Hobli, Doddaballapura Taluk, Bengaluru Rural District.

**NOTICE / SUMMONS**

**WHEREAS**, the appellants have instituted a Appeal against you by challenging the Judgment and Decree in O.S. No. 250/2015 dated: 07-07-2023 for the relief of partition and separate possession in respect of the land bearing Sy.No. 19 measuring 0-03.04 guntas, situated at Kurubarahalli Village, Kasaba Hobli, Doddaballapura Taluk, Bengaluru Rural District. Sy.No. 1/2 measuring 1-00 acre situated at Kakkenahalli Village, Kasaba Hobli, Doddaballapura Taluk, Bengaluru Rural District. Sy.No.76 measuring 1-00 acre 0-7.08 guntas, Sy.No.78/2 measuring 2-00 acres 0-04 guntas, situated at Gangadharapura Village, Kasaba Hobli, Doddaballapura Taluk, Bengaluru Rural District, house properties bearing Kodigehalli Village Panchayath Khaneshmari No. Sy. 12/18 measuring 14x38 feet, 12/44 measuring 33x21 feet and 12/62 measuring 23x13 feet and 13x19 measuring 18x38 feet, No. 13/36 measuring 18x33 feet and 13/43 measuring 29x21 feet situated at Kurubarahalli Village, Kasaba Hobli, Doddaballapura Taluk, Bengaluru Rural District the property bearing Sy.No.79/1 measuring 0-08 guntas and 0-07 guntas, situated at Gangadharapura Village, Kasaba Hobli, Doddaballapura Taluk, Bengaluru Rural District.

Take notice that, you are hereby called upon to appear before this Court the **27th day of July 2026 at 11.00 AM** either in person or through a duly constituted pleader and submit your defense if any. Failure to appear on the said date and time, the matter will be heard in your absence and decided ex parte.

Given under my hand and the seal of the Court, this 19th day June 2026.

**By Oder of the Court, Chief Ministerial Officer, IV Addl. Dist. & Sessions Court, at Doddaballapura**

Advocate for appellants: **L. Suresh**, Advocate No. 201, Addevishwanathapura, Arakere Post, Near Rajanukunte, Yelahanka Taluk, Bengaluru-562 163.

## IN THE COURT OF THE 6th ADDL. CITY CIVIL JUDGE AT B'LORE, CCH No. 11

## O.S. No. 1074 of 2026

**M/s. UNION BANK OF INDIA**
RAJARAJESHWARI BR., B'LORE-98
Rep. by its Br. Mgr. V/s. ...PLAINTIFF
**M/s. SAI SAMRUDDHI APPARELS & 2 OTHERS** ....DEFENDANTS

SUIT SUMMONS TO THE DEFT. Nos. 1 to 3 UNDER ORDER V, RULE 20(1-A) OF CPC

**Deft. No. 1: M/s. SAI SAMRUDDHI APPARELS** # 9-E/26, 2nd Phase, Peenya Indl. Area, Chokkasandra, Bangalore-560043. Rep. by its Partners, Mr. Venkatesh Vutukur & Smt. Ankitha C.A.

**Deft. No. 2: Sri. VENKATESH VUTUKUR** Partner, M/s. SAI SAMRUDDHI APPARELS, Aged about 38 Years, S/o. Sri Vutukur

**Deft. No. 3: Smt. ANKITHA C.A.** Partner, M/s. SAI SAMRUDDHI APPARELS, Aged about 34 Years, W/o. Sri Venkatesh Vutukur, **Deft. No. 2 & 3 are R/@.** # 9-E/26, 2nd Phase, Peenya Indl. Area, Chokkasandra, Bangalore-560043.

Whereas the Plaintiff has instituted the above suit against you for recovery of a total sum of **Rs. 13,16,000/-** along with court costs, together with current and future interest @ 12 % p.a. compounded monthly from the date of suit till the date of realisation and other reliefs. Therefore, You are hereby summoned to appear before this Hon'ble Court **(CCH No.11)** on **6th day of August 2026 at 11.00 a.m** either in person or by a duly instructed pleader to answer the claim, failing which the suit will be disposed off exparte against you.

**SCHEDULE**

MAHINDRA THAR Four-Wheeler, 2022 Model, bearing Registration No.

**KA 02 MS 9359**

Engine No. YLN4H66263 & Chassis No. MA1UJ4YL7N2H34834 belonging to the above Defendant.

Given under my hand & seal of this court on 18th day of June 2026 at Bangalore.

Advocate for the Plaintiff **ROHIT R. ACHAR, B.A. LL.B.**, Partner, M/s. LR ADVOCATES #123, 1st Floor, MS Complex, 8th Main Road, Ideal Homes Township, RR Nagar, Bangalore-560 098.

By Order of the Court Sr. Sheristedar City Civil Court Bangalore-9

[illegible]

## ಸಾರ್ವಜನಿಕ ಪ್ರಕಟಣೆ

[illegible]

ADJ Partners

## IN THE COURT OF THE 24TH ADDL CITY CIVIL & SESSIONS JUDGE AT BANGALORE

**O.S. No.2587/2025 (CCH-06)**

**BETWEEN: BANK OF BARODA** (CBI Road, R.T.Nagar Branch, Bangalore) ...PLAINTIFF

**AND: Mr. MANOJ M.** ...DEFENDANT

**NOTICE/SUMMONS TO DEFENDANT BY WAY OF PP**

**Mr. MANOJ M.**, S/o. Late Munikrishnappa Aged about 28 years R/at. No.9/1, Shivadenahalli, Thimmasandra, Lakkondahalli Post, Hosakote Taluk, Bengaluru Rural - 562114.

Whereas the aforementioned plaintiff bank has filed O.S. No.2587/2025 before the Hon'ble City Civil & Sessions Judge at Bangalore for recovery of a sum of **Rs.2,91,665.53 (Rupees Two Lakhs Ninety One Thousand Six Hundred Sixty Five and Paise Fifty Three Only)** from the Defendant with Court Costs and future normal interest at the rate of 14% p.a. together with penal interest at the rate of 2% p.a. compounded monthly, from 08.03.2025 to till realization in full, with costs. The case is now posted for hearing on 04/08/26. Therefore you are hereby summoned to appear before this Hon'ble Court **on 04/08/2026 at 11.00 A.M.** either in person or by pleader duly instructed without fail, failing which the matter will be heard and determined in your absence.

**Given under my hand and seal of the Court this 17th day of June 2026.**

**By the Order of Court, Assistant Registrar City Civil Court Bangalore**

**NAGARAJ DAMODAR**, Advocate #544 (Old No.324), Near Sai Baba Temple, Sampige Road, Malleshwaram, Bengaluru - 560 003.

ಓ.ಎಸ್ ನಂ. 487/2026

[illegible]

## CHANGE OF NAME

I, **ADITI DATTARAM RAKHONDE**, D/o. Dattaram Rakhonde, aged about 18 years, presently residing at Flat No. H202, Bren Unity, Chinnapanahalli Main Road, Doddanekundi Extension, Doddanekundi Post, Bengaluru-560037, do hereby declare that I have changed my name from **ADITI RAKHONDE** to **ADITI DATTARAM RAKHONDE**, vide affidavit dated 19.06.2026, sworn to before B. Chitra, Advocate & Notary Public, Govt. of India, Bengaluru.

## CHANGE OF NAME

I, **SAMPATHAMMA**, W/o. Mani, aged about 55 years, residing at No. 61, Narasimhaiah Colony, Timber Yard Layout, Bengaluru South, Bengaluru-560026, do hereby declare that I have changed my name from **CHAMPA** to **SAMPATHAMMA**, vide affidavit dated 19.06.2026, sworn to before Ravi Kumar .V, Advocate & Notary Public, Govt. of India, Bengaluru.



## IN THE COURT OF THE HON'BLE IV ADDITIONAL SENIOR CIVIL JUDGE, BENGALURU RURAL AT BENGALURU

**O S No. 461/2026**

**Mr. Immanuel Lukeappa**, Aged about 61 years, Son of Mr. Lukeappa, Residing at No. 93/2, Ground Floor, Coles Road, Frazer Town, Bangalore - 560 005
Email: imman.luke@gmail.com
Mob: +91 97389 02092 ...**PLAINTIFF**

**AND : Mr. Pradeepa R**, Aged about 30 years, Son of Mr. Ramesh .V.T. Residing at Addevishwanthapura Village, Hesaraghatta Hobli, Bangalore North Taluk.
Mob: +91 9743808777, +91 91102 44404 ...**DEFENDANT**

**NEWSPAPER PUBLICATION**

Whereas, the Plaintiff above named has instituted a Suit against you for the relief/s of recovery of a sum of Rs. 12,64,746/- along with interest and Rs.4,00,000/- towards damages, you are hereby summoned to appear before the Court of the IV Additional Senior Civil, Bengaluru Rural District, Bengaluru at Bangalore **on 27.07.2026 at 11.00 a.m.** in person or by a pleader duly instructed and able to answer the Claim.

Take notice that, in default of your appearance on the date before mentioned the suit will be heard and determined in your absence.

Given under my hand and seal on this Court, this 11th day of June 2026.

**By Order of the Court, Chief Ministerial Officer, Senior Civil Judge Court, Bengaluru Rural District, Bengaluru.**

**NIRANJAN KUMAR, J Hudson Samuel & Partners**, Advocates Sir Cariappa Wing, First Floor, Devatha Plaza, Residency Road, Bengaluru - 560025. PH : 080 2224 4125 / 22212308

## IN THE COURT OF THE DEPUTY COMMISSIONER, KOLAR DISTRICT, KOLAR RA No: 509/2025

Appellant : Sri Venkateshappa @ Chikkappaiah

V/s

Respondents :The Asst. Commissioner Kolar sub division, Kolar & others

**NOTICE TO RESPONDENT No.3 TO 8 UNDER ORDER 5 RULE 20 OF CPC**

3) Smt.Sarojamma W/o Muniyappa D/o Erappa 4) Smt.Deveeramma W/o Venkataswamy D/o Erappa 5) Smt. Yashodhamma W/o Chikkamuniyappa D/o Erappa 6) Sri. Venkatachalapathi S/o Erappa The above stated respondents are All R/at Yalavara Village,Kasaba Hobli, Kolar Taluk. 7) Sri.Ramachandra Dead by his LR's R7. a) Murali krishna S/o Late Ramachandrappa R7. b) Suma D/o Late Ramachandrappa R7. C) Soumya D/o Late Ramachandrappa All are R/at Poovanda halli village, Kasaba Hobli, Kolar Taluk. 8) Smt.Susheelamma W/o Raghu D/o Erappa R/at Hungenahalli Village, Kasaba Hobli, Malur Taluk.

Whereas the appellant above named has filed the above appeal against the respondents for setting aside the orders passed by the Asst.Commissioner, (respondent No.1) in RA: 410/2020 on dated 09/04/2025 in respect of land bearing Sy.No.147 of Yalavara Village, Kasaba Hobli, Kolar Taluk. You being the respondent No.3 to 8 in the above appeal are evading to take notice issued by this Hon'ble court and hence you are hereby summoned to appear before this Hon'ble Court in person or by a Pleader duly instructed by you on at 23/06/2026 answer the same, failing which the above appeal will be disposed off ex-parte in your absence.

Deputy commissioner, Kolar District.
Sathish Kumar.A, Advocate, Kolar

ಮುದ್ದೇನಹಳ್ಳಿ ಸಾಮಾನ್ಯ ಪ್ರಕರಣ ಸಂಖ್ಯೆ 18/2026

**ಸಾರ್ವಜನಿಕ ಪ್ರಕಟಣೆ**

[illegible]

## ಕಾವೇರಿ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಕಾನೀನಿನಿ., ಹೇಮಾವತಿ ಅಣೆಕಟ್ಟು ವಿಭಾಗ, ಗೊರೂರು, ಹಾಸನ ಜಿಲ್ಲೆ

**ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 03/2026-27, Date:06.06.2026**

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧ್ಯಾದೇಶ 1999-2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆ.ಡಬ್ಲ್ಯು.3 ಮತ್ತು ಕೆ.ಡಬ್ಲ್ಯು.4ರ ನಿಯಮದನ್ವಯ ಎಕ್ಸಿಕ್ಯುಟಿವ್ ಇಂಜನಿಯರ್ ರವರ ಕಚೇರಿ, ಕಾವೇರಿ ನೀರಾವರಿ ನಿಗಮ(ನಿ) ಹೇಮಾವತಿ ಅಣೆಕಟ್ಟು ವಿಭಾಗ, ಗೊರೂರು ರವರು ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ (ನಿ.) ಬೆಂಗಳೂರು ರವರ ಪರವಾಗಿ Bidders/ Firm /Company having labour license ನಲ್ಲಿ ನೋಂದಾಯಿತರಾದ ಗುತ್ತಿಗೆದಾರರಿಂದ ದ್ವಿಲಕೋಟೆ ಪದ್ಧತಿಯಲ್ಲಿ ಒಟ್ಟು 21 ಮಾನವ ಸಂಪನ್ಮೂಲ ಒದಗಿಸುವ ಸೇವಾ ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದೆ. ಗರಿಷ್ಠ ಟೆಂಡರ್ ಮೊತ್ತ ರೂ.136.34ಲಕ್ಷ ಮತ್ತು ಕನಿಷ್ಠ ಟೆಂಡರ್ ಮೊತ್ತ ರೂ.2.66 ಲಕ್ಷ, EMD ಮತ್ತು ಟೆಂಡರ್ ಪ್ರೊಸೆಸ್ಸಿಂಗ್ ಫೀ ಕೆ.ಪಿ.ಪಿ.ಪೋರ್ಟಲ್ ನಿಯಮಾನುಸಾರ, ಟೆಂಡರ್ ಡಾಕ್ಯುಮೆಂಟ್‌ಗಳನ್ನು ವೆಬ್ ಸೈಟ್ https://kppp.karnataka.gov.in ಮೂಲಕ ದಿನಾಂಕ: 19.06.2026 ರಿಂದ 29.06.2026 ರ ವರೆಗೆ ಪಡೆಯಬಹುದು (Down load), ತಾಂತ್ರಿಕ ಬಿಡ್ ತೆರೆಯುವ ದಿನಾಂಕ 30.06.2026 ರ ಸಂಜೆ 5.00 ಗಂಟೆಯ ನಂತರ. ಮೇಲಿನ ವಿವರಗಳು ಭವಿಷ್ಯದಲ್ಲಿ ಸಂದರ್ಭೋಚಿತವಾಗಿ ಬದಲಾವಣೆಗೆ ಒಳಪಟ್ಟಿರುತ್ತದೆ. ಹೆಚ್ಚಿನ ವಿವರ ಹಾಗೂ ನಿಬಂಧನೆಗಳಿಗೆ https://kppp.karnataka.gov.in ಅಂತರ್ಜಾಲ ತಾಣದಲ್ಲಿ (ಇಲಾಖೆ) ಅಥವಾ ಹೇಮಾವತಿ ಅಣೆಕಟ್ಟು ವಿಭಾಗ, ಗೊರೂರು ಕಚೇರಿಯಲ್ಲಿ ಕೆಲಸದ ವೇಳೆಯಲ್ಲಿ (ರಜಾದಿನ ಹೊರತುಪಡಿಸಿ) ಪಡೆಯಬಹುದು.

ಸಹಿ/- ಕಾರ್ಯಪಾಲಕ ಇಂಜಿನಿಯರ್, ಹೇಮಾವತಿ ಅಣೆಕಟ್ಟು ವಿಭಾಗ, ಕಾನೀನಿನಿ, ಗೊರೂರು

ವಾ.ಸ.ನಿ/257/2026-27

## ಕರ್ನಾಟಕ ಸರ್ಕಾರ
## ಕಾರ್ಯನಿರ್ವಾಹಕ ಇಂಜನೀಯರರ, ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆ ವಿಭಾಗ ಗದಗ

ನಂ: ಗ್ರಾ.ಕು.ನೀ.&ನೈ.ವಿ/ಗದಗ/ ಸ.ಅ/ಟೆಂಡರ್/ 2026-27/369
ದಿನಾಂಕ: 18-06-2026

**ಟೆಂಡರ್ ಪ್ರಕಟಣೆ**

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ಅಥವಾ ಪಂಚಾಯತ ರಾಜ್ ಇಂಜನೀಯರಿಂಗ ಇಲಾಖೆಯಲ್ಲಿ ನೋಂದಾಯಿಸಿದ ಗುತ್ತಿಗೆದಾರರಿಂದ ಐಟಂ ದರದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ-2000 ಮತ್ತು ಇತ್ತೀಚಿನ ತಿದ್ದುಪಡಿಗಳಂತೆ, ಕುಡಿಯುವ ನೀರು ಸರಬರಾಜು ಯೋಜನೆ ಅಡಿಯಲ್ಲಿ ಗದಗ ಜಿಲ್ಲೆಯ ಸೇವಾ "ಇ ಪ್ರೊಕ್ಯೂರಮೆಂಟ್-2" ಮುಖಾಂತರ ಟೆಂಡರ್ ಕರೆಯಲಾಗಿದೆ. **RWSSD/ 2026-27/SE0901 & RWSSD/2026-27/SE0902 &** ಟೆಂಡರಗಳ್ಳು ಮೊತ್ತ ಕ್ರಮವಾಗಿ **ರೂ.77.05 ಲಕ್ಷ ಮತ್ತು ರೂ.41.38 ಲಕ್ಷ** ಈ ಕಾಮಗಾರಿಗಳ ವಿವರಗಳನ್ನು ಹಾಗೂ ಡೌನಲೋಡ ಮಾಡಿಕೊಳ್ಳಲು ಗುತ್ತಿಗೆದಾರರು ಕರ್ನಾಟಕ ಸರಕಾರದ "ಇ-ಪ್ರೊಕ್ಯೂರಮೆಂಟ್" ವೆಬ್‌ಸೈಟ್ **https://kppp.karnataka.gov.in** ನಲ್ಲಿ ನೋಡಿಕೊಳ್ಳಬಹುದು. ಟೆಂಡರ್ ಸಲ್ಲಿಸಲು ಪ್ರಾರಂಭವಾಗುವ **ದಿನಾಂಕ: 19.06.2026** ಪ್ರಶ್ನೋತ್ತರದ ಕೊನೆಯ **ದಿನಾಂಕ 24.06.2026** ಟೆಂಡರ್ ಸ್ವೀಕರಿಸುವ ಕೊನೆಯ **ದಿನಾಂಕ: 25.06.2026** ತಾಂತ್ರಿಕ ತೆರೆಯುವ **ದಿನಾಂಕ: 29.06.2026 &** ಆರ್ಥಿಕ ಬಿಡ್ ತೆರೆಯುವ **ದಿನಾಂಕ: 30.06.2026**.

ಸಹಿ/-
ಕಾರ್ಯನಿರ್ವಾಹಕ ಇಂಜನೀಯರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಗದಗ.

ವಾ.ಸ.ಇ.ಗದಗ/125/2026-27

## ಕರ್ನಾಟಕ ಸರ್ಕಾರ
## ಪಂಚಾಯತ ರಾಜ್ ಇಂಜನೀಯರಿಂಗ್ ವಿಭಾಗ, ಕಾರವಾರ, ಉತ್ತರ ಕನ್ನಡ

ದೂರವಾಣಿ: 08382-220556 ಇ-ಮೇಲ್: predkarwar@gmail.com

ಕ್ರ.ಸಂ/ಪಂ.ರಾ.ಇಂ.ವಿ/ಕಾ/ಟೆಂ-1/2026-27/12 ದಿ: 18.06.2026

**ಟೆಂಡರ್ ಪ್ರಕಟಣೆ-12/2026-27 (ಕೆ.ಪಿ.ಪಿ.ಪಿ ಮೂಲಕ)**

[illegible] 2025-26ನೇ ಸಾಲಿನ 5054 [illegible] **Standard Tender Document** [illegible] **K.W-1** [illegible] **https://kppp.karnataka.gov.in** [illegible]

[illegible] **RDPR/2026-27/RD/WORK_INDENT27418** [illegible] ರೂ. 10.00 ಲಕ್ಷ, [illegible] ರೂ. 32,000.00 [illegible] 02 ತಿಂಗಳು.

[illegible] (2) [illegible] **RDPR/2026-27/RD/WORK_INDENT27377** [illegible] ರೂ. 15.00 ಲಕ್ಷ, [illegible] ರೂ. 22,000.00, [illegible] 02 ತಿಂಗಳು.

(3) [illegible] **RDPR/2026-27/RD/WORK_INDENT27414** [illegible] ರೂ. 15.00 ಲಕ್ಷ, [illegible] ರೂ. 22,000.00, [illegible] 02 ತಿಂಗಳು.

(1) [illegible] **Technical Bid** [illegible] ದಿನಾಂಕ: 29.06.2026 ರ ಮಧ್ಯಾಹ್ನ 16.30 [illegible] (2) [illegible] **Technical Bid** [illegible] ದಿನಾಂಕ 30.06.2026 ಮಧ್ಯಾಹ್ನ 16.31 [illegible] (3) [illegible]

ಸಹಿ/- ಕಾರ್ಯನಿರ್ವಾಹಕ ಇಂಜನೀಯರರು, ಪಂಚಾಯತ ರಾಜ್ ಇಂಜನೀಯರಿಂಗ್ ವಿಭಾಗ, ಕಾರವಾರ

DIPR/KWR/KSMCA/218/26-27 ದಿ: 18.06.2026

## ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

[illegible] ದಿನಾಂಕ: 19.06.2026

**ಸಾರ್ವಜನಿಕ ಪ್ರಕಟಣೆ**

[illegible] 66/11ಕೆವಿ [illegible]

| ಗ್ರಾಮ | ಜಮೀನಿನ ಸರ್ವೆ ನಂ. | ಕವಿಪ್ರನಿನಿ ಉಪಕೇಂದ್ರ ನಿರ್ಮಾಣ ಸಲುವಾಗಿ ಬೇಕಾಗಿರುವ ಜಮೀನಿನ ವಿಸ್ತೀರ್ಣ (ಎ-ಗು) |
|---|---|---|
| [illegible] | 137/4 | 1-0 |
| | 176/4 | 0-11 |
| | 147/2 | 0-5 |
| | | ಒಟ್ಟು 1-16 |

[illegible] 137/4, 176/4, 147/2 [illegible] 15 [illegible]

1. [illegible] ದೂರವಾಣಿ- 94483 65254.
2. [illegible] ದೂರವಾಣಿ-94483 65229.
3. [illegible] ದೂರವಾಣಿ- 94483 65228.

ಸಹಿ/- ಅಧೀಕ್ಷಕ ಇಂಜಿನಿಯರ್(ವಿ), ಪ್ರಸರಣ(ಯೋಜನೆ), ಗ್ರಾಮೀಣ ವೃತ್ತ, ಕವಿಪ್ರನಿನಿ, [illegible], ಮೈಸೂರು ರಸ್ತೆ, ಬೆಂಗಳೂರು.

## ಬೆಂಗಳೂರು ಉತ್ತರ ನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಚೇರಿ, ಮುಲೇಶ್ವರ ವಿಭಾಗ, ರಾಜಭವನ ರಸ್ತೆ, ಬೆಂಗಳೂರು.

ಸಂಖ್ಯೆ: [illegible]/ಟೆಂಡರ್/[illegible]/07/2026-27 ದಿನಾಂಕ: 19-06-2026

**ಅಲ್ಪಾವಧಿ ಟೆಂಡರ್ ಪ್ರಕಟಣೆ**

[illegible]

| ಕ್ರ ಸಂ. | ಕಾಮಗಾರಿಯ ಹೆಸರು |
|---|---|
| 1 | [illegible] 2026ರ [illegible] ಅಂದಾಜು ಮೊತ್ತ ರೂ.10.00 ಲಕ್ಷಗಳು. ಇಎಂಡಿ: ರೂ.25,000/-. ಟೆಂಡರ್ ನಿರ್ವಹಣಾ ಶುಲ್ಕ (ರೂ.ಗಳಲ್ಲಿ): ಕೆಪಿಪಿ ಪೋರ್ಟಲ್ ಪ್ರಕಾರ. [illegible] (ದಿನಗಳಲ್ಲಿ): 120 ದಿನಗಳು. |

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ದಾಖಲೆಗಳನ್ನು ಕೆಪಿಪಿ ಪೋರ್ಟಲ್ ಮೂಲಕ ದಿನಾಂಕ: 22.06.2026ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) [illegible] ದಿನಾಂಕ: 24.06.2026ರಂದು ಮಧ್ಯಾಹ್ನ 3.00 ಗಂಟೆಗೆ [illegible] ಬೆಂಗಳೂರು-560 005, ಇಲ್ಲಿ ನಡೆಸಲಾಗುವುದು. 3) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ & ಸಮಯ: 29.06.2026ರ ಸಂಜೆ 4.00 ಗಂಟೆವರೆಗೆ. 4) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 30.06.2026ರ ಸಂಜೆ 4.30 ಗಂಟೆಯ ನಂತರ.

ಹೆಚ್ಚಿನ ವಿವರಗಳಿಗಾಗಿ ಮೇಲ್ಕಂಡ ಕಚೇರಿಯನ್ನು ಕಚೇರಿ ವೇಳೆಯಲ್ಲಿ ಎಲ್ಲಾ ಕೆಲಸದ ದಿವಸಗಳಂದು ಅಥವಾ ಕೆಪಿಪಿ ಪೋರ್ಟಲ್ ವೆಬ್‌ಸೈಟ್: https://kppp.karnataka.gov.in ಸಂಪರ್ಕಿಸಬಹುದು.

ಸಹಿ/-
ಕಾರ್ಯಪಾಲಕ ಅಭಿಯಂತರರು
ಮುಲೇಶ್ವರ ವಿಭಾಗ, ಬೆಂಗಳೂರು ಉತ್ತರ ನಗರ ಪಾಲಿಕೆ

## ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರಪಾರ್ಕ್ ಪಶ್ಚಿಮ, ಬೆಂಗಳೂರು-560 020

ಸಂ.: ಬೆಂಅಪ್ರಾ/ನಯೋಸ/CLU-16/942/2026-27 ದಿನಾಂಕ: 18.06.2026

**ಪ್ರಕಟಣೆ**

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14-Aರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂ ಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಚೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

| ಕ್ರ ಸಂ. | ಅರ್ಜಿದಾರರ ಹೆಸರು | ತಾಲ್ಲೂಕು | ಹೋಬಳಿ | ಗ್ರಾಮದ ವಿವರ | ಸರ್ವೆ ನಂ. | ವಿಸ್ತೀರ್ಣ ಎ/ಗು | BIAAPA ಮಹಾಯೋಜನೆ ಪ್ರಕಾರ ಭೂ ಉಪಯೋಗ | ಬದಲಾವಣೆ ಕೋರಿರುವ ಭೂ ಉಪಯೋಗ |
|---|---|---|---|---|---|---|---|---|
| 1 | ಸಂಜಯ್ ಬಿ.ಎಸ್. | ಯಲಹಂಕ | ಜಾಲ | ಬಾಗಲೂರು | 257/7 | 0-4.25 | ವ್ಯವಸಾಯ | ವಸತಿ |

ಷರಾ: ಅರ್ಜಿದಾರರು ಪ್ರಶ್ನಿತ ಜಮೀನನ್ನು ವ್ಯವಸಾಯಕ್ಕಾಗಿ ಬಳಸಲು ಸಾಧ್ಯವಿರುವುದಿಲ್ಲ. ಜಮೀನಿನ ಸುತ್ತಮುತ್ತ ವಾಸದ ಬೇಡಿಕೆ ಇದ್ದು, ಪ್ರಶ್ನಿತ ಜಮೀನಿನಲ್ಲಿ ಯೋಜಿತ ಬೆಳವಣಿಗೆಯು ಅಭಿವೃದ್ಧಿಪಡಿಸುವುದರಿಂದ ಸುತ್ತಮುತ್ತಲಿನ ನಿವಾಸಿಗಳಿಗೆ ಉದ್ಯೋಗಾವಕಾಶ ಕಲ್ಪಿಸಿದಂತಾಗುತ್ತದೆ. ಭೂಉಪಯೋಗ ಬದಲಾವಣೆಗೊಂಡ ನಂತರ ವಸತಿ ಉದ್ದೇಶಕ್ಕೆ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ಯೋಜನಾಬದ್ಧ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವುದರಿಂದ ಸ್ಥಳೀಯರಿಗೆ ಉದ್ಯೋಗಾವಕಾಶ ಸೃಷ್ಟಿಯಾಗುತ್ತದೆ. ಸದರಿ ಪ್ರದೇಶದಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವುದರಿಂದ ಸಾರ್ವಜನಿಕರಿಗೆ ಅನುಕೂಲವಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶವನ್ನು ತಿಳಿಸುತ್ತಾ, ಸದರಿ ಪ್ರದೇಶವನ್ನು 'ವ್ಯವಸಾಯ ವಲಯ' ದಿಂದ 'ವಸತಿ ಉಪಯೋಗಕ್ಕೆ' ಭೂಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

ಸಹಾಯವಾಣಿ/ವಾಟ್ಸಪ್: 94831 66622 (24 x 7). @BDAOfficialGoK

ಸಹಿ/- ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.

## ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ

2ನೇ ಮಹಡಿ, ವಸತಿಕಾಸ, ಕರ್ನಾಟಕ ಆರ್ಥಿಕ ಅಭಿವೃದ್ಧಿ ನಿಗಮ ನಿಯಮಿತ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು - 560 003.
ದೂರವಾಣಿ ಸಂಖ್ಯೆ: 080-2222 8263, 2222 8264

ಬೆಂ.ಮ.ಪ್ರಾ.

ಸಂಖ್ಯೆ:STRRPA/TP/CLU/36/2026-27 ದಿನಾಂಕ:18.06.2026

**"ಪ್ರಕಟಣೆ"**

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು "ವ್ಯವಸಾಯ" ವಲಯದಿಂದ "ವಾಣಿಜ್ಯ" ವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

| ಕ್ರ ಸಂ. | ಅರ್ಜಿದಾರರ ಹೆಸರು ಮತ್ತು ವಿಳಾಸ | ತಾಲ್ಲೂಕು | ಹೋಬಳಿ | ಗ್ರಾಮ | ಸರ್ವೆ ನಂ. | ವಿಸ್ತೀರ್ಣ ಎ-ಗು | ಅನುಮೋದಿತ ಮಹಾ ಯೋಜನೆಯಂತೆ ಭೂಉಪಯೋಗ | ಬದಲಾವಣೆ ಕೋರಿರುವ ಭೂಉಪಯೋಗ |
|---|---|---|---|---|---|---|---|---|
| 1. | ಶ್ರೀಮತಿ.ವಿ.ಕೃಷ್ಣಮೂರ್ತಿ ಬಿನ್ ಶ್ರೀ ವೀರಣ್ಣ ಗೌಡ, ವಸತಿ ನಿಲಯ, ನಂ.01, 1ನೇ ಮುಖ್ಯರಸ್ತೆ, ಸುಮುಖ ಬಡಾವಣೆ, ಯು.ಎಸ್.ಎ. ಅಪಾರ್ಟ್‌ಮೆಂಟ್, ವಿದ್ಯಾರಣ್ಯಪುರ, ಬೆಂಗಳೂರು ನಗರ | ದೊಡ್ಡಬಳ್ಳಾಪುರ | ಕಸಬಾ | ಕೆಲ್ಲೂರು | 125/6<br>125/9 | 2-02½<br>0-24 | ವ್ಯವಸಾಯ | ವಾಣಿಜ್ಯ |

ಷರಾ:- ಪ್ರಸ್ತಾವನೆಯಲ್ಲಿನ ಅರ್ಜಿದಾರರು ಪ್ರಶ್ನಿತ ಜಮೀನಿನಲ್ಲಿ ವಿನ್ಯಾಸವನ್ನು ಅಭಿವೃದ್ಧಿಪಡಿಸುವ ಉದ್ದೇಶವನ್ನು ಹೊಂದಿದ್ದು, ಸದರಿ ಪ್ರದೇಶದಲ್ಲಿ ಅಭಿವೃದ್ಧಿ ಕಾರ್ಯ ಕೈಗೊಂಡರಲ್ಲಿ ವಾಣಿಜ್ಯ ಬೇಡಿಕೆಗಳನ್ನು ಪೂರೈಸುವ ಕಾರ್ಯ ಹಾಗೂ ಬದಲಾವಣೆಯ ಮೂಲಭೂತ ಸೌಕರ್ಯ ಚಟುವಟಿಕೆಯಿಂದಾಗಿ ಸಾರ್ವಜನಿಕರಿಗೆ ಉದ್ಯೋಗ ಅವಕಾಶ ಕಲ್ಪಿಸುವ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿರುತ್ತದೆ ಎಂದು ಸಾರ್ವಜನಿಕ ಹಿತಾಸಕ್ತಿ ಅಂಶವನ್ನು ತಿಳಿಸಿರುತ್ತಾರೆ.

ಸಹಿ/- ಸದಸ್ಯ ಕಾರ್ಯದರ್ಶಿಗಳು ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು, ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು.

ವಾತಇ/ಪಿ.ಸಿ/6252/2026-27



## ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ

ನಂ. 333/1, 1ನೇ ಮಹಡಿ, ವಿ.ಜಿ. ಕಾಂಪ್ಲೆಕ್ಸ್, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ-562 110.

ಸಂ. ಬಿಐಎಎಪಿಎ/ಟಿಪಿ/ಭೂಉಬ/40/2026-27/837 ದಿನಾಂಕ : 19.06.2026

**ಪ್ರಕಟಣೆ**

[illegible]

| ಕ್ರ ಸಂ. | ಅರ್ಜಿದಾರರ ಹೆಸರು | ತಾಲ್ಲೂಕು | ಹೋಬಳಿ | ಗ್ರಾಮದ ವಿವರ | ಸರ್ವೆ ನಂ. | ವಿಸ್ತೀರ್ಣ ಎ-ಗು | ಮಹಾ ಯೋಜನೆಯ ಪ್ರಕಾರ ಭೂ ಉಪಯೋಗ | ಬದಲಾವಣೆ ಕೋರಿರುವ ಭೂಉಪಯೋಗ |
|---|---|---|---|---|---|---|---|---|
| 1. | M/s IKIGAI ESTATES ALBA ಇವರ ಪರವಾಗಿ Dhruv Johari S/o Late Ravi Jouhari | ದೇವನಹಳ್ಳಿ | ಕುಂದಾಣ | ದೊಡ್ಡಚೀಮನಹಳ್ಳಿ | 133/1 | 0-20 | ವ್ಯವಸಾಯ | ವಸತಿ |
| 2 | | ದೇವನಹಳ್ಳಿ | ಕುಂದಾಣ | ದೊಡ್ಡಚೀಮನಹಳ್ಳಿ | 133/3 | 0-20 | ವ್ಯವಸಾಯ | ವಸತಿ |
| 3 | ಶ್ರೀ ಟಿ.ಎಸ್ ಪ್ರಭಾಕರ್ ಬಿನ್ ಲೇಟ್ ಟಿ.ಶಿವಾಜಿರಾವ್ | ದೇವನಹಳ್ಳಿ | ಕುಂದಾಣ | ದೊಡ್ಡಚೀಮನಹಳ್ಳಿ | 133/2 | 1-00 | ವ್ಯವಸಾಯ | ವಸತಿ |
| 4 | ಶ್ರೀ ಟಿ.ಎಸ್ ಮೋಹನ್ ಬಿನ್ ಲೇಟ್ ಟಿ.ಶಿವಾಜಿರಾವ್ | ದೇವನಹಳ್ಳಿ | ಕುಂದಾಣ | ದೊಡ್ಡಚೀಮನಹಳ್ಳಿ | 153/2 | 1-00 | ವ್ಯವಸಾಯ | ವಸತಿ |

[ಕ್ರ.ಸಂ (3) & (4) ರ ಭೂ ಮಾಲೀಕರುಗಳ ಪರವಾಗಿ ನೋಂದಾಯಿತ ಜಿಪಿಎ & ಜಂಟಿ ಅಭಿವೃದ್ಧಿದಾರರಾದ Dhruv Johari S/o Late Ravi Jouhari, ಅಧಿಕೃತ ಸಹಿದಾರ, M/s IKIGAI ESTATES ALBA]

ಷರಾ :- [illegible] 'ವ್ಯವಸಾಯ ಭೂಉಪಯೋಗ ವಲಯ' ದಿಂದ 'ವಸತಿ ವಲಯ' ಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು [illegible]

ಸಹಿ/- ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿಗಳು, ಬಿ.ಐ.ಎ.ಎ.ಪಿ.ಎ., ದೇವನಹಳ್ಳಿ.

ವಾ.ಸಾ.ಸಂ.ಇ/ವಾರ್ತೆ/ಬಿಡಿಸಿ ಜಾಪು/6263/2026-27

# ಬೆಂಗಳೂರು-ಕರ್ನಾಟಕ ಮಹತ್ವದ ಸಾಧನೆ

• **ಬೆಂಗಳೂರು:** ಜಾಗತಿಕ ಸ್ಟಾರ್ಟ್‌ಅಪ್ ಪರಿಸರ ವ್ಯವಸ್ಥೆಗಳ ಮೌಲ್ಯಮಾಪನ ನಡೆಸುವ ಸ್ಟಾರ್ಟ್‌ಅಪ್ ಜೀನೋಮ್ ಬಿಡುಗಡೆ ಮಾಡಿದ ಜಿಎಸ್‌ಇಆರ್ 2026 ವರದಿಯಲ್ಲಿ ಬೆಂಗಳೂರು-ಕರ್ನಾಟಕ ಮಹತ್ವದ ಸಾಧನೆ ದಾಖಲಿಸಿದೆ.



ಕೃತಕ ಬುದ್ಧಿಮತ್ತೆ (ಎಐ) ಆಧಾರಿತ ಸ್ಟಾರ್ಟ್‌ಅಪ್ ಪರಿಸರ ವ್ಯವಸ್ಥೆಯಲ್ಲಿ ವಿಶ್ವದಲ್ಲಿ 2ನೇ ಸ್ಥಾನ ಪಡೆದುಕೊಂಡಿರುವ ಬೆಂಗಳೂರು, ಸಂಶೋಧನೆ ಮತ್ತು ಅಭಿವೃದ್ಧಿ (ಆರ್ ಆ್ಯಂಡ್ ಡಿ) ವಿಭಾಗದಲ್ಲಿ ಜಾಗತಿಕ ಟಾಪ್ 10ರೊಳಗೆ ಸ್ಥಾನ ಗಳಿಸಿದೆ. ಕರ್ನಾಟಕಸರ್ಕಾರಹಾಗೂಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್ (ಕೆಡಿಇಎಂ) ಸಹಭಾಗಿತ್ವದಲ್ಲಿ ಪ್ರಕಟವಾದ ವರದಿಯ ಪ್ರಕಾರ, ಬೆಂಗ ಳೂರು ಜಾಗತಿಕ ಸ್ಟಾರ್ಟ್‌ಅಪ್ ಪರಿಸರ ವ್ಯವಸ್ಥೆಗಳಲ್ಲಿ 15ನೇ ಸ್ಥಾನದಲ್ಲಿದ್ದು, ಸತತ ಎರಡನೇ ವರ್ಷವೂ ವಿಶ್ವದ ಟಾಪ್ 40 ಪಟ್ಟಿಯಲ್ಲಿ ತನ್ನ ಸ್ಥಾನ ಉಳಿಸಿಕೊಂಡಿದೆ. 2021-25ರ ಅವಧಿಯಲ್ಲಿ ರಾಜ್ಯದ ಸ್ಟಾರ್ಟ್‌ಅಪ್‌ಗಳು 46 ಬಿಲಿಯನ್ ಡಾಲರ್ ಮೌಲ್ಯದ ಎಕ್ಸಿಟ್‌ಗಳನ್ನು ಸಾಧಿಸಿದ್ದು, 39 ಬಿಲಿಯನ್ ಡಾಲರ್ ವೆಂಚರ್ ಹೂಡಿಕೆಯನ್ನು ಆಕರ್ಷಿಸಿವೆ. ಪರಿಸರ ವ್ಯವಸ್ಥೆಯ ಒಟ್ಟು ಮೌಲ್ಯ 152.8 ಬಿಲಿಯನ್ ಡಾಲರ್‌ಗೆ ತಲುಪಿದ್ದು, ಕಳೆದ ನಾಲ್ಕು ವರ್ಷಗಳಲ್ಲಿ ಶೇ.190ರಷ್ಟು ಬೆಳವಣಿಗೆ ಕಂಡಿದೆ. ಒಟ್ಟಾರೆ ಕಾರ್ಯಕ್ಷಮತೆಯಲ್ಲಿ ಬೆಂಗಳೂರು ಜಾಗತಿಕ ಟಾಪ್ 10 ಹಾಗೂ ಏಷ್ಯಾದಲ್ಲಿ ಮೂರನೇ ಸ್ಥಾನ ಪಡೆದಿದೆ. ಬಂಡವಾಳಸಂಗ್ರಹಣೆಯಲ್ಲಿಜಾಗತಿಕಟಾಪ್ 15 ಹಾಗೂ ಏಷ್ಯಾದಲ್ಲಿ ನಾಲ್ಕನೇ ಸ್ಥಾನ ಗಳಿಸಿದ್ದು, ಎಐ ಸ್ಟಾರ್ಟ್‌ಅಪ್ ಚಟುವಟಿಕೆಯಲ್ಲಿ ಏಷ್ಯಾದಲ್ಲೇ ಎರಡನೇ ಸ್ಥಾನದಲ್ಲಿದೆ. ದೇಶದ ಒಟ್ಟು ಎಐ ವೆಂಚರ್ ಹೂಡಿಕೆಯ ಸುಮಾರು ಶೇ.58ರಷ್ಟು ಕರ್ನಾಟಕಕ್ಕೆ ಹರಿದುಬರುತ್ತಿದೆ.

> **ಬೆಂಗಳೂರು - ಕರ್ನಾಟಕವು ಭಾರತದ ಸ್ಟಾರ್ಟ್‌ಅಪ್ ರಾಜಧಾನಿಯನ್ನು ಮೀರಿ ಜಾಗತಿಕ ಡೀಪ್‌ಟೆಕ್ ಮತ್ತು ಎಐ ಆವಿಷ್ಕಾರದ ಪ್ರಮುಖ ಕೇಂದ್ರವಾಗಿ ರೂಪುಗೊಳ್ಳುತ್ತಿದೆ. ಈ ಮನ್ನಣೆಯು ಪ್ರತಿಭೆ, ಸಂಶೋಧನೆ, ಉದ್ಯಮಶೀಲತೆ ಮತ್ತು ಉದಯೋನ್ಮುಖ ತಂತ್ರಜ್ಞಾನಗಳಲ್ಲಿ ನಾವು ನಡೆಸಿರುವ ದೀರ್ಘಕಾಲೀನ ಹೂಡಿಕೆಗಳಿಗೆ ಸಂದ ಜಯವಾಗಿದೆ.**
> ■ ಪ್ರಿಯಾಂಕ್ ಖರ್ಗೆ, ಐಟಿ ಮತ್ತು ಬಿಟಿ, ಇ ಆಡಳಿತ ಸಚಿವ.

# ಆನ್‌ಲೈನ್ ಮೂಲಕ ಗುರುತಿನ ಚೀಟಿ

• **ಬೆಂಗಳೂರು:** ಆನ್‌ಲೈನ್ ಮೂಲಕ ವಿಶೇಷ ಚೇತನ ಪ್ರಯಾಣಿಕರು ರೈಲ್ವೆ ರಿಯಾಯಿತಿ ಫೋಟೋ ಗುರುತಿನ ಚೀಟಿ ಪಡೆಯಬಹುದು ಎಂದು ನೈರುತ್ಯ ರೈಲ್ವೆ ಬೆಂಗಳೂರು ವಿಭಾಗವು ತಿಳಿಸಿದೆ. ರೈಲ್ವೆ ಪ್ರಯಾಣ ದರದ ರಿಯಾಯಿತಿಗೆ ಅರ್ಹರಾಗಿರುವ ವಿಶೇಷ ಚೇತನ ಪ್ರಯಾಣಿಕರು ಹೊಸದಾಗಿ ಫೋಟೋ ಗುರುತಿನ ಚೀಟಿಯನ್ನು ಪಡೆಯಲು ಅಥವಾ ನವೀಕರಿಸಲು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. divyangjanid.indianrail.gov.in ಪೋರ್ಟಲ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. ಇದರಿಂದ ಈ ಗುರುತಿನ ಚೀಟಿಯನ್ನು ಪಡೆಯಲು ರೈಲ್ವೆ ಕಾರ್ಯಾಲಯಕ್ಕೆ ಭೇಟಿ ನೀಡುವ ಅಗತ್ಯ ಇರುವುದಿಲ್ಲ. ಈ ಆನ್‌ಲೈನ್ ಸೌಲಭ್ಯದಿಂದ ಗುರುತಿನ ಚೀಟಿಯನ್ನು ಪಡೆಯುವ ಪ್ರಕ್ರಿಯೆಯು ಸುಲಭ ಮತ್ತು ಅನುಕೂಲಕರವಾಗಿದ್ದು ಎಲ್ಲಿಂದ ಬೇಕಾದರೂ ಅರ್ಜಿಯನ್ನು ಸಲ್ಲಿಸಬಹುದಾಗಿದೆ. ಅರ್ಜಿದಾರರು ತಮ್ಮ ಮೊಬೈಲ್ ಸಂಖ್ಯೆಯನ್ನು ನಮೂದಿಸಿ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಂಡು, ಅಗತ್ಯ ದಾಖಲೆಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬೇಕು ಎಂದರು.

ಲಲಿತಾ ಸಹಸ್ರನಾಮ...



ರಕ್ಷಾ ಫೌಂಡೇಷನ್ ವತಿಯಿಂದ ಶುಕ್ರವಾರ ಜಯನಗರ 5ನೇ ಬ್ಲಾಕ್‌ನಲ್ಲಿರುವ ಚಂದ್ರಗುಪ್ತ ಮೌರ್ಯ ಆಟದ ಮೈದಾನದಲ್ಲಿ ಆಯೋಜಿಸಿದ್ದ 4ನೇ ವರ್ಷದ ಲಲಿತಾ ಸಹಸ್ರನಾಮ ಪೂಜಾ ಕಾರ್ಯಕ್ರಮ ನಡೆಯಿತು.

## ಕಿರುಸುದ್ದಿ

### ಇಂದು ಅಂತಾರಾಷ್ಟ್ರೀಯ ಯೋಗ ದಿನಾಚರಣೆ

• **ಬೆಂಗಳೂರು:** ಸಹಜ ಯೋಗ ಕರ್ನಾಟಕ ಹಾಗೂ ಸರ್ ಎಂ. ವಿಶ್ವೇಶ್ವರಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಸಂಯುಕ್ತ ಆಶ್ರಯದಲ್ಲಿ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಜೂ. 21 ರಂದು ಮುಂಜಾನೆ 6.30 ರಿಂದ 9.30ರವರೆಗೆ ಹುಣಸಮಾರನಹಳ್ಳಿಯ ಸರ್. ಎಂ. ವಿಶ್ವೇಶ್ವರಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಆವರಣದಲ್ಲಿ ಆಯೋಜಿಸಲಾಗಿದೆ. ಕಾರ್ಯಕ್ರಮಕ್ಕೆ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ್ ಚಾಲನೆ ನೀಡಲಿದ್ದಾರೆ. ಯೋಗಾಭ್ಯಾಸಿಗಳು, ವಿದ್ಯಾರ್ಥಿಗಳು, ವೃತ್ತಿಪರರು, ಹಿರಿಯ ನಾಗರಿಕರು ಹಾಗೂ ಸಾರ್ವಜನಿಕರು ಒಂದೇ ವೇದಿಕೆಯಲ್ಲಿ ಸೇರಿ ಅಂತಾರಾಷ್ಟ್ರೀಯ ಯೋಗ ದಿನವನ್ನು ಆಚರಿಸಲಿದ್ದು, ಯೋಗದ ಮೂಲಕ ದೈಹಿಕ, ಮಾನಸಿಕ ಹಾಗೂ ಭಾವನಾತ್ಮಕ ಆರೋಗ್ಯದ ಮಹತ್ವವನ್ನು ಈ ಮೂಲಕ ಸಾರಲಾಗುತ್ತದೆ. ಕಾರ್ಯಕ್ರಮದಲ್ಲಿ ಸಾಮೂಹಿಕ ಯೋಗಾಭ್ಯಾಸ, ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ಗೋಕುಲಂ ಸ್ಕೂಲ್ ಆಫ್ ಮ್ಯೂಸಿಕ್‌ನ 100ಕ್ಕೂ ಹೆಚ್ಚು ಕಲಾವಿದರಿಂದ ವಿಶೇಷ ಕೊಳಲು ವಾದನ ನಡೆಯಲಿದೆ. ಈ ವಿಶಿಷ್ಟ ಪ್ರದರ್ಶನವು ವಿಶ್ವ ದಾಖಲೆ ಪುಸ್ತಕದಲ್ಲಿ ಸ್ಥಾನ ಪಡೆಯುವ ಸಾಧ್ಯತೆ ಹೊಂದಿದೆ. ಜತೆಗೆ ಖ್ಯಾತ ಸಂಗೀತ ಕಲಾವಿದರಾದ ರಮ್ಯಾ ವಸಿಷ್ಠ, ಎಚ್.ಎಸ್. ವೇಣುಗೋಪಾಲ್, ಪಂಡಿತ್ ಇಮ್ರಾನ್ ದಾಸ್ ಹಾಗೂ ಡಾ. ಜಯಂತ್ ಕುಮಾರ್ ದಾಸ್ ಅವರಿಂದ ವಿಶೇಷ ಸಂಗೀತ ಕಾರ್ಯಕ್ರಮಗಳು ನಡೆಯಲಿವೆ. ಹೆಚ್ಚಿನ ಮಾಹಿತಿಗಾಗಿ 9538544545 ಸಂಪರ್ಕಿಸಬಹುದು.

### ಯಶವಂತಪುರ ಕ್ಷೇತ್ರದಲ್ಲಿ ಕೆಂಪೇಗೌಡ ಜಯಂತಿ

• **ಕೆಂಗೇರಿ:** ಈ ಬಾರಿ ನಾಡಪ್ರಭು ಕೆಂಪೇಗೌಡ ಜಯಂತಿಯನ್ನು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅಧ್ಯಕ್ಷತೆಯಲ್ಲಿ ಯಶವಂತಪುರ ಕ್ಷೇತ್ರದಲ್ಲಿ ಆಯೋಜನೆ ಮಾಡಲಾಗಿದೆ ಎಂದು ಶಾಸಕ ಎಸ್.ಟಿ. ಸೋಮಶೇಖರ್ ಹೇಳಿದರು. ಯಶವಂತಪುರ ವಿಧಾನಸಭಾ ಕ್ಷೇತ್ರದಲ್ಲಿ ನೂತನವಾಗಿ ನಿರ್ಮಿಸಿರುವ ಮಾಗಡಿ ಮುಖ್ಯ ರಸ್ತೆಯಿಂದ ಮೈಸೂರು ಮುಖ್ಯ ರಸ್ತೆಗೆ ಸಂಪರ್ಕ ಕಲ್ಪಿಸುವ, ಪೆರಿಫೆರಲ್ ರಿಂಗ್ ರಸ್ತೆ ಉದ್ಘಾಟನೆ ಹಾಗೂ ಕೆಂಪೇಗೌಡ ಜಯಂತಿ ಪ್ರಯುಕ್ತ 15 ಲಕ್ಷ ಸಸಿ ನೆಡುವ ಕಾರ್ಯಕ್ರಮದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಕೆಂಪೇಗೌಡ ಬಡಾವಣೆಯಲ್ಲಿ 7 ಲಕ್ಷ, ಬನಶಂಕರಿ 6ನೇ ಹಂತದಲ್ಲಿ 5 ಲಕ್ಷ ಹಾಗೂ ಇನ್ನಿತರ ಸ್ಥಳಗಳಲ್ಲಿ ಏಕ ಕಾಲದಲ್ಲಿ ಸಸಿ ನೆಟ್ಟು ಕೆಂಪೇಗೌಡ ಜಯಂತಿ ಆಚರಣೆ ಮಾಡಲು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ಆಯೋಜಿಸಲಾಗಿದೆ. ಪೆರಿಫೆರಲ್ ರಿಂಗ್ ರಸ್ತೆಗೆ ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರ ನಾಮಕರಣ ಮಾಡಲಾಗುವುದು ಎಂದು ತಿಳಿಸಿದರು. ಈ ವೇಳೆ ರಾಮೋಹಳ್ಳಿ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ವಿ. ವೇಣುಗೋಪಾಲ್, ಸೂಲಿಕೆರೆ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಬಿ. ವಿ. ರಾಮಚಂದ್ರ, ತಿಮ್ಮೇಗೌಡ, ಚೇತನ್, ರಾಮಣ್ಣ, ಮಂಜುನಾಥ್, ಬಿಡಿಎ ಇಇ ಅಶೋಕ್, ಪೊಲೀಸ್ ಅಧಿಕಾರಿಗಳು, ಬಿಡಿಎ ಅಧಿಕಾರಿಗಳು ಹಾಗೂ ಸ್ಥಳೀಯ ಮುಖಂಡರು ಇದ್ದರು.

### ಕೃಷಿ ಭೂಮಿಗೆ ನೀಡುವ ಪರಿಹಾರ ವೈಜ್ಞಾನಿಕ

• **ಬೆಂಗಳೂರು:** ಸಾರ್ವಜನಿಕ ಉದ್ದೇಶಗಳಿಗಾಗಿ ಸ್ವಾಧೀನಪಡಿಸಿಕೊಳ್ಳುವ ಕೃಷಿ ಭೂಮಿಗೆ ನೀಡುವ ಪರಿಹಾರ ಮೊತ್ತವು ವೈಜ್ಞಾನಿಕ ಹಾಗೂ ನ್ಯಾಯಸಮ್ಮತವಾಗಿರಬೇಕು ಎಂದು ವಕೀಲ ವಿಷ್ಣು ಹೆಗಡೆ ಅಭಿಪ್ರಾಯಪಟ್ಟರು. ನಗರದ ಗಾಂಧಿ ಭವನದಲ್ಲಿ ಭಾರತೀಯ ಕಿಸಾನ್ ಸಂಘ-ಕರ್ನಾಟಕ ಪ್ರದೇಶ, ಕರ್ನಾಟಕ ದಕ್ಷಿಣ ಪ್ರಾಂತ ವತಿಯಿಂದ ಆಯೋಜಿಸಲಾಗಿದ್ದ ಕೃಷಿ ಭೂಮಿಯ ಸ್ವಾಧೀನ - ರೈತರ ಅಸ್ತಿತ್ವಕ್ಕೆ ಪೂರಕವೇ, ಮಾರಕವೇ? ಎಂಬ ವಿಷಯದ ಕುರಿತು ನಡೆದ ವಿಚಾರ ಸಂಕಿರಣದಲ್ಲಿ ಮಾತನಾಡಿದ ಅವರು, ಭೂಮಿಯ ನೈಜ ಮಾರುಕಟ್ಟೆ ಮೌಲ್ಯದ ಆಧಾರದ ಮೇಲೆ ಪರಿಹಾರ ನಿಗದಿಯಾಗಬೇಕು. ಆದರೆ ಪ್ರಸ್ತುತ ಉಪನೋಂದಣಾಧಿಕಾರಿ ಕಚೇರಿಯ ಮಾರ್ಗಸೂಚಿ ಮೌಲ್ಯದ ಆಧಾರದ ಮೇಲೆ ಪರಿಹಾರ ನೀಡಲಾಗುತ್ತಿದ್ದು, ಇದರಿಂದ ರೈತರಿಗೆ ಸಮರ್ಪಕ ನ್ಯಾಯ ದೊರೆಯುತ್ತಿಲ್ಲ ಎಂದು ಹೇಳಿದರು. ರಸ್ತೆ, ರೈಲು, ಕೈಗಾರಿಕಾ ಕಾರಿಡಾರ್ ಹಾಗೂ ಇತರ ಮೂಲಸೌಕರ್ಯ ಯೋಜನೆಗಳಿಗಾಗಿ ಸರ್ಕಾರ ಭೂಸ್ವಾಧೀನ ಮಾಡುತ್ತಿರುವುದು ಅಭಿವೃದ್ಧಿಯ ಭಾಗವಾಗಿದ್ದರೂ, ರೈತರ ಜೀವನೋಪಾಯ ಮತ್ತು ಭವಿಷ್ಯದ ಭದ್ರತೆಗೂ ಸಮಾನ ಆದ್ಯತೆ ನೀಡಬೇಕಿದೆ. 2013ರ ಭೂಸ್ವಾಧೀನ, ನ್ಯಾಯಸಮ್ಮತ ಪರಿಹಾರ ಮತ್ತು ಪಾರದರ್ಶಕತೆ ಹಕ್ಕು ಹಾಗೂ ಪುನರ್ವಸತಿ ಕಾಯ್ದೆ ಪ್ರಕಾರ ಭೂಮಿ ಕಳೆದುಕೊಳ್ಳುವವರಿಗೆ ಸಮರ್ಪಕ ಪರಿಹಾರದ ಜತೆಗೆ ಪುನರ್ವಸತಿ ಮತ್ತು ಪುನರ್ ಸ್ಥಾಪನೆ ಸೌಲಭ್ಯಗಳನ್ನು ಕಲ್ಪಿಸಬೇಕಿದೆ. ಆದರೆ ಹಲವು ಸಂದರ್ಭಗಳಲ್ಲಿ ಈ ನಿಬಂಧನೆಗಳು ಪರಿಣಾಮಕಾರಿಯಾಗಿ ಜಾರಿಯಾಗುತ್ತಿಲ್ಲ ಎಂದು ವಿಷ್ಣು ಹೆಗಡೆ ಅಸಮಾಧಾನ ವ್ಯಕ್ತಪಡಿಸಿದರು. ಒಂದು ಅಥವಾ ಎರಡು ಎಕರೆ ಭೂಮಿಯನ್ನೇ ಜೀವನಾಧಾರವಾಗಿರುವ ರೈತರು ಅದನ್ನು ಕಳೆದುಕೊಂಡ ನಂತರ ಎಲ್ಲಿಗೆ ಹೋಗಬೇಕು? ಪಡೆದ ಪರಿಹಾರದ ಹಣ ಮುಗಿದ ಬಳಿಕ ಆತ ಹಾಗೂ ಆತನ ಕುಟುಂಬದ ಭವಿಷ್ಯ ಏನು? ಎಂಬ ಪ್ರಶ್ನೆಯನ್ನು ಅವರು ಮುಂದಿಟ್ಟರು.

ನೌಕರರ ಭವಿಷ್ಯ ನಿಧಿ ಕಲ್ಯಾಣ ಆಯುಕ್ತ ಸೆಬಾಸ್ಟಿಯನ್ ಇಂಗಿತ

# ಯುವಶಕ್ತಿಯಿಂದ ಅಭಿವೃದ್ಧಿ

• **ಬೆಂಗಳೂರು:** ದೇಶದ ಆರ್ಥಿಕ ಹಾಗೂ ಸಾಮಾಜಿಕ ಬೆಳವಣಿಗೆಯಲ್ಲಿ ಯುವಶಕ್ತಿ ಮತ್ತು ಸರ್ಕಾರದ ಪೂರಕ ಚಿಂತನೆಗಳು ಪ್ರಮುಖ ಪಾತ್ರ ವಹಿಸುತ್ತವೆ ಎಂದು ನೌಕರರ ಭವಿಷ್ಯ ನಿಧಿ ಕಲ್ಯಾಣ ಆಯುಕ್ತ ಸೆಬಾಸ್ಟಿಯನ್ ಹೇಳಿದರು.

ಇಪಿಎಫ್‌ಒನ ಇಂದಿರಾನಗರ ಪ್ರಾದೇಶಿಕ ಕಚೇರಿ ವತಿಯಿಂದ ಎಚ್‌ಎಎಲ್ ಸಭಾಂಗಣದಲ್ಲಿ ಆಯೋಜಿಸಿದ್ದ ಪ್ರಧಾನ ಮಂತ್ರಿ ವಿಕಸಿತ್ ಭಾರತ್ ರೋಜ್‌ಗಾರ್ ಯೋಜನೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕಳೆದ 12 ವರ್ಷಗಳಲ್ಲಿ ಭಾರತವು ಜಾಗತಿಕ ಮಟ್ಟದಲ್ಲಿ ಗಮನಾರ್ಹ ಎತ್ತರಕ್ಕೆ ಬೆಳೆದಿದೆ. ಒಂದು ಕಾಲದಲ್ಲಿ ಜಗತ್ತಿನ ದುರ್ಬಲ ಐದು ಆರ್ಥಿಕತೆಗಳಲ್ಲಿ ಒಂದಾಗಿದ್ದ ಭಾರತ, ಇಂದು ಅತ್ಯಂತ ವೇಗವಾಗಿ ಮುನ್ನಡೆಯುತ್ತಿರುವುದು ಶ್ಲಾಘನೀಯ. ಈ ಅಭಿವೃದ್ಧಿಗೆ ದೇಶದ ಯುವಶಕ್ತಿ ಮತ್ತು ಕೇಂದ್ರ ಸರ್ಕಾರದ ದೂರದೃಷ್ಟಿಯ ಚಿಂತನೆಗಳೇ ಕಾರಣ ಎಂದು ಹೇಳಿದರು.

**ಸುಲಭ ವಾಣಿಜ್ಯ ನಿರ್ವಹಣೆಗೆ ಕ್ರಮ:** ಹಿಂದೆ ಕಾರ್ಮಿಕ ವಲಯದಲ್ಲಿ ಹಲವಾರು ಪರವಾನಗಿಗಳು ಮತ್ತು ನೋಂದಣಿ ಪ್ರಕ್ರಿಯೆಗಳ ಅಗತ್ಯವಿತ್ತು. ಆದರೆ ಪ್ರಸ್ತುತ ಸುಲಭ ವಾಣಿಜ್ಯ ನಿರ್ವಹಣೆಯನ್ನು ಉತ್ತೇಜಿಸಲು ಹಳೆಯ 29 ಕಾರ್ಮಿಕ ಕಾಯ್ದೆಗಳನ್ನು ಒಟ್ಟುಗೂಡಿಸಿ 4 ಪ್ರಮುಖ ಕಾರ್ಮಿಕ ಸಂಹಿತೆಗಳನ್ನಾಗಿ ರೂಪಿಸಲಾಗಿದೆ. ಇದು ಉದ್ಯಮ ರಂಗಕ್ಕೆ ಹೆಚ್ಚಿನ ಬಲ ತುಂಬಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.



**ಬೆಂಗಳೂರಿಗೆ ಸಿಂಹಪಾಲು**

ದೇಶದ ಒಟ್ಟು ಮೊತ್ತದಲ್ಲಿ ಬೆಂಗಳೂರಿಗೆ ಸಿಂಹಪಾಲು ಲಭಿಸಿದೆ. ಇದರಲ್ಲಿ ಬೆಂಗಳೂರಿನ 84,000 ಉದ್ಯೋಗಿಗಳಿಗೆ, 6,000 ಮಾಲೀಕರಿಗೆ ಅನುಕೂಲವಾಗಿದೆ. ಮುಂದಿನ 2 ವರ್ಷಗಳಲ್ಲಿ ದೇಶದಲ್ಲಿ 3.5 ಕೋಟಿ ಹೊಸ ಉದ್ಯೋಗ ಸೃಷ್ಟಿಸುವ ಗುರಿಯನ್ನು ಈ ಯೋಜನೆ ಹೊಂದಿದೆ ಎಂದು ಇಂದಿರಾನಗರ ಇಪಿಎಫ್‌ಒ ಕಚೇರಿಯ ಪ್ರಾದೇಶಿಕ ಆಯುಕ್ತ ಎಂ. ವಿಘ್ನೇಶ್ವರನ್ ತಿಳಿಸಿದರು.

**ಬೃಹತ್ ಉದ್ಯೋಗ ಯೋಜನೆಗೆ ಚಾಲನೆ:** ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಯಾದ ಪ್ರಧಾನಮಂತ್ರಿ ವಿಕಸಿತ ಭಾರತ ಉದ್ಯೋಗ ಯೋಜನೆ ಸುಮಾರು 1 ಲಕ್ಷ ಕೋಟಿ ರೂ.ಗಳ ಬಜೆಟ್ ಹೊಂದಿದ್ದು, ಮುಂದಿನ ಎರಡು ವರ್ಷಗಳಲ್ಲಿ 3.5 ಕೋಟಿಗೂ ಹೆಚ್ಚು ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ಗುರಿ ಹೊಂದಿದೆ ಎಂದು ಮಾಹಿತಿ ನೀಡಿದರು. ಸಾಂಕೇತಿಕವಾಗಿ ಹೊಸ ಉದ್ಯೋಗಿಗಳಿಗೆ ಉದ್ಯೋಗದಾತರು ನೇಮಕಾತಿ ಪತ್ರಗಳನ್ನು ಹಸ್ತಾಂತರಿಸಿದರು. ಕಾರ್ಯಕ್ರಮದಲ್ಲಿ ಇಂದಿರಾನಗರ ಇಪಿಎಫ್‌ಒ ಕಚೇರಿಯ ಪ್ರಾದೇಶಿಕ ಆಯುಕ್ತ ಎಂ. ವಿಘ್ನೇಶ್ವರನ್ ಹಾಗೂ ಸಹಾಯಕ ಪ್ರಾದೇಶಿಕ ಆಯುಕ್ತ ರಮೀಜ್ ಮೆಹರ್ ಹಾಗೂ ರಾಮಸುಬ್ಬಯ್ಯ, ವೆಲ್ಫೇರ್ ಕಮಿಷನರ್ ಸೆಬಾಸ್ಟಿಯನ್, ಇಎಸ್‌ಐಸಿಯ ಉಪನಿರ್ದೇಶಕ ರವಿಕೃಷ್ಣ ಉಪಸ್ಥಿತರಿದ್ದರು.

> **ಪ್ರಧಾನಮಂತ್ರಿ ವಿಕಸಿತ ಭಾರತ ಉದ್ಯೋಗ ಯೋಜನೆಯ ಫಲಾನುಭವಿಯಾಗಿದ್ದಕ್ಕೆ ಹೆಮ್ಮೆ ಮತ್ತು ಕೃತಜ್ಞತಾ ಭಾವ ಮೂಡುತ್ತಿದೆ. ಮೊದಲ ಕಂತಿನ ಪ್ರೋತ್ಸಾಹಧನ ಸ್ವೀಕರಿಸಿದ್ದೇನೆ. ಇದು ನನಗೆ ಆರ್ಥಿಕ ಭದ್ರತೆ, ಆತ್ಮವಿಶ್ವಾಸ ಹಾಗೂ ನನ್ನ ಭವಿಷ್ಯವನ್ನು ಉತ್ತಮವಾಗಿ ಯೋಜಿಸಲು ಹೆಚ್ಚಿನ ಸ್ವಾತಂತ್ರ್ಯವನ್ನು ನೀಡಿದೆ.**
> ■ ಶ್ರಿಷಾ, ಪಿಎಂ-ವಿಬಿಆರ್‌ವೈ ಯೋಜನೆ ಫಲಾನುಭವಿ

# ಇಂದು ಕೈಗಾರಿಕೆ-ಕೃಷಿ ದೇಶದ ಬೆನ್ನೆಲುಬು

• **ಬೆಂಗಳೂರು:** ಕೈಗಾರಿಕೆ ಮತ್ತು ಕೃಷಿ ಎರಡೂ ಈ ದೇಶದ ಬೆನ್ನೆಲುಬಾಗಿದೆ. ಮುಂದಿನ ಎರಡು ವರ್ಷಗಳಲ್ಲಿ 3.5 ಕೋಟಿ ಉದ್ಯೋಗ ಸೃಷ್ಟಿ ಮಾಡುವ ಗುರಿಯನ್ನು ಕೇಂದ್ರ ಸರ್ಕಾರ ಹೊಂದಿದೆ ಎಂದು ಬೊಮ್ಮನಹಳ್ಳಿ ಶಾಸಕ ಎಂ. ಸತೀಶ್ ರೆಡ್ಡಿ ಹೇಳಿದರು.

ಕೋರಮಂಗಲದ ಸೆಂಟ್ ಫ್ರಾನ್ಸಿಸ್ ಸಂಯುಕ್ತ ಪದವಿ ಪೂರ್ವ ಕಾಲೇಜಿನಲ್ಲಿ ಭವಿಷ್ಯನಿಧಿ ಪ್ರಾದೇಶಿಕ ಆಯುಕ್ತಾಲಯವು ಶುಕ್ರವಾರ ಆಯೋಜಿಸಿದ ಪ್ರಧಾನಮಂತ್ರಿ ವಿಕಸಿತ ಭಾರತ ಉದ್ಯೋಗ ಯೋಜನೆಯಲ್ಲಿ ಅರ್ಹ ಫಲಾನುಭವಿಗಳಿಗೆ ಪ್ರೋತ್ಸಾಹಧನ ವಿತರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ಹಿಂದೆ ಭವಿಷ್ಯನಿಧಿ ಎಂದರೆ ದೊಡ್ಡ ತಲೆನೋವಿನ ಸಂಗತಿಯಾಗಿತ್ತು. 2024-25ರಲ್ಲಿ ಭವಿಷ್ಯನಿಧಿಯಲ್ಲಿ ದೊಡ್ಡ ಸಮಸ್ಯೆ ಎದುರಾಗಿತ್ತು. ಆಗಿನ ಕೇಂದ್ರ ಸಚಿವರಾಗಿದ್ದ ಅನಂತಕುಮಾರ್ ಅವರು ಈ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸಿದ್ದರು. ಈಗ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಹೊಸ ಉದ್ಯೋಗಿಗೆ ಪ್ರೋತ್ಸಾಹಧನವಾಗಿ 15,000 ರೂ.ಗಳನ್ನು ಅವರ ಖಾತೆಗೆ ನೇರವಾಗಿ ಜಮೆ ಮಾಡುತ್ತಿದ್ದಾರೆ ಎಂದರು.

ಉದ್ಯೋಗಿ ಮತ್ತು ಉದ್ಯೋಗದಾತರು ಇಬ್ಬರೂ ಈ ದೇಶಕ್ಕೆ ಎರಡು ಕಣ್ಣುಗಳಿದ್ದಂತೆ. ಉದ್ಯೋಗದಾತರಿಲ್ಲದೇ ಉದ್ಯೋಗ ಲಭಿಸುವುದಿಲ್ಲ, ಉದ್ಯೋಗಿಗಳಿಲ್ಲದೇ ಸಂಸ್ಥೆಯೊಂದು ನಡೆಯಲು ಸಾಧ್ಯವಿಲ್ಲ. ದೇಶದಲ್ಲಿ ಪ್ರಧಾನಿ ಮೋದಿ ನೇತೃತ್ವದ ಸರ್ಕಾರ ಬಂದ ಬಳಿಕ ಉದ್ಯೋಗಗಳನ್ನು ಸೃಷ್ಟಿ ಮಾಡುವ ಕಾರ್ಖಾನೆಗಳು ದೇಶ ಮತ್ತು ರಾಜ್ಯಕ್ಕೆ ಹರಿಬರಲಿದೆ. ಯುವ ಉದ್ಯೋಗಿಗಳಿಗೆ ಹೆಚ್ಚು ಪ್ರೋತ್ಸಾಹ ನೀಡಲಾಗುತ್ತಿದೆ. ಇದಕ್ಕಾಗಿ ಸಾವಿರಾರು ಕೋಟಿ ರೂ.ಗಳನ್ನು ವಿನಿಯೋಗಿಸಲಾಗುತ್ತಿದೆ. ಇದರಿಂದ ಜೆನ್ ಜೀಗಳಿಗೆ ದೊಡ್ಡ ಅವಕಾಶವಾಗುತ್ತದೆ ಎಂದು ತಿಳಿಸಿದರು.

ಸೆಂಟ್ ಫ್ರಾನ್ಸಿಸ್ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥ ಬ್ರೈಟನ್ ಆ್ಯಂಟೋ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಸಮಗ್ರ ತನಿಖೆಗೆ ತಂಡ ರಚನೆ

• **ಬೆಂಗಳೂರು:** ವರ್ತೂರಿನ ಬೆಳಗೆರೆಯಲ್ಲಿರುವ ಜಲಮಂಡಳಿಯ 40 ಅಡಿ ಆಳದ ತ್ಯಾಜ್ಯ ನೀರು ಸಂಸ್ಕರಣಾ(ಎಸ್‌ಟಿಪಿ) ಟ್ಯಾಂಕ್ ಮೂವರು ಕಾರ್ಮಿಕರು ಆಯತಪ್ಪಿ ಬಿದ್ದು, ಅದರಲ್ಲಿ ಇಬ್ಬರು ಕಾರ್ಮಿಕರು ಮೃತಪಟ್ಟಿರುವ ಘಟನೆಗೆ ಸಂಬಂಧಿಸಿದಂತೆ ಹಿರಿಯ ಅಧಿಕಾರಿಗಳ ತಂಡ ರಚಿಸಿ ಸಮಗ್ರ ತನಿಖೆಗೆ ಜಲಮಂಡಳಿ ಅಧ್ಯಕ್ಷೆ ಡಾ. ಮಂಜುಳಾ ಆದೇಶಿಸಿದ್ದಾರೆ.



- ವರ್ತೂರು ಎಸ್‌ಟಿಪಿ ಘಟಕದಲ್ಲಿ ಕಾರ್ಯಾಚರಣೆ ಚುರುಕು
- ಕಾರ್ಮಿಕರ ದೇಹ ಪತ್ತೆಗಾಗಿ ಎಸ್‌ಡಿಆರ್ ಎಫ್ ನಿಯೋಜನೆ
- ಸ್ಥಳದಲ್ಲಿ ಜಲಮಂಡಳಿ ಅಧ್ಯಕ್ಷೆ ಡಾ. ಮಂಜುಳಾ ಉಪಸ್ಥಿತಿ
- ಘಟನೆಯ ಸಮಗ್ರ ತನಿಖೆಗೆ ಆದೇಶ, ತಪ್ಪಿತಸ್ಥರ ಮೇಲೆ ಕಠಿಣ ಕ್ರಮ

ಈ ವಿಷಯವಾಗಿ ಮಾಧ್ಯಮ ಪ್ರಕಟಣೆ ನೀಡಿರುವ ಜಲಮಂಡಳಿ, ಗುರುವಾರ ಸಂಜೆ ಸುಮಾರು 6 ಗಂಟೆಗೆ ವರ್ತೂರಿನ ಬೆಳಗೆರೆ ಯಲ್ಲಿರುವ ಜಲಮಂಡಳಿಯ 40 ಅಡಿ ಆಳದ ಎಸ್‌ಟಿಪಿ) ಟ್ಯಾಂಕ್‌ಗೆ ಮೂವರು ಕಾರ್ಮಿಕರು ಆಯತಪ್ಪಿ ಬಿದ್ದಿದ್ದರು. ಅದರಲ್ಲಿ ಓರ್ವ ಕಾರ್ಮಿಕನನ್ನು ತಕ್ಷಣವೇ ರಕ್ಷಿಸಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಇಬ್ಬರು ಮೃತಪಟ್ಟಿದ್ದಾರೆ. ಮೃತ ಕಾರ್ಮಿಕರಾದ ಬ್ರಿಜೇಶ್ ಮತ್ತು ಅಖಿಲೇಶ್ ದೇಹಗಳ ಪತ್ತೆಗಾಗಿ ತೀವ್ರ ಶೋಧ ಕಾರ್ಯ ಮುಂದುವರಿದಿದೆ. ಮೃತದೇಹಗಳನ್ನು ಶೀಘ್ರವಾಗಿ ಹೊರತೆಗೆಯಲು ಮತ್ತು ಪರಿಸ್ಥಿತಿಯನ್ನು ಸುಧಾರಿಸಲು ಎಲ್ಲಾ ರೀತಿಯ ಪ್ರಯತ್ನಗಳು ಹಾಗೂ ಸಕಲ ಕ್ರಮಗಳನ್ನು ಸಮರೋಪಾದಿಯಲ್ಲಿ ಕೈಗೊಳ್ಳಲಾಗಿದೆ. ಕಾರ್ಮಿಕರ ದೇಹ ಪತ್ತೆಗಾಗಿ ಎಸ್‌ಡಿಆರ್‌ಎಫ್ ನಿಯೋಜನೆ ಮಾಡಲಾಗಿದೆ. ಬೆಂಗಳೂರು ಜಲಮಂಡಳಿ ಅಧ್ಯಕ್ಷೆ ಡಾ. ಮಂಜುಳಾ ಸ್ಥಳದಲ್ಲೇ ಇದ್ದು ರಕ್ಷಣಾ ಕಾರ್ಯಾಚರಣೆಯನ್ನು ನಿರ್ವಹಿಸುತ್ತಿದ್ದಾರೆ ಎಂದು ತಿಳಿಸಿದೆ.

ಡ್ರೈನೇಜ್ ಟ್ಯಾಂಕ್‌ನೊಳಗೆ ವಿಷಾನಿಲ ತುಂಬಿರುವುದರಿಂದ ಮತ್ತು ನೀರಿನ ರಭಸ ಹೆಚ್ಚಾಗಿರುವುದರಿಂದ ರಕ್ಷಣಾ ಕಾರ್ಯಾಚರಣೆಗೆ ತೀವ್ರ ಅಡ್ಡಿಯುಂಟಾಗಿದೆ. ಟ್ಯಾಂಕ್ ನೊಳಗಿನ ವಿಷಾನಿಲದ ಅಪಾಯವನ್ನು ಎದುರಿಸಲು ಅಗ್ನಿಶಾಮಕ ದಳದ ಜೊತೆಗೆ ರಾಷ್ಟ್ರೀಯ ವಿಪತ್ತು ಪ್ರತಿಕ್ರಿಯೆ ಪಡೆ ತಜ್ಞರು ಕಾರ್ಯನಿರ್ವಹಿಸುತ್ತಿದ್ದಾರೆ.

ರಕ್ಷಣಾ ಸಿಬ್ಬಂದಿ ಟ್ಯಾಂಕ್‌ನೊಳಗೆ ಇಳಿಯುವ ಮುನ್ನ, ಒಳಗಿರುವ ವಿಷಾನಿಲವನ್ನು ಹೊರಹಾಕಿಸಲು ಟ್ಯಾಂಕ್‌ಗೆ ಆಮ್ಲಜನಕವನ್ನು ತುಂಬುವ ಕಾರ್ಯವನ್ನು ಕೈಗೊಳ್ಳಲಾಗಿದೆ. ಆಮ್ಲಜನಕ ತುಂಬಿದ ತಕ್ಷಣ ಶೋಧ ಕಾರ್ಯವನ್ನು ಮುಂದುವರಿಸಲಿದ್ದಾರೆ. ಜಲಮಂಡಳಿ ಹಿರಿಯ ಅಧಿಕಾರಿಗಳು ಸ್ಥಳದಲ್ಲಿಯೇ ಬಿಡು ಬಿಟ್ಟಿದ್ದು, ಜಲಮಂಡಳಿಯು ಸ್ಥಳದಲ್ಲಿ ಎಲ್ಲಾ ಅಗತ್ಯ ನೆರವು ಮತ್ತು ವೈದ್ಯಕೀಯ ಸೌಲಭ್ಯಗಳನ್ನು ಒದಗಿಸುತ್ತಿದೆ ಎಂದು ಮಾಹಿತಿ ನೀಡಿದೆ. ಈ ದುರದೃಷ್ಟಕರ ಘಟನೆಯ ಸಮಗ್ರ ತನಿಖೆಗೆ ಆದೇಶ ನೀಡಲಾಗಿದೆ. ಜಲಮಂಡಳಿ ಮುಖ್ಯ ಅಭಿಯಂತರ ಡಾ.ಕೆ.ಎಸ್.ರಾಜೀವ್, ಅಪರ ಮುಖ್ಯ ಅಭಿಯಂತರ ಡಾ.ಕೆ.ಎಸ್.ರೇಣುಕುಮಾರ್, ಉಪ ಮುಖ್ಯ ಅಭಿಯಂತರೆ ವಿನುತ ಡಿ.ಎಸ್ ಅವರ ತಂಡವನ್ನು ತನಿಖೆಗೆ ನೇಮಿಸಲಾಗಿದ್ದು, ಜೂ.20 ರಂದು ವರದಿ ನೀಡಲು ಸೂಚಿಸಲಾಗಿದೆ. ನಿರ್ಲಕ್ಷ್ಯ ತೋರಿದ ತಪ್ಪಿತಸ್ಥರ ಮೇಲೆ ಕಠಿಣ ಕ್ರಮ ಜರುಗಿಸಲಾಗುವುದು ಎಂದು ಜಲಮಂಡಳಿ ಅಧ್ಯಕ್ಷೆ ತಿಳಿಸಿದ್ದಾರೆ.

# ಸಮರ್ಪಣಾ ಭಾವನೆ ಬೆಳೆಸಿಕೊಳ್ಳಿ

• **ಬೆಂಗಳೂರು:** ಸಮರ್ಪಣಾ ಭಾವ ಹೊಂದಿದ ವ್ಯಕ್ತಿಗಳು ಸಮಾಜಕ್ಕೆ ಅವಶ್ಯವಾಗಿದ್ದಾರೆ. ವಿಶ್ವವಿದ್ಯಾಲಯದ ಮೂಲಕ ಸಾಂಸ್ಕೃತಿಕ ಪರಂಪರೆ ಪಸರಿಸಿದ ಕೀರ್ತಿ ಪ್ರೊ. ನಾಗೇಶ್ ವಿ. ಬೆಟ್ಟಕೋಟೆ ಅವರಿಗೆ ಸಲ್ಲುತ್ತದೆ ಎಂದು ಸಾಹಿತಿ ನಾಡೋಜ ಡಾ.ಗೊ.ರು.ಚನ್ನಬಸಪ್ಪ ಅಭಿಪ್ರಾಯಪಟ್ಟರು.

ಶುಕ್ರವಾರ ನಗರದ ಬೆಂಗಳೂರು ವಿಶ್ವವಿದ್ಯಾಲಯ ಪ್ರದರ್ಶನ ಕಲಾ ವಿಭಾಗದ ವತಿಯಿಂದ ಜ್ಞಾನಭಾರತಿ ಆವರಣದಲ್ಲಿ ಆಯೋಜಿಸಿದ್ದ ರಂಗಭೂಮಿ ಕುರಿತ ಅಂತಾರಾಷ್ಟ್ರೀಯ ವಿಚಾರ ಸಂಕಿರಣ ಹಾಗೂ ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ ವಿಶ್ರಾಂತ ಕುಲಪತಿ ಪ್ರೊ. ನಾಗೇಶ್ ವಿ. ಬೆಟ್ಟಕೋಟೆ ಅವರಿಗೆ ಅಭಿನಂದನಾ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ಪ್ರೊ. ನಾಗೇಶ್ ವಿ. ಬೆಟ್ಟಕೋಟೆಯವರು ಪ್ರಾಧ್ಯಾಪಕರಾಗಿ, ಕುಲಪತಿಗಳಾಗಿ ಸಾಂಸ್ಕೃತಿಕ ನೆಲೆಗಟ್ಟಿನಲ್ಲಿ ಸಾಕಷ್ಟು ಕೊಡುಗೆ ನೀಡಿದ್ದಾರೆ. ಕನ್ನಡ ರಂಗಭೂಮಿಯನ್ನು ವಿಶ್ವ ಮಟ್ಟಕ್ಕೆ ಕೊಂಡೊಯ್ದಿದ್ದಾರೆ. 60ರ ಹೊಸಿಲಿನಲ್ಲಿರುವ ಅವರ ಅನುಭವ ಸಮಾಜಕ್ಕೆ ಪೂರಕವಾಗಲಿ ಎಂದು ಆಶಯ ವ್ಯಕ್ತಪಡಿಸಿದರು. ಸಂಗೀತ ನಿರ್ದೇಶಕ ಡಾ.ಹಂಸಲೇಖ ಮಾತನಾಡಿ, ಪ್ರೊ. ನಾಗೇಶ್ ಅವರ ಗಟ್ಟಿ ನಿರ್ಧಾರ, ಸಾಮಾಜಿಕ ಬದಲಾವಣೆಯ ಮೂಲಕ ಧ್ವನಿ ಇಲ್ಲದವರ ಸಾಂಸ್ಕೃತಿಕ ಧ್ವನಿಯಾಗಿ ದುಡಿದಿದ್ದಾರೆ. ಸಿನಿಮಾ ಸಂಗೀತ, ಸುಗಮ ಸಂಗೀತ, ಜನಪದ ಸಂಗೀತ ಶಾಸ್ತ್ರ ಅಭಿವೃದ್ಧಿಗೆ ವಿಶ್ವವಿದ್ಯಾಲಯದ ಮಾನ್ಯತೆ ನೀಡಿ ಇತಿಹಾಸದಲ್ಲಿ



ಚಿರಸ್ಥಾಯಿಯಾಗಿ ಉಳಿದಿದ್ದಾರೆ. ಸಾರ್ಥಕ ಹಾದಿ, ಅರ್ಥಪೂರ್ಣ ಬದುಕನ್ನು ಕೊಂಡಾಡುವ ಕ್ಷಣವಿದು ಎಂದು ಸಂತಸ ವ್ಯಕ್ತಪಡಿಸಿದರು.

ಕರ್ನಾಟಕ ನಾಟಕ ಅಕಾಡೆಮಿಯ ಅಧ್ಯಕ್ಷ ಡಾ.ಕೆ.ವಿ. ನಾಗರಾಜ ಮೂರ್ತಿ ಮಾತನಾಡಿ, ಪ್ರೊ. ನಾಗೇಶ್ ಅವರ ನೇತೃತ್ವದಲ್ಲಿ ಬೆಂವಿವಿ ಕಲಾ ವಿಭಾಗ ರಾಜ್ಯದಲ್ಲಿ ಮುಂಚೂಣಿಯಲ್ಲಿದೆ. ಕ್ರಿಯಾಶೀಲ, ಶಕ್ತಿ ಸಾಮರ್ಥ್ಯದಿಂದ ಮಹತ್ತರ ಕ್ರಮಗಳನ್ನು ಕೈಗೊಂಡು ಗಂಗೂಬಾಯಿ ವಿಶ್ವವಿದ್ಯಾಲಯವನ್ನು ಮನೆ-ಮನೆಗೆ ತಲುಪಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ ಎಂದು ಹರ್ಷ ವ್ಯಕ್ತಪಡಿಸಿದರು. ಇದೇ ವೇಳೆ ಪ್ರೊ. ನಾಗೇಶ್ ಬೆಟ್ಟಕೋಟೆ ಅಭಿನಂದನಾ ಗ್ರಂಥವನ್ನು ಬಿಡುಗಡೆಗೊಳಿಸಲಾಯಿತು. ಕಾರ್ಯಕ್ರಮದಲ್ಲಿ ತರಳಬಾಳು ಶಿವಮಠದ ಶ್ರೀ ಶಿವಾಚಾರ್ಯ ಸ್ವಾಮೀಜಿ ದಿವ್ಯ ಸಾನಿಧ್ಯ ವಹಿಸಿದ್ದರು. ಬೆಂಗಳೂರು ವಿಶ್ವವಿದ್ಯಾಲಯ ಕುಲಪತಿ ಡಾ.ಜಯಕರ, ವಿಶ್ರಾಂತ ಕುಲಪತಿಗಳು ಡಾ.ಎಸ್.ಸಿ.ಶರ್ಮಾ, ಮುಖ್ಯಸ್ಥರು ಡಾ.ಹಂಸಿನಿ ನಾಗೇಂದ್ರ ಇದ್ದರು.

# ರಾಹುಲ್ ಗಾಂಧಿ ವಿದ್ಯಾರ್ಥಿಗಳ ಧ್ವನಿ

• **ಬೆಂಗಳೂರು:** ರಾಹುಲ್ ಗಾಂಧಿಯವರು ದೇಶದ ಬಡವರು ಹಾಗೂ ವಿದ್ಯಾರ್ಥಿಗಳ ಧ್ವನಿಯಾಗಿದ್ದಾರೆ ಎಂದು ಕೆಪಿವೈಸಿಸಿ ಕಾನೂನು ಘಟಕದ ರಾಜ್ಯಾಧ್ಯಕ್ಷ ಶ್ರೀಧರ್ ತಿಳಿಸಿದರು.

ಕರ್ನಾಟಕ ಪ್ರದೇಶ ಯುವ ಕಾಂಗ್ರೆಸ್ ಸಮಿತಿ ವತಿಯಿಂದ ನಗರದ ಕೆಪಿಸಿಸಿ ಕಚೇರಿ ಆವರಣದಲ್ಲಿ ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿಯವರ ಹುಟ್ಟುಹಬ್ಬ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ರಾಜ್ಯದ ಸಾಮಾಜಿಕ, ಶೈಕ್ಷಣಿಕ ಕ್ಷೇತ್ರದಲ್ಲಿ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿರುವ ಕೆಪಿವೈಸಿಸಿ, ಇಂದು ರಾಹುಲ್ ಗಾಂಧಿಯವರ ಭಾವಚಿತ್ರಕ್ಕೆ ಕ್ಷೀರಾಭಿಷೇಕ ಮಾಡಿ, ಸಿಹಿ ಹಂಚುವ ಮೂಲಕ ಅರ್ಥಪೂರ್ಣವಾಗಿ ಹುಟ್ಟುಹಬ್ಬವನ್ನು ಆಚರಿಸಲಾಗುತ್ತಿದೆ ಎಂದು ಹೇಳಿದರು.

ಈ ವೇಳೆ ಕೆಪಿವೈಸಿಸಿ ರಾಜ್ಯ ಪ್ರಧಾನ ಕಾರ್ಯದರ್ಶಿ ಬಾಹುಬಲಿ, ರಾಜ್ಯ ಕಾರ್ಯದರ್ಶಿ ಸ್ವಸ್ತಿ ಮಾಡಿಪ್ಪ, ಬೆಂಗಳೂರು ಕೇಂದ್ರ ಜಿಲ್ಲಾಧ್ಯಕ್ಷ ರಂಜಿತ್ ಕುಮಾರ್ ಆರ್, ಬೆಂಗಳೂರು ಉತ್ತರ ಜಿಲ್ಲಾಧ್ಯಕ್ಷ ರಾಹುಲ್ ಎಸ್.ಎಲ್.ಸೇರಿದಂತೆ ಕಾಂಗ್ರೆಸ್‌ನ ಕಾರ್ಯಕರ್ತರು ಇತರರಿದ್ದರು.

# ದೇವರ ಮುಂದೆ ಎಲ್ಲರು ಸಮಾನರು

• **ಬೆಂಗಳೂರು:** ಜಾತಿ-ಮತ-ಧರ್ಮ ಭೇದವಿಲ್ಲ, ದೇವರ ಮುಂದೆ ಎಲ್ಲರೂ ಸಮಾನರು ಎಂದು ಮಂತ್ರಾಲಯ ಮಠದ ಶ್ರೀ ಸುಬುಧೇಂದ್ರತೀರ್ಥ ಸ್ವಾಮೀಜಿ ತಿಳಿಸಿದರು.

ರಕ್ಷಾ ಫೌಂಡೇಷನ್ ವತಿಯಿಂದ ಶುಕ್ರವಾರ ಜಯನಗರ 5ನೇ ಬ್ಲಾಕ್‌ನಲ್ಲಿರುವ ಚಂದ್ರಗುಪ್ತ ಮೌರ್ಯ ಆಟದ ಮೈದಾನದಲ್ಲಿ ಆಯೋಜಿಸಿದ್ದ 4ನೇ ವರ್ಷದ ಲಲಿತಾ ಸಹಸ್ರನಾಮ ಪೂಜಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ, ಆಶೀರ್ವಚನ ನೀಡಿದರು. 14 ವರ್ಷಗಳಿಂದ ರಕ್ಷಾ ಫೌಂಡೇಷನ್ ವತಿಯಿಂದ ವಿವಿಧ ಸಾಮಾಜಿಕ ಧಾರ್ಮಿಕ ಸಾಂಸ್ಕೃತಿಕ ಕಾರ್ಯಗಳನ್ನು ಆಯೋಜಿಸುವ ಜತೆಯಲ್ಲಿ ಶಾಲಾ ಮಕ್ಕಳಿಗೆ ಉಚಿತವಾಗಿ ನೋಟ್ ಪುಸ್ತಕಗಳನ್ನು ವಿತರಣೆ ಮಾಡುವ ಕಾರ್ಯಕ್ರಮಗಳನ್ನು ಆಯೋಜಿಸಿ, ಶಿಕ್ಷಣ ರಂಗದ ಸೇವೆಯನ್ನು ಈ ಫೌಂಡೇಷನ್ ಮಾಡುತ್ತಿರುವ ಕೆಲಸ ಶ್ಲಾಘನೀಯ ಎಂದರು.

ಲಲಿತಾ ಸಹಸ್ರನಾಮ ಪೂಜೆಗೆ ಪಾಲ್ಗೊಂಡ ಭಕ್ತರಲ್ಲಿ ಶ್ರೀಮಂತರು, ಬಡವರಿದ್ದಾರೆ. ವಿಶೇಷವಾಗಿ ಪೌರಕಾರ್ಮಿಕರು ಕೂಡ ಪಾಲ್ಗೊಂಡಿರುವುದನ್ನು ಕಂಡು ಬಹಳ ಸಂತೋಷವಾಗಿದೆ. ಇದು ನಮ್ಮ ಸನಾತನ ಹಿಂದು ಧರ್ಮದ ವೈಶಿಷ್ಟ್ಯ. ದೇವರ ಮುಂದೆ ಎಲ್ಲರೂ ಸಮಾನರು ಹಾಗೂ ಪೂಜಾಧಿಕಾರವಂತರು. ದೇವರ ಅನುಗ್ರಹ ಪಡೆಯಲು ಎಲ್ಲರಿಗೂ ಅಧಿಕಾರವಿದೆ. ಇಂತಹ ಒಂದು ವಿಶಾಲವಾದ ಸಿದ್ಧಾಂತ ನಮ್ಮ ಹಿಂದು ಧರ್ಮದಲ್ಲಿ ಮಾತ್ರ ನಾವು ಕಾಣಬಹುದಾಗಿದೆ



ಎಂದು ತಿಳಿಸಿದರು. ಲೋಕಕಂಟಕರನ್ನು ನಾಶವಾಗಿ ಶಿಷ್ಟರನ್ನು ರಕ್ಷಣೆ ಮಾಡಲು ತಾಯಿ ಲಲಿತಾಂಬೆ ಅವತಾರಿಸಿದ್ದಾಳೆ. ಪ್ರತಿನಿತ್ಯ ಲಲಿತಾ ತಾಯಿಯ ಉಪಾಸನೆ, ಸ್ಮರಣೆ ಮಾಡಿಕೊಂಡರೆ ಕಷ್ಟಗಳು ದೂರವಾಗಲಿದೆ ಎಂದು ಹೇಳಿದರು. ಇಂದು ನಮ್ಮ ದೇಶ ಧರ್ಮದಲ್ಲಿ, ಆರ್ಥಿಕವಾಗಿ, ಸಾಮಾಜಿಕವಾಗಿ ದೇಶದ ಭದ್ರತೆಯಿಂದ ನಮ್ಮ ದೇಶ ಪ್ರಗತಿಪರದಲ್ಲಿ ಮುಂಚೂಣಿಯಲ್ಲಿದೆ ಎಂದು ಅಭಿಪ್ರಾಯಪಟ್ಟರು.

ಶಾಸಕ ಸಿ.ಕೆ.ರಾಮಮೂರ್ತಿ ಮಾತನಾಡಿ, ನಾನು ಎಂಬುದು ಅಹಂಕಾರ, ನಾವೆಲ್ಲರು ಎಂದು ಕೂಡಿ ಬಾಳಬೇಕು. ಅದು ನಿಜವಾದ ಜೀವನದ ಅರ್ಥ. ಆದ್ದರಿಂದ ನಮ್ಮ ಜಯನಗರ ಕ್ಷೇತ್ರ ಮತ್ತು ನಾಡಿನ ಜನರ ಒಳಿತಿಗಾಗಿ ಸಾವಿರಾರು ಮಹಿಳೆಯರ ಸಮೂಹದಲ್ಲಿ ಶ್ರೀ ಲಲಿತಾ ಸಹಸ್ರನಾಮ ಪಠಣ ಮತ್ತು ಪೂಜಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು.

## ಕುಟುಂಬಗಳ ಪಾತ್ರ ಮಹತ್ವದ್ದಾಗಿದೆ

ಜಗತ್ತಿನಲ್ಲಿ ಶಾಂತಿ, ಸೌಹಾರ್ದ ಮತ್ತು ನೆಮ್ಮದಿಯ ಜೀವನ ನೆಲೆಸಬೇಕಾದರೆ ಕುಟುಂಬದ ಸದಸ್ಯರು ಪ್ರತಿನಿತ್ಯವೂ ಒಗ್ಗಟ್ಟಿನಿಂದ ಬದುಕುತ್ತಾ ಉತ್ತಮ ಮೌಲ್ಯಗಳನ್ನು ಅಳವಡಿಸಿಕೊಳ್ಳುವುದು ಅಗತ್ಯವಾಗಿದೆ. ಸಾಮೂಹಿಕ ಆಚರಣೆಗಳು ವರ್ಷಕ್ಕೊಮ್ಮೆ ನಡೆಯುವುದಷ್ಟೇ ಸಾಕಾಗುವುದಿಲ್ಲ. ಕುಟುಂಬಗಳು ಪ್ರತಿದಿನವೂ ಮಕ್ಕಳಲ್ಲಿ ಉತ್ತಮ ಸಂಸ್ಕಾರ, ನಡವಳಿಕೆ ಹಾಗೂ ವ್ಯಕ್ತಿತ್ವವನ್ನು ರೂಪಿಸುವ ಕಾರ್ಯದಲ್ಲಿ ತೊಡಗಿಸಿಕೊಳ್ಳಬೇಕು. ಸಮಾಜಕೇಂದ್ರಿತ ವಿಚಾರಗಳನ್ನು ಕಲಿಸುವಲ್ಲಿ ಕುಟುಂಬಗಳ ಪಾತ್ರ ಮಹತ್ವದ್ದಾಗಿದೆ. ಜತೆಗೆ ಪ್ರತಿಯೊಬ್ಬರೂ ತಮ್ಮ ಮನೆಗಳು ಸಮಾಜಕ್ಕೆ ಪೂರಕವಾಗುವ ಕಾರ್ಯಗಳಲ್ಲಿ ತೊಡಗಿಕೊಂಡಿವೆಯೇ ಎಂಬುದನ್ನು ಆತ್ಮಾವಲೋಕನ ಮಾಡಿಕೊಳ್ಳಬೇಕು. ವೈಯಕ್ತಿಕ ಸ್ವಾರ್ಥವನ್ನು ಬದಿಗೊತ್ತಿ ಸಮಾಜದ ಒಳಿತಿಗಾಗಿ ತಾನು ಏನು ಮಾಡಬಹುದು ಎಂಬ ಮನೋಭಾವವನ್ನು ಬೆಳೆಸಿಕೊಂಡಾಗ ದೇಶವು ಜಗತ್ತಿನಲ್ಲೇ ಶ್ರೇಷ್ಠ ಸ್ಥಾನವನ್ನು ಅಲಂಕರಿಸಲಿದೆ ಎಂದು ಆರ್‌ಎಸ್‌ಎಸ್‌ನ ದಕ್ಷಿಣ ಮಧ್ಯ ಕ್ಷೇತ್ರೀಯ ಕಾರ್ಯವಾಹ ನಾ.ತಿಪ್ಪೇಸ್ವಾಮಿ ಅಭಿಪ್ರಾಯಪಟ್ಟರು.

> **ಲಲಿತಾಂಬೆಯ ಆರಾಧನೆಯಿಂದ ಮತ್ತು ಸುಬುಧೇಂದ್ರತೀರ್ಥ ಸ್ವಾಮೀಜಿ ಅವರ ಆಶೀರ್ವಾದ ಮಾರ್ಗದರ್ಶನ ಎಲ್ಲರಿಗೂ ಲಭಿಸಬೇಕು. ದೇಶ ಮತ್ತು ಸಂಸ್ಕೃತಿ ಸಂಪ್ರದಾಯ ಉಳಿಸುವಲ್ಲಿ ಮಹಿಳೆಯರ ಪಾತ್ರ ಪ್ರಮುಖ.**
> ■ ಬಿ.ವೈ. ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

## ಇಂದು ನಗರದಲ್ಲಿ...

- ರಕ್ಷಾ ಫೌಂಡೇಷನ್ ಜಯನಗರ ಸಂಸ್ಥೆ ವತಿಯಿಂದ ಉಚಿತ ನೋಟ್ ಪುಸ್ತಕ ವಿತರಣೆ
- ಸ್ಥಳ: ಚಂದ್ರಗುಪ್ತ ಮೌರ್ಯ ಆಟದ ಮೈದಾನ, ಜಯನಗರ
- ಬೆಳಗ್ಗೆ 9.30

- ಭಾರತೀಯ ಯಂತ್ರ ಕ್ರೀಡಾ ಮಹೋತ್ಸವ, ಸ್ಥಳ : ಬೇಗಲ್ ಬಾಸ್ಕೆಟ್ ಬಾಲ್
- ಸ್ಥಳ: ಮಲ್ಲೇಶ್ವರ 15ನೆ ಅಡ್ಡರಸ್ತೆ
- ಬೆಳಗ್ಗೆ 9.30

- ಪಿಎಂ ಕಿಸಾನ್ ಉತ್ಸವ ದಿವಸ್
- ಸ್ಥಳ: ಐಸಿಎಆರ್ ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ
- ಮಧ್ಯಾಹ್ನ 2.30

- ಮನೆಯಂಗಳದಲ್ಲಿ ಮಾತುಕತೆ
- ಸ್ಥಳ: ನಯನ ರಂಗಮಂದಿರ
- ಸಂಜೆ 4

### ಶನಿವಾರದ ಪಂದ್ಯಗಳು

ಬ್ರೆಜಿಲ್-ಹೈಟಿ, (ಬೆಳಗ್ಗೆ 6:00)
ಟರ್ಕಿ-ಪರಾಗ್ವೆ, (ಬೆಳಗ್ಗೆ 8:30)
ನೆದರ್ಲೆಂಡ್ಸ್-ಸ್ವೀಡನ್, (ರಾತ್ರಿ 10:30)
ಜರ್ಮನಿ-ಐವರಿ ಕೋಸ್ಟ್, (ರಾತ್ರಿ 1:30)

## ಕಿರುಸುದ್ದಿ

### ಹ್ಯಾಟ್ರಿಕ್ ಗೆಲುವು ಭಾರತದ ಗುರಿ

• **ಚೆನ್ನೈ:** ಎರಡು ಪಂದ್ಯಗಳಲ್ಲಿ ಗೆಲುವು ಸಾಧಿಸುವ ಮೂಲಕ ಸರಣಿ ವಶಪಡಿಸಿಕೊಂಡಿರುವ ಭಾರತ ತಂಡವು ಮೂರನೇ ಹಾಗೂ ಸರಣಿಯ ಅಂತಿಮ ಪಂದ್ಯದಲ್ಲಿ ಅಫ್ಘಾನಿಸ್ತಾನ ತಂಡವನ್ನು ಮಣಿಸಿ ವೈಟ್‌ವಾಶ್ ಸಾಧಿಸುವುದಕ್ಕೆ ಸಿದ್ಧವಾಗಿದೆ. ಶುಭಮನ್ ಗಿಲ್ ನೇತೃತ್ವದಲ್ಲಿ ಆಡುತ್ತಿರುವ ಭಾರತ ಕಳೆದ ಎರಡು ಪಂದ್ಯಗಳನ್ನು ಸರಳವಾಗಿ ಗೆಲುವು ಸಾಧಿಸಿದೆ. ಮೊದಲ ಪಂದ್ಯಕ್ಕೆ ಮಳೆ ಅಡ್ಡಿಯಾದರೂ ಭಾರತ 25 ಓವರ್‌ಗಳ ಪಂದ್ಯದಲ್ಲಿ ಜಯಸಿತ್ತು. ಎರಡನೇ ಪಂದ್ಯ ಲಖನೌನಲ್ಲಿ ನಡೆದಾಗ 50 ಓವರ್ ಪಂದ್ಯದಲ್ಲೂ ಸರಳವಾಗಿ ಗೆಲುವು ಸಾಧಿಸಿತ್ತು. ಹ್ಯಾಟ್ರಿಕ್ ಗೆಲುವಿಗಾಗಿ ಶ್ರಮಿಸಲಿರುವ ಭಾರತ ತಂಡವು ಗೆಲುವಿನ ವಿಶ್ವಾಸದಲ್ಲಿದೆ. ರೋಹಿತ್ ಶರ್ಮಾ, ಗಿಲ್, ಕಿಶನ್ ಯಥಾಪ್ರಕಾರ ಉತ್ತಮ ಲಯದಲ್ಲಿದ್ದಾರೆ. ಬ್ಯಾಟಿಂಗ್ ವಿಭಾಗವನ್ನು ಶ್ರೇಯಸ್ ಅಯ್ಯರ್ ಮತ್ತು ರಾಹುಲ್ ಗಟ್ಟಿಗೊಳಿಸಿದ್ದಾರೆ. ಸರಣಿಯುದ್ದಕ್ಕೂ ಉತ್ತಮ ಬೌಲಿಂಗ್ ಮಾಡಿರುವ ಗುರ್ನೂರ್ ಮೇಲೆ ನಿರೀಕ್ಷೆಗಳು ಹೆಚ್ಚಿವೆ.

**ರಾಣಾ ಕಂಬ್ಯಾಕ್:** ಗಾಯದಿಂದಾಗಿ ಸ್ಪರ್ಧಾತ್ಮಕ ಕ್ರಿಕೆಟ್‌ನಿಂದ ದೂರ ಉಳಿದಿದ್ದ ಹರ್ಷಿತ್ ರಾಣಾ ಮತ್ತೆ ಕಂಬ್ಯಾಕ್ ಮಾಡುವುದಕ್ಕೆ ಸಿದ್ಧರಾಗಿದ್ದು, ಮೂರನೇ ಪಂದ್ಯಕ್ಕೆ ಅವರನ್ನು ಆಯ್ಕೆ ಮಾಡಲಾಗಿದೆ. ಗಾಯದ ಕಾರಣಗಳಿಂದಾಗಿ ಸ್ಪರ್ಧಾತ್ಮಕ ಕ್ರಿಕೆಟ್, ಐಪಿಎಲ್‌ನಿಂದಲೂ ದೂರ ಉಳಿದಿದ್ದ ಅವರು ಕೊನೆಯ ಪಂದ್ಯದಲ್ಲಿ ಕಣಕ್ಕಿಳಿಯುವ ನಿರೀಕ್ಷೆಯಿದೆ.

**ಪಂದ್ಯದ ವಿವರ:**
**ಯಾವಾಗ: ಶನಿವಾರ, ಎಲ್ಲಿ: ಚೆನ್ನೈ**
**ಸಮಯ: ಮಧ್ಯಾಹ್ನ 1:30**

### ಭಾರತಕ್ಕೆ ಜರ್ಮನ್ ಶಾಕ್

• **ಹೊಸದಿಲ್ಲಿ:** ಗುರುವಾರ ಆಂಟ್ವೆರ್ಪ್‌ನಲ್ಲಿ ನಡೆದ ಎಫ್‌ಐಎಚ್ ಪ್ರೊ ಲೀಗ್‌ನಲ್ಲಿ ಭಾರತ ತಂಡವು ಒಂದು ಗೋಲಿನ ಮುನ್ನಡೆಯನ್ನು ಕಳೆದುಕೊಂಡು ಹಾಲಿ ವಿಶ್ವ ಚಾಂಪಿಯನ್ ಜರ್ಮನಿ ವಿರುದ್ಧ 1-2 ಅಂತರದ ಸೋಲನ್ನು ಅನುಭವಿಸಿತು.ಮೊದಲಾರ್ಧದಲ್ಲಿ ಗೋಲು ರಹಿತ ಪಂದ್ಯದ ನಂತರ, 38 ನೇ ನಿಮಿಷದಲ್ಲಿ ಜುಗ್ರಾಜ್ ಸಿಂಗ್ ಪೆನಾಲ್ಟಿ ಕಾರ್ನರ್ ಅನ್ನು ಗೋಲ್ ಆಗಿ ಪರಿವರ್ತಿಸುವ ಮೂಲಕ ಭಾರತವು ಡೆಡ್‌ಲಾಕ್ ಅನ್ನು ಮುರಿಯಿತು. ಬುಧವಾರದ ಅದ್ಭುತ 3-1 ಗೆಲುವಿನ ನಂತರ ಭಾರತವು ಜರ್ಮನಿಯ ವಿರುದ್ಧ ಸತತ ಎರಡನೇ ಗೆಲುವಿನ ಹಾದಿಯಲ್ಲಿ ಸಾಗಿತು. ಆದರೆ ಜರ್ಮನ್ನರು ಕಂಬ್ಯಾಕ್ ಮಾಡಿ ಗೆಲುವು ಸಾಧಿಸಿದರು.

### ಶ್ರೇಯಾಂಕಾ ಹೊರಕ್ಕೆ, ಪ್ರೇಮಾ ಬದಲಿ ಆಟಗಾರ್ತಿ

• **ಲೀಡ್ಸ್:** ಸ್ಪಿನ್ನರ್ ಶ್ರೇಯಾಂಕಾ ಪಾಟೀಲ್ ಅವರು ಗಾಯದಿಂದಾಗಿ ಪ್ರತಿಷ್ಠಿತ ಮಹಿಳಾ ಟಿ20 ವಿಶ್ವಕಪ್ ಪಂದ್ಯಾವಳಿಯಿಂದಲೇ ಹೊರಬಿದ್ದಿದ್ದಾರೆ. ಅವರ ಬದಲಿಗೆ ಪ್ರೇಮಾ ರಾವತ್ ಭಾರತ ತಂಡವನ್ನು ಸೇರಿಕೊಳ್ಳಲು ಸಿದ್ಧರಾಗಿದ್ದಾರೆ. ತಮ್ಮ ಕರಾರುವಾಕ್ ಬೌಲಿಂಗ್ ದಾಳಿಯೊಂದಿಗೆ ಪಂದ್ಯಗಳ ಮೇಲೆ ಇಂಪ್ಯಾಕ್ಟ್ ಮಾಡುತ್ತಾ ತಂಡದ ಪ್ರಮುಖ ಆಟಗಾರ್ತಿ ಅನಿಸಿಕೊಂಡಿದ್ದ ಶ್ರೇಯಾಂಕಾ ಪಾಟೀಲ್ ನೆದರ್ಲೆಂಡ್ಸ್ ವಿರುದ್ಧ ನಡೆದ ಪಂದ್ಯದಲ್ಲಿ ಗಾಯಗೊಂಡರು. ಬೌಲಿಂಗ್ ಮಾಡುವ ವೇಳೆ ಗಾಯಗೊಂಡ ಅವರು ಚೇತರಿಸಿಕೊಳ್ಳಲು ಸಮಯ ತೆಗೆದುಕೊಳ್ಳಲಿದ್ದಾರೆ. ಅವರ ಬದಲಿಗೆ ಹಿಂದೆಯೂ ಆಡಿದ ಪ್ರೇಮಾ ರಾವತ್ ಅವರನ್ನು ತಂಡದಲ್ಲಿ ಆಯ್ಕೆ ಮಾಡಲಾಗಿದೆ. ಬಿಸಿಸಿಐ ಮನವಿಯನ್ನು ಐಸಿಸಿ ಪುರಸ್ಕರಿಸಿದೆ. ಮಹಿಳಾ ಪ್ರೀಮಿಯರ್ ಲೀಗ್ ಪಂದ್ಯಾವಳಿ ಮತ್ತು ರೈಸಿಂಗ್ ವಿಶ್ವಾಕಪ್‌ನಲ್ಲಿ ಮಿಂಚಿರುವ ಅವರು ಮುಂದಿನ ದ.ಆಫ್ರಿಕಾ ವಿರುದ್ಧದ ಪಂದ್ಯಕ್ಕೂ ಮುನ್ನವೇ ತಂಡ ಸೇರಿಕೊಳ್ಳಲಿದ್ದಾರೆ.

### ರಗ್ಬಿ: ಮುಂಬೈ, ದೆಹಲಿ ತಂಡಗಳಿಗೆ ಜಯ

• **ಹೈದರಾಬಾದ್:** ಇಲ್ಲಿನ ಗಚಿಬೌಲಿನ ಗಂಚಿ ಮೋಹನ ಚಂದ್ರ ಬಾಲಯೋಗಿ ಅಥ್ಲೆಟಿಕ್ ಕ್ರೀಡಾಂಗಣದಲ್ಲಿ ನಡೆದ ರಗ್ಬಿ ಪ್ರೀಮಿಯರ್ ಲೀಗ್ ಪಂದ್ಯಾವಳಿಯ ಪಂದ್ಯಗಳಲ್ಲಿ ಮುಂಬೈ ಡ್ರೀಮರ್ಸ್ ತಂಡವು ದೆಹಲಿ ರೆಡ್ಜ್ ವಿರುದ್ಧ ಸುಲಭ ಜಯ ಸಾಧಿಸಿ ಅಂಕಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿತು. ಮಹಿಳಾ ವಿಭಾಗದಲ್ಲಿ ಚೆನ್ನೈ ಬುಲ್ಸ್ ತಂಡವು ದೆಹಲಿ ರೆಡ್ಜ್ ವಿರುದ್ಧ ರೋಚಕ ಗೆಲುವು ದಾಖಲಿಸಿತು. ಮುಂಬೈ ಡ್ರೀಮರ್ಸ್ 31-14ರಿಂದ ದೆಹಲಿ ರೆಡ್ಜ್‌ನ್ನು ಮಣಿಸಿತು. ಮಹಿಳೆಯರ ವಿಭಾಗದಲ್ಲಿ ಚೆನ್ನೈ ಬುಲ್ಸ್ 31-27ರಿಂದ ದೆಹಲಿ ರೆಡ್ಜ್‌ನ್ನು ಮಣಿಸಿತು.

ಆತಿಥ್ಯ ತಂಡಕ್ಕೆ ಸತತ ಎರಡನೇ ಗೆಲುವು | 32ರ ಸುತ್ತಿಗೆ ಲಗ್ಗೆ

# ನಾಕೌಟ್‌ಗೇರಿದ ಮೆಕ್ಸಿಕೊ!

• **ಗ್ವಾಡಲಜಾರಾ (ಮೆಕ್ಸಿಕೊ):** ಆತಿಥೇಯ ಮೆಕ್ಸಿಕೊ ತಂಡ ಫಿಫಾ ವಿಶ್ವಕಪ್ 2026ರಲ್ಲಿ ತನ್ನ ಗೆಲುವಿನ ಓಟವನ್ನು ಮುಂದುವರಿಸಿದ್ದು, ದಕ್ಷಿಣ ಕೊರಿಯಾವನ್ನು 1-0 ಗೋಲುಗಳಿಂದ ಮಣಿಸಿ ನಾಕೌಟ್ ಹಂತ ಪ್ರವೇಶಿಸಿದ ಮೊದಲ ತಂಡವಾಗಿದೆ.

ದೊಡ್ಡ ಸಂಖ್ಯೆಯ ಪ್ರೇಕ್ಷಕರ ಸಮ್ಮುಖದಲ್ಲಿ ನಡೆದ ಪಂದ್ಯದಲ್ಲಿ ಎರಡೂ ತಂಡಗಳು ಮೊದಲಾರ್ಧದಲ್ಲಿ ಪರಿಣಾಮಕಾರಿ ದಾಳಿ ನಡೆಸಲು ವಿಫಲವಾದವು. ಗೋಲು ಅವಕಾಶಗಳು ವಿರಳವಾಗಿದ್ದ ಕಾರಣ ಮೊದಲ 45 ನಿಮಿಷ ಗೋಲುರಹಿತವಾಗಿತ್ತು.

ಆದರೆ ದ್ವಿತೀಯಾರ್ಧ ಆರಂಭವಾದ ಐದು ನಿಮಿಷ ನಂತರ 50ನೇ ನಿಮಿಷದಲ್ಲಿ ದಕ್ಷಿಣ ಕೊರಿಯಾ ಗೋಲ್‌ಕೀಪರ್ ಕಿಮ್ ಸೆಯುಂಗ್-ಗ್ಯು ಹಾಗೂ ರಕ್ಷಣಾ ಆಟಗಾರ ಲೀ ಜೆ-ಹ್ಯುಕ್ ನಡುವೆ ಉಂಟಾದ ಗೊಂದಲದಿಂದ ಚೆಂಡು ಕೈತಪ್ಪಿತು. ಅದನ್ನು ಸದುಪಯೋಗಪಡಿಸಿಕೊಂಡ ಲೂಯಿಸ್ ರೋಮೊ ಖಾಲಿ ಗೋಲ್‌ಪೋಸ್ಟ್‌ಗೆ ಚೆಂಡು ತಳ್ಳಿ ಮೆಕ್ಸಿಕೊಗೆ ಮುನ್ನಡೆ ತಂದುಕೊಟ್ಟರು.

ಗೋಲು ಬಿಟ್ಟ ನಂತರ ದಕ್ಷಿಣ ಕೊರಿಯಾ ಆಕ್ರಮಣಕಾರಿ ಆಟಕ್ಕೆ ಮೊರೆ ಹೋದರೂ, ಮೆಕ್ಸಿಕೊ ಗೋಲ್‌ಕೀಪರ್ ರೌಲ್ ರಾಂಗೆಲ್ ಗೋಡೆ ರೀತಿಯಲ್ಲಿ ನಿಂತರು. 87ನೇ ನಿಮಿಷದಲ್ಲಿ ಚೋ ಗುಯೆ-ಸುಂಗ್ ಅವರ ಹೆಡರ್ ಅನ್ನು ಅದ್ಭುತವಾಗಿ ತಡೆದ ರಾಂಗೆಲ್, ಅದರ ತಕ್ಷಣವೇ ಯಾಂಗ್ ಹ್ಯುನ್-ಜುನ್ ಅವರ ರೀಬೌಂಡ್ ಪ್ರಯತ್ನವನ್ನು ವಿಫಲಗೊಳಿಸಿ ತಂಡದ ಗೆಲುವು ಖಚಿತಪಡಿಸಿದರು.

**ಅಗ್ರಸ್ಥಾನದೊಂದಿಗೆ ನಾಕೌಟ್‌ಗೆ ಲಗ್ಗೆ:** ಈ ಗೆಲುವಿನೊಂದಿಗೆ ಮೆಕ್ಸಿಕೊ ಎರಡು ಪಂದ್ಯಗಳಿಂದ ಆರು ಅಂಕಗಳನ್ನು ಪಡೆದು ಎ ಗುಂಪಿನಲ್ಲಿ ಅಗ್ರಸ್ಥಾನವನ್ನು ಭದ್ರಪಡಿಸಿಕೊಂಡಿದೆ. 2022ರ ವಿಶ್ವಕಪ್‌ನಲ್ಲಿ ಗುಂಪು ಹಂತದಲ್ಲೇ ಹೊರಬಿದ್ದಿದ್ದ ಮೆಕ್ಸಿಕೊ, ಈ ಬಾರಿ ತವರಿನ ಅಭಿಮಾನಿಗಳ ಬೆಂಬಲದೊಂದಿಗೆ ಭರ್ಜರಿ ಪುನರಾಗಮನ ಮಾಡಿದೆ. ಮೊದಲ ಪಂದ್ಯದಲ್ಲೇ ಆಫ್ರಿಕಾ ವಿರುದ್ಧ ಗೆದ್ದಿದ್ದ ಮೆಕ್ಸಿಕೊ ಈ ಗೆಲುವಿನೊಂದಿಗೆ ನಾಕೌಟ್ ಗೇರಿದೆ.

- ಲೂಯಿಸ್ ರೋಮೊ (50ನೇ ನಿ.) ಮೆಕ್ಸಿಕೊ
- ಪಂದ್ಯಶ್ರೇಷ್ಠ: ರೌಲ್ ರಾಂಗೆಲ್ (ಮೆಕ್ಸಿಕೊ)
- 87ನೇ ನಿಮಿಷದಲ್ಲಿ ಸತತ ಎರಡು ಅದ್ಭುತ ಸೇವ್‌ಗಳ ಮೂಲಕ ತಂಡದ ಗೆಲುವು ಉಳಿಸಿದರು.




# ಸ್ವಿಟ್ಜರ್ಲೆಂಡ್ ಜಯಭೇರಿ

• **ಇಂಗಲ್‌ವುಡ್ (ಅಮೆರಿಕ):** ಬದಲಿ ಆಟಗಾರ ಜೋಹಾನ್ ಮಂಜಾಂಬಿ ಅವರ ಮಿಂಚಿನ ಪ್ರದರ್ಶನದ ನೆರವಿನಿಂದ ಸ್ವಿಟ್ಜರ್ಲೆಂಡ್ ತಂಡವು ಬೋಸ್ನಿಯಾ-ಹರ್ಜೆಗೋವಿನಾವನ್ನು 4-1 ಅಂತರದಿಂದ ಮಣಿಸಿ ಬಿ ಗುಂಪಿನಲ್ಲಿ ತನ್ನ ಅಗ್ರಸ್ಥಾನವನ್ನು ಭದ್ರಪಡಿಸಿಕೊಂಡಿತು.ಸೋಫಿ ಸ್ಟೇಡಿಯಂನಲ್ಲಿ ನಡೆದ ಪಂದ್ಯದಲ್ಲಿ ಸ್ವಿಟ್ಜರ್ಲೆಂಡ್ ಹೆಚ್ಚಿನ ಸಮಯ ಚೆಂಡಿನ ಮೇಲಿನ ಹಿಡಿತ ಸಾಧಿಸಿದ್ದರೂ, ಬೋಸ್ನಿಯಾದ ಹೋರಾಟದಿಂದಾಗಿ ಗೋಲುಗಳಿಗಾಗಿ 74ನೇ ನಿಮಿಷದವರೆಗೆ ಕಾಯಬೇಕಾಯಿತು.

**ಸ್ವಿಟ್ಜರ್ಲೆಂಡ್ ಪ್ರಾಬಲ್ಯ:** ಪಂದ್ಯದಲ್ಲಿ ಬದಲಿಯಾಗಿ ಕಣಕ್ಕಿಳಿದ ಕೇವಲ ಮೂರು ನಿಮಿಷಗಳಲ್ಲೇ ಜೋಹಾನ್ ಮಂಜಾಂಬಿ ಅದ್ಭುತ ವಾಲಿ ಮೂಲಕ ಗೋಲು ಬಾರಿಸಿ ಸ್ವಿಟ್ಜರ್ಲೆಂಡ್‌ಗೆ ಮುನ್ನಡೆ ತಂದುಕೊಟ್ಟರು. ಈ ಗೋಲು ವಿಶ್ವಕಪ್‌ನಲ್ಲಿ ಅವರ ಮೊದಲ ಗೋಲಾಗಿತ್ತು. ಪಂದ್ಯದ ತಿರುವು 80ನೇ ನಿಮಿಷದಲ್ಲಿ ಎದುರಾಯಿತು. ಬೋಸ್ನಿಯಾದ ತಾರಿಕ್ ಮುಹರೆಮೊವಿಕ್ ಅಪಾಯಕಾರಿ ಟ್ಯಾಕಲ್‌ಗೆ ಕೆಂಪು ಕಾರ್ಡ್ ಪಡೆದು ಹೊರನಡೆದ ಕಾರಣ ತಂಡ 10 ಆಟಗಾರರೊಂದಿಗೆ ಉಳಿಯಬೇಕಾಯಿತು.

ಈ ಅವಕಾಶವನ್ನು ಸದುಪಯೋಗಪಡಿಸಿಕೊಂಡ ಸ್ವಿಸ್ ಪಡೆ 84ನೇ ನಿಮಿಷದಲ್ಲಿ ರೂಬೆನ್ ವರ್ಗಾಸ್ ಮೂಲಕ ಎರಡನೇ ಗೋಲು ಗಳಿಸಿತು. ನಂತರ 90ನೇ ನಿಮಿಷದಲ್ಲಿ ವರ್ಗಾಸ್ ನೀಡಿದ ಪಾಸ್ ಅನ್ನು ಮತ್ತೊಮ್ಮೆ ಗೋಲಾಗಿ ಪರಿವರ್ತಿಸಿದ ಮಂಜಾಂಬಿ ತಮ್ಮ ಎರಡನೇ ಗೋಲು ದಾಖಲಿಸಿದರು.

ಹೆಚ್ಚುವರಿ ಸಮಯದಲ್ಲಿ ಬೋಸ್ನಿಯಾದ ಎರ್ಮಿನ್ ಮಾಹ್ಮಿಕ್ ಒಂದು ಗೋಲು ಬಾರಿಸಿ ಅಂತರವನ್ನು ಕಡಿಮೆ ಮಾಡಿದರೂ, ಪಂದ್ಯದ ಕೊನೆಯ ಕಿಕ್‌ನಲ್ಲಿ ನಾಯಕ ಗ್ರಾನಿಟ್ ಶಾಕಾ ಪೆನಾಲ್ಟಿ ಗೋಲಿನ ಮೂಲಕ ಸ್ವಿಟ್ಜರ್ಲೆಂಡ್‌ಗೆ 4-1ರ ಭರ್ಜರಿ ಜಯ ತಂದುಕೊಟ್ಟರು.

- ಸ್ವಿಟ್ಜರ್ಲೆಂಡ್ 4-1 ಬೋಸ್ನಿಯಾ-ಹರ್ಜೆಗೋವಿನಾ ಸ್ವಿಟ್ಜರ್ಲೆಂಡ್
- ಜೋಹಾನ್ ಮಂಜಾಂಬಿ (74, 90 ನೇ ನಿ.)
- ರೂಬೆನ್ ವರ್ಗಾಸ್ (84ನೇ ನಿ.)
- ಗ್ರಾನಿಟ್ ಶಾಕಾ (90ನೇ ನಿ.)
- ಬೋಸ್ನಿಯಾ-ಹರ್ಜೆಗೋವಿನಾ: ಎರ್ಮಿನ್ ಮಾಹ್ಮಿಕ್ (90ನೇ ನಿ.)

- ಪಂದ್ಯಶ್ರೇಷ್ಠ ಜೋಹಾನ್ ಮಂಜಾಂಬಿ (ಸ್ವಿಟ್ಜರ್ಲೆಂಡ್)
- ಬದಲಿಯಾಗಿ ಕಣಕ್ಕಿಳಿದು ಎರಡು ಗೋಲು ಬಾರಿಸಿ ಪಂದ್ಯದ ಹೀರೋ ಎನಿಸಿದರು.

## ದಕ್ಷಿಣ ಆಫ್ರಿಕಾ-ಚೆಕ್ ರಿಪಬ್ಲಿಕ್ 1-1 ಡ್ರಾ

• **ಅಟ್ಲಾಂಟಾ:** ಟೆಬೊಹೋ ಮೊಕೊಯೆನಾ ಅವರ ನಿರ್ಣಾಯಕ ಪೆನಾಲ್ಟಿ ಗೋಲಿನ ನೆರವಿನಿಂದ ದಕ್ಷಿಣ ಆಫ್ರಿಕಾ ತಂಡವು ಫಿಫಾ ವಿಶ್ವಕಪ್ 2026ರ ಗ್ರೂಪ್ ಎ ಪಂದ್ಯದಲ್ಲಿ ಚೆಕ್ ರಿಪಬ್ಲಿಕ್ ವಿರುದ್ಧ 1-1 ಗೋಲುಗಳ ಸಮಬಲ ಸಾಧಿಸಿತು.ಗುರುವಾರ ತಡರಾತ್ರಿ ನಡೆದ ಪಂದ್ಯದಲ್ಲಿ ಚೆಕ್ ರಿಪಬ್ಲಿಕ್ ಆರಂಭದಲ್ಲೇ ಮುನ್ನಡೆ ಸಾಧಿಸಿತು. ಕೇವಲ 6ನೇ ನಿಮಿಷದಲ್ಲಿ ಮಿಚಲ್ ಸಡಿಲೆಕ್ ಗೋಲು ಬಾರಿಸಿ ಯುರೋಪಿಯನ್ ತಂಡಕ್ಕೆ 1-0 ಮುನ್ನಡೆ ತಂದುಕೊಟ್ಟರು. ಅಲೆಕ್ಸಾಂಡರ್ ಸೊಯ್ಕಾ ನೀಡಿದ ಪಾಸ್ ಅನ್ನು ಸಡಿಲೆಕ್ ಗೋಲಾಗಿ ಪರಿವರ್ತಿಸಿದರು. 83ನೇ ನಿಮಿಷದಲ್ಲಿ ಪೆನಾಲ್ಟಿ ತೆಗೆದುಕೊಂಡ ಟೆಬೊಹೋ ಮೊಕೊಯೆನಾ ಚೆಂಡನ್ನು ಗೋಲ್‌ಕೀಪರ್ ಮಟೆಜ್ ಕೋವಾರ್ ಅವರ ಕೈಗೆಟುಕದಂತೆ ಬಲೆಗೆ ಸೇರಿಸಿ ಸಮಬಲ ಸಾಧಿಸಿದರು.

**ಗೋಲುಗಳ ವಿವರ**

- ಚೆಕ್ ರಿಪಬ್ಲಿಕ್: ಮಿಚಲ್ ಸಡಿಲೆಕ್ (6ನೇ ನಿ.)
- ದಕ್ಷಿಣ ಆಫ್ರಿಕಾ: ಟೆಬೊಹೋ ಮೊಕೊಯೆನಾ (83ನೇ ನಿ. ಪೆನಾಲ್ಟಿ)
- ದಕ್ಷಿಣ ಆಫ್ರಿಕಾ ವಿಶ್ವಕಪ್‌ನಲ್ಲಿ ತನ್ನ ಆಸೆಯನ್ನು ಜೀವಂತವಾಗಿರಿಸಿಕೊಂಡಿತು.
- ಚೆಕ್ ರಿಪಬ್ಲಿಕ್ ಎರಡು ಪಂದ್ಯಗಳ ಬಳಿಕವೂ ಮೊದಲ ಗೆಲುವಿಗಾಗಿ ಕಾಯುತ್ತಿದೆ.

**ಪಂದ್ಯಶ್ರೇಷ್ಠ:**
ಟೆಬೊಹೋ ಮೊಕೊಯೆನಾ (ದಕ್ಷಿಣ ಆಫ್ರಿಕಾ)


## ಡೇವಿಡ್ ಹ್ಯಾಟ್ರಿಕ್, ಕೆನಡಾಗೆ ಐತಿಹಾಸಿಕ ಜಯ

ಕತಾರ್ ವಿರುದ್ಧ **6-0** ಗೆಲುವು

• **ವ್ಯಾಂಕೂವರ್:** ಗ್ರೂಪ್ ಬಿ ಪಂದ್ಯದಲ್ಲಿ ಆತಿಥೇಯ ಕೆನಡಾ ತಂಡ ಕತಾರ್ ವಿರುದ್ಧ 6-0 ಗೋಲುಗಳ ಭರ್ಜರಿ ಜಯ ಸಾಧಿಸಿ ವಿಶ್ವಕಪ್ ಇತಿಹಾಸದ ಮೊದಲ ಗೆಲುವು ದಾಖಲಿಸಿತು. ಈ ಗೆಲುವಿನೊಂದಿಗೆ ಕೆನಡಾ ನಾಕೌಟ್ ಹಂತದತ್ತ ಬಹುತೇಕ ತನ್ನ ಸ್ಥಾನವನ್ನು ಖಚಿತಪಡಿಸಿ ಕೊಂಡಿದೆ.

ಆರಂಭದಿಂದಲೇ ಆಕ್ರಮಣಕಾರಿ ಆಟ ಪ್ರದರ್ಶಿಸಿದ ಕೆನಡಾ 16ನೇ ನಿಮಿಷದಲ್ಲಿ ಕೈಲ್ ಲ್ಯಾರಿನ್ ಗೋಲಿನ ಮೂಲಕ ಮುನ್ನಡೆ ಸಾಧಿಸಿತು. ಜೋನಾಥನ್ ಡೇವಿಡ್ ಅವರ ವಾಲಿಯನ್ನು ಕತಾರ್ ಗೋಲ್‌ಕೀಪರ್ ಮಹ್ಮೂದ್ ಅಬುನಾದಾ ತಡೆದರೂ, ರೀಬೌಂಡ್ ಆದ ಚೆಂಡನ್ನು ಲ್ಯಾರಿನ್ ಗೋಲಾಗಿ ಪರಿವರ್ತಿಸಿದರು.

29ನೇ ನಿಮಿಷದಲ್ಲಿ ಡೇವಿಡ್ ಅದ್ಭುತ ಬಲವಾದದ ವಾಲಿ ಮೂಲಕ ಅಂತರವನ್ನು 2-0ಕ್ಕೆ ಹೆಚ್ಚಿಸಿದರು. ಕತಾರ್‌ಗೆ 33ನೇ ನಿಮಿಷದಲ್ಲಿ ದೊಡ್ಡ ಆಘಾತ ಎದುರಾಯಿತು. ತಾಜೋನ್ ಬುಕಾನನ್ ವಿರುದ್ಧ ಅಪಾಯಕಾರಿ ಟ್ಯಾಕಲ್ ಮಾಡಿದ ಹೋಮನ್ ಅಹ್ಮದ್ ಮೊದಲು ಹಳದಿ ಕಾರ್ಡ್ ಪಡೆದರೂ, VAR ಪರಿಶೀಲನೆಯ ಬಳಿಕ ಅದು ಕೆಂಪು ಕಾರ್ಡ್‌ಗೆ ಪರಿವರ್ತನೆಯಾಯಿತು. ಮೊದಲಾರ್ಧದ ಹೆಚ್ಚುವರಿ ಸಮಯದಲ್ಲಿ ಡೇವಿಡ್ ಮತ್ತೊಮ್ಮೆ ಗೋಲು ಬಾರಿಸಿ ಕೆನಡಾಗೆ 3-0 ಮುನ್ನಡೆ ನೀಡಿದರು. ದ್ವಿತೀಯಾರ್ಧ ಆರಂಭದಲ್ಲಿ ಕೆನಡಾದ ಇಸ್ಮಾಯೆಲ್ ಕೋನೆ ಗಂಭೀರ ಗಾಯಕ್ಕೆ ಒಳಗಾದರು. ಈ ಘಟನೆಯ ಕಾರಣವಾದ ಅಸ್ಸಿಂ ಮಡಿಬೋ ನೇರ ಕೆಂಪು ಕಾರ್ಡ್ ಪಡೆದು ಹೊರನಡೆದ ಪರಿಣಾಮ ಕತಾರ್ ಕೇವಲ 9 ಆಟಗಾರರೊಂದಿಗೆ ಮುಂದುವರಿಯಬೇಕಾಯಿತು. 64ನೇ ನಿಮಿಷದಲ್ಲಿ ಬದಲಿ ಆಟಗಾರ ನಾಥನ್ ಸಾಲಿಬಾ ಫ್ರೀ ಕಿಕ್ ಮೂಲಕ ಗೋಲು ದಾಖಲಿಸಿದರು. 75ನೇ ನಿಮಿಷದಲ್ಲಿ ಮೊಹಮ್ಮದ್ ಮನಾಯಿ ಆಕರ್ಷಕ ಗೋಲು ಬಾರಿಸಿದರೆ, ಹೆಚ್ಚುವರಿ ಸಮಯದಲ್ಲಿ ಜೋನಾಥನ್ ಡೇವಿಡ್ ಹ್ಯಾಟ್ರಿಕ್ ಪೂರ್ಣಗೊಳಿಸಿ ಕೆನಡಾದ ಐತಿಹಾಸಿಕ ಜಯಕ್ಕೆ ಮೆರುಗು ತಂದರು.



**ಗೋಲುಗಳ ವಿವರ**
**ಕೆನಡಾ:**
- ಕೈಲ್ ಲ್ಯಾರಿನ್ (16ನೇ ನಿ.)
- ಡೇವಿಡ್ (29ನೇ, 45+1, 90+ನೇ ನಿ.)
- ನಾಥನ್ ಸಾಲಿಬಾ (64ನೇ ನಿ.)
- ಮೊಹಮ್ಮದ್ ಮನಾಯಿ (75ನೇ ನಿ.)


**ಕೆಂಪು ಕಾರ್ಡ್**
- ಹೋಮನ್ ಅಹ್ಮದ್ (ಕತಾರ್, 33ನೇ ನಿ.)
- ಅಸ್ಸಿಂ ಮಡಿಬೋ (ಕತಾರ್, 51ನೇ ನಿ.)

ಲಖನೌಗೆ ಕುಲ್ದೀಪ್ ಸೇರುವ ಸಾಧ್ಯತೆ

## ದಿಲ್ಲಿಗೆ ಪಂತ್ ವಾಪಸ್?

• **ಹೊಸದಿಲ್ಲಿ:** ವಿಕೆಟ್-ಕೀಪರ್, ಬ್ಯಾಟರ್ ರಿಷಭ್ ಪಂತ್ ದಿಲ್ಲಿ ಕ್ಯಾಪಿಟಲ್ಸ್ ತಂಡಕ್ಕೆ ಮರಳಲಿದ್ದು, ಕುಲ್ದೀಪ್ ಯಾದವ್ ಲಖನೌ ತಂಡ ಸೇರಿಕೊಳ್ಳಲಿದ್ದಾರೆ ಎನ್ನಲಾಗಿದೆ.

ಐಪಿಎಲ್ ಮುಗಿದು ಕೇವಲ ಒಂದು ತಿಂಗಳಾಗಿದ್ದು, ಈಗಲೇ ಟ್ರೇಡ್ ಹವಾ ಶುರುವಾಗಿದೆ. ಮುಖ್ಯವಾಗಿ ಲಖನೌ ತಂಡದ ನಾಯಕತ್ವ ಬಿಟ್ಟಿರುವ ರಿಷಭ್ ಪಂತ್ ಅವರು ತಮ್ಮ ದಿಲ್ಲಿ ಕ್ಯಾಪಿಟಲ್ಸ್ ತಂಡಕ್ಕೆ ಮರಳಲಿದ್ದಾರೆ. ಅವರ ಬದಲಿಗೆ ಸ್ಪಿನ್ನರ್ ಕುಲ್ದೀಪ್ ಯಾದವ್ ಲಖನೌ ಜೈಂಟ್ಸ್ ತಂಡಕ್ಕೆ ಸೇರಿಕೊಳ್ಳಲಿದ್ದಾರೆ ಎಂದು ವರದಿಯಾಗಿದೆ. 2 ಪಂದ್ಯಾವಳಿಯಲ್ಲಿ ನಿರಾಸೆ ಮೂಡಿಸಿರುವ ರಿಷಭ್ ಪಂತ್ ಐಪಿಎಲ್ ಮುಗಿದ ತಕ್ಷಣವೇ ನಾಯಕತ್ವದಿಂದ ಹೊರಬಂದಿದ್ದರು. ಆದಾಗ್ಯೂ ಬ್ಯಾಟರ್ ಆಗಿ ಮುಂದುವರೆಯಲಿದ್ದಾರಾ ಎಂಬ ಪ್ರಶ್ನೆಗೆ ಉತ್ತರ ಸಿಕ್ಕಿರಲಿಲ್ಲ. ವರದಿಗಳ ಪ್ರಕಾರ ಪಂತ್ ದಿಲ್ಲಿ ತಂಡಕ್ಕೆ ಮರಳಲಿದ್ದಾರೆ. ಅಲ್ಲದೆ ಮಾಜಿ ಕ್ರಿಕೆಟಿಗರಾದ ಸೌರವ್ ಗಂಗೂಲಿ ಮತ್ತು ಯುವರಾಜ್ ಸಿಂಗ್ ಮ್ಯಾನೇಜ್‌ಮೆಂಟ್‌ನಲ್ಲಿ ಸೇರಿಕೊಳ್ಳಲಿದ್ದಾರೆ.



**ದಿಲ್ಲಿಗೆ ರಾಹುಲ್ ನಾಯಕ?**

ದಿಲ್ಲಿ ತಂಡದಲ್ಲಿ ನಾಯಕತ್ವ ಬದಲಾವಣೆ ಬಗ್ಗೆಯೂ ಮಾತುಗಳು ನಡೆದಿವೆ. ಕೆ.ಎಲ್. ರಾಹುಲ್ ಮೊದಲ ಆಯ್ಕೆಯಾಗಿದ್ದು, ಟ್ರೇಡ್ ನಡೆದರೆ ರಾಹುಲ್ ನಾಯಕರಾಗಲಿದ್ದಾರೆ ಎನ್ನಲಾಗಿದೆ.

ಮೊದಲ ಪಂದ್ಯದಲ್ಲಿ ಬೆಂಗಳೂರು-ಗುಲ್ಬರ್ಗಾ ಎದುರಾಳಿ

## ಇಂದಿನಿಂದ ಮಹಾರಾಜ ಟ್ರೋಫಿ

• **ಮೈಸೂರು:** ಯುವಕರಿಗೆ ವೇದಿಕೆ ಕಲ್ಪಿಸಿಕೊಡುವ, ಅಭಿಮಾನಿಗಳ ಮನರಂಜಿಸುವ ಪ್ರತಿಷ್ಠಿತ ಮಹಾರಾಜ ಟ್ರೋಫಿ ಪಂದ್ಯಾವಳಿಯು ಶನಿವಾರ ಶುರುವಾಗಲಿದೆ. ಮೂರು ಹಂತದಲ್ಲಿ, ಮೂರು ಪ್ರದೇಶದ ಆತಿಥ್ಯದಲ್ಲಿ ನಡೆಯಲಿರುವ ಈ ಕೂಟಕ್ಕೆ ಮೈಸೂರಿನಲ್ಲಿ ಈಗಾಗಲೇ ಔಪಚಾರಿಕ ಚಾಲನೆ ಸಿಕ್ಕಿದ್ದು, ಶನಿವಾರ ಕಲ್ಯಾಣ ಬೆಂಗಳೂರು ಬ್ಲಾಸ್ಟರ್ಸ್ ಹಾಗೂ ಗುಲ್ಬರ್ಗಾ ಮ್ಯಾಸ್ಟಿಕ್ಸ್ ನಡುವೆ ಮೊದಲ ಪಂದ್ಯ ನಡೆಯಲಿದೆ.

ಆರು ಫ್ರಾಂಚೈಸಿಗಳ ನಡುವೆ ಸುಮಾರು 22 ದಿನ ಪಂದ್ಯಾವಳಿ ನಡೆಯಲಿದೆ. ಮೊದಲಿಗೆ ಮೈಸೂರಿನಲ್ಲಿ ಲೀಗ್ ಪಂದ್ಯಗಳು ನಂತರ ಹುಬ್ಬಳ್ಳಿಯಲ್ಲಿ ಮತ್ತು ಕೊನೆಯಲ್ಲಿ ನಾಕೌಟ್ ಪಂದ್ಯಗಳು ಬೆಂಗಳೂರಿನಲ್ಲಿ ನಡೆಯಲಿವೆ.

**ಮೊದಲ ದಿನವೇ 2 ಪಂದ್ಯ:** ಟೂರ್ನಿಯ ಮೊದಲ ದಿನವೇ ಎರಡು ಪಂದ್ಯಗಳು ನಡೆಯಲಿವೆ. ಮೈಸೂರಿನ ಮಹಾರಾಜ ಕ್ರೀಡಾಂಗಣದಲ್ಲಿ ಮೊದಲ ಪಂದ್ಯ ಬೆಂಗಳೂರು ಮತ್ತು ಗುಲ್ಬರ್ಗಾ ತಂಡಗಳ ನಡುವೆ ನಡೆಯಲಿದೆ. ಎರಡನೇ ಪಂದ್ಯದಲ್ಲಿ ಶಿವಮೊಗ್ಗ ಯೋಧಾಸ್ ಮತ್ತು ಮೈಸೂರು ವಾರಿಯರ್ಸ್ ನಡುವೆ ನಡೆಯಲಿದೆ.



ಆರಂಭ: ಶನಿವಾರ
ಫೈನಲ್: ಜೂನ್ 12
ಟೂರ್ನಿಯ ಒಟ್ಟು ಪಂದ್ಯ: 34

ಮೊದಲ ಹಂತದ ಪಂದ್ಯಗಳಿಗೆ ಮೈಸೂರು ಆತಿಥ್ಯ

| ಆರು ತಂಡಗಳು | ನಾಯಕರು |
|---|---|
| ಬೆಂಗಳೂರು ಬ್ಲಾಸ್ಟರ್ಸ್ | ಶುಭಾಂಗ್ ಹೆಗ್ಡೆ |
| ಗುಲ್ಬರ್ಗಾ ಮ್ಯಾಸ್ಟಿಕ್ಸ್ | ಮನೀಷ್ ಪಾಂಡೆ |
| ಹುಬ್ಬಳ್ಳಿ ಟೈಗರ್ಸ್ | ಅನೀಶ್ವರ್ ಗೌತಮ್ |
| ಕೋಸ್ಟಲ್ ಕಿಂಗ್ಸ್ ಮಂಗಳೂರು | ಕರುಣ್ ನಾಯರ್ |
| ಶಿವಮೊಗ್ಗ ಯೋಧಾಸ್ | ಸ್ಮರಣ್ ರವಿಚಂದ್ರನ್ |
| ಮೈಸೂರು ವಾರಿಯರ್ಸ್ | ವಿಜಯಕುಮಾರ್ ವೈಶಾಖ್ |

## ಮಕಾವು ಓಪನ್: ಅಶ್ಮಿತಾ ಸೆಮಿಗೆ

• **ಹೊಸದಿಲ್ಲಿ:** ಕೊರಿಯಾದ ಕಿಮ್ ಮಿನ್ ಅವರನ್ನು ಸೋಲಿಸಿರುವ ಅಶ್ಮಿತಾ ಚಲಿಹಾ ಅವರು ಬ್ಯಾಡ್ಮಿಂಟನ್ ಕ್ಷೇತ್ರಕ್ಕೆ ಭರ್ಜರಿ ಕಂಬ್ಯಾಕ್ ಮಾಡಿದ್ದಾರೆ. ಮಕಾವು ಓಪನ್ ಪಂದ್ಯಾವಳಿಯಲ್ಲಿ ಉಳಿದ ಏಕೈಕ ಭಾರತೀಯ ಆಟಗಾತಿಯಾಗಿರುವ ಅವರು, ಸೆಮಿಫೈನಲ್‌ಗೇರಿದ್ದಾರೆ.

ಶುಕ್ರವಾರ ನಡೆದ ಪಂದ್ಯದಲ್ಲಿ ಉತ್ತಮ ಪ್ರದರ್ಶನ ನೀಡುತ್ತಾ ಗಮನ ಸೆಳೆದಿದ್ದು ಒಂದು ಕಡೆಯಾದರೆ, ಪ್ರಮುಖ ಆಟಗಾರ್ತಿ ಅನ್ಮೋಲ್ ಖಾರ್ಬ್ ಸೋಲಿನೊಂದಿಗೆ ಹೊರಬಿದ್ದರು. ನೇರ ಸೆಟ್ ಗೆಲುವಿನಲ್ಲಿ ಅಶ್ಮಿತಾ ವಿಶ್ವದ ನಂಬರ್ 9ನೇ ಶ್ರೇಯಾಂಕದ ಆಟಗಾರ್ತಿ ಕಿಮ್ ಅವರನ್ನು ಹೊರಹಾಕಿದರು. ಮೊದಲನೇ ಸೆಟ್‌ನಲ್ಲಿ 21-16ರಿಂದ ಗೆದ್ದ ಅವರು, ಎರಡನೇ ಸೆಟ್‌ನಲ್ಲಿ 21-18ರಿಂದ ಗೆಲುವು ಸಾಧಿಸಿದರು. ವಿಶ್ವದ 63ನೇ ಶ್ರೇಯಾಂಕ ಹೊಂದಿರುವ ಅಶ್ಮಿತಾ ಕೊರಿಯಾ ಓಪನ್ ಪಂದ್ಯಾವಳಿಯಲ್ಲಿ ಪಾದದ ಗಾಯದಿಂದಾಗಿ ಹೊರಬಿದ್ದಿದ್ದರು.

# ವಿಂಡೀಸ್‌ಗೆ 7 ರನ್‌ಗಳ ರೋಚಕ ಜಯ

• **ಲೀಡ್ಸ್:** ಸ್ಟೆಫಿ ಟೇಯ್ಲರ್ ಅವರ ಸ್ಫೋಟಕ ಬ್ಯಾಟಿಂಗ್ ಮತ್ತು ಮ್ಯಾಥ್ಯೂಸ್, ಅಲಿಯಾ ಅವರ ಕರಾರುವಾಕ್ ಬೌಲಿಂಗ್ ದಾಳಿಯ ಬಲದಿಂದ ವೆಸ್ಟ್ ಇಂಡೀಸ್ ಮಹಿಳಾ ತಂಡವು ಸ್ಕಾಟ್ಲೆಂಡ್ ವಿರುದ್ಧ ರೋಚಕ ಗೆಲುವು ಸಾಧಿಸಿದೆ.

ಮಹಿಳೆಯರ ವಿಶ್ವಕಪ್ ಪಂದ್ಯಾವಳಿ ರೋಚಕ ಘಟ್ಟಕ್ಕೆ ತಲುಪಿದ್ದು, ಸ್ಕಾಟ್ಲೆಂಡ್ ಮತ್ತು ವಿಂಡೀಸ್ ತಂಡಗಳು ಶುಕ್ರವಾರ ತಡರಾತ್ರಿ ನಡೆದ ಪಂದ್ಯದಲ್ಲಿ ಎದುರಾಗಿದ್ದವು. ವಿಂಡೀಸ್ ಮೊದಲು ಬ್ಯಾಟಿಂಗ್ ಮಾಡಿತು. 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 153 ರನ್ ಗಳಿಸಿತು. ಸ್ಟೆಫಿ 47★ ರನ್ ಗಳಿಸಿದರೆ, ಕ್ಯಾಂಪ್‌ಬೆಲ್ 36 ರನ್‌ನೊಂದಿಗೆ ತಂಡಕ್ಕೆ ಆಸರೆಯಾದರು. ಡರ್ಸಿ ಕಟ್ಟರ್ ಅವರ ತಾಳ್ಮೆಯುತ ಬ್ಯಾಟಿಂಗ್‌ನೊಂದಿಗೆ ಸ್ಕಾಟ್ಲೆಂಡ್ ಗೆಲುವಿನತ್ತ ಸಾಗಿತ್ತು. ಮಧ್ಯಮ ಕ್ರಮಾಂಕದಲ್ಲಿ ಅಲಿಸಾ ಲಿಸ್ಟರ್ 37 ರನ್‌ಗಳ ಬ್ಯಾಟಿಂಗ್‌ನೊಂದಿಗೆ ಸ್ಕಾಟ್ಲೆಂಡ್, ವಿಂಡೀಸ್ ಮೇಲೆ ಒತ್ತಡ ಹೇರಿತ್ತು. ಆದರೆ ಕೊನೆಯಲ್ಲಿ ವಿಂಡೀಸ್‌ನ ಮ್ಯಾಥ್ಯೂಸ್ ಮತ್ತು ಅಲಿಯಾ ಕರಾರುವಾಕ್ ದಾಳಿ ಸಂಘಟಿಸಿ ಪಂದ್ಯ ಕಸಿದರು.



ಪವರ್‌ಪ್ಲೇನಲ್ಲಿ ವಿಂಡೀಸ್ 33 ರನ್ ಗಳಿಸಿತು. ಸ್ಕಾಟ್ಲೆಂಡ್ ಅದಕ್ಕೂ ಹೆಚ್ಚು 55 ರನ್ ಗಳಿಸಿತ್ತು. ಮಧ್ಯಮ ಓವರ್‌ಗಳಲ್ಲಿ ವಿಂಡೀಸ್ ಕ್ಯಾಂಪ್‌ಬೆಲ್ ಅವರ ಬ್ಯಾಟಿಂಗ್‌ನೊಂದಿಗೆ 69 ರನ್ ಗಳಿಸಿತು. ಅತ್ತ ಸ್ಕಾಟ್ಲೆಂಡ್ ಕೂಡ ಕಟ್ಟರ್ ಮತ್ತು ಲಿಸ್ಟರ್ ಅವರ ಆಟದೊಂದಿಗೆ 51 ರನ್ ಗಳಿಸಿತ್ತು. ಡೆತ್ ಓವರ್‌ಗಳಲ್ಲಿ ಸ್ಟೆಫಿ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ವಿಂಡೀಸ್ 51 ರನ್ ಬಾರಿಸಿತು. ಆದರೆ ಸ್ಕಾಟ್ಲೆಂಡ್ ಮ್ಯಾಥ್ಯೂಸ್ ದಾಳಿಗೆ ತತ್ತರಿಸಿತು. 40 ರನ್ ಗಳಿಸುವಷ್ಟರಲ್ಲಿ 5 ವಿಕೆಟ್ ಕಳೆದುಕೊಂಡ ಸ್ಕಾಟ್ಲೆಂಡ್ 7 ರನ್‌ಗಳಿಂದ ಸೋತಿತು. ಒಟ್ಟು 146 ರನ್ ಗಳಿಸಿತು.

**ಇಂದು 3 ಪಂದ್ಯ**


ಶನಿವಾರದಂದು ಮತ್ತೆ ಮೂರು ಪಂದ್ಯಗಳು ನಡೆಯಲಿವೆ. ಮಧ್ಯಾಹ್ನ 3 ಗಂಟೆಗೆ ಆಸ್ಟ್ರೇಲಿಯಾ ಹಾಗೂ ನೆದರ್ಲೆಂಡ್ಸ್ ತಂಡಗಳು ಮುಖಾಮುಖಿಯಾದರೆ, ಸಂಜೆ 7ಕ್ಕೆ ಬಾಂಗ್ಲಾದೇಶ ಮತ್ತು ಪಾಕಿಸ್ತಾನ ತಂಡಗಳು ಎದುರಾಗಲಿವೆ. ತಡರಾತ್ರಿ 11ಕ್ಕೆ ನಡೆಯಲಿರುವ ಪಂದ್ಯದಲ್ಲಿ ಸ್ಕಾಟ್ಲೆಂಡ್ ಮತ್ತು ಇಂಗ್ಲೆಂಡ್ ತಂಡಗಳು ಎದುರಾಗಲಿವೆ.

**ಸಂಕ್ಷಿಪ್ತ ಸ್ಕೋರ್**

**ವೆಸ್ಟ್ ಇಂಡೀಸ್ 20 ಓವರ್‌ಗಳಲ್ಲಿ 153/6:** ಸ್ಟೆಫಿ ಟೇಯ್ಲರ್ 47★, ಕ್ಯಾಂಪ್‌ಬೆಲ್ 36; ಫ್ರೇಸರ್ 34/2
**ಸ್ಕಾಟ್ಲೆಂಡ್ 20 ಓವರ್‌ಗಳಲ್ಲಿ 146/10:** ಡರ್ಸಿ 59, ಲಿಸ್ಟರ್ 33; ಅಲಿಯಾ 11/3, ಮ್ಯಾಥ್ಯೂಸ್ 19/3

## ಪದಬಂಧ

ರಾಜಾ ಸಂಗಮೇಶ ಹಿರೇಮಠ



**6020**

**ಎಡದಿಂದ ಬಲಕ್ಕೆ**
1.ಸಮೀಕವಾಗಿ-ಹಿತದಿಂದ ಕೂಡಿದೆ (3)
5.ಈತ ದಯೆಯುಳ್ಳವನು (4)
6.ಗೋವರ್ಧನ ಬೆಟ್ಟ ಎತ್ತಿದವನು (4)
7.ಮರದ ಬಳಿ ಕಾಣಿಸಿದ ಹೆಂಡತಿ (3)
9.ಕೈ-ಕಾಲುಗಳಿಗೆ ಹಾಕುವ ಸಂಕೋಲೆ (2)
10.ಭೂಮಿ-ಅವನಿ ಇದು (2)
11.ದ್ರವರೂಪದ ಲೋಹವಿಲ್ಲಿ ತಿರುಗಿದೆ (3)
13.ಉಂಡಾಡಿ-ಅಪ್ರಯೋಜಕನೀತ (4)
14.ಪತಿಗೆ ಈ ನಡುವೆ ಸಿಕ್ಕ ನೈಪುಣ್ಯತೆ (4)
15.ಬಿಳಿಯ ಬಣ್ಣದ ಲೋಹ-ಬೆಳ್ಳಿ (3)

**ಮೇಲಿನಿಂದ ಕೆಳಕ್ಕೆ**
1.ಸುದ್ದಿ-ವಿಷಯ ಸರದ ನಡುವೆ ಇದೆ (4)
2.ತಗಣಿಯ ನಡುವೆ ನದಿ ಹರಿಯುತ್ತಿದೆ (4)
3.ಶುಭ್ರವಾದವನು-ಶಿವ (3)
4.ದವಸ-ಧಾನ್ಯವನ್ನು ಹೀಗೂ ಹೇಳಬಹುದು (4)
8.ಅಮಲೇರಿಸುವಂತಹ ಪೇಯ (3)
9.ಬೇಸಾಯದ ಕಡೆಯಲ್ಲಿ ಹಾರುವೆ (3)
10.ಸಂಪತ್ತಿನ ಒಡೆಯ ಈ ಕುಬೇರ (4)
11.ನೀರನ್ನು ಹೊತ್ತು ನಿಂತ ಮೋಡ (4)
12.ಪಾತದ ನಡುವೆ ವಿದ್ಯಾಂಸನಿದ್ದಾನೆ (4)
13.ದನಿ ಎತ್ತಿ ಕೂಗಿದ ಹೆಣ್ಣಾನೆ (3)

**6019 ಉತ್ತರ**

**ಎಡದಿಂದ ಬಲಕ್ಕೆ:**
1.ಅಸ್ಥಿರ 3.ಅಧಿಕೃತ
5.ಪರಾಮರ್ಶೆ 6.ರವಿಜ
8.ಕುಂಡ 9.ದಂತ
11.ಬಳಪ 13.ವಂಗಭಂಗ
15.ತವರಾಜ 16.ತಲೆಕಟ್ಟು

**ಮೇಲಿನಿಂದ ಕೆಳಕ್ಕೆ :**
1.ಅಧಿಕಾರ 2.ಪರಾಗ
3.ಅತ್ತಿಮಬ್ಬೆ 4.ತಲೆದಂಡ
7.ವಿಜೇತ 8.ಕುಂಬಳ
9.ದಂಡಾಹತ
10.ಮೃಗರಾಜ
12.ಪಟ್ಟಕಟ್ಟು 14.ಗಣಿತ

ಜಮೀನುಗಳಿಗೆ ಜಂಟಿ ಕೃಷಿ ನಿರ್ದೇಶಕ, ಸಹಾಯಕ ನಿರ್ದೇಶಕರ ಭೇಟಿ

# ಮುಸುಕಿನ ಜೋಳ ಬೆಳೆ ಪರಿಶೀಲನೆ



**• ಎಚ್.ಡಿ.ಕೋಟೆ:** ತಾಲೂಕಿನಾದ್ಯಂತ ಮುಸುಕಿನ ಜೋಳಕ್ಕೆ ಬೂದುರೋಗ ಅಥವಾ ಬಿಳಿ ಸುಳಿರೋಗ ಕಾಣಿಸಿಕೊಂಡಿದ್ದು ರೈತರು ಆತಂಕಕ್ಕೀಡಾಗಿದ್ದರು. ಈ ಹಿನ್ನೆಲೆ ಶುಕ್ರವಾರ ಜಂಟಿ ಕೃಷಿ ನಿರ್ದೇಶಕ ಡಾ. ಕೆ.ಎಚ್ ರವಿ, ಸಹಾಯಕ ಕೃಷಿ ನಿರ್ದೇಶಕ ಪ್ರಸಾದ್ ಅವರು ಹಂಪಾಪುರ ಹೋಬಳಿಯ ನಾಯಕನಹುಂಡಿ, ಕರುಗಳ, ಕೋಳಗಾಲ, ಮಾದಾಪುರ, ಹ್ಯಾಂಡ್ ಪೋಸ್ಟ್, ಯರಹಳ್ಳಿ ಗ್ರಾಮದ ರೈತರ ಜಮೀನುಗಳಿಗೆ ಭೇಟಿ ನೀಡಿ ರೋಗದ ತಾಕುಗಳನ್ನು ಪರಿಶೀಲನೆ ನಡೆಸಿದರು.

ರೋಗ ಬರಲು ಕಾರಣವೇನು? ರೋಗ ನಿಯಂತ್ರಣಕ್ಕೆ ರೈತರು ಏನೆಲ್ಲಾ ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕು. ಮುಸುಕಿನ ಜೋಳ ಬಿತ್ತನೆಗೂ ಮುನ್ನ ಏನು ಮಾಡಬೇಕು, ತದನಂತರ ಯಾವ ಔಷಧಿ ಸಿಂಪಡಿಸಬೇಕು, ಮಣ್ಣಿನ ಫಲವತ್ತತೆಗೆ ಬೇರೆ ಯಾವ ಬೆಳೆಗಳನ್ನು ಬೆಳೆಯಬೇಕು ಎಂಬುದರ ಕುರಿತು ರೈತರಿಗೆ ಮಾಹಿತಿ ಮತ್ತು ಸಲಹೆ ನೀಡಿದರು.

ಜಂಟಿ ಕೃಷಿ ನಿರ್ದೇಶಕರಾದ ಡಾ.ಕೆ.ಎಚ್. ರವಿ ಮಾತನಾಡಿ, ವರ್ಷಕ್ಕೆ ಎರಡು-ಮೂರು ಬಾರಿ ಮುಸುಕಿನ ಜೋಳವನ್ನು ನಿರಂತರವಾಗಿ ಬೆಳೆಯುವುದರಿಂದ ರೋಗ ಉಲ್ಬಣಗೊಳ್ಳುತ್ತಿದೆ. ಮುಸುಕಿನ ಜೋಳದ ಬದಲಾಗಿ ರಾಗಿ, ಸೋಯಾ ಅವರೆ, ಅಲಸಂದೆ ಮತ್ತು ತೊಗರಿ ಬೆಳೆಗಳೊಂದಿಗೆ ಬೆಳೆ ಪರಿವರ್ತನೆ ಮಾಡಬೇಕು. ಮೇವಿನ ಉದ್ದೇಶಕ್ಕಾಗಿ (ಸೈಲೇಜ್) ಒಂದೇ ತಾಕಿನಲ್ಲಿ ವರ್ಷಕ್ಕೆ ಎರಡು-ಮೂರು ಬಾರಿ ಯಾವುದೇ ಬೀಜೋಪಚಾರ ಮಾಡದೆ ಹಾಗೂ ಪೊಟಾಷ್ ಮತ್ತು ಜಿಂಕ್ ಸಲ್ಫೇಟ್ ಗೊಬ್ಬರ ಬಳಸದೇ ಸಾರಜನಕ ಹೆಚ್ಚಿರುವ ಗೊಬ್ಬರಗಳನ್ನು ಬಳಕೆ ಮಾಡಿರುವುದರಿಂದ ಈ ರೋಗವು ಉಲ್ಬಣವಾಗಿದೆ. ಹಾಗಾಗಿ ಕೃಷಿ ವಿಜ್ಞಾನಿಗಳು ಶಿಫಾರಸ್ಸು ಮಾಡಿರುವ ಔಷಧವನ್ನು ಸಿಂಪಡಿಸುವುದರ ಜೊತೆಗೆ ಬೆಳೆ ಪರಿವರ್ತನೆ ಮಾಡಬೇಕೆಂದು ಸಲಹೆ ನೀಡಿದರು.

ಈ ವೇಳೆ ಕೃಷಿ ಇಲಾಖೆ ಸಹಾಯಕ ನಿರ್ದೇಶಕರಾದ ಪ್ರಸಾದ್, ಅಧಿಕಾರಿಗಳಾದ ಸಿದ್ದಪ್ಪಸ್ವಾಮಿ, ಪ್ರವೀಣ್, ಆತ್ಮ ಯೋಜನೆ ಸಿಬ್ಬಂದಿಗಳಾದ ರಕ್ಷಿತಾ, ವಿನಯ್ ಸೇರಿದಂತೆ ರೈತರು ಉಪಸ್ಥಿತರಿದ್ದರು.

> **ಬಿತ್ತನೆ ಮಾಡಿದ 15-20 ದಿನಗಳ ಅಂತರದಲ್ಲಿ ಮೆಟಲಾಕ್ಸಿಲ್ 4%, ಡಬ್ಲ್ಯೂ.ಪಿ. + ಮ್ಯಾಂಕೋಜೆಬ್ 64% ಅನ್ನು ಪ್ರತಿ ಲೀಟರ್ ನೀರಿಗೆ 2 ಗ್ರಾಂ. ಜಂತೆ ಮತ್ತು 2ನೇ ಸಿಂಪಡಣೆ ಮಾಡಬೇಕು. ಬಿತ್ತನೆ ಮಾಡಿದ 25-30 ದಿನಗಳ ಅಂತರದಲ್ಲಿ ರೋಗ ಲಕ್ಷಣಗಳು ಕಂಡುಬಂದಲ್ಲಿ ಅಜೋಕ್ಸಿ ಸ್ಟ್ರೋಬಿನ್ 18.2 % + ಡೈಫ್ ನೊಕೊನೊಜೋಲ್ 11.4% ಅನ್ನು ಪ್ರತಿ ಲೀಟರ್ ನೀರಿಗೆ 1 ಮಿ.ಲೀ. ಬೆರಸಿ ತಪ್ಪದೇ ಸಿಂಪಡಣೆ ಮಾಡಬೇಕು.**
>
> ■ **ಪ್ರಸಾದ್, ಸಹಾಯಕ ನಿರ್ದೇಶಕರು, ಕೃಷಿ ಇಲಾಖೆ**

### ಅನುಸರಿಸಬೇಕಾದ ಕ್ರಮಗಳು

- ಆಳವಾಗಿ ಎರಡು ಬಾರಿ ಬೇಸಿಗೆ ಉಳುಮೆ ಮಾಡಬೇಕು
- ಮುಸುಕಿನ ಜೋಳ ಬೆಳೆ ಬದಲು ರಾಗಿ, ಅಲಸಂದೆ, ತೊಗರಿ ಸೇರಿದಂತೆ ದ್ವಿದಳ ಧಾನ್ಯ ಬೆಳೆಯಬೇಕು
- ಮಳೆ ನೀರನ್ನು ಹೊಲದಲ್ಲಿಯೇ ಇಂಗಿಸಲು ಬದುಗಳನ್ನು ತೆಗೆದು ಸ್ವಚ್ಛವಾಗಿಡಬೇಕು
- ಪೊಟಾಷ್ ಇರುವ ರಸಗೊಬ್ಬರಗಳನ್ನು ಅತೀ ಹೆಚ್ಚಾಗಿ ಬಳಸಬೇಕು
- ಎಕರೆಗೆ 6 -8 ಕೆಜಿ ಜಿಂಕ್ ಸಲ್ಫೇಟ್ ಗೊಬ್ಬರವನ್ನು ಕಡ್ಡಾಯವಾಗಿ ಬಳಸಬೇಕು
- 10 ರಿಂದ 20 ದಿವಸದೊಳಗೆ ದಿವಸದೊಳಗೆ ಎರಡು ಔಷಧಿ ಸಿಂಪಡಿಸಬೇಕು
- ಭೂಮಿಗೆ ಕೊಟ್ಟಿಗೆ ಗೊಬ್ಬರ, ಹಸಿರೆಲೆ ಬೆಳೆ ಗೊಬ್ಬರಗಳ ಬಳಕೆ ಮಾಡಬೇಕು
- ರಸಗೊಬ್ಬರಗಳ ಬಳಕೆ ಜೊತೆಗೆ ಬದುಗಳ ಮೇಲೆ ಕಳೆ ನಿರ್ವಹಣೆ ಮಾಡಬೇಕು

# ಟೌನ್‌ಶಿಪ್‌ಗೆ ಜಾಗ ಕೊಟ್ಟ ರೈತರಿಗೆ ಚೆಕ್ ವಿತರಣೆ

**• ರಾಮನಗರ:** ಬಿಡದಿ ಟೌನ್‌ಶಿಪ್‌ಗೆ ಜಾಗ ಕೊಟ್ಟ ರೈತರಿಗೆ ಪರಿಹಾರದ ಚೆಕ್ ಅನ್ನು ಸಾಂಕೇತಿಕವಾಗಿ 7 ಮಂದಿಗೆ ಶುಕ್ರವಾರ ಮಾಗಡಿ ಶಾಸಕ ಎಚ್.ಸಿ.ಬಾಲಕೃಷ್ಣ ವಿತರಣೆ ಮಾಡಿದರು.

ನಂತರ ಮಾತನಾಡಿದ ಅವರು, ಒಂದು ಎಕರೆಗೆ 2 ಕೋಟಿ 30 ಲಕ್ಷದ 7 ಸಾವಿರ ರೂ. ಪರಿಹಾರ ಹಣ ನೀಡಲಾಗುವುದು. ಜಮೀನಿನಲ್ಲಿ ಬೆಳೆದ ಬೆಳೆಗೂ ಪರಿಹಾರದ ಹಣ ನಿಗದಿಪಡಿಸಲಾಗಿದೆ ಎಂದು ತಿಳಿಸಿದರು.

1 ತೆಂಗಿನಮರಕ್ಕೆ 40,446 ರೂ. ಮಾವಿನ ಗಿಡ 62,000 ರೂ., ಅಡಿಕೆ ಮರಕ್ಕೆ 7,440 ರೂ., ಬಾಳೆ ಎಕರೆಗೆ 10.86 ಲಕ್ಷ ರೂ., ರೇಷ್ಮೆಗೆ 14 ಲಕ್ಷ ಪ್ರತಿ ಎಕರೆಗೆ, ಹಲಸು ಎಕರೆಗೆ 42,750ರೂ., ಹುಣಸೆ ಎಕರೆಗೆ 53,310ರೂ., ಸೀಬೆ ಎಕರೆಗೆ 3,940 ರೂ., ಸಪೋಟ ಎಕರೆಗೆ 43,166 ರೂ. ಹಣ ನಿಗದಿ ಮಾಡಲಾಗಿದೆ ಎಂದರು.

ಯೋಜನೆ ವ್ಯಾಪ್ತಿಯಲ್ಲಿ ಕೇವಲ ಒಂದು ಗುಂಟೆ ಜಮೀನು ಇರುವ ಮಾಲೀಕರಿಗೆ ವಿಶೇಷ ಪರಿಹಾರ ನೀಡಲಾಗುವುದು. 1 ಗುಂಟೆ ಜಮೀನು ಕಳೆದುಕೊಳ್ಳುವ ರೈತರಿಗೆ 5 ಲಕ್ಷ [illegible] ನೀಡಲು ಜಿಬಿಡಿಎ ಮುಂದಾಗಿದೆ ಎಂದು ತಿಳಿಸಿದರು. ಈಗಾಗಲೇ 9 ಗ್ರಾಮಗಳ ಪೈಕಿ 3 ಗ್ರಾಮಗಳ 519 ಎಕರೆಗೆ ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ. ಕೆಂಪಯ್ಯನಪಾಳ್ಯ, ಮಂಡಲಹಳ್ಳಿ, ವದೇರಹಳ್ಳಿ ಗ್ರಾಮಗಳಿಗೆ ಅಂತಿಮ ಅಧಿಸೂಚನೆ ಪ್ರಕಟಿಸಿದೆ. ನೋಟಿಸ್ ಪಡೆದು ಒಪ್ಪಿಗೆ ನೀಡಿರುವ ರೈತರಿಗೆ ಭೂ ಪರಿಹಾರದ ಚೆಕ್ ವಿತರಣೆ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಜಿಬಿಡಿಎ ಅಧ್ಯಕ್ಷ ಗಾಣಕಲ್ ನಟರಾಜು ಹಾಗೂ ಇತರರು ಇದ್ದರು.



# ಪಕ್ಷದ್ರೋಹಿಗಳ ವಿರುದ್ಧ ಕ್ರಮ ಆಗಲಿ: ಶಾಸಕ ಶ್ರೀವತ್ಸ

**• ಮೈಸೂರು:** ವಿಧಾನಪರಿಷತ್ ಚುನಾವಣೆಯಲ್ಲಿ ಅಡ್ಡ ಮತದಾನ ಮಾಡಿರುವ ಪಕ್ಷದ್ರೋಹಿಗಳ ವಿರುದ್ಧ ತಕ್ಷಣವೇ ಕ್ರಮ ಕೈಗೊಳ್ಳಬೇಕೆಂದು ಕೆ.ಆರ್ ಕ್ಷೇತ್ರದ ಶಾಸಕ ಟಿ.ಎಸ್. ಶ್ರೀವತ್ಸ ಆಗ್ರಹಿಸಿದರು.



ನಗರದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವಿಧಾನ ಪರಿಷತ್ ಚುನಾವಣೆಯಲ್ಲಿ ಜೆಡಿಎಸ್ ಬಿಜೆಪಿ ಮೈತ್ರಿ ಅಭ್ಯರ್ಥಿಗೂ ಕೂಡ ಮತ ಚಲಾವಣೆ ಮಾಡುವಂತೆ ಪಕ್ಷದಿಂದ ಸ್ಪಷ್ಟವಾದ ಆದೇಶವನ್ನು ನೀಡಲಾಗಿತ್ತು. ಆದರೆ, ಜೆಡಿಎಸ್-ಬಿಜೆಪಿ ಮೈತ್ರಿ ಅಭ್ಯರ್ಥಿಯ ವಿರುದ್ಧ ಅಡ್ಡ ಮತದಾನವನ್ನು ಮಾಡಲಾಗಿದೆ. ಯಾರ್ಯಾರು ಅಡ್ಡ ಮತದಾನ ಮಾಡಿದ್ದಾರೆ ಎಂದು ಪಕ್ಷದ ರಾಜ್ಯಾಧ್ಯಕ್ಷರು ಪತ್ತೆ ಹಚ್ಚಿದ್ದಾರೆ. ಈ ಬಗ್ಗೆ ಹೈಕಮಾಂಡ್ ಕೂಡ ವರದಿ ಹೋಗಿದೆ. ಹೈಕಮಾಂಡ್ ತಕ್ಷಣವೇ ಪಕ್ಷದ್ರೋಹಿಗಳ ವಿರುದ್ಧ ಕಠಿಣ ಕ್ರಮವನ್ನು ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ಪಕ್ಷದಿಂದ ಆಯ್ಕೆಯಾಗಿ ಪಕ್ಷದಲ್ಲೇ ಇದ್ದು ಪಕ್ಷದ ಪಕ್ಷಕ್ಕೆ ದ್ರೋಹ ಬಗೆಯುವ ಇಂತಹವರಿಂದ ಕಾರ್ಯಕರ್ತರು ಮುಜುಗರ ತಲೆತಗ್ಗಿಸಿಕೊಂಡು ಓಡಾಡುವಂತಾಗಿದೆ. ಹಾಗಾಗಿ ಇಂತಹ ಪಕ್ಷದ್ರೋಹಿಗಳ ವಿರುದ್ಧ ಯಾವುದೇ ಮುಲಾಜು ಇಲ್ಲದೆ ತಕ್ಷಣವೇ ಕ್ರಮ ಕೈಗೊಳ್ಳುವ ಮೂಲಕ ಕಠಿಣ ಸಂದೇಶವನ್ನು ಹೈಕಮಾಂಡ್ ನೀಡಬೇಕು ಎಂದು ಒತ್ತಾಯಿಸಿದರು.

# ಮಾಜಿ ಶಾಸಕ ಶ್ರೀನಿವಾಸಯ್ಯ ವಿಧಿವಶ: ವಕೀಲರಿಂದ ಶ್ರದ್ಧಾಂಜಲಿ

**• ಕೋಲಾರ:** ಕಕ್ಷಿದಾರರ ಹಿತ ರಕ್ಷಣೆಯೊಂದಿಗೆ ವೃತ್ತಿಯಲ್ಲಿ ನಿಷ್ಠೆ, ಪ್ರಾಮಾಣಿಕತೆ ಅಳವಡಿಸಿಕೊಂಡು 70 ವರ್ಷಗಳ ಸುದೀರ್ಘ ಕಾಲ ವಕೀಲರಾಗಿದ್ದ ಜನಾನುರಾಗಿ ಮಾಜಿ ಶಾಸಕ ಹಾಗೂ ಹಿರಿಯ ನ್ಯಾಯವಾದಿ ಕೆ.ಆರ್. ಶ್ರೀನಿವಾಸಯ್ಯ(96) ಶುಕ್ರವಾರ ಬೆಳಗ್ಗೆ 9.15ರ ಸುಮಾರಿನಲ್ಲಿ ವಿಧಿವಶರಾಗಿದ್ದು, ನ್ಯಾಯಾಲಯ ಕಲಾಪ ರದ್ದುಗೊಳಿಸಿ ಅವರಿಗೆ ವಕೀಲರು ಶ್ರದ್ಧಾಂಜಲಿ ಅರ್ಪಿಸಿದರು.

ಇತ್ತೀಚೆಗೆ ಜಾರಿ ಬಿದ್ದು ತಲೆಗೆ ಗಾಯವಾಗಿದ್ದರೂ ಆರೋಗ್ಯದಿಂದಿದ್ದ ಶ್ರೀನಿವಾಸಯ್ಯ ಅವರು ವಯೋಸಹಜ ಆರೋಗ್ಯ ಸಮಸ್ಯೆಯಿಂದ ಕೊನೆಯುಸಿರೆಳೆದಿದ್ದು, ಪತ್ನಿ ರಾಧಮ್ಮ, ನಾಲ್ವರು ಪುತ್ರರಾದ ನಿವೃತ್ತ ಮಾರ್ಕೆಟಿಂಗ್ ಫೆಡರೇಷನ್ ಅಧಿಕಾರಿ ಮಂಜುನಾಥ್,ವಕೀಲ ನಾಯಕುಮಾರ್, ಏರ್‌ಲ್ಯಾಂಡ್ ವೈದ್ಯ ಡಾ.ಹರಿಗೋಪಾಲ್, ಜಾಲಪ್ಪ ಆಸ್ಪತ್ರೆಯ ಖ್ಯಾತ ದಂತ ತಜ್ಞ ಡಾ.ಶ್ರೀನಾಥ್ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಎರಡು ಬಾರಿ ಕೋಲಾರದ ಶಾಸಕರಾಗಿ ಅವರು ಮಾಡಿದ ಸೇವೆ ಸ್ಮರಣೀಯವಾಗಿದ್ದು, ನೀರ್‌ಸಾಬ್ ಎಂದೇ ಖ್ಯಾತರಾಗಿದ್ದ ನಜೀರ್‌ಸಾಬ್‌ರೊಂದಿಗೆ ಹೊಂದಿದ್ದ ಆತ್ಮೀಯ ಸಂಬಂಧದಿಂದಾಗಿ ಕೋಲಾರ ತಾಲ್ಲೂಕಿನಲ್ಲಿ ರಾಜ್ಯದಲ್ಲೇ ಅತಿ ಹೆಚ್ಚು ಕುಡಿಯುವ ನೀರಿನ ಕೊಳವೆ ಬಾವಿಗಳನ್ನು ಕೊರೆಸಿ ಜನರ ನೀರಿನ ಸಮಸ್ಯೆಗೆ ಇತಿಶ್ರೀ ಹಾಡಿದ ದಾಖಲೆಗೆ ಪಾತ್ರರಾಗಿದ್ದರು.



**ವಕೀಲವೃತ್ತಿಯಲ್ಲಿ ಸುದೀರ್ಘ 70 ವರ್ಷ:** ವಕೀಲರಾಗಿ 70 ವರ್ಷಗಳ ಸುದೀರ್ಘ ಸೇವೆ ಸಲ್ಲಿಸಿದ ಕೀರ್ತಿಗೆ ಭಾಜನರಾಗಿರುವ ಶ್ರೀನಿವಾಸಯ್ಯ, ಬಡವರ ವಕೀಲ ಎಂದೇ ಖ್ಯಾತರಾಗಿದ್ದರು. ವಕೀಲ ವೃತ್ತಿಯಲ್ಲಿ 60 ವರ್ಷ ಪೂರೈಸಿದ ಸಂದರ್ಭದಲ್ಲಿ ಕಳೆದ ಡಿಸೆಂಬರ್-2015ರಲ್ಲಿ ನಗರದ ನ್ಯಾಯಾಲಯದ ಆವರಣದಲ್ಲಿ ಅವರ ಶಿಷ್ಯರು ನಡೆಸಿಕೊಟ್ಟ 'ವಕೀಲವೃತ್ತಿಯಲ್ಲಿ 60ರ ಸಂಭ್ರಮ' ಕಾರ್ಯಕ್ರಮದಲ್ಲಿ ಶ್ರೀನಿವಾಸಯ್ಯ ದಂಪತಿಗಳನ್ನು ಸನ್ಮಾನಿಸಲಾಗಿತ್ತು.

ವೃತ್ತಿ ಘನತೆಗೆ ಕುತ್ತು ಬಾರದಂತೆ ಸಾಗಿ ಬಂದ ಅವರ ವಕೀಲ ವೃತ್ತಿಯ ಜೀವನ ಇತರರಿಗೆ ಮಾದರಿಯಾಗಿತ್ತು. ನಮ್ಮನ್ನು ನಂಬಿ ಬರುವ ಕಕ್ಷಿದಾರರಿಗೆ ನ್ಯಾಯ ಒದಗಿಸುವ ಬದ್ಧತೆ ಬೇಕು ಎಂದು ಅವರು ತಮ್ಮ ಕಿರಿಯ ವಕೀಲರಿಗೆ ಪ್ರತಿಪಾದಿಸಿಯೂ ಹೇಳುತ್ತಿದ್ದರು.

ಕೋಲಾರ ವಿಧಾನಸಭಾ ಕ್ಷೇತ್ರದ ಜನರ ಸೇವೆ ಮಾಡುವ ಅವಕಾಶ ಎರಡು ಬಾರಿ ಸಿಕ್ಕಿತ್ತು ಈ ಅವಧಿಯಲ್ಲಿ ಮತ್ತು ವೃತ್ತಿಯಲ್ಲಾಗಲಿ, ಶಾಸಕನಾಗಿದ್ದ ಸಂದರ್ಭದಲ್ಲಾಗಲಿ ಒಂದು ನಯಾಪೈಸೆ ಭ್ರಷ್ಟ ಹಣಕ್ಕೆ ಕೈಚಾಚಿದ ನಿದರ್ಶನ ಮತ್ತು ಆರೋಪ ಅವರ ಮೇಲಿಲ್ಲ, ಇದರಿಂದಲೇ ತಾವಿಂದು ಆರೋಗ್ಯವಾಗಿರುವುದಾಗಿ ಹೆಮ್ಮೆಯಿಂದ ಹೇಳುತ್ತಿದ್ದರು.

ಕೆ.ಆರ್.ಶ್ರೀನಿವಾಸಯ್ಯ ಅವರ ಶಿಷ್ಯರಲ್ಲಿ ಹಲವಾರು ಪ್ರಸಿದ್ಧ ವಕೀಲರು ನ್ಯಾಯಾಧೀಶರೂ ಇದ್ದು, ನಿವೃತ್ತ ನ್ಯಾಯಾಧೀಶ ಮುರಾರಿ ಮೌನಿ, ಚಂದ್ರಕಲಾ, ಹಿರಿಯ ವಕೀಲರಾದ ಪಿ.ಎಸ್.ಕೃಷ್ಣಾರೆಡ್ಡಿ, ಸುಬ್ಬಾರೆಡ್ಡಿ ಪ್ರಮುಖರು.

**» ವಕೀಲ ವೃತ್ತಿಯಲ್ಲಿ 70 ವರ್ಷಗಳ ಸುದೀರ್ಘ ಸೇವೆ ಸಲ್ಲಿಸಿದ ದಾಖಲೆ**


### ನ್ಯಾಯಾಲಯದ ಕಲಾಪ ರದ್ದು

ಕೆ.ಆರ್.ಶ್ರೀನಿವಾಸಯ್ಯ ಅವರ ನಿಧನದ ಹಿನ್ನಲೆಯಲ್ಲಿ ಶುಕ್ರವಾರ ನ್ಯಾಯಾಲಯದ ಕಲಾಪಗಳನ್ನು ರದ್ದುಗೊಳಿಸಿ, ವಕೀಲರ ಸಂಘದ ಅಧ್ಯಕ್ಷ ಎಲ್.ಶ್ರೀನಿವಾಸ್ ನೇತೃತ್ವದಲ್ಲಿ ವಕೀಲರು ಶ್ರದ್ಧಾಂಜಲಿ ಅರ್ಪಿಸಿದರು.



# ಮಾರ್ನಿಂಗ್ ಶೋ

## ಸು ಫ್ರಂ ಸೋ ರಿಲೀಸಾದ ದಿನವೇ ಕರಾವಳಿ ಬಿಡುಗಡೆ



ಈ ವರ್ಷದ ಬಹುನಿರೀಕ್ಷಿತ ಕರಾವಳಿ ಚಿತ್ರದ ರಿಲೀಸ್ ಡೇಟ್ ಇದೀಗ ಅನೌನ್ಸ್ ಆಗಿದೆ. ವಿಶೇಷವಾಗಿ ಕಳೆದ ವರ್ಷ ಜುಲೈ 24ಕ್ಕೆ ರಿಲೀಸಾಗಿದ್ದ ಸು ಫ್ರಂ ಸೋ ದೊಡ್ಡ ಮಟ್ಟದಲ್ಲಿ ಸಕ್ಸಸ್ ಕಂಡಿತ್ತು. ಇದೀಗ ಅದೇದಿನ ಕರಾವಳಿ ಚಿತ್ರವೂ ತೆರೆಕಾಣಲಿದೆ, ಒಂದು ವರ್ಷದ ಬಳಿಕ ಮತ್ತೊಂದು ಭರವಸೆಯ ಕರಾವಳಿ ಬೆಳ್ಳಿತೆರೆಯ ಮೇಲೆ ಮ್ಯಾಜಿಕ್ ಮಾಡಲು ಸಜ್ಜಾಗಿದೆ. ಗುರುದತ್ ಗಾಣಿಗ ಅವರ ನಿರ್ದೇಶನದ, ರಾಜ್ ಬಿ. ಶೆಟ್ಟಿ ಹಾಗೂ ಪ್ರಜ್ವಲ್ ದೇವರಾಜ್ ಪ್ರಮುಖ ಪಾತ್ರಗಳಲ್ಲಿ ಕಾಣಿಸಿಕೊಂಡಿರುವ ಕರಾವಳಿ ಜುಲೈ 24ಕ್ಕೆ ಅದ್ದೂರಿಯಾಗಿ ತೆರೆ ಕಾಣಲಿದೆ.

ಈಗಾಗಲೇ ತನ್ನ ವಿಭಿನ್ನ ಪೋಸ್ಟರ್ ಮತ್ತು ಟೀಸರ್‌ಗಳ ಮೂಲಕ ನಿರೀಕ್ಷೆ ಹೆಚ್ಚಿಸಿರುವ ಕರಾವಳಿ ಕೊನೆಗೂ ತೆರೆಗೆ ಬರುತ್ತಿದೆ. ಸು ಫ್ರಂ ಸೋ ಹಾಗೆಯೇ ಕರಾವಳಿ ಸಿನಿಮಾ ಕೂಡ ಕನ್ನಡ ಚಿತ್ರರಂಗಕ್ಕೆ ಗೇಮ್ ಚೇಂಜರ್ ಆಗಲಿದೆ ಎನ್ನುವ ಭರವಸೆ ಚಿತ್ರತಂಡಕ್ಕಿದೆ. ಕಳೆದ ವರ್ಷದ ಜುಲೈ ತಿಂಗಳಲ್ಲಿ ಕನ್ನಡ ಚಿತ್ರರಂಗದಲ್ಲಿ ಸು ಫ್ರಂ ಸೋ ಎಕ್ಕ ಸಿನಿಮಾಗಳು ಬಾಕ್ಸ್ ಆಫೀಸ್‌ನಲ್ಲಿ ಸದ್ದು ಮಾಡಿದ್ದವು. ಈ ವರ್ಷದ ಜುಲೈನಲ್ಲೂ ಸಹ ಕನ್ನಡ ಸಿನಿಮಾರಂಗದ ಕಳೆ ಹೆಚ್ಚಾಗುವ ಸಾಧ್ಯತೆ ಕಾಣುತ್ತಿದೆ.

ಈ ಬಗ್ಗೆ ಮಾತನಾಡಿರುವ ನಿರ್ದೇಶಕ ಗುರುದತ್ ಗಾಣಿಗ, ಇದುವರೆಗೂ ತೆರೆಯ ಮೇಲೆ ನೋಡಿರದ ಪ್ರಾಮಾಣಿಕ ಪ್ರಯತ್ನ. ಸು ಫ್ರಂ ಸೋ ರಿಲೀಸ್ ಆದ ದಿನವೇ ನಮ್ಮ ಚಿತ್ರ ಬರ್ತಾ ಇರೋದು ಕಾಕತಾಳೀಯ. ಖಂಡಿತ ಒಂದೊಳ್ಳೆ ಸಿನಿಮಾ ಮಾಡಿದ್ದೀವಿ. ಚಿತ್ರಮಂದಿರಕ್ಕೆ ಬರುವ ಪ್ರೇಕ್ಷಕರಿಗೆ ಅದ್ಭುತ ಅನುಭವ ಖಂಡಿತ ಆಗಲಿದೆ ಎನ್ನುತ್ತಾರೆ.

ಕರಾವಳಿ ಹೆಸರೇ ಹೇಳುವ ಹಾಗೆ ಅಲ್ಲಿನ ಸಂಸ್ಕೃತಿ, ಸೊಗಡಿನ ಬಗ್ಗೆ ಚಿತ್ರದಲ್ಲಿ ಹೇಳಲಾಗಿದೆ. ಪ್ರಜ್ವಲ್ ದೇವರಾಜ್ ಜತೆ ನಾಯಕಿಯಾಗಿ ಸಂಪದಾ ಅವರು ನಟಿಸಿದ್ದಾರೆ. ಉಳಿದಂತೆ ಸಿನಿಮಾದ ಪವರ್‌ಫುಲ್ ಪಾತ್ರದಲ್ಲಿ ನಟ ಮಿತ್ರ, ರಮೇಶ್ ಇಂದಿರ, ಶ್ರೀಧರ್ ಸೇರಿದಂತೆ ದೊಡ್ಡ ತಾರಾಬಳಗವಿದೆ.

ಗುರುದತ್ ಗಾಣಿಗ ಅವರು ಕರಾವಳಿ ಚಿತ್ರವನ್ನು ನಿರ್ದೇಶನ ಮಾಡುವ ಜೊತೆಗೆ ವಿಕೆ ಫಿಲಂ ಅಸೋಸಿಯೇಷನ್‌ನಲ್ಲಿ ಗಾಣಿಗ ಫಿಲಂಸ್ ಅಡಿ ನಿರ್ಮಾಣದ ಜವಾಬ್ದಾರಿಯನ್ನು ವಹಿಸಿಕೊಂಡಿದ್ದಾರೆ. ಕನ್ನಡದ ಪ್ರತಿಷ್ಠಿತ ನಿರ್ಮಾಣ ಸಂಸ್ಥೆಗಳಲ್ಲಿ ಒಂದಾದ ಕೆವಿಎನ್ ಪ್ರೊಡಕ್ಷನ್ ಕರಾವಳಿ ಸಿನಿಮಾವನ್ನು ಪ್ರೆಸೆಂಟ್ ಮಾಡುವ ಜೊತೆಗೆ ವಿತರಣೆಯನ್ನೂ ಸಹ ಮಾಡುತ್ತಿರುವುದು ವಿಶೇಷ. ಮನುಷ್ಯ ಹಾಗೂ ಪ್ರಾಣಿಯ ಮಧ್ಯೆ ನಡೆಯುವ ಸಂಘರ್ಷದ ಕಥೆಯನ್ನು ಕರಾವಳಿ ಚಿತ್ರದಲ್ಲಿ ಹೇಳಲಾಗಿದೆ. ಪಕ್ಕಾ ಹಳ್ಳಿ ಬ್ಯಾಕ್‌ಡ್ರಾಪ್‌ನಲ್ಲಿ ಈ ಚಿತ್ರವು ಮೂಡಿಬಂದಿದ್ದು, ಸದ್ಯದಲ್ಲೇ ಚಿತ್ರದ ಟ್ರೈಲರ್ ಕೂಡ ರಿಲೀಸಾಗಲಿದೆ. ಸಚಿನ್ ಬಸ್ರೂರು ಅವರ ಸಂಗೀತ ಸಂಯೋಜನೆ, ಅಭಿಮನ್ಯು ಸದಾನಂದನ್ ಅವರ ಕ್ಯಾಮೆರಾ ವರ್ಕ್ ಕರಾವಳಿ ಚಿತ್ರಕ್ಕಿದೆ.

# ನಾಯಕಿಯ ಕನಸು ನನಸಾಗಿಸಿದ ದೊಡ್ಮನ್ಸ

» ಸತ್ಯಮೂರ್ತಿ



ಹಣವಿದ್ದರಷ್ಟೇ ದೊಡ್ಡನ್ನ ಆಗಲು ಸಾಧ್ಯವಿಲ್ಲ, ವಿಶಾಲ ಹೃದಯ ಹಾಗೂ ದೊಡ್ಡ ಗುಣ ಇರೋ ವ್ಯಕ್ತಿಯೇ ನಿಜವಾದ ದೊಡ್ಡನ್ನ ಎಂಬುದನ್ನು ನಿರ್ದೇಶಕ ಹಾಗೂ ನಾಯಕ ಶರತ್ ಕೃಷ್ಣ ಅವರು ದೊಡ್ಡನ್ನ ಚಿತ್ರದ ಮೂಲಕ ಹೇಳಿದ್ದಾರೆ. ಚಿತ್ರದ ನಾಯಕ ಶಿವು(ಶರತ್ ಕೃಷ್ಣ) ಒಬ್ಬ ಆಟೋಡ್ರೈವರ್, ಅನಾಥ, ಸ್ನೇಹಿತರೇ ತನ್ನ ಬಂಧು ಬಳಗ ಅಂದುಕೊಂಡಿರುತ್ತಾನೆ, ಅವರಿಗೆ ಏನೇ ಕಷ್ಟ ಬಂದರೂ ಸದಾ ಜತೆಗೆ ನಿಲ್ಲುವ ಗುಣ ಆತನದು, ಒಮ್ಮೆ ತನ್ನ ಆಟೋದಲ್ಲಿ ಬಾಡಿಗೆ ಬಂದಿದ್ದ ಯುವತಿಯೊಬ್ಬಳು ಕಣ್ಣೀರು ಹಾಕುತ್ತಿರೋದನ್ನು ಕಂಡು ಕಾರಣ ವಿಚಾರಿಸುತ್ತಾನೆ. ಆಕೆಯ ಹೆಸರು ಸ್ನೇಹಾ(ರೇಖಾ), ನಟಿಯಾಗಬೇಕೆಂದು ಆಡಿಷನ್ ಕೊಡಲು ಹೋದರೆ ಕಾಂಪ್ರಮೈಸ್ ಆದರಷ್ಟೇ ಛಾನ್ಸ್ ಕೊಡುವುದಾಗಿ ಹೇಳುತ್ತಿರುತ್ತಾರೆ, ಅದಕ್ಕೊಪ್ಪದ ಸ್ನೇಹಾ ಕಣ್ಣೀರು ಹಾಕ್ಕೊಂಡು ವಾಪಸ್ ಬರುತ್ತಾಳೆ. ಶಿವು ತನ್ನ ಸ್ನೇಹಿತರೊಬ್ಬ ನಿರ್ದೇಶಕನಾಗುವ ಸಿದ್ಧತೆಯಲ್ಲಿದ್ದಾನೆ, ಅತನಿಂದ ನೀನು ನಾಯಕಿಯಾಗಬಹುದು ಎಂದಾಗ ಒಪ್ಪಿದ ಸ್ನೇಹಾ ಇವರ ಜತೆಯಾಗುತ್ತಾಳೆ. ಕಡೆಗೂ ನಿರ್ದೇಶಕ ದೇವ್ ನಿರ್ಮಾಪಕರೊಬ್ಬರಿಗೆ(ಬಲ ರಾಜವಾಡಿ) ಕಥೆ ಹೇಳಿ ಒಪ್ಪಿಸುತ್ತಾನೆ, ಆ ಚಿತ್ರಕ್ಕೆ ಸ್ನೇಹಾಳನ್ನು ನಾಯಕಿಯಾಗಿ ಸೆಲೆಕ್ಟ್ ಮಾಡುತ್ತಾನೆ, ಹೀರೋ ಪಾತ್ರವನ್ನು ಶಿವು ಕೈಲಿ ಮಾಡಿಸಲು ಹೋದಾಗ ಮೊದಲು ಒಪ್ಪದ ನಿರ್ಮಾಪಕ ಕಡೆಗೆ ಒಪ್ಪುತ್ತಾನೆ. ಈ ಮಧ್ಯೆ ಸ್ನೇಹಾ ಶಿವು ನಡುವೆ ಪ್ರೀತಿಯೂ ಬೆಳೆಯುತ್ತದೆ, ಇನ್ನೇನು ಎಲ್ಲಾ ಸಿದ್ಧತೆ ಮಾಡಿಕೊಂಡು ಚಿತ್ರದ ಶೂಟಿಂಗ್ ಶುರು ಮಾಡಬೇಕೆನ್ನುವಾಗ ಆ ನಿರ್ಮಾಪಕ ತನ್ನ ಸ್ನೇಹಿತನೊಬ್ಬನ ಮಗನ ಕೈಲಿ ನಾಯಕನ ಪಾತ್ರ ಮಾಡಿಸಬೇಕೆಂಬ ಶರತ್ತು ಹಾಕುತ್ತಾನೆ, ನಿನ್ನ ಸ್ನೇಹಿತನಿಗೆ ಬೇರೊಂದು ಸಿನಿಮಾ ಮಾಡುವ ಆಫರ್ ನೀಡಿದರೂ ಒಪ್ಪದ ದೇವ್ ವಾಪಸ್ ಬರುತ್ತಾನೆ. ಅದಕ್ಕೆ ಬಲವಾದ ಕಾರಣವೂ ಇರುತ್ತದೆ, ನಂತರ ಆಟೋ ಸ್ನೇಹಿತರೆಲ್ಲ ಸೇರಿ ಬಂಡವಾಳ ಹಾಕಿ ಸಿನಿಮಾ ಪ್ರಾರಂಭಿಸಲು ಮುಂದಾಗುತ್ತಾರೆ, ಅಲ್ಲೂ ಸಹ ಅವರ ಪ್ರಯತ್ನಕ್ಕೆ ವಿಘ್ನವೊಂದು ಎದುರಾಗುತ್ತದೆ, ಕಡೆಗೂ ದೇವ್ ತನ್ನ ಕನಸಿನ ಚಿತ್ರವನ್ನು ಮಾಡಿದನೇ, ಸ್ನೇಹಿತನನ್ನು ಹೀರೋ ಮಾಡಿದನೇ ಇಲ್ಲವೇ ಎಂಬುದನ್ನು ನೀವು ತೆರೆಮೇಲೇ ನೋಡಬೇಕು, ಇದೊಂದು ಸಿಂಪಲ್ ಕಥೆಯಾದರೂ ನಿರ್ದೇಶಕನಾಗಿ ಶರತ್ ಕಥೆಯನ್ನು ತೆಗೆದುಕೊಂಡು ಹೋಗಿರುವ ರೀತಿ ಪ್ರೇಕ್ಷಕರಿಗೆ ಇಷ್ಟವಾಗುತ್ತದೆ, ಪ್ರತಿ ದೃಶ್ಯವೂ ಕುತೂಹಲ ಬೆಳೆಸಿಕೊಂಡು ಹೋಗುತ್ತದೆ, ಅದಕ್ಕೆ ತಕ್ಕಂತೆ ಸುಂದರವಾದ ಹಾಡುಗಳು, ಸಂಗೀತ ಸಂಯೋಜನೆ ಇಡೀ ಸಿನಿಮಾಗೆ ಕಳಶಪ್ರಾಯದಂತಿವೆ, ಶರತ್ ಒಬ್ಬ ಪಳಗಿದ ನಾಯಕನಿಗೆ ಕಮ್ಮಿ ಇಲ್ಲದಂತೆ ಶಿವು ಎಂಬ ಪಾತ್ರವೇ ತಾನಾಗಿ ಅಭಿನಯಿಸಿದ್ದಾರೆ. ಮುದ್ದುಮೊಗದ ಸ್ನಿಗ್ಧ ಸುಂದರಿಯಾಗಿ ರೇಖಾ ಕಂಗೊಳಿಸಿದ್ದಾರೆ. ಸ್ನೇಹಿತನಾಗಿ ಹುಲಿ ಕಾರ್ತಿಕ್, ನಿರ್ಮಾಪಕನಾಗಿ ಬಲ ರಾಜವಾಡಿ, ಮತ್ತೊಬ್ಬ ನಾಯಕಿಯಾಗಿ ಶಿಲ್ಪ ತಮಗೆ ಸಿಕ್ಕ ಅವಕಾಶದಲ್ಲೇ ಉತ್ತಮ ಅಭಿನಯ ನೀಡಿದ್ದಾರೆ. ಸಾಮಾನ್ಯ ಆಟೋ ಚಾಲಕನೊಬ್ಬ ತನ್ನ ದೊಡ್ಡ ಗುಣದಿಂದಲೇ ಜೀವನದಲ್ಲಿ ಹೇಗೆ ದೊಡ್ಡ ಮನುಷ್ಯನಾಗಿ ಬೆಳೆಯುತ್ತಾನೆ ಎಂಬುದನ್ನು ಈ ಚಿತ್ರ ಹೇಳುತ್ತದೆ. ಶ್ರೀಧರ್ ಕಶ್ಯಪ್ ಮತ್ತು ಅಲೆಕ್ಸ್ ಅವರ ಸಂಗೀತ, ಆನಂದ ಇಳಯರಾಜ ಅವರ ಕ್ಯಾಮೆರಾ ವರ್ಕ್ ಚಿತ್ರಕ್ಕೆ ಪೂರಕವಾಗಿದೆ, ಒಟ್ಟಾರೆ ಫ್ಯಾಮಿಲಿ ಎಂಟರ್‌ಟೈನರ್ ಚಿತ್ರಗಳನ್ನು ಇಷ್ಟಪಡುವವರಿಗೆ ದೊಡ್ಮನ್ಸ ಖಂಡಿತ ರುಚಿಸಲಿದೆ.

ಚಿತ್ರ ವಿಮರ್ಶೆ

# ಕ್ರೈಂ ಥ್ರಿಲ್ಲರ್ ಪತ್ತೇದಾರಿ ಚಿತ್ರದ ಪೋಸ್ಟರ್ ಬಿಡುಗಡೆ



ಕ್ರೈಂ ಥ್ರಿಲ್ಲರ್ ಕಥಾನಕ ಒಳಗೊಂಡ ಪತ್ತೇದಾರಿ ಎಂಬ ಚಲನಚಿತ್ರವು ಸದ್ಯದಲ್ಲೇ ಸೆಟ್ಟೇರುವ ಸಿದ್ಧತೆಯಲ್ಲಿದೆ. ಎ.ಕೆ. ಪ್ರೊಡಕ್ಷನ್ಸ್ ಅಡಿ ಮೊಹಮ್ಮದ್ ಆತೀಕ್ ಅವರು ನಿರ್ಮಿಸುತ್ತಿರುವ ಈ ಚಿತ್ರಕ್ಕೆ ಶ್ರೀನಿವಾಸ್ ಜಯರಾಮ್ ಆಕ್ಷನ್ ಕಟ್ ಹೇಳುತ್ತಿದ್ದಾರೆ. ಈ ಚಿತ್ರದಲ್ಲಿ ಕಿರೂರ್ ಎಂಬ ನವಪ್ರತಿಭೆಯನ್ನು ನಾಯಕನಾಗಿ ಪರಿಚಯಿಸುತ್ತಿದ್ದಾರೆ.

ಇತ್ತೀಚೆಗೆ ಈ ಚಿತ್ರದ ಪೋಸ್ಟರ್‌ನ್ನು ಕಲಾವಿದರಾದ ಮಯೂರ್ ಪಟೇಲ್, ಶಿಷ್ಯ ದೀಪಕ್, ಕಾಕ್ರೋಚ್ ಸುಧೀ, ಚೆಲುವರಾಜ್, ಅರವಿಂದ್, ಗಿರೀಶ್ ಜತ್ತಿ, ಭೀಮ ಖ್ಯಾತಿಯ ನಟಿ ಪ್ರಿಯಾ, ಕೆ.ಜಿ.ಎಫ್. ರೆಡ್ಡಿ, ವಿಕ್ಟರಿ ವಾಸು, ನಿರ್ದೇಶಕ ಸಾಹಸಮೂರ್ತಿ, ಪತ್ರಕರ್ತ ಹರೀಶ್ ನಾಗರಾಜ್ ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭ ಹಾರೈಸಿದರು.

ವೇದಿಕೆಯಲ್ಲಿ ನಿರ್ದೇಶಕ ಶ್ರೀನಿವಾಸ್ ಜಯರಾಮ್ ಮಾತನಾಡುತ್ತ ಗುವಾಡೆ ಚಿತ್ರದ ನಂತರ ನಾನು ನಿರ್ದೇಶಿಸುತ್ತಿರುವ ಎರಡನೇ ಚಿತ್ರವಿದು. ಶೀರ್ಷಿಕೆಯೇ ಹೇಳುವಂತೆ ಇದೊಂದು ಕ್ರೈಮ್ ಥ್ರಿಲ್ಲರ್ ಕಥಾಹಂದರ ಹೊಂದಿರುವ ಚಿತ್ರ. ಕ್ರೈಮ್ ಥ್ರಿಲ್ಲರ್ ಜಾನರ್‌ನ ಚಿತ್ರಗಳು ಸಾಕಷ್ಟು ಬಂದಿದೆಯಾದರೂ, ಈ ಚಿತ್ರದ ಚಿತ್ರಕಥೆ ಬೇರೆಯದೇ ರೀತಿಯಲ್ಲಿರುತ್ತದೆ. ಈ ರೀತಿಯ ಸಾಕಷ್ಟು ಸಿನಿಮಾಗಳನ್ನು ನೋಡಿ, ಆ ಸ್ಫೂರ್ತಿಯಿಂದ ಈ ಚಿತ್ರದ ಕಥೆ, ಚಿತ್ರಕಥೆ ಬರೆದಿದ್ದೇನೆ. ಕಿರೂರ್ ಅವರು ಈ ಚಿತ್ರದ ಮೂಲಕ ನಾಯಕನಾಗಿ ಚಿತ್ರರಂಗ ಪ್ರವೇಶಿಸುತ್ತಿದ್ದಾರೆ. ಈ ಮುಂಚೆ ನಾನು ಅವರ ಜೊತೆಗೆ ಹತ್ತು ದಿನಗಳ ಕಾಲ ಬೇರೊಂದು ಚಿತ್ರಕ್ಕಾಗಿ ಕೆಲಸ ಮಾಡಿದ್ದೆ. ಆ ಸಂದರ್ಭದಲ್ಲಿ ಕಿರೂರ್ ಅವರಿಗೆ ಈ ಕಥೆ ಹೇಳಿದ್ದೆ, ನಾಲ್ಕು ಪ್ರಮುಖ ಪಾತ್ರಗಳ ಸುತ್ತ ಈ ಚಿತ್ರದ ಕಥೆ ಸಾಗುತ್ತದೆ. ಕಿರೂರ್ ಅವರ ಜೊತೆಗೆ ಗಿರಿ, ರೂಪ ಹಾಗೂ ಸಿದ್ದೇಶ್ ಅವರು ಸಹ ಪ್ರಮುಖ ಪಾತ್ರಗಳಲ್ಲಿ ಅಭಿನಯಿಸುತ್ತಿದ್ದಾರೆ.



ಮುಂದಿನ ತಿಂಗಳು ಪತ್ತೇದಾರಿ ಚಿತ್ರದ ಚಿತ್ರೀಕರಣ ಆರಂಭವಾಗಲಿದೆ. ಚಿತ್ರಕ್ಕೆ ಬೆಂಗಳೂರಿನಲ್ಲೇ ಹೆಚ್ಚಿನ ಭಾಗದ ಚಿತ್ರೀಕರಣ ನಡೆಸಲಾಗುವುದು ಎಂದು ಹೇಳಿದರು.

ನಾಯಕ ಕಿರೂರ್ ಮಾತನಾಡುತ್ತ ನಿರ್ದೇಶಕರು ಹೇಳಿದ ಕಥೆ ನನಗೆ ತುಂಬಾ ಇಷ್ಟವಾಯಿತು. ಇಂಥ ಪಾತ್ರಕ್ಕಾಗಿ ನಾನೂ ಸಹ ಕಾಯುತ್ತಿದ್ದೆ, ಯಾವುದೇ ರೀತಿಯ ನಟನಾ ಶಾಲೆಯಲ್ಲಿ ಕಲಿತಿಲ್ಲ, ಡಾ.ರಾಜಕುಮಾರ್, ವಿಷ್ಣುವರ್ಧನ್, ಶಿವರಾಜ ಕುಮಾರ್, ಪುನೀತ್ ರಾಜಕುಮಾರ್ ಅವರಂತಹ ಮಹಾನ್ ಕಲಾವಿದರ ಚಿತ್ರಗಳನ್ನು ನೋಡಿಕೊಂಡೇ ಅಭಿನಯ ಕಲಿತಿದ್ದೇನೆ. ಅವರೇ ನನಗೆ ಸ್ಫೂರ್ತಿ ಎಂದರು.

ಪ್ರಮುಖ ಪಾತ್ರಧಾರಿ ಸಿದ್ದೇಶ್ ಮಾತನಾಡಿ, ನಿರ್ದೇಶಕರು ಒಂದೊಳ್ಳೆ ಕಥೆಯನ್ನು ಬರೆದಿದ್ದಾರೆ ಎಂದರು. ನಟಿ ರೂಪ ಮಾತನಾಡುತ್ತ ಚಿತ್ರದ ಶೀರ್ಷಿಕೆಯೇ ಹೇಳುವಂತೆ ಇದೊಂದು ಕ್ರೈಮ್, ಥ್ರಿಲ್ಲರ್ ಕಥೆ. ಇದರಲ್ಲಿ ನನ್ನ ಪಾತ್ರಕ್ಕೂ ಪ್ರಾಮುಖ್ಯತೆಯಿದೆ ಎಂದರು.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M N S Printers No.345/4, Bhattarahalli, Virgo Nagar Post Old Madras Road, K R Puram, Bangalore 560 049 and Published at No. 1/1, 1Floor, 6th cross, 8th Main, Malleshwara, Bengaluru 03 Ph: (080) 23560302, 340 , Editor: P.S.Prakash, Group Editor: Vinayak S. Bhat, Posted at PSO Bengaluru, Bengaluru 26